# ಕುರ್‌ಆನ್ ಸಮಗ್ರ ಪರಿಚಯ

ಡಾ. ಮೌಲಾನಾ ಸದ್ರುದ್ದೀನ್ ಇಸ್ಲಾಹೀ

ಪರಮದಯಾಮಯ ಕರುಣಾಳುವೂ ಆದ ಅಲ್ಲಾಹನ ನಾಮದಿಂದ

# ಪ್ರಕಾಶಕರ ಮಾತು

ದೈವಿಕ ಮಾರ್ಗದರ್ಶನವು ಮನುಷ್ಯನ ಅತ್ಯಂತ ಪ್ರಮುಖವಾದ ಬೇಡಿಕೆಯೆಂಬುದನ್ನು ಬುದ್ಧಿ ಮತ್ತು ಪ್ರಕೃತಿ ಒಪ್ಪುತ್ತದೆ. ಅದು ಮನುಷ್ಯನಿಗೆ ತಲುಪಬೇಕಾದುದೂ ಅನಿವಾರ್ಯ ವಾಗಿದೆ. ಅದು ಬಂದಿತ್ತು ಮತ್ತು ನಿರಂತರವಾಗಿ ಎಲ್ಲಾ ಕಾಲಗಳ ಜನರಿಗೆ ತಲಪಿತ್ತು ಎಂಬುದಕ್ಕೆ ಇತಿಹಾಸದ ಸಾಕ್ಷ್ಯವಿದೆ. ಆದರೆ ಈಗ ಈ ಕುರಿತು ಅನೇಕ ಮೂಲಭೂತ ಪ್ರಶ್ನೆಗಳು ಏಳುತ್ತವೆ. ಅವುಗಳಿಗೆ ಉತ್ತರ ದೊರಕಲೇ ಬೇಕು. ಉದಾ: ದೇವ ಮಾರ್ಗದರ್ಶನವು ಚರಿತ್ರೆಯಲ್ಲಿ ಹೇಗೆ ಜಾರಿಯಲ್ಲಿತ್ತು? ಅದು ನಿರಂತರವಾಗಿ ಮನುಷ್ಯನಿಗೆ ತಲುಪಬೇಕಾದ ಅಗತ್ಯವೇನು? ಅದು ಸದಾ ಒಂದೇ ರೀತಿಯಾಗಿರುತ್ತಿತ್ತೇ? ಅದು ಒಂದೇ ರೀತಿಯಾಗಿದ್ದರೆ ಮೂಲ ಸ್ವರೂಪದಲ್ಲಿ ಅದು ಏನಾಗಿತ್ತು? ಅದು ಬದಲಾಗುತ್ತಿತ್ತೆಂದಾದರೆ ಈ ತನಕ ಯಾವ ಆದೇಶಗಳು ಬಂದಿವೆ? ಈ ಪ್ರಶ್ನೆಗಳಿಗೆ ತೃಪ್ತಿಕರವಾದ ಉತ್ತರವು ಬೇರಾವ ಮೂಲದಿಂದಲೂ ದೊರೆಯಲಾರದು. ಅದು ದೊರೆಯುವುದಾದರೆ ಸೃಷ್ಟಿಕರ್ತನಾದ ಅಲ್ಲಾಹನ ಕಡೆಯಿಂದ ಮಾತ್ರ. ಈ ನಿಟ್ಟಿನಲ್ಲಿ ಅವನಿಂದ ಅವತೀರ್ಣವಾದ ಗ್ರಂಥಗಳತ್ತ ಗಮನ ಹರಿಸುವುದೇ ಅದಕ್ಕಿರುವ ವ್ಯಾವಹಾರಿಕ ಮಾರ್ಗ. ಆದುದರಿಂದ ಈ ಅರ್ಥದಲ್ಲಿ ತನ್ನನ್ನು 'ದೇವಗ್ರಂಥ'ವೆಂದು ಸಾರುವ 'ಕುರ್‌ಆನ್'ನ ಅಧ್ಯಯನ ಹೆಚ್ಚು ಮಹತ್ವ ಪೂರ್ಣವಾಗಿದೆ.

ಪ್ರಸ್ತುತ ಬೇಡಿಕೆಯನ್ನು ಪೂರೈಸುವುದಕ್ಕಾಗಿ ಮೌ| ಸದ್ರುದ್ದೀನ್ ಇಸ್ಲಾಹಿಯವರು ಉರ್ದುವಿನಲ್ಲಿ ಬರೆದ 'ಕುರ್‌ಆನೆ ಮಜೀದ್ ಕ ತಆರುಫ್' ಎಂಬ ಗ್ರಂಥವನ್ನು | ಇಬ್ರಾಹೀಮ್ ಸಈದ್‌ರವರು 'ಕುರ್‌ಆನ್ ಸಮಗ್ರ ಪರಿಚಯ' ಎಂಬ ಹೆಸರಲ್ಲಿ ಕನ್ನಡಕ್ಕೆ ಅನುವಾದಿಸಿದ್ದು ಅದರ ಎಂಟನೇಯ ಆವೃತ್ತಿಯನ್ನು ಇದೀಗ ಹೊರ ತರುತ್ತಿದ್ದೇವೆ. ಕುರ್‌ಆನ್'ನ ಬಗ್ಗೆ ಸರಿಯಾಗಿ ತಿಳಿಯಲು ಈ ಕೃತಿ ಹೆಚ್ಚು ಸಹಾಯಕವಾಗಬಹುದೆಂದು ನಿರೀಕ್ಷಿಸುತ್ತೇವೆ.

ಶಾಂತಿ ಪ್ರಕಾಶನ

# ಮುನ್ನುಡಿ

ಭೂಮುಖದ ಮೇಲೆ ಪವಿತ್ರ ಕುರ್‌ಆನ್ ಸರ್ವಲೋಕ ಪರಿಪಾಲಕನಾದ ಅಲ್ಲಾಹನ ಅತಿದೊಡ್ಡ ಅನುಗ್ರಹ ಮತ್ತು ಆತನ ದಾಸರಾದ ಮನುಷ್ಯರ ಅತಿದೊಡ್ಡ ಅವಶ್ಯಕತೆಯಾಗಿದೆ. ಮನುಷ್ಯನು ಕುರ್‌ಆನಿನ ಬಗ್ಗೆ ಅಜ್ಞನಾಗಿದ್ದರೆ ಮನುಷ್ಯನ ಯಶಸ್ಸೆಂಬುದು ಒಂದು ಅರ್ಥಹೀನ ಪದವಾಗಿ ಬಿಡುತ್ತದೆ. ಪ್ರತಿಯೊಬ್ಬ ವ್ಯಕ್ತಿಯೂ ಈ ಗ್ರಂಥದ ಬಗ್ಗೆ ತಿಳಿದಿರುವುದು ಮತ್ತು ತಿಳಿಯದವರಿಗೆ ತಿಳಿಸಲು ಪ್ರಯತ್ನಿಸುವುದು ಈ ವಾಸ್ತವಿಕತೆಗಳ ಪ್ರಪ್ರಥಮ ಮತ್ತು ಸಹಜ ಬೇಡಿಕೆಯಾಗಿದೆ. ಬಾಹ್ಯ ನೋಟಕ್ಕೆ ಜನರಿಗೆ ಪವಿತ್ರ ಕುರ್‌ಆನನ್ನು ಪರಿಚಯಿಸುವುದೆಂದರೆ ಅವರ ಕೈಯಲ್ಲಿ ಪವಿತ್ರ ಕುರ್‌ಆನನ್ನು ನೀಡಿ ಅದನ್ನೋದುವಂತೆ ಅವರನ್ನು ಕೇಳಿಕೊಳ್ಳುವುದು ಮತ್ತು ಅದಕ್ಕವರು ಸಿದ್ಧರಾದರೆಂದರೆ ಕುರ್‌ಆನಿನ ತಾತ್ಪರ್ಯವನ್ನು ಗ್ರಹಿಸುವಲ್ಲಿ ಅವರಿಗೆ ನೆರವಾಗುವುದಾಗಿದೆ. ಆದರೆ ಮನುಷ್ಯನ ಮಾನಸಿಕ ಸ್ಥಿತಿಯನ್ನು ಗಮನದಲ್ಲಿಟ್ಟು ಗಹನವಾಗಿ ಚಿಂತಿಸಿದರೆ ಈ ಮಹಾನ್ ಧಾರ್ಮಿಕ ಕರ್ತವ್ಯವನ್ನು ನಿರ್ವಹಿಸುವುದಕ್ಕಿಂತ ಮೊದಲು ಮಾಡುವ ಕಾರ್ಯ ಬಹಳ ಇದೆ ಎಂದು ನಿಮಗೆ ಭಾಸವಾಗುವುದು. ಏಕೆಂದರೆ ಕುರ್‌ಆನ್ ಅಲ್ಲಾಹನ ಗ್ರಂಥವಾಗಿದೆ, ಮನುಷ್ಯನ ಕೃತಿಯಲ್ಲ. ಆದುದರಿಂದ ಅದರ ಅಧ್ಯಯನದ ವಿಷಯವೂ ಒಂದು ಸಾಮಾನ್ಯ ವಿಷಯವಾಗಿರದೆ ವಿಶಿಷ್ಟವಾದಂತಹ ವಿಷಯವಾಗಿದೆ. ಒಬ್ಬ ಮನುಷ್ಯನ ಕೃತಿಯನ್ನು ಕೇವಲ ಒಂದು ಕೃತಿಯೆಂಬ ನೆಲೆಯಲ್ಲೇ ಪಠಿಸಲಾಗುತ್ತದೆ. ಆದರೆ ತನ್ನನ್ನು 'ದೇವಗ್ರಂಥ'ವೆಂದು ಸಾರುವ ಒಂದು ಗ್ರಂಥವನ್ನು ಪಠಿಸುವಾಗ ಸಾಮಾನ್ಯವಾಗಿ ಜನರ ಮನಸ್ಸಿನಲ್ಲಿ ಕೆಲವು ಪ್ರಶ್ನೆಗಳು ಅನಿವಾರ್ಯವಾಗಿ ಉದ್ಭವಿಸುತ್ತವೆ. ಉದಾಹರಣೆಗೆ, ಅದು ನಿಜವಾಗಿ ದೇವನ ಕೃತಿಯೇ, ದಿವ್ಯ ಗ್ರಂಥವೇ? ಅದನ್ನು ಜಗತ್ತಿನ ಮುಂದೆ ತಂದ ಪ್ರವಾದಿಯು ಯಾವ ರೂಪದಲ್ಲಿ ತಂದಿದ್ದರೋ ಅದೇ ರೂಪದಲ್ಲಿ ಅದು ಇಂದಿಗೂ ಸುರಕ್ಷಿತವಾಗಿ ಉಳಿದಿದೆಯೇ? ಅದರ ಅವತರಣ, ಕ್ರೋಡೀಕರಣ, ಸಂರಕ್ಷಣೆ ಮತ್ತು ಪ್ರಸಾರದ ಇತಿಹಾಸವೇನು? ಪವಿತ್ರ ಕುರ್‌ಆನಿನ ಈ ರೀತಿಯ ಪ್ರಶ್ನೆಗಳಿಗೆ ಉತ್ತರ ಸಿಗುವ ತನಕ ಅದರ ಬಗ್ಗೆ ಅನುವಂಶೀಯವಾಗಿ ವಿಶ್ವಾಸವಿಡದ ಒಬ್ಬ ವ್ಯಕ್ತಿಯಲ್ಲಿ ಅದರ ಅಧ್ಯಯನದ ಅಗತ್ಯ ಮತ್ತು ಮಹತ್ವದ ನೈಜ ಭಾವನೆ ಹುಟ್ಟುವುದು ಕಷ್ಟ.

ಈ ಗ್ರಂಥವು ಅದೇ ಅಗತ್ಯವನ್ನು ಪೂರ್ತೀಕರಿಸಲಿಕ್ಕಾಗಿ ಬರೆಯಲ್ಪಟ್ಟಿದೆ. ಜನರು ಕುರ್‌ಆನ್ ಅಧ್ಯಯನದ ಮಹತ್ವವನ್ನು ಅರಿತು ಅದನ್ನು ಕೈಗೊಳ್ಳಬೇಕೆಂಬುದೇ ಇದರ ರಚನೆಯ ಉದ್ದೇಶ. ಈ ಗ್ರಂಥವು ಮುಸ್ಲಿಮರಿಗಿಂತಲೂ ಹೆಚ್ಚು ಮುಸ್ಲಿಮೇತರರಿಗಾಗಿ ಬರೆಯಲ್ಪಟ್ಟಿದೆ. ಆದ್ದರಿಂದ ಇದರಲ್ಲಿ ಕೆಲವು ಚರ್ಚೆ ಮತ್ತು ವಿವರಣೆಗಳು ಮುಸ್ಲಿಮ್ ವಾಚಕರಿಗೆ ಅಷ್ಟು ಅಗತ್ಯವಿಲ್ಲವೆಂದು ತೋರಬಹುದು. ಆದರೆ ಅದು ಒಬ್ಬ ಮುಸ್ಲಿಮೇತರ ಮಟ್ಟಿಗೆ ಅತ್ಯಗತ್ಯ. ಆದ್ದರಿಂದ ಅವುಗಳನ್ನು ಕಡೆಗಣಿಸುವುದು ಸರಿಯಲ್ಲ.

ಪುಸ್ತಕದಲ್ಲಿ "ಕುರ್‌ಆನಿನ ಮೂಲಭೂತ ಶಿಕ್ಷಣಗಳು" ಎಂಬ ಒಂದು ಅಧ್ಯಾಯವನ್ನು ಸೇರಿಸಬೇಕೆಂಬ ಯೋಚನೆ ಇತ್ತು. ಆದರೆ ಎರಡು ಕಾರಣಗಳಿಂದಾಗಿ ಆ ಯೋಚನೆ ಕೈಬಿಡಬೇಕಾಯಿತು. ಮೊದಲನೆಯದಾಗಿ, ಕೇವಲ ಮೂಲಭೂತ ಶಿಕ್ಷಣಗಳ ಪರಿಚಯ ಮಾಡಿದರೆ ಕುರ್‌ಆನಿನ ಎಲ್ಲಾ ಶಿಕ್ಷಣಗಳನ್ನು ಗ್ರಹಿಸಲು ಸಾಧ್ಯವಿಲ್ಲ. ಮಾತ್ರವಲ್ಲ ಈ ಕುರಿತು ಕೆಲವು ತಪ್ಪುಕಲ್ಪನೆಗಳು ಉಂಟಾಗುವ ಸಾಧ್ಯತೆಯಿದೆ. ಎರಡನೆಯದಾಗಿ, ಕುರ್‌ಆನಿನ ಬೋಧನೆಗಳ ಕುರಿತು ವಿವರವಾಗಿ ಬರೆದು ಒಂದು ಪ್ರತ್ಯೇಕ ಗ್ರಂಥ ರಚಿಸಬೇಕೆಂಬ ಇರಾದೆಯೂ ಇದೆ. ಅದು ಒಂದು ರೀತಿಯಲ್ಲಿ ಈ ಗ್ರಂಥದ ದ್ವಿತೀಯ ಭಾಗವೆನಿಸುವುದು. ಅಲ್ಲಾಹನು ಅದಕ್ಕೆ ಯಾವಾಗ ಅನುಗ್ರಹ ಮತ್ತು ಅನುಕೂಲ ಮಾಡುತ್ತಾನೆಂಬುದು ಕಾದು ನೋಡಬೇಕಷ್ಟೆ. ಅಲ್ಲಿಯ ತನಕ ಪ್ರಸ್ತುತ ಉದ್ದೇಶವನ್ನು 'ಇಸ್ಲಾಮ್ ಏಕ್ ನಝುರ್ ಮೆ' (ಇಸ್ಲಾಮ್ ಒಂದು ಅಧ್ಯಯನ) ಎಂಬ ನನ್ನ ಇನ್ನೊಂದು ಗ್ರಂಥದ ಅಧ್ಯಯನ ದಿಂದಲೂ ತಕ್ಕಮಟ್ಟಿಗೆ ಪೂರೈಸಬಹುದಾಗಿದೆ. ಆದ್ದರಿಂದ ಪವಿತ್ರ ಕುರ್‌ಆನಿನ ಈ ಪರಿಚಯವನ್ನು ಓದಿದ ಬಳಿಕ ಅದು ಎಂತಹ ಧರ್ಮವನ್ನು ಪ್ರತಿಪಾದಿಸಿದೆ ಎಂಬುದನ್ನು ತಿಳಿಯ ಬಯಸುವವರು ಆ ಗ್ರಂಥವನ್ನು ಅಭ್ಯಸಿಸುವುದು ಉಪಯುಕ್ತವೆನಿಸೀತು.

ಸದ್ರುದ್ದೀನ್ ಇಸ್ಲಾಹೀ

ಶುಕ್ರವಾರ, 15 ದುಲ್ಹಜ್, 1382

# ಅನುಕ್ರಮಣಿಕೆ


**ಪವಿತ್ರ ಕುರ್‌ಆನಿನ ಸ್ಥಾನಮಾನ**

ಸೃಷ್ಟಿಕರ್ತ ಮತ್ತು ಆತನ ಮಾರ್ಗದರ್ಶನ ---------- 9

ಕುರ್‌ಆನ್ ದೇವಗ್ರಂಥವೆಂಬುದರ ಪುರಾವೆಗಳು ---------- 11

ಕುರ್‌ಆನ್ ಮತ್ತು ಇತರ ದೇವಗ್ರಂಥಗಳ ಸಂಬಂಧ ---------- 37

ಪವಿತ್ರ ಕುರ್‌ಆನಿನ ವೈಶಿಷ್ಟ್ಯಗಳು ---------- 41

ಕುರ್‌ಆನ್ ಅಧ್ಯಯನದ ಹೊಣೆ ---------- 48

**ಅವತರಣ ಮತ್ತು ಕ್ರೋಢೀಕರಣ**

ಅವತರಣದ ಕಾಲ ---------- 50

ಅವತರಣದ ಸ್ಥಿತಿ ---------- 51

ಕುರ್‌ಆನಿನ ಕ್ರೋಢೀಕರಣ ---------- 56

ಕ್ರೋಢೀಕರಣದ ಕಾಲ ---------- 59

**ಸುರಕ್ಷಿತ ಗ್ರಂಥ**

ಸುರಕ್ಷಿತವಾಗಿರುವುದರ ತಾತ್ಪರ್ಯ ---------- 65

ಕುರ್‌ಆನ್ ಸುರಕ್ಷಿತತೆಯ ಅನಿವಾರ್ಯ ಪ್ರಶ್ನೆ ---------- 66

ಕುರ್‌ಆನ್ ಸಂರಕ್ಷಣೆಯ ವ್ಯಾವಹಾರಿಕ ವ್ಯವಸ್ಥೆ ---------- 67

**ಕುರ್‌ಆನ್ ಸುರಕ್ಷಿತವಾಗಿದೆ ಎಂಬುದಕ್ಕೆ ಪುರಾವೆಗಳು**

1. ವೈಚಾರಿಕ ಪುರಾವೆಗಳು ---------- 70
2. ಕುರ್‌ಆನಿನ ಪುರಾವೆಗಳು ---------- 80

ವಿವರಣಾ ಶೈಲಿ

ವಿವರಣಾ ಶೈಲಿಯ ವಿಶೇಷತೆ ---------- 83

ಕಾರಣಗಳು ---------- 84

ವಿಷಯಗಳ ಆವರ್ತನೆ ---------- 87

ಕುರ್‌ಆನ್ ಮತ್ತು ಅದರ ಭಾಗಗಳು

ಕುರ್‌ಆನಿನ ಹೆಸರು ---------- 90

ಸೂರಃ (ಅಧ್ಯಾಯ) ---------- 91

ಆಯತ್ (ಸೂಕ್ತಗಳು) ---------- 94

ಕಾಂಡಗಳು ಮತ್ತು ರುಕೂಅ್‌ಗಳು ---------- 95

ಮುಖ್ಯ ಪಾರಿಭಾಷಿಕಗಳು

ಅಲ್ಲಾಹ್ ---------- 98

ನಬಿ ಮತ್ತು ರಸೂಲ್ ---------- 113

ವಹೀ ---------- 117

ಮಲಾಇಕಃ ---------- 123

ಇಸ್ಲಾಮ್ ---------- 125

ಮೂಮಿನ್ ಮತ್ತು ಮುಸ್ಲಿಮ್ ---------- 127

ಕುಫ್ರ್ ಮತ್ತು ಕಾಫಿರ್ ---------- 130

ಶಿರ್ಕ್ ಮತ್ತು ಮುಶ್ರಿಕ್ ---------- 133

ಅಹ್ಲುಲ್ ಕಿತಾಬ್ ---------- 134

ಜನರೇ! ನಿಮ್ಮ ಪ್ರಭುವಿನ ಕಡೆಯಿಂದ ನಿಮಗೊಂದು ಉಪದೇಶ ಬಂದಿದೆ. ಇದು ಮನಸ್ಸುಗಳೊಳಗಿನ ಕಾಯಿಲೆಗಳ ಗುಣೌಷಧ ವಾಗಿದೆ ಮತ್ತು ಅದನ್ನು ಸ್ವೀಕರಿಸಿಕೊಂಡವರಿಗೆ ಸನ್ಮಾರ್ಗ ದರ್ಶನವೂ ಕೃಪೆಯೂ ಆಗಿರುತ್ತದೆ.

(ಪವಿತ್ರ ಕುರ್‌ಆನ್, 10:57)

# ಪವಿತ್ರ ಕುರ್‌ಆನಿನ ಸ್ಥಾನಮಾನ

## ಸೃಷ್ಟಿಕರ್ತ ಮತ್ತು ಆತನ ಮಾರ್ಗದರ್ಶನ

ಸಂಪೂರ್ಣ ವಿಶ್ವದ ಸೃಷ್ಟಿಕರ್ತನೂ ಒಡೆಯನೂ ಆದ ಒಂದು ಮಹಾನ್ ಶಕ್ತಿಯಿದೆ ಎಂಬ ಭಾವನೆ ಮತ್ತು ನಂಬಿಕೆಯನ್ನು ಮನುಷ್ಯನು ಎಲ್ಲ ಕಾಲಗಳಲ್ಲಿಯೂ ಇರಿಸುತ್ತಾ ಬಂದಿರುತ್ತಾನೆ. ಆಧುನಿಕ ಕಾಲದ ಕೆಲವು ಕಮ್ಯೂನಿಸ್ಟ್ ಭೌತಿಕವಾದಿಗಳು, ಕೆಲವು ತಿಳಿಗೇಡಿ ತತ್ವಶಾಸ್ತ್ರಜ್ಞರು ಮತ್ತು ಅವರ ಅಂಧಾನುಕರಣೆ ಮಾಡುವವರನ್ನು ಹೊರತುಪಡಿಸಿದರೆ ಇತಿಹಾಸದ ಪುಟಗಳಲ್ಲಿ ಈ ವಾಸ್ತವಿಕತೆಯನ್ನು ನಿರಾಕರಿಸಿದವರು ವಿರಳ. ಈ ವಿಶ್ವವ್ಯಾಪೀ ಭಾವನೆ ಮತ್ತು ವಿಶ್ವಾಸ ಹೊಂದಿದ ಮನುಷ್ಯನ ಮನಸ್ಸಿನಲ್ಲಿ ಸಹಜವಾಗಿಯೇ ತನ್ನ ಸೃಷ್ಟಿಕರ್ತ ಮತ್ತು ಒಡೆಯನ ಕುರಿತು ಕೆಲವು ಪ್ರಶ್ನೆಗಳು ಉದ್ಭವಿಸುತ್ತವೆ. ಆ ಮಹಾನ್ ಶಕ್ತಿಯೊಂದಿಗೆ ನಮ್ಮ ಸಂಬಂಧ ಹೇಗಿರಬೇಕು? ಅವನ ಕರ್ತೃತ್ವ ಮತ್ತು ಒಡೆತನವು ನಮ್ಮಿಂದ ಯಾವುದೇ ವಿಶಿಷ್ಟ ಆಚಾರ-ವಿಚಾರಗಳನ್ನು ಬಯಸುತ್ತದೆಯೇ? ಹೌದೆಂದಾದರೆ ಆ ಆಚಾರ-ವಿಚಾರಗಳು ಯಾವುವು? ಈ ಪ್ರಶ್ನೆಗಳು ಮನುಷ್ಯನು ಕಡೆಗಣಿಸಲಾರದಷ್ಟು ಪ್ರಬಲವಾಗಿದ್ದುವು. ಆತನ ಬುದ್ಧಿ ಮತ್ತು ಪ್ರಕೃತಿ ಇದಕ್ಕೆ ನೀಡಿದ ಉತ್ತರವು ಈ ರೀತಿ ಇತ್ತು: "ನೀವು ಜವಾಬ್ದಾರಿಕೆಯುಳ್ಳ ಸೃಷ್ಟಿಗಳಾಗಿರುವಿರಿ. ಏಕೆಂದರೆ ಯುಕ್ತಿವಂತನಾದ ಸೃಷ್ಟಿಕರ್ತನು ನಿಮಗೆ ಜ್ಞಾನವೆಂಬ ಒಂದು ವಿಶಿಷ್ಟ ಅನುಗ್ರಹವನ್ನು ಪ್ರದಾನ ಮಾಡಿದ್ದಾನೆ. ಒಳಿತು ಕೆಡುಕುಗಳ ವಿವೇಚನೆಯನ್ನು ದಯಪಾಲಿಸಿದ್ದಾನೆ. ಆಚಾರ-ವಿಚಾರಗಳ ಸ್ವಾತಂತ್ರ್ಯವನ್ನು ನೀಡಿದ್ದಾನೆ. ಆದ್ದರಿಂದ ನಿರ್ಜೀವ ಜಡವಸ್ತು ಮತ್ತು ಬುದ್ಧಿಯಿಲ್ಲದ ಪ್ರಾಣಿಗಳಿಗಿಂತ ನಿಮ್ಮ ಸ್ಥಾನಮಾನವನ್ನು ಉನ್ನತಗೊಳಿಸಿದ್ದಾನೆ. ಈ ವೈಶಿಷ್ಟ್ಯಪೂರ್ಣ ಗುಣ ಮತ್ತು ಶಕ್ತಿಗಳ ಇರುವಿಕೆಯೇ ನಿಮ್ಮ ಸೃಷ್ಟಿಕರ್ತನು ನೀವು ಒಂದು ವಿಶಿಷ್ಟ ಕರ್ಮ ವಿಧಾನವನ್ನು ಅನುಸರಿಸಬೇಕೆಂದು ಬಯಸುತ್ತಾನೆಂಬುದರ ಖಚಿತ ಪುರಾವೆಯಾಗಿದೆ. ನಿಮಗೆ ನಿಮ್ಮಿಷ್ಟದ ಮಾರ್ಗವನ್ನು ಅನುವರ್ತಿಸುವ ಸಂಪೂರ್ಣ ಸ್ವಾತಂತ್ರ್ಯವಿದೆ. ಆದರೆ ಬುದ್ಧಿ ಇಲ್ಲದ ಪ್ರಾಣಿಗಳಂತೆ ಮನ ಬಂದಂತೆ ವರ್ತಿಸುವುದು ಈ ಸ್ವಾತಂತ್ರ್ಯದ ಸರಿಯಾದ ಉಪಯೋಗವಲ್ಲ. ನಿಮ್ಮ

ಮನುಷ್ಯತ್ವಕ್ಕೆ ಭೂಷಣವೂ ನಿಮ್ಮ ಸೃಷ್ಟಿಕರ್ತ ಮತ್ತು ಒಡೆಯನ ಬಳಿ ಅಂಗೀಕಾರಾರ್ಹವೂ ಆದ ಕಾರ್ಯಗಳನ್ನೇ ನೀವು ಮಾಡಬೇಕು."

ಬುದ್ಧಿ ಮತ್ತು ಪ್ರಕೃತಿಯ ಈ ಉತ್ತರವು ಸಹಜವಾಗಿಯೇ ಮನುಷ್ಯನಲ್ಲಿ ಒಳಿತು ಮತ್ತು ಕೆಡುಕುಗಳೆರಡೂ ಖಚಿತವಾಗಿ ಆತನ ಮುಂದೆ ವ್ಯಕ್ತಗೊಳ್ಳಬೇಕೆಂದು ಅಪೇಕ್ಷಿಸುತ್ತದೆ. ಜೀವನದ ವಿಶಾಲ ರಂಗದಲ್ಲಿ ಸಮಂಜಸವೂ (ತನ್ನ ನೈಜ ಒಡೆಯನ) ಸಂಪ್ರೀತಿಗೆ ಪಾತ್ರವೂ ಆದ ಮಾರ್ಗ ಯಾವುದು ಮತ್ತು ಅಸಮಂಜಸವೂ ಆತನ ಕ್ರೋಧಕ್ಕೆ ಪಾತ್ರವೂ ಆದ ಮಾರ್ಗ ಯಾವುದೆಂಬುದು ನಿಖರವಾಗಿ ಆತನಿಗೆ ತಿಳಿದಿರಬೇಕು. ಈ ಪರಿಸ್ಥಿತಿಯು ಸಹಜವಾಗಿಯೇ ಮನುಷ್ಯನನ್ನು ಪೇಚಿಗೆ ಸಿಲುಕಿಸಿದೆ. ಮನುಷ್ಯನ ಈ ಅತ್ಯಂತ ಮಹತ್ವಪೂರ್ಣ ಬೇಡಿಕೆಯನ್ನು ಪೂರೈಸುವ ಬಗೆ ಹೇಗೆ? ಅವನಿಗೆ ಸರಿ-ತಪ್ಪು, ಸಮಂಜಸ-ಅಸಮಂಜಸ, ಪ್ರಿಯ ಮತ್ತು ಅಪ್ರಿಯಗಳ ಸ್ಪಷ್ಟವಾದ ಜ್ಞಾನ ಎಲ್ಲಿಂದ ಮತ್ತು ಯಾರಿಂದ ಲಭಿಸೀತು? ಆತನ ಶಕ್ತಿ-ಸಾಮರ್ಥ್ಯಗಳಾವುವೂ ಈ ಬೇಡಿಕೆಗಳನ್ನು ಪೂರೈಸುವುದಿಲ್ಲ. ಈ ವಿಷಯದಲ್ಲಿ ಮನುಷ್ಯನ ಪ್ರಕೃತಿಯು ಅವನಿಗೆ ಸಹಾಯಕವಾಗಲಿಲ್ಲ, ಮಾತ್ರವಲ್ಲ ಅದು ಈ ಸಮಸ್ಯೆಯನ್ನು ಸರಿಯಾಗಿ ಅರ್ಥ ಮಾಡಲೂ ಇಲ್ಲ. ಆತನ ವಿಚಾರ ಶಕ್ತಿಯಾಗಲೀ ಬುದ್ಧಿಯಾಗಲೀ ಆತನಿಗೆ ಈ ಬಗ್ಗೆ ನೆರವಾಗಲಿಲ್ಲ. ಅವು ಸ್ವಲ್ಪ ದೂರ ಸಾಗುವಷ್ಟರಲ್ಲೇ ತಮ್ಮ ಅಸಹಾಯಕತೆಯನ್ನು ಘೋಷಿಸಿ ಬಿಡುತ್ತವೆ. ಆಕಾಶದ ಕೆಳಗೆ ಈ ಸಮಸ್ಯೆಯನ್ನು ಬಗೆಹರಿಸಬಲ್ಲ ಶಕ್ತಿ ಯಾವುದೂ ಇಲ್ಲವೆಂಬುದೇ ಇದರ ತಾತ್ಪರ್ಯ, ಯಾವ ಜ್ಞಾನ ಮೂಲದಿಂದಲೂ ಇದರ ನೈಜ ಉತ್ತರ ಲಭಿಸಲಾರದು. ಈ ಸಮಸ್ಯೆಯ ಪರಿಹಾರ ಮತ್ತು ಈ ಪ್ರಶ್ನೆಯ ನೈಜ ಉತ್ತರ ಸೃಷ್ಟಿಕರ್ತನಿಂದ ಮಾತ್ರ ಸಿಗಬಲ್ಲುದು. ಆತನು ಮನುಷ್ಯನ ಭೌತಿಕ ಅವಶ್ಯಕತೆಗಳನ್ನು ಪೂರೈಸಲು ಇಷ್ಟು ಬೃಹತ್ ವಿಶ್ವವನ್ನು ವ್ಯವಸ್ಥೆಗೊಳಿಸಿರುವನು. ಅವುಗಳಿಂದ ಪ್ರಯೋಜನ ಪಡೆಯಲು ಬೇಕಾದ ಎಲ್ಲ ಶಕ್ತಿ-ಸಾಮರ್ಥ್ಯ ಮತ್ತು ಪ್ರಾಕೃತಿಕ ಮಾರ್ಗದರ್ಶನವನ್ನೂ ಆತನಿಗೆ ನೀಡಿರುವನು. ತನ್ನ ಪ್ರಾಣ ಉಳಿಸುವ ಬಗೆ ಹೇಗೆ, ಅದಕ್ಕಾಗಿ ತಾಯಿಯ ಮೊಲೆಯುಣ್ಣುವುದು ಯಾವ ರೀತಿಯಲ್ಲಿ ಎಂಬ ಮಾರ್ಗದರ್ಶನ ದೊಂದಿಗೇ ಅವನನ್ನು ಸೃಷ್ಟಿಸಿರುವನು. ಇಂತಹ ಯುಕ್ತಿಶಾಲಿಯೂ ದಯಾಮಯನೂ ಆದ ಸೃಷ್ಟಿಕರ್ತ ಮತ್ತು ಪರಿಪಾಲಕನು ಮನುಷ್ಯನಿಗೆ ಅವನ ಅತಿದೊಡ್ಡ ಸಮಸ್ಯೆಯ ಪರಿಹಾರ ತೋರಿಸದಿರುವುದು ಮತ್ತು ಅವನ ಅತಿ ಮಹತ್ವಪೂರ್ಣ ಅವಶ್ಯಕತೆಯನ್ನು ನಿರ್ಲಕ್ಷಿಸುವುದಾದರೂ ಹೇಗೆ? ಇದು ಅವನ ಪ್ರಭುತ್ವದ ಮಹಿಮೆಗೇ ವಿರುದ್ಧವಾದುದು. ಅವನ ಜಾಣ್ಮೆ, ಅವನ ಕರುಣೆ, ಅವನ ನ್ಯಾಯ ಮಾತ್ರವಲ್ಲ ಅವನ ಪ್ರತಿಯೊಂದು ಗುಣಕ್ಕೂ ಇದು ವಿರುದ್ಧವಾಗಿದೆ. ಲೋಕದಲ್ಲಿ ದೇವಗ್ರಂಥಗಳು ಅಸ್ತಿತ್ವದಲ್ಲಿರದ ಯಾವ ಕಾಲವೂ ಕಳೆದಿಲ್ಲ. ಇದು ವಾಸ್ತವಿಕತೆಯ ಸ್ಪಷ್ಟ ಪುರಾವೆಯಾಗಿದೆ.

## ಕುರ್‌ಆನ್ ದೇವಗ್ರಂಥವೆಂಬುದರ ಪುರಾವೆಗಳು

ಇಂದು ಪ್ರಪಂಚದಲ್ಲಿ ದೇವಗ್ರಂಥಗಳೆಂಬ ನೆಲೆಯಲ್ಲಿ ಅಸ್ತಿತ್ವದಲ್ಲಿರುವವುಗಳ ಪೈಕಿ ಕುರ್‌ಆನ್ ಕೂಡಾ ಒಂದಾಗಿದೆ. ಐತಿಹಾಸಿಕವಾಗಿ ಇದು ಎಲ್ಲಕ್ಕಿಂತಲೂ ಕೊನೆಯ ಮತ್ತು ಅಂತಿಮ ಮಾರ್ಗದರ್ಶಕ ಗ್ರಂಥವಾಗಿದೆ. ಮುಂದಿನ ಪಂಕ್ತಿಗಳಲ್ಲಿ ಈ ಗ್ರಂಥವನ್ನೇ ವಿವರವಾಗಿ ಪರಿಚಯಿಸಲಾಗುವುದು. ಆದರೆ ಆ ಪರಿಚಯಕ್ಕಿಂತ ಮೊದಲು ಸ್ವಯಂ ಆ ಗ್ರಂಥದ ನೈಜ ನೆಲೆ ಮತ್ತು ಅದು ದೇವಗ್ರಂಥವೆಂಬುದರ ಪುರಾವೆಯನ್ನು ತಿಳಿಯ ಬೇಕಾಗಿದೆ. ಏಕೆಂದರೆ ಒಂದು ಗ್ರಂಥದ ಬಗ್ಗೆ ಅದು ದೇವಗ್ರಂಥವಾಗಿದೆಯೆಂಬ ವಾದವು ಖಂಡಿತವಾಗಿಯೂ ಸರಿಯಾಗಿರಬೇಕಾಗಿಲ್ಲ. ವಾದಗಳು ಸತ್ಯವಾಗಲಿಕ್ಕೂ ಮಿಥ್ಯವಾಗಲಿಕ್ಕೂ ಸಾಧ್ಯವಿದೆ. ಧರ್ಮಗಳ ಇತಿಹಾಸದಲ್ಲಿ ಪ್ರವಾದಿತ್ವ ಮತ್ತು ದಿವ್ಯವಾಣಿಯ ಅವತೀರ್ಣದ ಬಗೆಗಿನ ಮಿಥ್ಯವಾದಿಗಳು ಇದ್ದಂತೆ ಅನೇಕ ಧರ್ಮಗುರುಗಳನ್ನು ದೇವ ಪ್ರವಾದಿಯೆಂದೂ ಅವರ ವಾಣಿಯನ್ನು ದೇವವಾಣಿಯೆಂದೂ ಪ್ರತಿಪಾದಿಸಲಾಗಿತ್ತು. ಈ ಚಾರಿತ್ರಿಕ ವಾಸ್ತವಿಕತೆಯ ಹಿನ್ನೆಲೆಯಲ್ಲಿ ಕುರ್‌ಆನಿನ ಕುರಿತೂ ಅದು ದೇವಗ್ರಂಥವೆಂಬುದಕ್ಕೆ ಪುರಾವೆ ಏನು ಎಂಬ ಜಿಜ್ಞಾಸೆ ಹುಟ್ಟುವುದು ಸಹಜ. ವಾಸ್ತವದಲ್ಲಿ ಕುರ್‌ಆನ್ ದೇವಗ್ರಂಥವೆಂಬುದು ಒಂದು ನಿರಾಕರಿಸಲಾಗದ ಸತ್ಯವಾಗಿ ಜನರ ಮುಂದೆ ತರುವುದೇ ಅದರ ಮೂಲಭೂತ ಪರಿಚಯವಾಗಿದೆ.

ಪವಿತ್ರ ಕುರ್‌ಆನ್ ದೇವಗ್ರಂಥವಾಗಿದೆ ಎಂಬುದರ ಪ್ರಮುಖ ಪುರಾವೆಗಳು ಈ ರೀತಿ ಇವೆ:

### ಮೊದಲನೆಯದು:

ಕುರ್‌ಆನ್ ತಾನು ದೇವಗ್ರಂಥವೆಂಬುದನ್ನು ಸ್ವಯಂ ಘೋಷಿಸುತ್ತದೆ. ಅದು ಕೇವಲ ಅದರ ಮೇಲೆ ವಿಶ್ವಾಸವಿರಿಸುವವರ ವಾದವಲ್ಲ. ತಾನು ಮನುಷ್ಯನ ವಚನವಲ್ಲ ವೆಂದೂ ಸರ್ವಲೋಕ ಪರಿಪಾಲಕನಾದ ಅಲ್ಲಾಹನ ವಚನವೆಂದೂ ಆತನು ತನ್ನ ಆಪ್ತ ದೇವಚರ ಜಿಬ್ರೀಲ್‌ರ(ಅ) ಮೂಲಕ ತನ್ನ ದಾಸರಾದ ಮುಹಮ್ಮದ್‌ರಿಗೆ(ಸ) ಅದನ್ನು ತಲುಪಿಸಿದರೆಂದೂ ಪವಿತ್ರ ಕುರ್‌ಆನ್ ಅಲ್ಲಲ್ಲಿ ಸಾರಿ ಹೇಳುತ್ತದೆ. ಉದಾ:

"ಇದು ಸರ್ವಲೋಕಗಳ ಪಾಲಕ ಪ್ರಭುವಿನಿಂದ ಅವತೀರ್ಣಗೊಂಡಿದೆ. ನೀವು (ದೇವವತಿಯಿಂದ ದೇವ ಸೃಷ್ಟಿಗಳಿಗೆ) ಎಚ್ಚರಿಕೆ ನೀಡುವವರಲ್ಲಿ ಸೇರಲಿಕ್ಕಾಗಿ, ಪ್ರಾಮಾಣಿಕ ಆತ್ಮವು ಇದರ ಜೊತೆ ನಿಮ್ಮ ಹೃದಯಕ್ಕೆ ಇಳಿದಿದೆ. ಇದು ಸುಸ್ಪಷ್ಟ ಅರಬೀ ಭಾಷೆಯಲ್ಲಿದೆ." **(26: 192-195)**

ಕುರ್‌ಆನ್ ತನ್ನ ಬಗ್ಗೆ ನಾನು ಅಲ್ಲಾಹನ ಗ್ರಂಥವಾಗಿದ್ದೇನೆ ಎಂದು ಹೇಳುವುದು ಕೂಡಾ ಒಂದು ವಾದವೇ ಆಗಿದೆ. ಅದರಿಂದ ಅದು ದೇವಗ್ರಂಥವೆಂಬುದು

ಸಾಬೀತಾಗುವುದಿಲ್ಲ ಎಂಬುದರಲ್ಲಿ ಸಂಶಯವಿಲ್ಲ. ಆದರೂ ಈ ಘೋಷಣೆ ಈಗಾಗಲೇ ವಿವರಿಸಿರುವಂತೆ "ಮೊದಲ ಅವಶ್ಯಕ ಪುರಾವೆ" ಎಂಬ ಸ್ಥಾನವನ್ನು ಹೊಂದಿದೆ. ಏಕೆಂದರೆ ಆ ವಾದವಿಲ್ಲದೆ ವಾದದ ದೃಢೀಕರಣ ಮತ್ತು ಅದರ ಬಗ್ಗೆ ಚರ್ಚೆಯನ್ನು ಮುಂದು ವರಿಸುವ ಪ್ರಮೇಯವೇ ಬರುವುದಿಲ್ಲ. ಮಾತ್ರವಲ್ಲ ಚರ್ಚೆಯನ್ನು ಆರಂಭಿಸುವುದೇ ಅಸಾಧ್ಯ. ಈ ಘೋಷಣೆಯೇ ಪವಿತ್ರ ಕುರ್‌ಆನ್ ದೇವಗ್ರಂಥವೆಂಬ ವಾದವನ್ನು ಗಮನಾರ್ಹವಾಗಿ ಮಾಡುತ್ತದೆ. ಈ ಬುನಾದಿಯಲ್ಲೇ ಈ ವಾದವು ಚಿಂತನೆ ಮತ್ತು ಚರ್ಚೆಗೆ ಅರ್ಹವಾಗುತ್ತದೆ. ಇದಕ್ಕೆ ಎರಡು ಪ್ರಮುಖ ಮತ್ತು ತಾತ್ವಿಕ ಕಾರಣಗಳಿವೆ

ಮೊದಲನೆಯದಾಗಿ, ಕುರ್‌ಆನ್ ಜನರು ಒಪ್ಪುವುದಕ್ಕೂ ನಿರಾಕರಿಸುವುದಕೂ ಸ್ವತಂತ್ರರಾಗಿರುವಂತಹ ಸಾಮಾನ್ಯ ಅರ್ಥದ ಗ್ರಂಥವಾಗಲೀ ಕೃತಿಯಾಗಲೀ ಅಲ್ಲ. ಸಾಮಾನ್ಯ ಗ್ರಂಥವಾಗಿದ್ದರೆ ಅದನ್ನು ಓದಬೇಕೆಂಬುದು ಕಡ್ಡಾಯವಲ್ಲ. ದೇವಗ್ರಂಥವು ವಿಶ್ವದ ಸಾಮ್ರಾಟನ ವತಿಯಿಂದ ಜಾರಿಗೊಳ್ಳುವ ಶಾಸನವಾಗಿದೆ. ಅದರ ಮುಂದೆ ಶಿರಬಾಗಬೇಕು ಮತ್ತು ಮೀನ ಮೇಷ ಎಣಿಸದೆ ಅದನ್ನು ಪಾಲಿಸಲೇಬೇಕು. ಇಲ್ಲವಾದರೆ ಮನುಷ್ಯನ ಪಾಲಿಗೆ ವಿನಾಶವೇ ಕಾದಿರುವುದು ಎಂಬ ಬೇಡಿಕೆಯೊಂದಿಗೆ ಅದು ಜನರ ಮುಂದೆ ಬರುತ್ತದೆ. ಗ್ರಂಥದ ಉದ್ದೇಶ, ಮಹತ್ವ ಮತ್ತು ಸ್ಥಾನಮಾನವು ಹೀಗಿರುವಾಗ ಅದು ಸ್ವತಃ ತನ್ನ ಬಾಯಿಯಿಂದಲೇ ತನ್ನ ನೈಜ ನೆಲೆಯನ್ನು ಸ್ಪಷ್ಟ ಮಾತುಗಳಲ್ಲಿ ಘೋಷಿಸಬೇಕಾದುದು ಅನಿವಾರ್ಯವೆಂಬುದು ವ್ಯಕ್ತ. ಅನ್ಯಥಾ ಅದನ್ನು ಕಡ್ಡಾಯವಾಗಿ ಓದುವ, ಅದರ ನೆಲೆಯ ಬಗ್ಗೆ ಚರ್ಚಿಸುವ, ಅದು ದೇವಗ್ರಂಥವೋ ಅಲ್ಲವೋ ಎಂಬುದನ್ನು ದೃಢಪಡಿಸಿಕೊಳ್ಳುವ, ಅದು ತನ್ನ ನೈಜ ಒಡೆಯನ ಶಾಸನ ಮತ್ತು ದೈವೀ ಮಾರ್ಗದರ್ಶನ ಎಂದು ನಂಬಿ ಅದನ್ನು ಅನುಸರಿಸುವ ಅರ್ಹತೆಯನ್ನೇ ಅದು ತಾತ್ವಿಕವಾಗಿ ಹೊಂದಿರುವುದಿಲ್ಲ. ಇದು ಸರಕಾರಗಳು ತಮ್ಮ ಕಾನೂನುಗಳನ್ನು ವಿಧಿವತ್ತಾಗಿ ಗಜೆಟ್‌ನಲ್ಲಿ ಪ್ರಕಟಿಸಿ ದೇಶದ ಪ್ರಜೆಗಳಿಗೆ ಈ ಕಾನೂನುಗಳನ್ನು ರಚಿಸಲಾಗಿದೆ ಎಂದು ಘೋಷಿಸು ವಂತೆಯೇ ಆಗಿದೆ. ಗಜೆಟ್‌ನಲ್ಲಿ ಪ್ರಕಟವಾಗುವ ತನಕ ಆ ಕಾನೂನುಗಳ ಬಗ್ಗೆ ಪ್ರಜೆಗಳ ಮೇಲೆ ಯಾವುದೇ ಹೊಣೆ ಇರುವುದಿಲ್ಲ.

ಎರಡನೆಯದಾಗಿ ದೇವಗ್ರಂಥವೆಂಬ ಯಾವುದೇ ಗ್ರಂಥದ ವಾದವು ವಾಸ್ತವದಲ್ಲಿ ಸ್ವಯಂ ಆ ಗ್ರಂಥದ ಅಥವಾ ಅದನ್ನು ತಂದ ಪ್ರವಾದಿಯ ವಾದವಾಗಿರುತ್ತದೆಯೇ ಹೊರತು ಅದರ ಅನುಯಾಯಿಗಳ ವಾದವಲ್ಲ. ಅದರ ಅನುಯಾಯಿಗಳು ಆ ವಾದವನ್ನು ಅಂಗೀಕರಿಸುವವರಾಗಿರುತ್ತಾರಷ್ಟೆ. ಆದ್ದರಿಂದ ಇದು ದೇವಗ್ರಂಥವೆಂಬ ಅವರ ಹೇಳಿಕೆ ಈ ವಾದಕ್ಕೆ ಕೇವಲ ಒಂದು ಸಾಕ್ಷಿಯಾಗಬಹುದೇ ವಿನಾ ನೈಜ ವಾದವಾಗುವುದು ಸಾಧ್ಯವಿಲ್ಲ. ಸಾಕ್ಷಿಯ ಪ್ರಶ್ನೆ ಏಳುವುದು ಒಂದು ವಾದ ವಿಧಿವತ್ತಾಗಿ ಮುಂದೆ ಬಂದಾಗ ಮಾತ್ರ. ಅದು ಇಲ್ಲದೆ ಹೋದರೆ ಸಾಕ್ಷಿಯು ಅಪ್ರಸ್ತುತ, ಅನಗತ್ಯ ಮತ್ತು ತಿರಸ್ಕಾರ ಯೋಗ್ಯವೆನಿಸುವುದು. ಏಕೆಂದರೆ ಸಾಕ್ಷಿಯು ಒಂದು ವೇಳೆ ಅಸ್ತಿತ್ವದಲ್ಲೇ ಇಲ್ಲದ ವಾದದ

ಬಗ್ಗೆ ನೀಡಲ್ಪಡಬಹುದು. ತಾನು ದೇವ ಪ್ರವಾದಿಯೆಂದು ಘೋಷಿಸಿರದ ಒಬ್ಬ ವ್ಯಕ್ತಿಯ ಬಗ್ಗೆ ಆತನು ದೇವಪ್ರವಾದಿಯಾಗಿರುವನೆಂದೂ ತಾನು ದೇವಗ್ರಂಥವೆಂದು ಘೋಷಿಸಿಯೇ ಇಲ್ಲದ ಒಂದು ಗ್ರಂಥದ ಬಗ್ಗೆ ಅದು ದೇವಗ್ರಂಥವೆಂದೂ ಜನರು ಸಾಕ್ಷಿ ನೀಡುವ ಎಲ್ಲಾ ಸಾಧ್ಯತೆ ಇದೆ. ಧರ್ಮಗಳ ಇತಿಹಾಸವನ್ನು ಅವಲೋಕಿಸಿದರೆ ಈ ಸಾಧ್ಯತೆಯು ಅತ್ಯಂತ ಸ್ಫುಟವಾಗಿ ನಮ್ಮ ಮುಂದೆ ಬರುತ್ತದೆ. ಅಂಧಶ್ರದ್ಧೆಯು ಈ ಸಾಧ್ಯತೆಗೆ ಅನೇಕ ವೇಳೆ ವಾಸ್ತವಿಕತೆಯ ರೂಪ ನೀಡಿದ್ದಿದೆ. ಗ್ರಂಥದಲ್ಲಿ ತಾನು ದೇವಗ್ರಂಥವೆಂಬ ಬಗ್ಗೆ ಒಂದೇ ಒಂದು ವಾಕ್ಯವಿಲ್ಲದೆಯೂ ಜನರು ಅದು ದೇವಗ್ರಂಥವೆಂದು ವಾದಿಸಿ ಮಾನವೀಯ ವಚನವನ್ನು ದೇವವಾಣಿ ಮತ್ತು ದೇವ ಶಾಸನವಾಗಿ ಮಾರ್ಪಡಿಸಿದ್ದಿದೆ.

ಈ ಕಾರಣಗಳಿಂದಾಗಿ ಕುರ್‌ಆನ್ ದೇವಗ್ರಂಥವಾಗಿದೆಯೋ ಎಂಬ ಚರ್ಚೆಯು ಅದು ತನ್ನ ಬಗ್ಗೆ ಆ ರೀತಿ ಸ್ಪಷ್ಟವಾಗಿ ಘೋಷಣೆ ಮಾಡುತ್ತದೆಯೇ ಇಲ್ಲವೇ ಎಂಬುದನ್ನು ಅವಲಂಬಿಸಿದೆ. ಅದು ಹಾಗೆ ಘೋಷಣೆ ಮಾಡುತ್ತದೆ ಎಂದಾದರೆ ಮಾತ್ರ ಈ ಚರ್ಚೆಯನ್ನು ಉಪಯುಕ್ತವೆಂದೂ ಚಿಂತನೆ ಮತ್ತು ಸಂಶೋಧನೆಗೆ ಅರ್ಹವೆಂದೂ ಪರಿಗಣಿಸಲಾಗುವುದು. ಅನ್ಯಥಾ ಹಾಗೆ ಪರಿಗಣಿಸಲಾಗದು. ಆದುದರಿಂದ ತಾನು ಅಲ್ಲಾಹನ ವತಿಯಿಂದ ಅವತೀರ್ಣವಾಗಿರುವ ಗ್ರಂಥವೆಂಬ ಕುರ್‌ಆನಿನ ಸ್ಪಷ್ಟ ಉಲ್ಲೇಖವು ಬಹಳ ಮಹತ್ವದ್ದಾಗಿದೆ. ಅದು ಕೂಡಾ ಒಂದು ರೀತಿಯ ಪುರಾವೆಯೇ ಆಗಿದೆ.

ಎರಡನೆಯ ಪುರಾವೆ:

ಕುರ್‌ಆನಿನ ಮತ್ತು ಅದನ್ನು ತಂದ ಪೈಗಂಬರರ ಆಗಮನದ ಪ್ರಸ್ತಾಪ ಮತ್ತು ಘೋಷಣೆ ಹಿಂದಿನ ಗ್ರಂಥಗಳಾದ ತೌರಾತ್ ಮತ್ತು ಇಂಜೀಲ್‌ಗಳಲ್ಲಿ ಸುವಾರ್ತೆಯ ರೂಪದಲ್ಲಿ ಮೊದಲೇ ಆಗಿತ್ತು. ಈ ಗ್ರಂಥವು ಪೂರ್ವ ಗ್ರಂಥಗಳಲ್ಲಿ ಇದರ ಬಗ್ಗೆ ಹೇಳಲಾಗಿರುವ ಗುಣ ವೈಶಿಷ್ಟ್ಯಗಳೊಂದಿಗೆಯೇ ಲೋಕದ ಮುಂದೆ ಪ್ರತ್ಯಕ್ಷಗೊಂಡಿದೆ. ಆದ್ದರಿಂದ ಅದು ತನ್ನ ಸಂಬೋಧಿತರ ಮುಂದೆ ಈ ಸುವಾರ್ತೆಯನ್ನು ಪದೇ ಪದೇ ಒಂದು ಸ್ಪಷ್ಟ ನಿದರ್ಶನದ ರೂಪದಲ್ಲಿ ಮುಂದಿರಿಸಿದೆ. ಉದಾ:

"ಕುರ್‌ಆನಿನಲ್ಲಿ ವಿವರಿಸಲ್ಪಡುತ್ತಿರುವುದೆಲ್ಲ ಕೃತಕ ವಿಷಯಗಳಲ್ಲ. ಪರಂತು ಇದಕ್ಕಿಂತ ಮುಂಚೆ ಬಂದಿರುವ ಗ್ರಂಥಗಳ ದೃಢೀಕರಣವೂ ಪ್ರತಿಯೊಂದು ವಿಷಯದ ವಿವರಣೆಯೂ ಸತ್ಯವಿಶ್ವಾಸವನ್ನು ಸ್ವೀಕರಿಸಿಕೊಳ್ಳುವವರಿಗೆ ಸನ್ಮಾರ್ಗದರ್ಶನವೂ ಅನುಗ್ರಹವೂ ಆಗಿರುತ್ತದೆ."

(ಪವಿತ್ರ ಕುರ್‌ಆನ್, 12:111)

"ತಮ್ಮಲ್ಲಿರುವ 'ತೌರಾತ್' ಮತ್ತು 'ಇಂಜೀಲ್'ಗಳಲ್ಲಿ ಪ್ರಸ್ತಾಪಿಸಲಾಗಿರುವ ಈ ಸಂದೇಶವಾಹಕ 'ನಿರಕ್ಷರಿ ಪ್ರವಾದಿ'ಯ ಅನುಸರಣೆಯನ್ನು ಸ್ವೀಕರಿಸಿದವರು"

(ಪವಿತ್ರ ಕುರ್‌ಆನ್, 7:157)

ತೌರಾತ್ ಮತ್ತು ಇಂಜೀಲ್‌ಗಳಲ್ಲಿ ಈ ಸುವಾರ್ತೆ ಅಥವಾ ಭವಿಷ್ಯವಾಣಿಗಳು ಎಲ್ಲೆಲ್ಲಿ ಯಾವ ಶಬ್ದಗಳಲ್ಲಿವೆ? ಈ ಪ್ರಶ್ನೆಯ ಸರಿಯಾದ ಉತ್ತರ ದೊರಕಬೇಕಾದರೆ ಈ ಗ್ರಂಥಗಳು ಇಂದಿಗೂ ಮೂಲರೂಪದಲ್ಲಿ ಸುರಕ್ಷಿತವಾಗಿದ್ದು, ಅವುಗಳಲ್ಲಿ ಯಾವುದೇ ರೀತಿಯ ತಿದ್ದುಪಡಿ ಅಥವಾ ಬದಲಾವಣೆ ಆಗಿರಬಾರದು. ಆದರೆ ಈ ಗ್ರಂಥಗಳು ಅಲ್ಲಾಹನಿಂದ ಅವತೀರ್ಣವಾದಾಗ ಇದ್ದ ತಮ್ಮ ಮೂಲರೂಪದಲ್ಲಿ ಅಕ್ಷರಶಃ ಸುರಕ್ಷಿತ ವಾಗಿ ಉಳಿದಿಲ್ಲ. ಅದರ ವಾಹಕರು ಅದರಲ್ಲಿ ಸಾಕಷ್ಟು ತಿದ್ದುಪಡಿಗಳನ್ನು ಮಾಡಿರುವರು. ಇಂತಹ ಸ್ಥಿತಿಯಲ್ಲಿ ಕುರ್‌ಆನ್ ಮತ್ತು ಪ್ರವಾದಿ ಮುಹಮ್ಮದ್‌ರ(ಸ) ಕುರಿತು ಈ ಗ್ರಂಥಗಳಲ್ಲಿ ಅವತೀರ್ಣಗೊಂಡಿದ್ದ ಆ ಸುವಾರ್ತೆ ಅಥವಾ ಭವಿಷ್ಯವಾಣಿಗಳು ಮೂಲ ರೂಪದಲ್ಲಿ ಉಳಿದಿರಲಾರವು ಎಂಬುದು ವ್ಯಕ್ತ. ಈ ಗ್ರಂಥಗಳ ಅನುಯಾಯಿಗಳಿಗೆ ಕುರ್‌ಆನ್ ಮತ್ತು ಹ. ಮುಹಮ್ಮದ್‌ರ(ಸ) ಪ್ರವಾದಿತ್ವದ ಸತ್ಯತೆ ಸಾಬೀತಾಗುವುದು ತೀರಾ ಅಸಹ್ಯವಾಗಿತ್ತೆಂಬ ವಾಸ್ತವಿಕತೆಯನ್ನು ಮುಂದಿಟ್ಟುಕೊಂಡರೆ ಈ ವಿಷಯ ಇನ್ನಷ್ಟು ಸ್ಫುಟವಾಗಿ ನಮ್ಮ ಮುಂದೆ ಬರುತ್ತದೆ. ಈ ಎಲ್ಲ ವಿಷಯಗಳ ಹೊರತಾಗಿಯೂ ಆ ಗ್ರಂಥಗಳಲ್ಲಿ ಈಗಲೂ ಒಂದು ವಿಶಿಷ್ಟ ಗ್ರಂಥದ ಮತ್ತು ವಿಶಿಷ್ಟ ಗುಣಗಳ ಓರ್ವ ಪ್ರವಾದಿಯ ಆಗಮನದ ಕುರಿತು ಸ್ಪಷ್ಟ ಭವಿಷ್ಯವಾಣಿಯನ್ನೊಳಗೊಂಡ ಅನೇಕ ಉಲ್ಲೇಖಗಳಿವೆ. ಈ ಭವಿಷ್ಯವಾಣಿಗಳಿಗೆ ಪೂರ್ಣವಾಗಿ ಹೊಂದಿಕೊಳ್ಳುವುದು ಪವಿತ್ರ ಕುರ್‌ಆನ್ ಮತ್ತು ಪ್ರವಾದಿ ಮುಹಮ್ಮದ್(ಸ) ಮಾತ್ರ. ಉದಾಹರಣೆಗಾಗಿ ಕೆಲವು ಉಲ್ಲೇಖ ಗಳನ್ನು ಇಲ್ಲಿ ನೀಡಲಾಗಿದೆ.

1. ಕರ್ತನು ಸೀನಾಯಿಯಿಂದ ಬಂದನು. ಜವೇಗೋಧಿಯಿಂದ ಅವರ ಮುಂದೆ ಪ್ರತ್ಯಕ್ಷನಾದನು. ಅವನು ಫಾರಾನ್ ಪರ್ವತದಲ್ಲಿ ದರ್ಶನ ನೀಡಿದನು ಮತ್ತು ಲಕ್ಷಗಟ್ಟಲೆ ಸಜ್ಜನರ ಜೊತೆ ಬಂದನು. ಅವನ ಬಲ ಕೈಯಲ್ಲಿ ಅವರಿಗಾಗಿ ಪ್ರಜ್ವಲಿಸುವ ಧರ್ಮಶಾಸ್ತ್ರವಿತ್ತು.

2. ನಾನು ಅವರಿಗಾಗಿ ಅವರ ಸೋದರರಿಂದಲೇ ನಿನ್ನಂತಹ ಓರ್ವ ಪ್ರವಾದಿಯನ್ನು ಅವತರಿಸುವೆ ಮತ್ತು ನನ್ನ ವಚನಗಳನ್ನು ಅವನ ಬಾಯಿಗೆ ಹಾಕುವೆನು. ಮತ್ತು ಯಾರು... ಅವನು ನನ್ನ ನಾಮದೊಂದಿಗೆ ಹೇಳುವ ನನ್ನ ಈ ಮಾತುಗಳನ್ನು ಆಲಿಸದಿರುವರೋ ನಾನು ಅವನ ಲೆಕ್ಕ ಅವನಿಂದ ಪಡೆಯುವೆನು.

**(ಧರ್ಮೋಪದೇಶ ಕಾಂಡ 18:18-19)**

3. ಯೇಸು ಅವರಿಗೆ ಹೇಳಿದನು: ಮನೆ ಕಟ್ಟುವವರು ಬಿಟ್ಟ ಕಲ್ಲೇ ಮುಖ್ಯವಾದ ಮೂಲೆಗಲ್ಲಾಯಿತು. ಇದು ಕರ್ತನಿಂದಲೇ ಆಯಿತು. ನಮಗೆ ಆಶ್ಚರ್ಯವಾಗಿ ತೋರುತ್ತದೆ ಎಂಬುವ ಮಾತನ್ನು ನೀವು ಶಾಸ್ತ್ರದಲ್ಲಿ ಎಂದಾದರೂ ಓದಲಿಲ್ಲವೋ? ಆದ್ದರಿಂದ ದೇವರ ರಾಜ್ಯವು ನಿಮ್ಮಿಂದ ತೆಗೆಯಲ್ಪಟ್ಟು ಅದರ ಫಲಗಳನ್ನು ಕೊಡುವ ಜನಕ್ಕೆ ಕೊಡಲಾಗುವುದು. ಈ ಕಲ್ಲಿನ ಮೇಲೆ ಬೀಳುವವನು ತುಂಡು ತುಂಡಾಗುವನು. ಇದು ಯಾರ ಮೇಲೆ

ಬೀಳುತ್ತದೋ ಅವರನ್ನು ಪುಡಿಪುಡಿ ಮಾಡುವುದು.

(ಮತ್ತಾಯನು ಬರೆದ ಸುವಾರ್ತೆ 21:42-45)

4. ನಾನು ನಿಮಗೆ ಹೇಳಬೇಕಾದುದು ಇನ್ನೂ ಬಹಳ ಉಂಟು; ಆದರೆ ಸದ್ಯಕ್ಕೆ ನೀವು ಅದನ್ನು ಹೊರಲಾರಿರಿ. ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡೆಸಿಕೊಂಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು. ಆತನು ತನ್ನಷ್ಟಕ್ಕೆ ತಾನೇ ಮಾತಾಡದೆ ಕೇಳಿದ ಮಾತುಗಳನ್ನೇ ಆಡುವನು; ಮತ್ತು ಮುಂದಾಗುವ ಸಂಗತಿಗಳನ್ನು ನಿಮಗೆ ತಿಳಿಸುವನು. (ಯೋಹಾನನು ಬರೆದ ಸುವಾರ್ತೆ 16:12-13)

5. ನೋಡಿರಿ, ನಾನು ನನ್ನ ದೂತನನ್ನು ಕಳುಹಿಸುವೆನು ಮತ್ತು ಅವನು ನನ್ನ ಮುಂದಿನ ಮಾರ್ಗವನ್ನು ಸುಗಮಗೊಳಿಸುವನು. ನೀವು ಬಯಸುವ ಕರ್ತನು ತನ್ನ ಮಂದಿರದಲ್ಲಿ ಫಕ್ಕನೆ ಪ್ರತ್ಯಕ್ಷಗೊಳ್ಳುವನು. ಸೇನೆಗಳ ಪ್ರಭು ಹೇಳುತ್ತಾನೆ: ಹೌದು ನೀವು ಇಷ್ಟಪಡುವ ಪ್ರತಿಜ್ಞೆಯ ದೂತನು ಬರಲಿರುವನು. (ಮಲಾಕಿಯ 3:1)

6. ಆ ಸಮಯದಿಂದ ಯೇಸು ಕೂಗಿ ಕರೆದನು ಮತ್ತು ಹೇಳಲು ಆರಂಭಿಸಿದನು. ಪಶ್ಚಾತ್ತಾಪಪಡಿರಿ. ಏಕೆಂದರೆ ಆಕಾಶದ ಸಾಮ್ರಾಜ್ಯ ಹತ್ತಿರ ಬಂದಿದೆ.

(ಮತ್ತಾಯ 4:17)

7. ನೀವು ನನ್ನನ್ನು ಪ್ರೀತಿಸುವವರಾದರೆ ನನ್ನ ಆಜ್ಞೆಗಳನ್ನು ಕೈಗೊಂಡು ನಡೆಯುವಿರಿ ಆಗ ನಾನು ತಂದೆಯನ್ನು ಕೇಳಿಕೊಳ್ಳುವೆನು; ಆತನು ನಿಮಗೆ ಬೇರೊಬ್ಬ ಸಹಾಯಕನನ್ನು ಸದಾ ಕಾಲ ನಿಮ್ಮ ಸಂಗಡ ಇರುವುದಕ್ಕೆ ಕೊಡುವನು.

(ಯೋಹಾನನು ಬರೆದ ಸುವಾರ್ತೆ 14:15-17)

ಆದರೆ ಆ ಸಹಾಯಕನು ಅಂದರೆ ನನ್ನ ಹೆಸರಲ್ಲಿ ತಂದೆಯು ಕಳುಹಿಸಿ ಕೊಡುವ ಪವಿತ್ರಾತ್ಮನೇ ನಿಮಗೆ ಎಲ್ಲವನ್ನು ಉಪದೇಶಿಸಿ ನಾನು ನಿಮಗೆ ಹೇಳಿದ್ದೆಲ್ಲಾ ನಿಮ್ಮ ನೆನಪಿಗೆ ತರುವನು. (ಮತ್ತಾಯ 14:26)

ಅದೆಲ್ಲಾ ನಡೆಯುವಾಗ ನೀವು ನನ್ನನ್ನು ನಂಬುವಂತೆ ಅದು ನಡೆಯುವುದಕ್ಕಿಂತ ಮುಂಚೆಯೇ ಈಗ ನಿಮಗೆ ಹೇಳಿದ್ದೇನೆ. ಇನ್ನು ನಾನು ನಿಮ್ಮ ಸಂಗಡ ಬಹಳ ಮಾತುಗಳನ್ನಾಡುವುದಿಲ್ಲ. ಯಾಕೆಂದರೆ ಲೋಕ ನಾಯಕನು ಬರುತ್ತಾನೆ. ಅವನಿಗೆ ಸಂಬಂಧಪಟ್ಟದ್ದು ಯಾವುದೊಂದೂ ನನ್ನಲ್ಲಿಲ್ಲ. (ಮತ್ತಾಯ 14:29-30)

ಆದರೂ ನಾನು ನಿಮಗೆ ಸತ್ಯವನ್ನು ಹೇಳುತ್ತೇನೆ. ಕೇಳಿರಿ: ನಾನು ಹೋಗುವುದು ನಿಮಗೆ ಹಿತಕರವಾಗಿದೆ. ಹೇಗೆಂದರೆ ನಾನು ಹೋಗದಿದ್ದರೆ ಆ ಸಹಾಯಕನು ನಿಮ್ಮ ಬಳಿ ಬರುವುದಿಲ್ಲ. ನಾನು ಹೋದರೆ ಆತನನ್ನು ನಿಮ್ಮ ಬಳಿಗೆ ಕಳುಹಿಸಿ ಕೊಡುತ್ತೇನೆ. ಆತನು

ಬಂದು ಪಾಪ ನೀತಿ ನ್ಯಾಯ ತೀರ್ಪಿಗೆ ಈ ವಿಷಯಗಳಲ್ಲಿ ಲೋಕಕ್ಕೆ ಅರುಹನ್ನು ಹುಟ್ಟಿಸುವನು. (ಮತ್ತಾಯ 16:7-8)

8. ನೋಡಿರಿ, ಹಳೆಯ ಮಾತುಗಳು ಪೂರ್ಣಗೊಂಡಿವೆ ಮತ್ತು ನಾನು ಹೊಸ ಮಾತುಗಳನ್ನು ಹೇಳುವೆನು. ಅದು ಸಂಭವಿಸುವುದಕ್ಕೆ ಮುಂಚೆ ನಾನು ನಿಮಗೆ ಹೇಳುತ್ತೇನೆ: ಸಮುದ್ರದ ಮೇಲೆ ಸಾಗುವವರೇ ಮತ್ತು ಅದರಲ್ಲಿ ವಾಸಿಸುವವರೇ! ದ್ವೀಪಗಳೇ ಮತ್ತು ಅವುಗಳ ನಿವಾಸಿಗಳೇ! ಕರ್ತನಿಗಾಗಿ ಹೊಸ ಹಾಡು ಹಾಡಿರಿ. ಭೂಮಿಯ ಮೇಲೆ ಅವನದೇ ಗುಣಗಾನ ಮಾಡಿರಿ. ಮರುಭೂಮಿ ಮತ್ತು ಅದರ ವಸತಿ ಪ್ರದೇಶಗಳು ಕೈದಾರನ ಜನನಿಬಿಡ ಊರು ತನ್ನ ಸ್ವರ ಎಬ್ಬಿಸಲಿ. ಸಲಅದ ನಿವಾಸಿಗಳು ಹಾಡು ಹಾಡಲಿ. ಪರ್ವತದ ಶಿಖರದಿಂದ ಗರ್ಜಿಸಿ ಹೇಳಲಿ. ಅವರು ದೇವನ ಪ್ರತಾಪ ಪ್ರಕಟಪಡಿಸಲಿ ಮತ್ತು ದ್ವೀಪಗಳಲ್ಲಿ ಅವನ ಗುಣಗಾನ ಮಾಡಲಿ. ಕರ್ತನು ಪರಾಕ್ರಮಿಯಂತೆ ಹೊರಡುವನು. ರಣಯೋಧನಂತೆ ತನ್ನ ಅಭಿಮಾನ ಪ್ರದರ್ಶಿಸುವನು. ಅವನು ತನ್ನ ಶತ್ರುಗಳನ್ನು ಜಯಿಸುವನು. ನಾನು ಬಹಳ ಕಾಲದ ತನಕ ಮೌನವಾಗಿದ್ದೆನು. ನಾನು ಪರ್ವತಗಳನ್ನೂ ಬೆಟ್ಟಗಳನ್ನೂ ನಿರ್ಜನಗೊಳಿಸುವೆನು ಮತ್ತು ಅಂಧರನ್ನು ಅವರು ಅರಿತಿರದ ಮಾರ್ಗಗಳಲ್ಲಿ ಕೊಂಡೊಯ್ಯುವೆನು. ನಾನು ಅವರ ಮುಂದೆ ಇರುವ ಕತ್ತಲೆಯನ್ನು ಬೆಳಗಿಸುವೆನು ಮತ್ತು ಏರುತಗ್ಗಿನ ಸ್ಥಳಗಳನ್ನು ಸಮತಟ್ಟುಗೊಳಿಸುವೆನು. ನಾನು ಅವರೊಂದಿಗೆ ಈ ರೀತಿ ವರ್ತಿಸುವೆನು ಮತ್ತು ಅವರನ್ನು ತೊರೆಯಲಾರೆನು. ಕೆತ್ತಿದ ಮೂರ್ತಿಗಳ ಮೇಲೆ ಭರವಸೆ ಇಡುವವರು ಮತ್ತು ಲೋಹದ ಎರಕ ಹೊಯ್ದ ಮೂರ್ತಿಗಳಿಗೆ ಹೇಳುತ್ತಾರೆ: ನೀವು ನಮ್ಮ ಆರಾಧ್ಯರಾಗಿರುವಿರಿ. ಅವರು ಹಿಂದಕ್ಕೆ ಸರಿಯುವರು ಮತ್ತು ಬಹಳ ನಾಚಿಕೆಪಡುವರು. (ಯೆಶಾಯ 42:9-17)

ತೌರಾತ್ ಮತ್ತು ಇಂಜೀಲ್‌ನ ಈ ವಚನಗಳ ಮತ್ತು ಭವಿಷ್ಯವಾಣಿಗಳ ಕುರಿತು ಇಲ್ಲಿ ವಿವರವಾದ ಚರ್ಚೆ ಮಾಡುವುದು ಸಾಧ್ಯವಿಲ್ಲ. ಅವುಗಳ ಪ್ರಮುಖ ತುಣುಕುಗಳ ಬಗ್ಗೆ ಅಗತ್ಯ ವಿವರಣೆ ಈ ಕೆಳಗಿನಂತಿದೆ:

'ಫಾರಾನ್ ಪರ್ವತ' ಮಕ್ಕಾದಲ್ಲಿದೆ. 'ಪ್ರಜ್ವಲಿಸುವ ಧರ್ಮಶಾಸ್ತ್ರ' ಎಂದರೆ ಜಿಹಾದ್ (ಧರ್ಮ ಸಮರ), ಜಯಶಾಲಿಯಾಗುವ ಮತ್ತು ಆಧಿಪತ್ಯ ಹೊಂದುವ ಧರ್ಮಶಾಸ್ತ್ರವಾಗಿದೆ. 'ಅವರ ಸೋದರರಿಂದಲೇ' (ಅರ್ಥಾತ್ ಬನೀ ಇಸ್ರಾಈಲರ ಸೋದರರು) ಎಂಬುದರ ತಾತ್ಪರ್ಯ ಬನೀ ಇಸ್ಮಾಈಲ್ ಆಗಿದೆ. ಅದರಲ್ಲಿಯೇ ಪ್ರವಾದಿ ಮುಹಮ್ಮದ್(ಸ) ಹುಟ್ಟಿದರು. 'ನಿನ್ನಂತಹ' ಅಂದರೆ ಹ. ಮೂಸಾರಂತಹ(ಅ) ಪ್ರತ್ಯೇಕ ಗ್ರಂಥ ಮತ್ತು ಧರ್ಮಶಾಸ್ತ್ರವನ್ನು ತರುವ ಪ್ರವಾದಿ ಎಂದರ್ಥ. 'ಮನೆ ಕಟ್ಟುವವರು ಬಿಟ್ಟ ಕಲ್ಲೇ' ಎಂಬುದರ ಸಂಕೇತ ಬನೀಇಸ್ಮಾಈಲ್‌ರ ಕಡೆಗಿದೆ. ಬನೀಇಸ್ರಾಈಲ್ ಜನಾಂಗವು ಒಂದು ದೀರ್ಘ ಅವಧಿಯ ತನಕ ನಾಯಕತ್ವ ಪದವಿಯನ್ನಲಂಕರಿಸಿದ್ದು, ಗ್ರಂಥ ಮತ್ತು

ಪ್ರವಾದಿತ್ವವನ್ನು ಹೊಂದಿದ್ದರು. ಈ ಅವಧಿಯಲ್ಲಿ ಬನೀಇಸ್ರಾಈಲರು ಈ ಗೌರವ ದಿಂದ ಸಂಪೂರ್ಣ ವಂಚಿತರಾಗಿದ್ದರು. 'ಮುಖ್ಯವಾದ ಮೂಲೆ ಕಲ್ಲಾಯಿತು' ಅರ್ಥಾತ್ ಕೊನೆಗೆ ಅದೇ ಜನಾಂಗವು ನಾಯಕತ್ವ ಪದವಿಯನ್ನು ಹೊಂದಿತು ಮತ್ತು ಅಲ್ಲಾಹನಿಂದ ಅವತೀರ್ಣಗೊಂಡ ಕೊನೆಯ ಗ್ರಂಥ ಈ ಜನಾಂಗದಲ್ಲೇ ಅವತೀರ್ಣಗೊಂಡಿತು. 'ದೇವರ ರಾಜ್ಯ' ಎಂದರೆ ಪರಿಪೂರ್ಣವೂ ಆದರ್ಶಪ್ರಾಯವೂ ಆದ ಇಸ್ಲಾಮೀ ಸರಕಾರ. 'ಅದರ ಫಲಗಳನ್ನು ಕೊಡುವ' ಅಂದರೆ ಅಲ್ಲಾಹನ ವಿಧಿಗಳನ್ನೂ ಇಚ್ಛೆಗಳನ್ನೂ ಸಂಪೂರ್ಣವಾಗಿ ಜಾರಿಗೊಳಿಸುವುದು ಮತ್ತು ತನ್ನ ಅನುಗ್ರಹಗಳನ್ನೂ ಸಂಪೂರ್ಣವಾಗಿ ಬೆಳಕಿಗೆ ತರುವುದು. "ಆದರೆ ಸದ್ಯಕ್ಕೆ ನೀವು ಅದನ್ನು ಹೊರಲಾರಿರಿ" ಎಂದರೆ ಇನ್ನಷ್ಟು ದೇವಾಜ್ಞೆಗಳ ಭಾರವನ್ನು ಹೊರುವ ಶಕ್ತಿ ನಿಮ್ಮಲ್ಲಿಲ್ಲ. ಆದ್ದರಿಂದ ಅಲ್ಲಾಹನು ನನ್ನ ಮೂಲಕ ತನ್ನ ಧರ್ಮವನ್ನು ಪೂರ್ಣಗೊಳಿಸುವುದಿಲ್ಲ. "ತನ್ನ ಮಂದಿರದಲ್ಲಿ ಫಕ್ಕನೆ ಪ್ರತ್ಯಕ್ಷಗೊಳ್ಳುವನು" ಅಂದರೆ ವಾಗ್ದಾನ ಮಾಡಲ್ಪಟ್ಟ ಪ್ರವಾದಿಯ ಆಗಮನವು ನಿಮ್ಮನ್ನು ಚಕಿತಗೊಳಿಸುವಂತಹ ರೀತಿಯಲ್ಲಿ, ಸ್ಥಳದಲ್ಲಿ ಮತ್ತು ಜನರ ಮಧ್ಯೆ ಆಗುವುದು. 'ಪ್ರತಿಜ್ಞೆಯ ದೂತರು' ಎಂಬುದರಲ್ಲಿ ಪ್ರತಿಜ್ಞೆಯು 'ಮುಂಜಿ'ಯ ಪ್ರತಿಜ್ಞೆಯಾಗಿದೆ. ಅದನ್ನು ಇಬ್ರಾಹೀಮರಿಂದ ಮತ್ತು ಅವರ ಸಂತತಿಗಳಿಂದ ಪಡೆಯಲಾಗಿತ್ತು. (ಈ ಬಗ್ಗೆ ಉತ್ಪತ್ತಿ ಕಾಂಡ ಅಧ್ಯಾಯ 17 ಸೂಕ್ತ 10ರಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ.) ಆದ್ದರಿಂದ ಪ್ರತಿಜ್ಞೆಯ ಪ್ರವಾದಿ ಎಂದರೆ ಇಬ್ರಾಹೀಮರ ಮುಂಜಿಯ ಪದ್ಧತಿಯನ್ನು ಸಾರ್ವತ್ರಿಕ ಮತ್ತು ಸಾರ್ವಲೌಕಿಕಗೊಳಿಸುವ ಪ್ರವಾದಿ ಎಂದರ್ಥ. ಈ ಪದ್ಧತಿಯು ಆತನ ಧರ್ಮಶಾಸ್ತ್ರ ಮತ್ತು ಆತನ ಸಮುದಾಯದ ಒಂದು ವಿಶಿಷ್ಟ ಚಿಹ್ನೆಯಾಗಿರುವುದು. 'ಸಹಾಯಕ' ಎಂಬ ಪದದ ಹಿಬ್ರೂ ಮೂಲವನ್ನು ಅರಬಿ ಇಂಜೀಲ್‌ನಲ್ಲಿ 'ಫಾರ್ಕಲೀತ್' ಎಂದು ಮಾಡಲಾಗಿದೆ. ಇದು ಅರಬಿಯ 'ಮುಹಮ್ಮದ್' ಅಥವಾ 'ಅಹ್ಮದ್' ಎಂಬ ಪದದ ಸಮಾನಾರ್ಥವುಳ್ಳ ಪದವಾಗಿದೆ. "ಸದಾಕಾಲ ನಿಮ್ಮ ಸಂಗಡ ಇರುವುದಕ್ಕೆ" ಎಂಬುದರ ತಾತ್ಪರ್ಯವು ಸ್ಪಷ್ಟವಾಗಿದೆ. ಅರ್ಥಾತ್ ಆತನು ತರುವ ಗ್ರಂಥ ಮತ್ತು ಧರ್ಮಶಾಸ್ತ್ರವು ತೌರಾತ್ ಮತ್ತು ಇಂಜೀಲ್‌ಗಳಂತೆ ಒಂದು ಸೀಮಿತ ಕಾಲಾವಧಿಗೆ ಆಗಿರದೆ ಸಾರ್ವಕಾಲಿಕವಾಗಿರುವುದು. 'ಲೋಕ ನಾಯಕ' ಎಂದರೆ ಸಂಪೂರ್ಣ ವಿಶ್ವ ಮತ್ತು ಸಮಗ್ರ ಮಾನವಕುಲಕ್ಕೆ ಅಲ್ಲಾಹನ ಪ್ರವಾದಿ. ಯಾವುದೇ ಪ್ರತ್ಯೇಕ ಜನಾಂಗ ಮತ್ತು ರಾಷ್ಟ್ರಕ್ಕೆ ಅಲ್ಲ. 'ಅವನಿಗೆ ಸಂಬಂಧಪಟ್ಟದ್ದು ಯಾವೊಂದೂ ನನ್ನಲ್ಲಿಲ್ಲ' ಅರ್ಥಾತ್ ನನಗಿಂತ [ಈಸಾರಿಗಿಂತ(ಅ)] ಬಹಳ ಉನ್ನತ ಸ್ಥಾನಮಾನಗಳ ಪ್ರವಾದಿಯಾಗಿರುವರು. "ಕರ್ತನಿಗಾಗಿ ಹೊಸ ಹಾಡು ಹಾಡಿರಿ" ಎಂದರೆ ಸಂಪೂರ್ಣ ಜಗತ್ತು ಮತ್ತು ಅದರ ಎಲ್ಲ ನೆಲ-ಜಲಗಳಿಗೆ ಒಂದು ಹೊಸ ಗ್ರಂಥ ಮತ್ತು ಒಂದು ಧರ್ಮಶಾಸ್ತ್ರ ಬರಲಿಕ್ಕಿದೆ. 'ಕೈದಾರ' ಎಂದು ಬನೀಇಸ್ರಾಈಲ್‌ನಲ್ಲಿ ಓರ್ವ ಪ್ರಸಿದ್ಧ ವ್ಯಕ್ತಿ ಇದ್ದನು. ಹ. ಮುಹಮ್ಮದ್‌ರವರೂ(ಸ) ಆತನ ಸಂತತಿಯಲ್ಲೇ ಹುಟ್ಟಿದವರಾಗಿದ್ದಾರೆ. 'ಸಲಅ' ಮದೀನಾದ ಬಳಿಯ ಒಂದು ಪರ್ವತದ ಹೆಸರು. "ನಾನು

ಬಹಳ ಕಾಲದ ತನಕ ಮೌನವಾಗಿದ್ದೆ" ಎಂದರೆ ಒಂದು ದೀರ್ಘ ಕಾಲದವರೆಗೆ ದೇವವಾಣಿಯ ಅವತರಣ ಮತ್ತು ಪ್ರವಾದಿತ್ವದ ಪರಂಪರೆ ಸ್ಥಗಿತಗೊಂಡಿತ್ತು.

ಈ ಸಂಕ್ಷಿಪ್ತ ವಿವರಣೆಯಿಂದ ಈ ವಚನಗಳ ನೈಜ ಉದ್ದೇಶ ತಿಳಿಯುವ ಪ್ರಯತ್ನದಲ್ಲಿ ಸಾಕಷ್ಟು ಸಹಾಯವಾಗುವುದೆಂದು ನಂಬುತ್ತೇನೆ. ಆ ಬಳಿಕ ಸತ್ಯವಂತನೂ ಪ್ರಾಮಾಣಿಕನೂ ಆದ ವ್ಯಕ್ತಿಯ ಮುಂದೆ ತೌರಾತ್ ಮತ್ತು ಇಂಜೀಲ್‌ನ ಈ ಭವಿಷ್ಯವಾಣಿಗಳಲ್ಲಿ ಪ್ರಸ್ತಾಪಿಸಲಾಗಿರುವ ಗ್ರಂಥ ಮತ್ತು ಪ್ರವಾದಿ, ಖಚಿತವಾಗಿಯೂ 'ಕುರ್‌ಆನ್ ಮತ್ತು ಮುಹಮ್ಮದ್(ಸ) ಆಗಿರುವರೆಂಬ ವಾಸ್ತವಿಕತೆಯು ಸ್ಪಷ್ಟವಾಗುವುದು. ಆದ್ದರಿಂದ ಕುರ್‌ಆನ್ ಅವತೀರ್ಣಗೊಂಡಾಗ ಯಹೂದಿ ಮತ್ತು ಕ್ರೈಸ್ತ ವಿದ್ವಾಂಸರಿಗೆ ಅದನ್ನು ಗುರುತಿಸುವಲ್ಲಿ ಯಾವುದೇ ತೊಂದರೆ ಆಗಲಿಲ್ಲ. ಇದು ನಮಗೆ ವಾಗ್ದಾನ ಮಾಡಲ್ಪಟ್ಟ ಹಾಗೂ ನಾವು ಕಾಯುತ್ತಿದ್ದ ಗ್ರಂಥ ಎಂಬುದು ಅವರಿಗೆ ಸುಲಭದಲ್ಲಿ ಮನವರಿಕೆಯಾಯಿತು. ಪವಿತ್ರ ಕುರ್‌ಆನಿನಲ್ಲಿ ಈ ರೀತಿ ಇದೆ:

"ನಿಮಗಿಂತ ಮೊದಲು ಗ್ರಂಥ ನೀಡಲ್ಪಟ್ಟವರು, ಈ ಗ್ರಂಥವು ನಿಮ್ಮ ಪ್ರಭುವಿನ ಕಡೆಯಿಂದಲೇ ಸತ್ಯಸಹಿತ ಅವತೀರ್ಣಗೊಂಡಿದೆಯೆಂಬುದನ್ನು ತಿಳಿದಿರುತ್ತಾರೆ."
(ಪವಿತ್ರ ಕುರ್‌ಆನ್, 6:114

"ಇದನ್ನು ಬನೀಇಸ್ರಾಈಲರ ವಿದ್ವಾಂಸರು ತಿಳಿದಿರುವುದು ಇವರಿಗೆ (ಮಕ್ಕಾ ವಾಸಿಗಳಿಗೆ ಒಂದು ನಿದರ್ಶನವಲ್ಲವೇ?" (ಪವಿತ್ರ ಕುರ್‌ಆನ್, 26:197

ಆದ್ದರಿಂದ ಅವರ ಪೈಕಿ ನಿಜಾರ್ಥದಲ್ಲಿ 'ವಿದ್ವಾಂಸ'ರಾಗಿದ್ದವರು, ಹೃದಯದಲ್ಲಿದ್ದ ದೇವಭಯ ಮತ್ತು ಸತ್ಯಪ್ರಿಯತೆಯನ್ನು ವಂಶೀಯ ಪಕ್ಷಪಾತಕ್ಕೆ ಬಲಿಕೊಡದವರು ತಡಮಾಡದೇ ಈ ದೈವಿಕ ಗ್ರಂಥವನ್ನು ಅಪ್ಪಿಕೊಂಡರು. ಆ ವಿದ್ವಾಂಸರ ಮುಂದೆ ಕುರ್‌ಆನಿನ ಸಂದೇಶವನ್ನಿಟ್ಟಾಗ ಅವರಿಗೆ ಅದು ತಾವು ಬಯಸಿದ ವಸ್ತುವನ್ನೇ ಅವರ ಮುಂದಿಟ್ಟಂತಾಯಿತು. ಈ ಐತಿಹಾಸಿಕ ಸತ್ಯವನ್ನು ಪವಿತ್ರ ಕುರ್‌ಆನಿನಲ್ಲಿ ಈ ರೀತಿ ಉಲ್ಲೇಖಿಸಲಾಗಿದೆ:

"ಆದುದರಿಂದ ಈ ಮುಂಚೆ ನಾವು ಯಾರಿಗೆ ಗ್ರಂಥ ನೀಡಿದ್ದೇವೋ ಅವರು ಇದರ ಮೇಲೆ ವಿಶ್ವಾಸವಿರಿಸುತ್ತಾರೆ." (ಪವಿತ್ರ ಕುರ್‌ಆನ್, 29:47

"ಅವರು ಸಂದೇಶವಾಹಕರ ಮೇಲೆ ಅವತೀರ್ಣಗೊಂಡ ಈ ವಾಣಿಯನ್ನು ಆಲಿಸುವಾಗ ಸತ್ಯಪ್ರಜ್ಞೆಯ ಪ್ರಭಾವದಿಂದ ಅವರ ನಯನಗಳು ಅಶ್ರುಗಳಿಂದ ಒದ್ದೆಯಾಗುತ್ತಿರುವುದನ್ನು ನೀವು ಕಾಣುತ್ತೀರಿ. ಅವರು ಹೇಳುತ್ತಾರೆ, ಓ ನಮ್ಮ ಪ್ರಭೂ, ನಾವು ವಿಶ್ವಾಸವಿರಿಸಿಕೊಂಡೆವು ನಮ್ಮ ಹೆಸರನ್ನು ಸಾಕ್ಷ್ಯ ನೀಡುವವರೊಂದಿಗೆ ಬರೆದುಕೋ." (ಪವಿತ್ರ ಕುರ್‌ಆನ್, 5:83

ಇತಿಹಾಸವು ಈ ಸತ್ಯಪ್ರಿಯರ ಒಂದು ದೀರ್ಘ ಪಟ್ಟಿಯನ್ನೇ ನಮ್ಮ ಮುಂದಿಡುತ್ತದೆ. ಇದರಲ್ಲಿ ಇತಿಯೋಪಿಯದ ರಾಜ ನಜ್ಜಾಶೀ, ಅವರ ಭ್ರಾತೃಜ ದೂಮಖ್ಮಿರ್, ಫೆಲೆಸ್ತೀನಿನ ರೋಮನ್ ರಾಜ್ಯಪಾಲ ದರಾಸ್ಕಫ್ ಬಿನ್ ನಾತೂಸ್, ನಜ್ರಾನ್‌ನ ಕ್ರೈಸ್ತ ರಾಜನ ಸೋದರ ಕುರ್ಝುರ್ ಬಿನ್ ಅಲ್ಕಮಃ, ಬನೀ ತೈ ಗೋತ್ರದ ಸರದಾರ ಅದೀ ಬಿನ್ ಹಾತಿಮ್, ತೌರಾತ್‌ನ ಪ್ರಖ್ಯಾತ ವಿದ್ವಾಂಸರಾದ ಕಅಬುಲ್ ಅಹ್ಬಾರ್, ವಹಬ್ ಬಿನ್ ಮುನಬ್ಬಃ ಮತ್ತು ಅಬ್ದುಲ್ಲಾ ಬಿನ್ ಸಲಾಮ್(ರ) ಸೇರಿದ್ದಾರೆ. ಈ ಅಸಂಖ್ಯಾತ ಯಹೂದಿ ಮತ್ತು ಕ್ರೈಸ್ತರು ಕುರ್‌ಆನಿನ ಮೇಲೆ ಇಟ್ಟ ವಿಶ್ವಾಸವು ಅದು ತೌರಾತ್ ಮತ್ತು ಇಂಜೀಲ್‌ಗಳಲ್ಲಿರುವ ಭವಿಷ್ಯವಾಣಿಗೆ ಅನುರೂಪವಾಗಿದೆ ಎಂಬುದರ ಜ್ವಲಂತ ನಿದರ್ಶನವಾಗಿದೆ. ಏಕೆಂದರೆ ಇವರು ಮೊದಲಿನಿಂದಲೇ ದೇವಗ್ರಂಥ ಮತ್ತು ದೇವಧರ್ಮದ ವಾಹಕರಾಗಿದ್ದರು. ಕುರೈಶರಂತೆ 'ಗ್ರಂಥರಹಿತ'ರಾಗಿರಲಿಲ್ಲ. ಅವರು ತಮ್ಮ ಈ 'ಗ್ರಂಥರಾಹಿತ್ಯ'ದ ದುರವಸ್ಥೆಯನ್ನು ನೀಗಿಸಲಿಕ್ಕಾಗಿ ಕುರ್‌ಆನನ್ನು ನೆಪಮಾತ್ರಕ್ಕೆ ದೇವಗ್ರಂಥವೆಂದು ಒಪ್ಪುವ ಪ್ರಮೇಯವೇ ಇರಲಿಲ್ಲ. ಆದ್ದರಿಂದ ಅವರು ತೌರಾತ್ ಮತ್ತು ಇಂಜೀಲ್‌ನ ಸ್ಥಾನದಲ್ಲಿ ಈಗ ಕುರ್‌ಆನಿನ ಅನುಸರಣೆಯನ್ನು ಅಂಗೀಕರಿಸಿರುವುದು ಮತ್ತು ಪ್ರವಾದಿ ಮೂಸಾ ಅಥವಾ ಈಸಾರವರ ಸಮುದಾಯದಿಂದ ತಮ್ಮ ಪುರಾತನ ಭಾವನಾತ್ಮಕ ಸಂಬಂಧವನ್ನು ಕಡಿದು, ಮುಹಮ್ಮದರ(ಸ) ಸಮುದಾಯವನ್ನು ಸೇರಿರುವುದು ಆಕಸ್ಮಿಕವಲ್ಲ. ಅವರು ಒಂದೆಡೆ ತಮ್ಮ ಗ್ರಂಥಗಳಲ್ಲಿರುವ ಭವಿಷ್ಯವಾಣಿಯನ್ನು ಕಂಡರು. ಇನ್ನೊಂದು ಕಡೆ ಕುರ್‌ಆನ್ ಮತ್ತು ಅದನ್ನು ತಂದ ಪ್ರವಾದಿಯನ್ನು ನೋಡಿದರು. ಮಾನಸಿಕವಾಗಿಯೂ ಬೌದ್ಧಿಕವಾಗಿಯೂ ಆಗ ಅವರಿಗೆ ಅದು ಸಾಕ್ಷಾತ್ಕಾರಗೊಂಡುದಾಗಿ ಚೆನ್ನಾಗಿ ಮನವರಿಕೆಯಾಯಿತು. ಅವರ ಸತ್ಯಸಂಧತೆಯೇ ಅವರನ್ನು ಈ ಮಾರ್ಗ ಸ್ವೀಕರಿಸಲು ಪ್ರೇರೇಪಿಸಿತು.

**ಮೂರನೆಯ ಪುರಾವೆ:**

ಪವಿತ್ರ ಕುರ್‌ಆನಿನಲ್ಲಿ ಎಲ್ಲಿಯೂ ವಿರೋಧಾಭಾಸಗಳಿಲ್ಲ. ಅದರ ಈ ಗುಣವೂ ಅದರ ಪ್ರಾಮಾಣಿಕತೆಯ ಒಂದು ಸ್ಪಷ್ಟ ನಿದರ್ಶನವಾಗಿದೆ. ಕುರ್‌ಆನ್ ಸ್ವತಃ ಈ ರೀತಿ ಹೇಳುತ್ತದೆ:

**"ಇದು ಅಲ್ಲಾಹನ ಹೊರತು ಇನ್ನಾರ ಕಡೆಯಿಂದಾದರೂ ಆಗಿರುತ್ತಿದ್ದರೆ ಇದರಲ್ಲಿ ಅನೇಕ ವಿರೋಧಾಭಾಸಗಳು ಕಂಡು ಬರುತ್ತಿದ್ದುವು."**

**(ಪವಿತ್ರ ಕುರ್‌ಆನ್, 4:82)**

ಏಕೆಂದರೆ ಈ ಗ್ರಂಥವು 23 ವರ್ಷಗಳ ದೀರ್ಘಾವಧಿಯಲ್ಲಿ ಮತ್ತು ತೀರಾ ಭಿನ್ನ ಭಿನ್ನ ಪರಿಸ್ಥಿತಿಯಲ್ಲಿ ಪೂರ್ಣಗೊಂಡಿತ್ತು. ಇದು ಒಂದು ವೇಳೆ ಮಾನವ ಕೃತಿಯಾಗಿರುತ್ತಿದ್ದರೆ ಸ್ವಾಭಾವಿಕವಾಗಿಯೂ ಇದರ ವಿಷಯ, ತತ್ವ, ವಿಚಾರ ಮತ್ತು ಶಿಕ್ಷಣಗಳು ವಿರೋಧಾಭಾಸ ಮತ್ತು ಭಿನ್ನತೆಗಳಿಂದ ಪೂರ್ಣ ಮುಕ್ತವಾಗಿರುವುದು ಸಾಧ್ಯವೇ ಇರಲಿಲ್ಲ.

ಒಂದೇ ರೀತಿಯ ಪರಿಸ್ಥಿತಿಗಳಲ್ಲಿ ಕೆಲವೇ ತಿಂಗಳೊಳಗೆ ನಿರಂತರವಾಗಿ ಬರೆಯಲ್ಪಟ್ಟ ಮಾನವ ಕೃತಿಗಳು ಕೂಡಾ ಸಾಮಾನ್ಯವಾಗಿ ಈ ಕೊರತೆಗಳಿಂದ ಮುಕ್ತವಾಗಿರುವುದಿಲ್ಲ. ಹೀಗಿರುತ್ತಾ ನೂರಾರು ತಿಂಗಳು ಮತ್ತು ಸಹಸ್ರಾರು ದಿನಗಳಲ್ಲಿ ಹಾಗೂ ಪರಿಸ್ಥಿತಿಯ ಅಸಾಮಾನ್ಯ ಏರಿಳಿತಗಳಲ್ಲಿ ಪೂರ್ಣಗೊಂಡ ಒಂದು ಗ್ರಂಥದಲ್ಲಿ ಈ ವಿರೋಧಾಭಾಸ ಮತ್ತು ಭಿನ್ನತೆಗಳ ಇಲ್ಲದಿರಲು ಹೇಗೆ ಸಾಧ್ಯ? ಆದರೆ ಪವಿತ್ರ ಕುರ್‌ಆನಿನಲ್ಲಿ ಈ ಅಸಾಧ್ಯವು ಸಾಧ್ಯವಾಗಿರುವುದನ್ನು ನಾವು ಒಂದು ವಸ್ತುಸ್ಥಿತಿಯ ರೂಪದಲ್ಲಿ ಸ್ಪಷ್ಟವಾಗಿ ಕಾಣುತ್ತಿದ್ದೇವೆ. ಅದರ ವಿಶಾಲ ವಿಷಯಗಳಲ್ಲಿ ಮತ್ತು ವಿವರವಾದ ಆದೇಶ-ನಿರ್ದೇಶಗಳಲ್ಲಿ ಅತ್ಯುನ್ನತ ಮಟ್ಟದ ಸಾಮರಸ್ಯವನ್ನು ನಾವು ಕಾಣುತ್ತಿದ್ದೇವೆ. ಇದು ಒಂದು ಮಾನವ ಕೃತಿಯಾಗಿರದೆ ಸರ್ವಜ್ಞನೂ ವಿವರಪೂರ್ಣನೂ ಸರ್ವಶಕ್ತನೂ ಆದವನ ಕೃತಿಯಾಗಿದೆ ಎಂಬುದು ಇದರಿಂದ ಸಂಶಯಾತೀತವಾಗಿ ತಿಳಿದುಬರುತ್ತದೆ. ಆತನ ಜ್ಞಾನದಲ್ಲಿ ವಿರೋಧಾಭಾಸಕ್ಕೆ ಎಡೆಯಿಲ್ಲ. ಅವರ ವಚನಗಳಲ್ಲಿ ಕಾಲದ ಅತಿದೊಡ್ಡ ಮಾರ್ಪಾಟು ಕೂಡಾ ವಿರೋಧಾಭಾಸವನ್ನು ಸೃಷ್ಟಿಸಲಾರದು.

**ನಾಲ್ಕನೆಯ ಪುರಾವೆ:**

ಕುರ್‌ಆನಿನಲ್ಲಿ ಅನೇಕ ಭವಿಷ್ಯವಾಣಿಗಳಿವೆ. ಸಾಮಾನ್ಯವಾಗಿ ಪೂರ್ಣಗೊಳ್ಳುವ ಯಾವುದೇ ಬಾಹ್ಯ ಸಂಕೇತಗಳು ಇಲ್ಲದ ಸಂದರ್ಭಗಳಲ್ಲಿ ಈ ಭವಿಷ್ಯವಾಣಿಗಳ ನುಡಿಯಲ್ಪಟ್ಟಿವೆ. ಆದರೆ ಅದರ ಒಂದೊಂದು ಭವಿಷ್ಯವಾಣಿಯೂ ಪೂರ್ಣಗೊಂಡದ್ದನ್ನು ಜಗತ್ತು ಕಂಡಿತು. ಒಂದೇ ಒಂದು ಭವಿಷ್ಯವಾಣಿಯೂ ಸುಳ್ಳಾಗಲಿಲ್ಲ. ಉದಾ:

(ಅ) ಅದು ಹಿ. ಶ. 6ರಲ್ಲಿ ನಡೆದ ಹುದೈಬಿಯಾ ಸಂಧಿಯ ಸಂದರ್ಭದಲ್ಲಿ ಮುಸ್ಲಿಮರಿಗೆ ಈ ರೀತಿ ಸುವಾರ್ತೆ ನೀಡಿತು:

"ಅಲ್ಲಾಹನಿಚ್ಛಿಸಿದರೆ, ನೀವು ಖಂಡಿತವಾಗಿಯೂ ಸಂಪೂರ್ಣ ಶಾಂತಿಯೊಂದಿಗೆ ಮಸ್ಜಿದುಲ್ ಹರಾಮನ್ನು ಪ್ರವೇಶಿಸುವಿರಿ. ನಿಮ್ಮ ತಲೆ ಬೋಳಿಸಿಕೊಳ್ಳುವಿರಿ ಮತ್ತು ಕೂದಲು ಕತ್ತರಿಸಿಕೊಳ್ಳುವಿರಿ ಮತ್ತು ನಿಮಗೆ ಯಾವ ಭಯವೂ ಇರಲಾರದು."

(ಪವಿತ್ರ ಕುರ್‌ಆನ್, 48:27

ಈ ಪದಗಳಲ್ಲಿ ಅಡಕವಾಗಿರುವ ಭರವಸೆಯನ್ನು ನೋಡಿರಿ. ಮಕ್ಕಾದ ಸರದಾರರೊಂದಿಗೆ ಬಹಳಷ್ಟು ಬಗ್ಗಿಕೊಂಡು ಒಂದು ಸಂಧಿಯನ್ನು ಮಾಡಲು ಮುಸ್ಲಿಮರ ನಿರ್ಬಂಧಿತರಾದಂತಹ ಒಂದು ಸನ್ನಿವೇಶದಲ್ಲಿ ಈ ವಚನವನ್ನು ಹೇಳಲಾಗಿದೆ ಎಂಬುದನ್ನೂ ನೆನಪಿಗೆ ತನ್ನಿರಿ. ಅಂದು ಮುಸ್ಲಿಮರು ತಮ್ಮ ಧರ್ಮದ ಕೇಂದ್ರ(ಕಅಬಾ)ದ ದ್ವಾರದಲ್ಲೇ ತಡೆಯಲ್ಪಟ್ಟಿದ್ದರು. ಕಅಬಾ ಸಂದರ್ಶನ ಮಾಡದೆ ಭಗ್ನ ಹೃದಯಿಗಳಾಗಿಯೇ ಅವರಿಗೆ ಮದೀನಾಕ್ಕೆ ಮರಳಬೇಕಾಗಿ ಬಂದಿತ್ತು. ಇದು ಮುಸ್ಲಿಮರಿಗೆ ಮಕ್ಕಾಪಟ್ಟಣದಲ್ಲಿ ಜಯಶಾಲಿಗಳಾಗಿ ಪ್ರವೇಶಿಸುವ ಭರವಸೆ ನೀಡಬಲ್ಲಂತಹ ಪರಿಸ್ಥಿತಿ ಖಂಡಿತ ಆಗಿರಲಿಲ್ಲ ಆದರೆ ಕುರ್‌ಆನ್ ಅವರಿಗೆ ಕೇವಲ ಭರವಸೆ ಮಾತ್ರವಲ್ಲ ಖಂಡಿತ ಹಾಗೆ ಆಗಲಿದೆ ಎಂದ

ದೃಢವಾಗಿ ಸಾರಿತು. ಅವರು ಮಕ್ಕಾಪಟ್ಟಣ ಪ್ರವೇಶಿಸುವ ಚಿತ್ರವನ್ನೂ ಅದು ಮುಂದಿಟ್ಟಿತು. ಕೇವಲ ಎರಡೇ ವರ್ಷಗಳಲ್ಲಿ ಅದು ಸಂಭವಿಸಿಯೂ ಬಿಟ್ಟಿತು. ಮೇಲಿನ ಸೂಕ್ತದಲ್ಲಿ ಹೇಳಿದಂತೆಯೇ ಪೂರ್ಣ ಘನತೆಯೊಂದಿಗೆ ಮುಸ್ಲಿಮರು ಮಕ್ಕಾ ಪ್ರವೇಶಿಸಿದರು.

(ಆ) ಅದು ಮುಸ್ಲಿಮರೊಂದಿಗೆ ಈ ರೀತಿ ಹೇಳಿತ್ತು:

**"ನಿಮ್ಮ ಪೈಕಿ ಸತ್ಯವಿಶ್ವಾಸವಿರಿಸಿ ಸತ್ಕರ್ಮವೆಸಗಿದವರೊಡನೆ, ಅಲ್ಲಾಹನು ಅವರಿಗಿಂತ ಮುಂಚಿನವರನ್ನು ಭೂಮಿಯಲ್ಲಿ ಪ್ರತಿನಿಧಿಗಳಾಗಿ ಮಾಡಿದಂತೆಯೇ ಅವರನ್ನು ಮಾಡುವ ನೆಂದು ವಾಗ್ದಾನ ಮಾಡಿರುವನು. ತಾನು ಅವರಿಗಾಗಿ ಮೆಚ್ಚಿರುವ ಅವರ ಧರ್ಮವನ್ನು ಸುಭದ್ರ ಬುನಾದಿಗಳಲ್ಲಿ ಸ್ಥಾಪಿಸುವನು ಮತ್ತು ಅವರ (ಪ್ರಚಲಿತ) ಭಯಾವಸ್ಥೆಯನ್ನು ಶಾಂತಿಯಾಗಿ ಮಾರ್ಪಡಿಸಿ ಬಿಡುವನು." (ಪವಿತ್ರ ಕುರ್‌ಆನ್, 24:55)**

ಈ ಮಾತು ಮುಸ್ಲಿಮರಿಗೆ ಹೇಳಿದ ಸಮಯ ಮತ್ತು ಸಂದರ್ಭ ಹೇಗಿತ್ತೆಂಬುದರ ಕಡೆಗೆ ಅದರ ಪದಗಳಲ್ಲೇ ಸೂಚನೆ ಇದೆ. ಅದು ಸಂಪೂರ್ಣ ಭಯಾಶಂಕೆಯ ವಾತಾವರಣ ವಾಗಿತ್ತು. ಧರ್ಮವು ಶಿಥಿಲವಾಗಿದ್ದ ಸಂದರ್ಭವಾಗಿತ್ತು. ಅಧಿಕಾರ ಮತ್ತು ಮೇಲ್ಮೆಯಿಂದ ವಂಚಿತರಾಗಿದ್ದ ಕಾಲವಾಗಿತ್ತು. ಕೇವಲ ಕೆಲವೇ ವರ್ಷಗಳಲ್ಲಿ ಈ ಪರಿಸ್ಥಿತಿ ಬದಲಾಗಿ ಅರಬ್ ದೇಶದ ಭೂಮಿ-ಆಕಾಶಗಳೇ ಸಂಪೂರ್ಣ ಮಾರ್ಪಾಟಾದುವು. ಅದರ ವಿವರಗಳು ಸಂಪೂರ್ಣ ವಿಶ್ವಕ್ಕೇ ತಿಳಿದಿದೆ. ಈ ಸೂಕ್ತದ ಪದಗಳು ಅಕ್ಷರಶಃ ಪೂರ್ಣಗೊಂಡದ್ದಕ್ಕೆ ಇತಿಹಾಸ ಸಾಕ್ಷಿ ಇದೆ.

(ಇ) ಮದೀನಾದ ಯುದ್ಧಗ್ರಸ್ತ ಮತ್ತು ಭಯಾನಕ ವಾತಾವರಣದಲ್ಲಿ ಅದು ಪ್ರವಾದಿಯವರ(ಸ) ಕುರಿತು ಈ ರೀತಿ ಹೇಳಿತ್ತು:

**"ಅಲ್ಲಾಹನು ನಿಮ್ಮನ್ನು ಜನರ ಕೇಡಿನಿಂದ ರಕ್ಷಿಸುವವನಾಗಿರುತ್ತಾನೆ."**
**(ಪವಿತ್ರ ಕುರ್‌ಆನ್, 5:67)**

ಮಕ್ಕಾದ ಭೀತಿ, ದೌರ್ಜನ್ಯ ಮತ್ತು ಮರ್ದನಗಳ ನಡುವೆ ಇದು ಈ ರೀತಿ ಸಾಂತ್ವನದ ಮಾತು ಹೇಳಿತ್ತು:

**"ಸಂದೇಶವಾಹಕರೇ, ನಿಮ್ಮ ಪ್ರಭುವಿನ ತೀರ್ಮಾನ ಬರುವ ವರೆಗೆ ತಾಳ್ಮೆ ವಹಿಸಿರಿ. ನೀವು ನಮ್ಮ ಕಣ್ಣ ಮುಂದೆಯೇ ಇದ್ದೀರಿ." (ಪವಿತ್ರ ಕುರ್‌ಆನ್, 52:48)**

ಮಕ್ಕಾದ ಬಲಶಾಲಿಗಳಾದ ಬಹುದೇವ ವಿಶ್ವಾಸಿಗಳು, ಮದೀನಾದ ವಂಚಕ ಕಪಟ ವಿಶ್ವಾಸಿಗಳು, ಕುತಂತ್ರಿಗಳಾದ ಯಹೂದಿಗಳು ಮತ್ತು ಅರೇಬಿಯಾದ ಹೆಚ್ಚಿನ ಇಸ್ಲಾಮಿನ ಶತ್ರುಗಳ ಬಯಕೆ ಮತ್ತು ಪ್ರಯತ್ನಗಳ ಹೊರತಾಗಿಯೂ ಪವಿತ್ರ ಕುರ್‌ಆನಿನ ಈ ನರವಸೆಯು ಸಾಕ್ಷಾತ್ಕಾರವಾಯಿತು ಎಂಬುದು ಒಂದು ಐತಿಹಾಸಿಕ ವಾಸ್ತವಿಕತೆ.

ಪ್ರವಾದಿವರ್ಯರನ್ನು(ಸ) ಮುಗಿಸಿ ಬಿಡುವ ಅವರ ಎಲ್ಲ ಉಪಾಯ, ತಂತ್ರ, ಒಳಸಂಚು ಮತ್ತು ಪರಿಶ್ರಮ ನಿರರ್ಥಕವಾಯಿತು. ಪ್ರವಾದಿವರ್ಯರು(ಸ) ಜೀವಸಹಿತ ಉಳಿದುಬಿಡುವ ಯಾವ ಸಂಭವವೂ ಇಲ್ಲದಂತಹ ಅನೇಕ ಭಯಾನಕ ಸನ್ನಿವೇಶಗಳು ಪ್ರವಾದಿತ್ವದ 23 ವರ್ಷಗಳಲ್ಲಿ ಎದುರಾಗಿದ್ದುವು. ಮಕ್ಕಾ ಜೀವನ ಕಾಲದಲ್ಲಿ ಬನೀ ಹಾಶಿಮ್ ಮನೆತನವನ್ನು ಬಿಟ್ಟು ಉಳಿದ ಎಲ್ಲರೂ ಪ್ರವಾದಿವರ್ಯರನ್ನು(ಸ) ಕೊಲೆ ಮಾಡುವ ಸಂಘಟಿತ ಪ್ರಯತ್ನ ನಡೆಸಿದರು. ಮದೀನಾಕ್ಕೆ ವಲಸೆ ಹೋಗುವ ಹಾದಿಯಲ್ಲಿ ಅವರು ಅಡಗಿದ್ದ ಗುಹೆಯ ಬಳಿಯೂ ಅವರನ್ನು ಬೆಂಬತ್ತಲಾಯಿತು. ಒಬ್ಬ ಆಯುಧಧಾರಿ ಶತ್ರು ಅವರನ್ನು ಮಾರ್ಗದ ನಡುವೆ ತಡೆದು ಕೊಲ್ಲಲೆತ್ನಿಸಿದ್ದನು. ಆದರೆ ಅವರನ್ನು ಹಿಡಿಯುವ ಯತ್ನದಲ್ಲಿ ಅವನ ಕುದುರೆಯು ಆಗಾಗ ಕುಸಿದು ಬೀಳುತ್ತಿತ್ತು. ಯಹೂದಿಗಳು ಒಂದು ಔತಣಕೂಟಕ್ಕೆ ಕರೆದೊಯ್ಯುವ ನೆಪದಲ್ಲಿ ಪ್ರವಾದಿವರ್ಯರ(ಸ) ಮೇಲೆ ರಸ್ತೆಯ ಬದಿಯಲ್ಲಿರುವ ಒಂದು ಬಂಡೆಯನ್ನು ಉರುಳಿಸುವ ಪ್ರಯತ್ನ ಮಾಡಿದ್ದರು. ಕಾಡಿನ ಮಧ್ಯೆ ಒಬ್ಬಂಟಿಗರಾಗಿ ಮಲಗಿದ್ದಾಗ ಓರ್ವ ಶತ್ರು ಅವರ ಖಡ್ಗವನ್ನು ವಶಪಡಿಸಿ ಈಗ ನಿಮ್ಮನ್ನು ನನ್ನಿಂದ ಯಾರು ರಕ್ಷಿಸುವರು ಎಂದು ಪ್ರಾಣದ ಬೆದರಿಕೆ ಹಾಕಿದ್ದನು. ಉಹುದ್ ಯುದ್ಧದ ವೇಳೆ ಅನೇಕ ಸಹಸ್ರ ಶತ್ರು ಸೈನಿಕರ ಮಧ್ಯೆ ಪ್ರವಾದಿ(ಸ) ಒಬ್ಬಂಟಿಗರಾಗಿ ಸಿಲುಕಿಕೊಂಡಿದ್ದರು. ಒಟ್ಟಿನಲ್ಲಿ ಮಾನವನ ಜ್ಞಾನ ಮತ್ತು ಅನುಭವದಂತೆ ಅವರು ಜೀವಸಹಿತ ಉಳಿಯಲು ಸಾಧ್ಯವೇ ಇಲ್ಲದ ಇಂಥ ಅಸಂಖ್ಯಾತ ಸನ್ನಿವೇಶಗಳು ಎದುರಾಗಿವೆ. ಆದರೆ ಪ್ರತಿಯೊಂದು ಸಂದರ್ಭದಲ್ಲೂ "ನೀವು ನಮ್ಮ ದೃಷ್ಟಿಯ ಮುಂದೆಯೇ ಇರುವಿರಿ" ಎಂಬುದರ ತಾತ್ಪರ್ಯ ಕಾರ್ಯರೂಪಕ್ಕೆ ಬಂತು. ಅಲ್ಲಾಹನು ಎಲ್ಲ ಮನುಷ್ಯರಿಂದ ನಿಮ್ಮನ್ನು ರಕ್ಷಿಸುವನು ಎಂಬುದು ಅಕ್ಷರಶಃ ನಿಜವಾಯಿತು.

(ಈ) ಅದು ಅಲ್ಲಾಹನ ವತಿಯಿಂದ ತನ್ನ ಕುರಿತು ಈ ರೀತಿ ಘೋಷಿಸಿತ್ತು:

"ಸ್ವತಃ ನಾವೇ ಅದರ(ಕುರ್‌ಆನ್) ರಕ್ಷಕರೂ ಆಗಿರುತ್ತೇವೆ."

(ಪವಿತ್ರ ಕುರ್‌ಆನ್, 15:9)

ಇಸ್ಲಾಮನ್ನು ಓರ್ವ ಪ್ರಾಮಾಣಿಕವಾಗಿ ನಿರಾಕರಿಸುವ ವ್ಯಕ್ತಿ ಕೂಡಾ ಈ ಘೋಷಣೆ ಅಥವಾ ಭವಿಷ್ಯವಾಣಿಯು ಒಂದು ವಾಸ್ತವಿಕ ಘಟನೆಯಾಗಿ ಉಳಿದಿರುವುದನ್ನು ಅಲ್ಲಗಳೆಯಲಾರನು. ಈ ಹಿಂದೆ ಬಂದಂತಹ ದೈವಿಕ ಗ್ರಂಥಗಳ ಪೈಕಿ ಒಂದಾದರೂ ಮೂಲರೂಪದಲ್ಲಿ ಉಳಿದಿಲ್ಲ ಎಂಬುದು ಒಂದು ವಾಸ್ತವಿಕತೆಯಾಗಿರದೆ ಮೂಲರೂಪದಲ್ಲೇ ಇವೆ ಎಂಬ ವಾದವನ್ನೇ ಅವು ಹೊಂದಿರದ ಪರಿಸ್ಥಿತಿಯಲ್ಲಿ ಪ್ರವಾದಿ(ಸ) ಜಗತ್ತಿನ ಮುಂದಿಟ್ಟಂತಹ ಕುರ್‌ಆನ್ ಇಂದಿಗೂ ತನ್ನ ಮೂಲರೂಪದಲ್ಲಿ ಉಳಿದುಕೊಂಡು ಬಂದಿದೆ. ಕುರ್‌ಆನ್ ತನ್ನ ಬಗ್ಗೆ ತಾನು ಸುರಕ್ಷಿತವಾಗಿರುವೆನು ಎಂದು ನುಡಿದಿರುವ ಭವಿಷ್ಯವಾಣಿಯು ಒಂದಿನಿತೂ ಸುಳ್ಳಾಗಲಿಲ್ಲ ಎಂಬುದಕ್ಕೆ ಇತಿಹಾಸ ಸಾಕ್ಷಿ ಇದೆ.

(ಉ) ಅದು ರೋಮನ್ ಕ್ರೈಸ್ತರು ಇರಾನೀ ಅಗ್ನಿಪೂಜಕರ ಕೈಯಲ್ಲಿ ಹೀನಾಯ ಸೋಲನುಭವಿಸಿದ ಸಂದರ್ಭದಲ್ಲಿ ಈ ಕೆಳಗಿನ ಸೂಚನೆ ನೀಡಿತ್ತು:

"ರೋಮನರು ಸಮೀಪದ ಭೂಭಾಗದಲ್ಲಿ ಪರಾಜಿತರಾದರು ಮತ್ತು ತಮ್ಮ ಈ ಪರಾಜಯದ ತರುವಾಯ ಕೆಲವೇ ವರ್ಷಗಳಲ್ಲಿ ಅವರು ವಿಜಯಿಗಳಾಗುವರು."

(ಪವಿತ್ರ ಕುರ್‌ಆನ್, 30:2-4)

ಏಳೇ ವರ್ಷಗಳೊಳಗೆ ಈ ರೋಮನ್ ಕ್ರೈಸ್ತರು ಅಗ್ನಿ ಪೂಜಕ ಇರಾನೀಯರನ್ನು ಸೋಲಿಸಿದರು. ತನ್ಮೂಲಕ ಪವಿತ್ರ ಕುರ್‌ಆನ್ ನೀಡಿದ ಈ ಸೂಚನೆಯು ಇತಿಹಾಸದ ಒಂದು ಸತ್ಯ ಘಟನೆಯಾಗಿ ಮಾರ್ಪಟ್ಟಿತು.

(ಊ) ಅದು ಯಹೂದಿಗಳ ಕುರಿತು ಸತ್ಯಧರ್ಮದ ಬಗ್ಗೆ ಅವರಿಗಿರುವ ವೈರತ್ವದ ಪರಿಣಾಮವನ್ನು ವಿವರಿಸುತ್ತಾ ಈ ರೀತಿ ಹೇಳಿತ್ತು:

"ಬನೀಇಸ್ರಾಈಲರ ಮೇಲೆ ಪುನರುತ್ಥಾನ ದಿನದವರೆಗೂ ಅವರಿಗೆ ತೀವ್ರ ಯಾತನೆ ಕೊಡುವಂಥವರನ್ನು ಎರಗಿಸುತ್ತಲೇ ಇರುವೆನೆಂದು ನಿಮ್ಮ ಪ್ರಭು ಘೋಷಿಸಿದುದನ್ನು ಸ್ಮರಿಸಿರಿ." (ಪವಿತ್ರ ಕುರ್‌ಆನ್, 7:167)

ಈ ಜನಾಂಗವು ಒಂದು ದೀರ್ಘ ಕಾಲದಿಂದ ಅನುಭವಿಸುತ್ತಿರುವ ನಿಂದ್ಯತೆ, ನೀಚತೆ, ಅಧಃಪತನ ಮತ್ತು ನಾಶನಷ್ಟಗಳಿಗೆ ಇತಿಹಾಸದಲ್ಲೇ ನಿದರ್ಶನ ಸಿಗಲಾರದು. ಒಮ್ಮೆ ಅಶೂರಿಗಳು ಅವರನ್ನು ತುಳಿದರು. ಇನ್ನೊಮ್ಮೆ ಬೆಬಿಲೋನಿಯಾದ ರಾಜ ಬಖ್ತ್ ನಸ್ರ್ ಅವರ ವಸತಿಗಳನ್ನು ಧ್ವಂಸಗೊಳಿಸಿದನು. ಮತ್ತೊಮ್ಮೆ ರೋಮನ್ ಚಕ್ರವರ್ತಿ ಟೈಟಸನು ಅವರ ಮೇಲೆ ಸರ್ವನಾಶವಾಗಿ ಎರಗಿದನು. ಒಮ್ಮೆ ಮುಸ್ಲಿಮರ ಕೈಯಲ್ಲಿ ಅವರು ಕೊಲೆಯಾದರು, ದೇಶಭ್ರಷ್ಟಗೊಂಡರು ಮತ್ತು ಗುಲಾಮಗಿರಿಯನ್ನೂ ಅನುಭವಿಸಿದರು. ಇನ್ನೊಮ್ಮೆ ಹಿಟ್ಲರನು ಅವರ ಮೇಲೆ ಶಾಪವಾಗಿ ಎರಗಿದನು. ಇನ್ನು ಮುಂದೆ ಏನಾಗಲಿಕ್ಕಿದೆ ಎಂಬುದು ನೋಡಿಯೇ ತಿಳಿಯಬೇಕಷ್ಟೆ. ಸದ್ಯ ವರ್ತಮಾನ ಕಾಲದ ತನಕ ಅವರು ಇತಿಹಾಸವನ್ನು ಮಾತ್ರ ವಿಮರ್ಶಿಸಬಹುದು. ಅದನ್ನು ನೋಡುವ ಪ್ರತಿಯೊಬ್ಬ ವ್ಯಕ್ತಿ ವ್ಯಾಪಕವಾದ ಜನಾಂಗೀಯ ಅಪಮಾನ ಮತ್ತು ನಾಶನಷ್ಟಗಳಿಂದ ತುಂಬಿದ ವೇದನಾಜನಕ ಘಟನೆಗಳನ್ನೇ ಕಾಣಬಲ್ಲನು.

ಪ್ರಸ್ತುತ ಕೆಲವು ಪ್ರಮುಖ ಮತ್ತು ಸ್ಪಷ್ಟವಾಗಿ ಗೋಚರಿಸುವ ಭವಿಷ್ಯವಾಣಿಗಳಲ್ಲದೆ ಇನ್ನೂ ಅನೇಕ ಭವಿಷ್ಯವಾಣಿಗಳಿವೆ. ಅವುಗಳಲ್ಲಿ ಪ್ರತಿಯೊಂದೂ ಮೇಲೆ ಪ್ರಸ್ತಾಪಿಸಿದ ಹಾಗೆಯೇ ಪೂರ್ಣಗೊಂಡಿದೆ. ಈ ಭವಿಷ್ಯವಾಣಿಗಳನ್ನು ನುಡಿದ ವ್ಯಕ್ತಿ ಪರೋಕ್ಷದ ಸ್ಪಷ್ಟಜ್ಞಾನ ಹೊಂದಿದ್ದನೆಂಬುದು ಅಲ್ಲಗಳೆಯಲಾಗದ ಸತ್ಯ. ಅನ್ಯಥಾ ಅವುಗಳೆಲ್ಲಾ ಸತ್ಯವಾಗುವುದು ಯಾವ ರೀತಿಯಿಂದಲೂ ಸಾಧ್ಯವಿರಲಿಲ್ಲ. ಅವುಗಳ ಪೈಕಿ ಒಂದಾದರೂ

ಸುಳ್ಳಾಗಬೇಕಿತ್ತು. ಲೋಕದಲ್ಲಿ ಅನೇಕ ಜ್ಯೋತಿಷಿಗಳೂ ಕಣಿ ಹೇಳುವವರೂ ಇದ್ದಾರೆ ಅವರ ಪೈಕಿ ಒಬ್ಬನೇ ಒಬ್ಬ ನುಡಿದ ಎಲ್ಲ ಭವಿಷ್ಯವಾಣಿಗಳೂ ಸತ್ಯವಾದ ಉದಾಹರ ಇದೆಯೇ? ಖಂಡಿತ ಇಲ್ಲ. ಅಂತಹ ಒಬ್ಬನೇ ಒಬ್ಬ ಇತಿಹಾಸದಲ್ಲಿ ಎಂದೂ ಇರಲೀ ಸಾಮಾನ್ಯವಾಗಿ ಅಂಥವರು ಹೇಳಿದ ಭವಿಷ್ಯವಾಣಿಗಳ ಪೈಕಿ ಒಂದು ಸತ್ಯವಾದರೆ ನಾ ಸುಳ್ಳಾಗುತ್ತವೆ. ಇದಕ್ಕೆ ಕಾರಣವೂ ಸ್ಪಷ್ಟವಿದೆ. ಭವಿಷ್ಯ ನುಡಿಗಳು ಕೇವಲ ಊಹೆ ಮ ಗುಮಾನಿಯನ್ನು ಆಧರಿಸುತ್ತವೆ. ಎಷ್ಟೇ ಜಾಣ ವ್ಯಕ್ತಿಯ ಭವಿಷ್ಯ ನುಡಿಯೂ ಎ ಸಂದರ್ಭಗಳಲ್ಲೂ ಸತ್ಯವಾಗುವುದು ಸಾಧ್ಯವಿಲ್ಲ. ಪವಿತ್ರ ಕುರ್‌ಆನಿನ ಭವಿಷ್ಯ ನುಡಿ ಸ್ಥಿತಿಯು ಈ ಸಾರ್ವತ್ರಿಕ ಸ್ಥಿತಿಗಿಂತ ಭಿನ್ನವಾಗಿದ್ದರೆ ಮತ್ತು ಅವುಗಳೆಲ್ಲವೂ ಸತ್ಯವಾಗಿದ್ದ ಅದರ ಬುನಾದಿ ಮನುಷ್ಯನ ಊಹೆ ಮತ್ತು ಗುಮಾನಿ ಖಂಡಿತ ಆಗಿರಲಿಲ್ಲ. ಅ ಪರೋಕ್ಷದ ಸ್ಪಷ್ಟ ಮತ್ತು ನಿರ್ಣಾಯಕ ಜ್ಞಾನವನ್ನು ಆಧರಿಸಿತ್ತೆಂಬುದು ಖಚಿತವಾಗುತ್ತ ಅಂದರೆ ಅದು ಮನುಷ್ಯನ ಕಡೆಯಿಂದ ಆಗಿರದೆ ಅಲ್ಲಾಹನ ಕಡೆಯಿಂದ ಆಗಿತ್ತು. ಅ ಹೊರತು ಇನ್ನಾರಿಗೂ ಅದೃಶ್ಯದ ಸ್ಪಷ್ಟ ಹಾಗೂ ಖಚಿತ ಜ್ಞಾನ ಇಲ್ಲ. ಇನ್ನೊಂ ಮಾತಿನಲ್ಲಿ ಹೇಳುವುದಾದರೆ ಈ ಭವಿಷ್ಯವಾಣಿಗಳು ಯಾವ ಗ್ರಂಥದಲ್ಲಿದೆಯೋ ಅ ಯಾವ ಮನುಷ್ಯನ ಕೃತಿಯೂ ಆಗಿರದೆ ಖಂಡಿತವಾಗಿಯೂ ಅಲ್ಲಾಹನ ವಾಣಿಯಾಗಿ

**ಐದನೆಯ ಪುರಾವೆ:**

ಪವಿತ್ರ ಕುರ್‌ಆನ್ ಅದು ದೇವಗ್ರಂಥವೆಂಬುದಕ್ಕೆ ಐದನೆಯ ಪುರಾವೆಯಾಗಿ ಗತಪ್ರವಾದಿಗಳ ಚರಿತ್ರೆಯನ್ನು ಕಣ್ಣಾರೆ ಕಂಡಂತೆ ವಿವರಿಸಿದೆ ಎಂಬುದು ಈ ಚರಿತ್ರೆಗಳ ಹೆಚ್ಚಿನವುಗಳು ಪ್ರವಾದಿ ಮುಹಮ್ಮದ್(ಸ) ಮತ್ತು ಅವರ ಜನಾಂಗದವರಿಗೆ ಅಜ್ಞಾ ವಾಗಿದ್ದುವು. ಕುರ್‌ಆನ್ ಸ್ವತಃ ಕೆಲವು ಕಡೆಗಳಲ್ಲಿ ಇಂತಹ ಚರಿತ್ರೆಯನ್ನು ವಿವರಿಸಿ ಬಳಿಕ ಇದು ನಿಮಗಾಗಲೀ ನಿಮ್ಮ ಜನಾಂಗಕ್ಕಾಗಲೀ ಈ ಹಿಂದೆ ತಿಳಿದಿರಲಿಲ್ಲವೆಂದಿ

"ಇದಕ್ಕೆ ಮುಂಚೆ ಇವುಗಳನ್ನು ನೀವಾಗಲಿ ನಿಮ್ಮ ಜನಾಂಗವಾಗಲಿ ಅರಿತಿರಲಿಲ್ಲ.

(ಪವಿತ್ರ ಕುರ್‌ಆನ್, 11:4

ಮಾತ್ರವಲ್ಲ ಪವಿತ್ರ ಕುರ್‌ಆನಿನಲ್ಲಿ ಅಲ್ಲಲ್ಲಿ ವಿವರಿಸಲಾಗಿರುವ ಈ ಚರಿತ್ರೆಗ ಬನೀ ಇಸ್ಮಾಈಲ್ ಅಥವಾ ಅರಬ್ ಜನಾಂಗಕ್ಕೆ ಸಂಬಂಧಿಸಿದ್ದಾಗಿರದೆ ಬನೀ ಇಸ್ರಾಈಲ್ ಪ್ರವಾದಿಗಳಿಗೆ ಸಂಬಂಧಿಸಿದ್ದಾಗಿವೆ. ಅವು ಅರಬ್ ಜನಾಂಗದ ಪ್ರವಾದಿಗಳದ್ದಾಗಿರುತ್ತಿದ್ದ ತಮ್ಮ ಜನಾಂಗೀಯ ಮತ್ತು ವಂಶೀಯ ಸಂಬಂಧದ ಕಾರಣ ಆ ಜನಾಂಗಕ್ಕೆ ಅವ ಬಗ್ಗೆ ಸಹಜ ಅಭಿರುಚಿ ಇದೆ. ಆದ್ದರಿಂದ ತಮ್ಮ ಇತಿಹಾಸ ಮತ್ತು ಪರಂಪರೆಯ ಅವುಗಳಿಗೆ ಸ್ಥಾನ ಕಲ್ಪಿಸಿದರು ಎನ್ನಬಹುದಾಗಿತ್ತು. ಆದರೆ ಬನೀಇಸ್ರಾಈಲರ ಪ್ರವಾದಿ ಕುರಿತು ಪ್ರವಾದಿ ಮುಹಮ್ಮದ್(ಸ) ಮತ್ತು ಅವರ ಜನಾಂಗದ ಸಾಮಾನ್ಯ ಜನರಿ ಹೆಚ್ಚಿನ ಮಾಹಿತಿ ಇರಲಿಲ್ಲ. ಈ ಹಿನ್ನೆಲೆಯಲ್ಲಿ ಕುರ್‌ಆನ್ ಆ ಪ್ರವಾದಿಗಳ ಚರಿತ್ರೆಯನ

ವಿವರಿಸಿದೆ. ಈ ವಿವರಣೆಗಳು ತೌರಾತ್‌ನ ವಿವರಣೆಗಳಿಗೆ ಅನುರೂಪವಾಗಿದ್ದುವು. ಎಲ್ಲಿ ಕುರ್‌ಆನಿನ ವಿವರಣೆಯು ತೌರಾತ್‌ನ ವಿವರಣೆಗಿಂತ ಭಿನ್ನವಾಗಿರುವುದೋ ಅಲ್ಲಿ ಆ ಭಿನ್ನತೆಗೆ ನೈಜ ಕಾರಣ ತೌರಾತ್‌ನಲ್ಲಿ ಅದರ ಅನುಯಾಯಿಗಳು ಮಾಡಿರುವ ತಿದ್ದುಪಡಿಯಾಗಿದೆ. ಆದ್ದರಿಂದ ಪ್ರವಾದಿತ್ವದ ಸ್ಥಾನಮಾನವನ್ನು ತಿಳಿದವನು, ತತ್ವಜ್ಞಾನ ಹಾಗೂ ಇತಿಹಾಸವನ್ನು ಬಲ್ಲವನು ವಿಮರ್ಶೆಯ ರೀತಿ-ನೀತಿಗಳಂತೆ ಆ ಹೇಳಿಕೆಗಳನ್ನು ಪರಾಮರ್ಶಿಸಿದರೆ ಕುರ್‌ಆನ್ ಮತ್ತು ತೌರಾತ್‌ನಲ್ಲಿರುವ ಹೇಳಿಕೆಗಳಲ್ಲಿ ಭಿನ್ನತೆ ಇರುವಲ್ಲಿ ತೌರಾತ್‌ನ ಹೇಳಿಕೆಯು ಸತ್ಯಕ್ಕೆ ದೂರವಾಗಿವೆ ಎಂಬುದನ್ನೂ ವಾಸ್ತವಿಕತೆಯು ಕುರ್‌ಆನಿನಲ್ಲಿಯೇ ವಿವರಿಸಲ್ಪಟ್ಟಿದೆ ಎಂಬುದನ್ನೂ ಖಚಿತವಾಗಿ ತಿಳಿದುಕೊಳ್ಳಬಲ್ಲನು.

ಗತ ಪ್ರವಾದಿಗಳ ಇತಿಹಾಸವನ್ನು ಈ ರೀತಿ ತೌರಾತ್‌ನಲ್ಲಿರುವ ತಪ್ಪುಗಳನ್ನು ಸರಿಪಡಿಸುತ್ತಾ ಹೇಳಿರುವುದು ಅದು ಸರ್ವಜ್ಞನೂ ವಿವರಪೂರ್ಣನೂ ಆದ ಅಲ್ಲಾಹನ ವತಿಯಿಂದ ಅವತೀರ್ಣವಾಗಿದೆ ಎಂಬುದರ ಖಚಿತ ಪುರಾವೆಯಾಗಿದೆ.

**ಆರನೆಯ ಪುರಾವೆ:**

ಈ ವಿಷಯದ ಆರನೆಯ ಪುರಾವೆ ಕುರ್‌ಆನಿನಲ್ಲಿ ಬಂದಿರುವ ವೈಜ್ಞಾನಿಕ ವಾಸ್ತವಿಕತೆಗಳಾಗಿವೆ. ಕುರ್‌ಆನ್ ಅವತೀರ್ಣದ ಸಮಯದಲ್ಲಿ ಸಂಪೂರ್ಣ ಜಗತ್ತು, ವಿಶೇಷವಾಗಿ ಅರೇಬಿಯಾ ಅವುಗಳಿಂದ ಪೂರ್ಣ ಅಜ್ಞವಾಗಿತ್ತು. ವಿಜ್ಞಾನ ಮತ್ತು ತತ್ವಜ್ಞಾನದ ಉನ್ನತ ವಲಯಗಳಲ್ಲಿಯೂ ಅವುಗಳ ಚರ್ಚೆ ಇರಲಿಲ್ಲ. ತರುವಾಯ ಅನೇಕ ಶತಮಾನಗಳು ಸಂದ ಬಳಿಕ ವೈಜ್ಞಾನಿಕ ಸಂಶೋಧನೆಗಳು ತಮ್ಮ ಅಭಿವೃದ್ಧಿಯ ಅನೇಕ ಮಜಲುಗಳನ್ನು ದಾಟಿದ ಬಳಿಕ ಈ ವಾಸ್ತವಿಕತೆಗಳನ್ನು ಕಂಡುಹಿಡಿಯಲಾಯಿತು. ಉದಾ:

(1) ವಿಶ್ವದ ಸೃಷ್ಟಿಯ ಬಗ್ಗೆ ಕುರ್‌ಆನ್ ಈ ರೀತಿ ಹೇಳಿತು:

**"ಆಕಾಶಗಳೂ ಭೂಮಿಯೂ ಕೂಡಿಕೊಂಡಿದ್ದು ಅನಂತರ ನಾವು ಅವುಗಳನ್ನು ಬೇರ್ಪಡಿಸಿದೆವು." (ಪವಿತ್ರ ಕುರ್‌ಆನ್, 21:30)**

ಎಲ್ಲ ಗಗನಗಳು ಮತ್ತು ಭೂಮಿ ಎಂದರೆ ಕುರ್‌ಆನಿನ ಭಾಷೆಯಲ್ಲಿ ಸಂಪೂರ್ಣ ವಿಶ್ವವಾಗಿದೆ. ವಿಶ್ವವು ತನ್ನ ಪ್ರಸಕ್ತ ರೂಪವನ್ನು ತಾಳುವ ಮೊದಲು ಎಲ್ಲವೂ ಒಂದೇ ವಸ್ತುವಿನ ರೂಪದಲ್ಲಿದ್ದು ಒಂದೇ ವಿಧದ ವಿಶಿಷ್ಟ ವಸ್ತು ಅಂತರಿಕ್ಷದಲ್ಲಿ ಹರಡಿಕೊಂಡಿತ್ತು. ತರುವಾಯ ಯುಕ್ತಿಪೂರ್ಣನಾದ ಸೃಷ್ಟಿಕರ್ತನು ಅದನ್ನು ಬೇರೆ ಬೇರೆ ಭಾಗಗಳಾಗಿ ವಿಂಗಡಿಸಿದನು ಮತ್ತು ಅವುಗಳಿಂದ ವಿಭಿನ್ನ ಗೋಳಗಳನ್ನು ಅಸ್ತಿತ್ವಕ್ಕೆ ತಂದನು. ಆ ವಸ್ತು ಯಾವುದು? ಅದು ಹೇಗಿತ್ತು? ಅದರ ವಿವರಣೆಯು ಕುರ್‌ಆನಿನ ಇನ್ನೊಂದು ಸೂಕ್ತದಲ್ಲಿದೆ. ಅದು ಒಂದು ರೀತಿಯ ಹೊಗೆ ಅಥವಾ ಅನಿಲ ಆಗಿತ್ತು ಎಂದು ಹೇಳಲಾಗಿದೆ:

**"ತರುವಾಯ ಅವನು ಆಕಾಶದ ಕಡೆಗೆ ಗಮನ ಹರಿಸಿದನು. ಆಗ ಅದು ಕೇವಲ ಹೊಗೆಯಾಗಿತ್ತು." (ಪವಿತ್ರ ಕುರ್‌ಆನ್, 41:11)**

(2) ಸಜೀವ ಸೃಷ್ಟಿಗಳ ಕುರಿತು ಅವುಗಳ ಮೂಲ ಜಲವಾಗಿದೆ ಎಂದು ಅದು ಹೇಳಿತು. ಜಲದಿಂದಲೇ ಎಲ್ಲಾ ಸಜೀವಿಗಳ ಸೃಷ್ಟಿಯಾಗಿದೆ:

"ಪ್ರತಿಯೊಂದು ಜೀವಿಯನ್ನೂ ನೀರಿನಿಂದ ಸೃಷ್ಟಿಸಿದ್ದನ್ನೂ ಕಾಣಲಿಲ್ಲವೇ?"
(ಪವಿತ್ರ ಕುರ್‌ಆನ್, 21:3(

(3) ಜಡ-ಚೇತನ ಎಲ್ಲಾ ವಸ್ತುಗಳ ಕುರಿತು ಅದು ಒಂದು ಮಾತು ಹೇಳಿತು:

"ನಾವು ಪ್ರತಿಯೊಂದು ವಸ್ತುವಿನ ಜೋಡಿಗಳನ್ನು ಮಾಡಿರುತ್ತೇವೆ."
(ಪವಿತ್ರ ಕುರ್‌ಆನ್, 51:4(

ಅರ್ಥಾತ್, ಈ ಭೌತಿಕ ಲೋಕದಲ್ಲಿ ಇರುವ ಎಲ್ಲಾ ಸೃಷ್ಟಿಗಳ ಪೈಕಿ ಪ್ರತಿಯೊಂದ ಅಲ್ಲಾಹನು ಅದರ ಜೋಡಿಯನ್ನು ಸೃಷ್ಟಿಸಿರುವನು. ಅವು ಪರಸ್ಪರ ಬೆಸೆದು, ಪರಸ್ಪ ಸಹಕರಿಸಿ ವಿಶ್ವದ ಇಂಗಿತ ಮತ್ತು ಅಗತ್ಯಗಳನ್ನು ಈಡೇರಿಸಬೇಕೆಂಬುದೇ ಇದರ ಉದ್ದೇ ವಿಭಿನ್ನ ವಸ್ತುಗಳ ನೈಸರ್ಗಿಕ ಭಿನ್ನತೆಯು ಅವುಗಳನ್ನು ಪರಸ್ಪರ ಕಚ್ಚಾಡಿಸಿ ಈ ವಿಶ್ವವೆಂ ಕಾರ್ಖಾನೆಯ ಶಾಂತಿಯುತ ನಿರ್ಮಾಣ ಮತ್ತು ಅಭಿವೃದ್ಧಿ ಮಾಡುವ ಬದಲು ಅದನ ಅಸ್ತವ್ಯಸ್ತಗೊಳಿಸಿ ಕೆಡುಕು ಅಥವಾ ವಿನಾಶ ಹರಡಬಾರದೆಂಬುದೇ ಈ ರೀತಿ ಪರಸ್ಪ ಪೂರಕವಾದ ಜೊತೆಗಳನ್ನು ಸೃಷ್ಟಿಸಲಾಗಿದೆ.

(4) ಚಂದ್ರ ಮತ್ತು ಸೂರ್ಯ ಇತ್ಯಾದಿಗಳ ಶಾಶ್ವತ ಸ್ಥಿತಿಯ ಬಗ್ಗೆ ಅದು ರೀತಿ ಹೇಳಿದೆ:

"ಸೂರ್ಯನು ತನ್ನ ಸ್ಥಾನದ ಕಡೆಗೆ ಚಲಿಸುತ್ತಿದ್ದಾನೆ. ಪ್ರಬಲನೂ ಸರ್ವಜ್ಞನ ಆದವನ ನಿರ್ಣಯವಿದು, ಮತ್ತು ಚಂದ್ರ - ಅದಕ್ಕೆ ನಾವು ಘಟ್ಟಗಳನ್ನು ನಿಶ್ಚಯಿಸಿಕೊಟ್ಟಿದ್ದು ಅವುಗಳನ್ನು ಹಾದು ಹೋಗುತ್ತಾ ಕೊನೆಗೆ ಅದು ಖರ್ಜೂರದ ಒಣಗೆಲ್ಲಿನಂತಾಗಿ ಬಿಡುತ್ತ ಚಂದ್ರನನ್ನು ಹಿಡಿಯಲು ಸೂರ್ಯನಿಂದಾಗದು ಮತ್ತು ರಾತ್ರಿಯು ಹಗಲನ್ನು ಮಿ ಹೋಗಲಾರದು. ಎಲ್ಲವೂ ಒಂದೊಂದು ಕಕ್ಷೆಯಲ್ಲಿ ತೇಲುತ್ತಿವೆ."
(ಪವಿತ್ರ ಕುರ್‌ಆನ್, 36:38-4(

ಈ ಎಲ್ಲಾ ವಿಷಯಗಳೂ ಇಂದು ದೃಢೀಕರಿಸಲ್ಪಟ್ಟ ವಾಸ್ತವಿಕತೆಗಳಾಗಿವೆ ಎಂಬುದ ನಿಜ. ವಿಶ್ವವು ತನ್ನ ಮೂಲಸ್ಥಿತಿಯಲ್ಲಿ ಒಂದು ಅನಿಲದ ರೂಪದಲ್ಲಿತ್ತು. ಜೀವನ ಮೂ ಜಲವಾಗಿದೆ; ಸೃಷ್ಟಿಗಳಲ್ಲಿ ಜೋಡಿಯ ವ್ಯವಸ್ಥೆ ಅಸ್ತಿತ್ವದಲ್ಲಿದೆ; ಚಂದ್ರ ಮತ್ತು ಸೂರ್ಯ ಹಾಗೂ ಎಲ್ಲಾ ಗೋಳಗಳು ತಂತಮ್ಮ ಕಕ್ಷೆಯಲ್ಲಿ ತಿರುಗುತ್ತಿವೆ ಎಂಬುದೆಲ್ಲಾ ಇಂದ ವೈಜ್ಞಾನಿಕ ವಾಸ್ತವಿಕತೆಗಳಾಗಿವೆ. ಆದರೆ ಪವಿತ್ರ ಕುರ್‌ಆನ್ ಇಷ್ಟು ದೃಢ ಸ್ವರದ ಇವುಗಳನ್ನು ಹೇಳಿದ ಕಾಲದಲ್ಲಿ ಅಂದಿನ ವಿಜ್ಞಾನಿಗಳು ಮತ್ತು ಸಂಶೋಧಕರಿಗೆ ವಾಸ್ತವಿಕತೆಗಳ ಗಂಧ ಗಾಳಿಯೂ ಸೋಂಕಿರಲಿಲ್ಲ. ಅವುಗಳನ್ನು ದೃಢೀಕರಿಸಲ್ಪ

ವಾಸ್ತವಿಕತೆಗಳೆಂದು ಅಂಗೀಕರಿಸುವ ಪ್ರಶ್ನೆಯೇ ಆಗ ಇರಲಿಲ್ಲ. ಕುರ್‌ಆನಿನಲ್ಲಿ ಶತಮಾನಗಳ ಹಿಂದೆಯೇ ಈ ವೈಜ್ಞಾನಿಕ ವಾಸ್ತವಿಕತೆಗಳ ಪ್ರಸ್ತಾಪ ಹೇಗೆ ಬಂತು ಎಂಬುದು ನಮ್ಮ ಮುಂದಿರುವ ಪ್ರಶ್ನೆಯಾಗಿದೆ. ಆ ಕಾಲದಲ್ಲಿ ಮಾತ್ರವಲ್ಲ ಅದರ ಅನೇಕ ಕಾಲದ ನಂತರವೂ ವಿಜ್ಞಾನ ಮತ್ತು ಸಂಶೋಧನೆಗೆ ನಿಲುಕಿರದ ಈ ವಿಶ್ವದ ಮಹಾನ್ ವಾಸ್ತವಿಕತೆಗಳು ಓರ್ವ ನಿರಕ್ಷರಿಯ ಬಾಯಿಯಿಂದ ಬರುವುದು ಹೇಗೆ ಸಾಧ್ಯವಾಯಿತು? ಇದಕ್ಕೆ ಕೇವಲ ಒಂದು ಉತ್ತರ ಇರುವುದು ಸಾಧ್ಯ ಎಂಬುದು ವ್ಯಕ್ತ. ಯಾವ ಕುರ್‌ಆನ್ ಈ ವಾಸ್ತವಿಕತೆಗಳನ್ನು ಹೊರಗೆಡಹಿದೆಯೋ ಅದು ಮಾನವ ಕೃತಿಯಾಗಿರಲಿಲ್ಲ ಬದಲಾಗಿ ಅದು ಸಕಲ ವಿಶ್ವದ ಸೃಷ್ಟಿಕರ್ತನೂ ಸ್ವಯಂ ಈ ವಾಸ್ತವಿಕತೆಗಳನ್ನು ತನ್ನ ವಿಶ್ವದಲ್ಲಿ ನೆಲೆಗೊಳಿಸಿದವನೂ ಆದ ದೇವನ ಕಡೆಯಿಂದ ಬಂದುದಾಗಿದೆ ಎಂಬುದೇ ಆ ಉತ್ತರ.

ಏಳನೆಯ ಪುರಾವೆ:

ಈ ವಾಸ್ತವಿಕತೆಯ ಏಳನೆಯ ಪುರಾವೆ ಪವಿತ್ರ ಕುರ್‌ಆನಿನ ಅಸದೃಶ ವಿವರಣಾಶೈಲಿ, ಅದರ ಅಸಾಮಾನ್ಯ ವಾಕ್‌ಝುರಿ ಮತ್ತು ಅದ್ಭುತ ಪ್ರಭಾವ ಶಕ್ತಿಯಾಗಿದೆ.

ಕುರ್‌ಆನ್ ಮಾನವ ಶಬ್ದಗಳಿಂದಲೇ ಕೂಡಿದ ವಚನವಾಗಿದೆ. ಅರಬೀ ಭಾಷೆ ಮತ್ತು ಸಾಹಿತ್ಯದ ನಿಯಮ ನಿಬಂಧನೆಗಳೇ ಅದರಲ್ಲೂ ಇವೆ. ಆದರೂ ಮಾತುಗಳ ವ್ಯವಸ್ಥೆ, ಪ್ರವಚನ ಶೈಲಿ ಅರಬೀ ಭಾಷಾ ಸಾಹಿತ್ಯದಲ್ಲೇ ಅದ್ವಿತೀಯವಾಗಿದೆ. ಅದಕ್ಕೆ ತನ್ನದೇ ಆದ ಅದ್ಭುತ ಸ್ವಂತಿಕೆ ಇದೆ. ಇದರ ನೈಜ ಸ್ಥಿತಿಯನ್ನು ಅರಿಯಲು ಕುರ್‌ಆನ್ ಮತ್ತು ಇಸ್ಲಾಮಿನ ಶ್ರದ್ಧಾಳುಗಳದ್ದಲ್ಲ, ಅದರ ಪ್ರಬಲ ವಿರೋಧಿಗಳ ಕೆಲವು ಸಾಕ್ಷ್ಯಗಳನ್ನು ನೋಡೋಣ:

ಸುಪ್ರಸಿದ್ಧ ಕುರೈಶಿ ಸರದಾರ ವಲೀದ್ ಬಿನ್ ಮುಗೈರಃ ಪ್ರವಾದಿಯವರ(ಸ) ಸನ್ನಿಧಿಯಲ್ಲಿ ಹಾಜರಾದ. ಪ್ರವಾದಿ(ಸ) ವಾಡಿಕೆಯಂತೆ ವಲೀದ್‌ರಿಗೂ ಕುರ್‌ಆನ್ ಓದಿ ಹೇಳಿದರು. ದೇವವಚನವನ್ನು ಆಲಿಸಿದ ಕಾರಣ ಅವನ ಹೃದಯದ ಕಾಠಿಣ್ಯವು ಕಡಿಮೆ ಯಾಗಿದೆ ಎಂಬುದು ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಮೌನವಾಗಿ ಮನೆಗೆ ಮರಳಿದ. ಈ ಸುದ್ದಿ ಅಬೂಜಹಲ್‌ಗೆ ಮುಟ್ಟಿದಾಗ ಗಾಬರಿಗೊಂಡು ಅವನ ಬಳಿ ಬಂದನು, "ಚಿಕ್ಕಪ್ಪಾ! ಮುಹಮ್ಮದ್‌ರ(ಸ) ಬಗ್ಗೆ ನಿಮ್ಮ ನಿಲುಮೆಯನ್ನು ಸ್ಪಷ್ಟ ಪಡಿಸಿರಿ. ನೀವು ಆ ವ್ಯಕ್ತಿಯ ವಾದವನ್ನು ಅಂಗೀಕರಿಸುವುದಿಲ್ಲ ಎಂಬುದು ನಿಮ್ಮ ಜನಾಂಗದ ಜನರಿಗೆ ಖಚಿತವಾಗುವ ರೀತಿಯಲ್ಲಿ ಕೆಲವು ಮಾತುಗಳನ್ನು ಹೇಳಿರಿ" ಎಂದು ಅವನಲ್ಲಿ ಬಿನ್ನವಿಸಿದನು. ವಲೀದ್ ಈ ರೀತಿ ಉತ್ತರಿಸಿದನು: "ನಾನೇನು ಹೇಳಬೇಕು? ದೇವನಾಣೆ! ಕವಿತೆಯಾಗಲೀ ಯುದ್ಧ ಗೀತೆಯಾಗಲೀ ಸ್ತುತಿಗೀತೆಗಳಾಗಲೀ ಯಕ್ಷಗಾನಗಳಾಗಲೀ ಅರಬೀ ಸಾಹಿತ್ಯದ ಒಂದೊಂದು ಪ್ರಕಾರವನ್ನೂ ನಾನು ನಿನಗಿಂತ ಹೆಚ್ಚು ಅರಿತಿರುವೆನು. ದೇವನಾಣೆ! ಈ ವ್ಯಕ್ತಿ ಮುಂದಿಡುವ ವಚನವು ಈ ಪೈಕಿ ಯಾವುದನ್ನೂ ಹೋಲುವುದಿಲ್ಲ. ದೇವನಾಣೆ! ಆತನ ವಾದದಲ್ಲಿ ಒಂದು ಅದ್ಭುತ ಮಾಧುರ್ಯ ಮತ್ತು ಒಂದು ವಿಶಿಷ್ಟ ಸೌಂದರ್ಯವಿದೆ.

ಅದರ ರೆಂಬೆಗಳು ಫಲಗಳಿಂದ ತುಂಬಿವೆ. ಅದರ ಬೇರುಗಳು ಹಚ್ಚ ಹಸುರಾಗಿ ಖಂಡಿತವಾಗಿಯೂ ಅದು ಎಲ್ಲ ವಚನಗಳಿಗಿಂತ ಉನ್ನತವಾಗಿದೆ. ಇತರ ಯಾವ ವಚನ ಅದನ್ನು ಕೀಳಾಗಿಸದು. ಅದರ ಪ್ರಭಾವ ವಲಯದಲ್ಲಿ ಬರುವ ಎಲ್ಲವನ್ನೂ ಅ ನುಚ್ಚುನೂರುಗೊಳಿಸಿ ಬಿಡುವುದು." (ಹಾಕಿಮ್, ಬೈಹ

ಕುರೈಶರ ಓರ್ವ ದೂರದೃಷ್ಟಿಯುಳ್ಳ ನಾಯಕ ಉತ್‌ಬಃ ಬಿನ್ ರಬೀಅ ಪ್ರವಾ ಯವರ(ಸ) ಬಳಿಗೆ ಬಂದನು. ಅವರ ಸಂದೇಶವನ್ನು ಪರಾಮರ್ಶಿಸುವುದು ಮ ಅದರಿಂದ ಅವರನ್ನು ತಡೆಯುವುದು ಅವನ ಉದ್ದೇಶವಾಗಿತ್ತು. ಪ್ರವಾದಿ(ಸ) ಅವ ಮುಂದೆ ಸೂರಃ ಹಾಮ್ಮೀಮ್ ಅಸ್ಸಜ್‌ದಃ ಓದಲಾರಂಭಿಸಿದರು. "ಇವರೀಗ ವಿಮು ರಾಗುತ್ತಾರೆಂದಾದರೆ ಇವರೊಡನೆ ಹೇಳಿರಿ, ನಾನು ನಿಮ್ಮನ್ನು, ಆದ್ ಮತ್ತು ಸಮೂ ಮೇಲೆ ಎರಗಿದ್ದಂತಹ, ಹಠಾತ್ತನೆ ಸಿಡಿದು ಬೀಳುವ ಒಂದು ಯಾತನೆಯ ಬ ಎಚ್ಚರಿಸುತ್ತೇನೆ." (ಪವಿತ್ರ ಕುರ್‌ಆನ್, 41:13) ಎಂಬ ಅರ್ಥದ ಸೂಕ್ತಕ್ಕೆ ತಲುಪಿದಾ ಅವನು ಪ್ರವಾದಿಯವರ(ಸ) ಬಾಯಿಗೆ ತನ್ನ ಕೈಯನ್ನು ಅಡ್ಡ ಹಿಡಿದನು ಮತ್ತು ತ ರಕ್ತ ಸಂಬಂಧದ ಮೊರೆ ಇಡುತ್ತಾ "ದೇವನಿಗಾಗಿ ಇನ್ನು ಮುಂದುವರಿಸದಿರಿ" ಎಂ ಬಿನ್ನವಿಸಿದನು. ತರುವಾಯ ಮನೆಗೆ ಮರಳಿದನು. ಅಬೂಜಹಲ್ ಆತನನ್ನು ಭೇಟಿಯಾ ಈ ಮಾತುಕತೆಯ ವಿವರ ತಿಳಿಯಲು ಪ್ರಯತ್ನಿಸಿದನು. ಅವನು ಅದನ್ನು ವಿವರಿಸು "ದೇವನಾಣೆ! ಅವನು ಮುಂದಿಡುತ್ತಿರುವ ವಚನವು ಮಂತ್ರವಾಗಲೀ ಕವಿತೆಯಾಗ ಕಣಿಯಾಗಲೀ ಅಲ್ಲ" ಎಂದನು. (ಬೈಹ

ವಾಕ್ಚಾತುರ್ಯವೆಂದರೆ ವಚನವು ಅದನ್ನು ಆಲಿಸುವವನ ಮನ ಮುಟ್ಟುವಂ ಬೇಕು. ಆಲಿಸುವವನ ಮನಸ್ಸಿಗೆ ಶಾಂತಿ ಮತ್ತು ಬುದ್ಧಿಗೆ ಸಮಾಧಾನ ನೀಡುತ್ತಾ ಅದ ಕೇಳಿಸುವವನ ನೈಜ ಉದ್ದೇಶವು ಈಡೇರಬೇಕು. ವಾಕ್ಚಾತುರ್ಯದ ಈ ತಾತ್ಪರ್ಯವ ಮುಂದಿರಿಸಿಕೊಂಡು ಅವಲೋಕಿಸಿದರೆ ಮನುಷ್ಯ ಇತಿಹಾಸದಲ್ಲಿ ತನ್ನ ಪ್ರಭಾವ ಶ ಹಾಗೂ ಮನ-ಮಸ್ತಿಷ್ಕಗಳನ್ನು ಸೂರೆಗೈಯುವುದರಲ್ಲಿ ಕುರ್‌ಆನಿಗೆ ಸಮಾನವಾದ ಒಂ ವಚನವಿಲ್ಲ. ಕುರ್‌ಆನಿನ ವಾಕ್‌ಝರಿಯನ್ನು, ಅದರ ಪ್ರಭಾವ ಶಕ್ತಿಯನ್ನು ಮತ್ತು ಅದ ವಶೀಕರಣ ಗುಣವನ್ನು ಕೆಲವು ಘಟನೆಗಳ ಬೆಳಕಿನಲ್ಲಿ ನೋಡಿರಿ:

1) ಇಸ್ಲಾಮೀ ಸಂದೇಶ ಪ್ರಚಾರವನ್ನು ಎದುರಿಸುವ ಸಲುವಾಗಿ ಕುರೈಶ್ ಸರದಾರ ತಮ್ಮ ಅನುಯಾಯಿಗಳಿಗೆ ನೀಡಿದ ನಿರ್ದೇಶಗಳ ಪೈಕಿ ಒಂದು ಈ ರೀತಿ ಇತ್ತು:

"ಈ ಕುರ್‌ಆನನ್ನು ಎಷ್ಟು ಮಾತ್ರಕ್ಕೂ ಆಲಿಸಬೇಡಿರಿ. ಇದನ್ನು ಕೇಳಿಸಲಾದಾ ಆತಂಕಗಳನ್ನೊಡ್ಡಿರಿ. ಈ ಮೂಲಕ ನೀವು ವಿಜಯಿಗಳಾಗಲೂಬಹುದು"

(ಪವಿತ್ರ ಕುರ್‌ಆನ್, 41:2

ಬಹುದೇವವಿಶ್ವಾಸಿಗಳ ಈ ತಂತ್ರ ಮತ್ತು ನಿರ್ದೇಶವು ಒಂದು ವೇಳೆ ಸಾರ್ವಜನಿಕರು ಮನವಿಟ್ಟು ಈ ಕುರ್‌ಆನನ್ನು ಆಲಿಸುತ್ತಿದ್ದರೆ ಅವರು ಅದರ ವಶವಾಗದೆ ಉಳಿಯ ಾರರು ಎಂಬ ವಾಸ್ತವಿಕತೆಯ ಅಂಗೀಕಾರವಾಗಿದೆ.

2) ಮಕ್ಕಾದಲ್ಲಿ ಸತ್ಯವಿಶ್ವಾಸಿಗಳ ಮೇಲೆ ಸತ್ಯನಿಷೇಧಿಗಳ ಕಿರುಕುಳಗಳು ಎಲ್ಲೆ ಾರಿದಾಗ ಒಮ್ಮೆ ಹ. ಅಬೂಬಕರ್(ರ) ಅವರೂ ವಲಸೆ ಹೋಗುವ ತೀರ್ಮಾನ ಮಾಡಿ ನೆಯಿಂದ ಹೊರಟಿದ್ದರು. ರಸ್ತೆಯಲ್ಲಿ ಇಬ್ನುದಗ್ನ ಎಂಬ ಓರ್ವ ವ್ಯಕ್ತಿಯ ಭೇಟಿ ಾಯಿತು. ಅಬೂಬಕರ್‌ರಿಗೆ(ರ) ತಾನು ಆಶ್ರಯ ನೀಡುವುದಾಗಿ ಭರವಸೆ ನೀಡಿ ಅವರನ್ನು ಂದಕ್ಕೆ ಕರೆ ತಂದರು. ಮಕ್ಕಾದ ಜನರಿಗೆ ಇಬ್ನುದಗ್ನ ಅಬೂಬಕರ್‌ರಿಗೆ(ರ) ಆಶ್ರಯ ೀಡಿದ ವಿಷಯ ತಿಳಿದಾಗ ಅವರು ಹೇಳಿದರು: "ಅವರು ಕುರ್‌ಆನ್ ನಮ್ಮ ಮಹಿಳೆಯರಿಗೆ ತ್ತು ಮಕ್ಕಳಿಗೆ ಕೇಳಿಸುವಂತೆ ಉಚ್ಚ ಸ್ವರದಲ್ಲಿ ಓದದಿದ್ದರೆ ಮಾತ್ರ ನಾವು ಅವರನ್ನು ಲ್ಲಿ ಇರಗೊಡಬಲ್ಲೆವು." (ಇಬ್ನು ಹಿಶಾಮ್ ಭಾಗ-1)

3) ಅಬೂಜಹಲ್ ಮತ್ತು ಅಖ್ನಸ್ ಬಿನ್ ಶರೀಕ್‌ಗಿಂತ ಹೆಚ್ಚು ಕುರ್‌ಆನನ್ನು ್ವೇಷಿಸುವವರು ಮತ್ತು ಇಸ್ಲಾಮಿನ ಶತ್ರುಗಳು ಇನ್ನಾರಿರಬಹುದು. ತಮ್ಮ ಎಲ್ಲ ದ್ವೇಷ ತ್ತು ವಿರೋಧಗಳ ಹೊರತಾಗಿಯೂ ಒಮ್ಮೆ ಅವರು ಕುರ್‌ಆನನ್ನು ಆಲಿಸಿದ ಬಳಿಕ ದರ ಅಸಾಮಾನ್ಯ ಮಾಧುರ್ಯ ಮತ್ತು ಅದರ ಮನಮೋಹಕ ವಾಕ್‌ಝರಿಯನ್ನು ಂದೂ ಅವರಿಂದ ಮರೆಯಲು ಸಾಧ್ಯವಾಗಲಿಲ್ಲ. ಹಗಲು ಹೊತ್ತು ತಮ್ಮ ವೈರ ಮತ್ತು ರೋಧವನ್ನು ಸಾಧಿಸುತ್ತಿದ್ದರು. ಆದರೆ ರಾತ್ರಿಯ ವೇಳೆ ಪ್ರವಾದಿವರ್ಯರ(ಸ) ಬಾಯಿಯಿಂದ ರ್‌ಆನ್ ಆಲಿಸಿದಾಗ ಮುಂದಿಟ್ಟ ಹೆಜ್ಜೆ ನಿಂತು ಬಿಡುತ್ತಿತ್ತು ಮತ್ತು ಬಹಳ ಹೊತ್ತಿನ ನಕ ಅವರು ಅಲ್ಲೇ ನಿಂತು ಅದನ್ನು ಆಲಿಸುತ್ತಿದ್ದರು. (ಇಬ್ನು ಹಿಶಾಮ್ ಭಾಗ-1)

4) ಹ. ಅಬ್ದುಲ್ಲಾ ಬಿನ್ ಮಸ್‌ಊದ್(ರ) ವರದಿ ಮಾಡಿರುವರು: ಪ್ರವಾದಿ(ಸ) ಮ್ಮೆ ಕಅಬಾ ಭವನದಲ್ಲಿ ಸೂರಃ ಅನ್ನಜ್ಮ್ ಪಠಿಸುತ್ತಿದ್ದರು. ಸಭಿಕರಲ್ಲಿ ಮುಸ್ಲಿಮರೂ ಹುದೇವಾರಾಧಕರೂ ಇದ್ದರು. ಪ್ರವಾದಿ(ಸ) ಪಠನ ವಂದನೆ ಮಾಡಲಿಕ್ಕಿರುವ ಸೂಕ್ತಕ್ಕೆ ಲುಪಿದಾಗ ದೇವಾಜ್ಞೆಯ ಮೇರೆಗೆ ಸಾಷ್ಟಾಂಗವೆರಗಿದರು. ಅವರನ್ನು ನೋಡಿ ಒಬ್ಬ ವ್ಯಕ್ತಿ ಬೂಲಹಬ್‌ನನ್ನು ಬಿಟ್ಟು ಎಲ್ಲರೂ ಸಾಷ್ಟಾಂಗವೆರಗಿದರು. (ಬುಖಾರಿ)

ಸ್ವಲ್ಪ ಯೋಚಿಸಿ. ಮುಸ್ಲಿಮರು ಈ ಸಾಷ್ಟಾಂಗ ವಂದನೆಯನ್ನು ದೇವಾಜ್ಞೆಯ ಮೇರೆಗೆ ಾಡಿದರು. ಆದರೆ ಸತ್ಯನಿಷೇಧಿಗಳ ಹಣೆಗಳು ಯಾಕೆ ನೆಲಕ್ಕೆ ತಾಗಿದುವು? ಇದು ೀವವಾಣಿಯ ಮಂತ್ರ ಮುಗ್ಧಗೊಳಿಸುವ ವಾಕ್ಚಾತುರ್ಯವಾಗಿತ್ತು ಎಂಬುದರಲ್ಲಿ ಂದೇಹವೇ ಇಲ್ಲ. ಅದರ ವೈಭವ ಮತ್ತು ಮಾಧುರ್ಯದಲ್ಲಿ ಅವರು ಮೈ ಮರೆತಿದ್ದರು. ವರಿಗೆ ತಾವೇನು ಮಾಡುತ್ತಿದ್ದೇವೆಂಬುದರ ಪರಿವೆಯೂ ಇರಲಿಲ್ಲ.

5) ತುಫೈಲ್ ಬಿನ್ ಅಮ್ರ್ ದೌಸಿ ತಮ್ಮ ಗೋತ್ರದ ನಾಯಕರಾಗಿದ್ದರು. ಓವ ಶ್ರೇಷ್ಠಕವಿಯೂ ಆಗಿದ್ದರು. ಒಂದು ದಿನ ಅವರು ಮಕ್ಕಾಗೆ ಬಂದರು. ಕುರೈಶರ ಕೆಲ ಮಂದಿ ಅವರ ಬಳಿ ಹೋಗಿ ಅವರನ್ನು ಎಚ್ಚರಿಸುತ್ತಾ "ನೀವು ಆ ವ್ಯಕ್ತಿ(ಮುಹಮ್ಮದ್)ಯ ಬಳಿ ಹೋಗಬೇಡಿ. ಅವರ ಮಾತು ಕೇಳಲೇಬೇಡಿ. ಏಕೆಂದರೆ ಅವರ ಮಾತಿನಲ್ಲಿ ಎಲ್ಲಿಲ್ಲದ ಮಾಂತ್ರಿಕ ಶಕ್ತಿ ಇದೆ. ಅದನ್ನು ಕೇಳಿದ ಬಳಿಕ ಮನುಷ್ಯ ತನ್ನ ಇಂದ್ರಿಯಗಳನ ನಿಯಂತ್ರಿಸಲಾರ" ಎಂದು ಹೇಳಿದರು. ಆದರೆ ತುಫೈಲ್ ಅವರ ಮಾತಿಗೆ ಕಿವಿಗೊಡಲಿಲ್ಲ ಪರಿಸ್ಥಿತಿಯನ್ನು ಅವಲೋಕಿಸಬೇಕೆಂಬ ಸಹಜ ಕುತೂಹಲ ಅವರಲ್ಲಿ ಉಂಟಾಗಿತ್ತು. ಅದ ಅವರನ್ನು ಪ್ರವಾದಿವರ್ಯರ(ಸ) ಬಳಿಗೆ ಕೊಂಡೊಯ್ದಿತು. ಪ್ರವಾದಿ(ಸ) ಅವರಿಗೆ ಕುರ್‌ಆನ ಓದಿ ಕೇಳಿಸಿದರು. ಆಗ ಅವರು "ಇದಕ್ಕಿಂತ ಉತ್ತಮವಾದ ವಾಣಿಯನ್ನು ನಾನು ಎಂದು ಆಲಿಸಲಿಲ್ಲ" ಎಂದು ಹೇಳುತ್ತಾ ಸತ್ಯವಿಶ್ವಾಸವನ್ನು ಸ್ವೀಕರಿಸಿದರು.

6) ಹ. ಉಮರ್(ರ) ಇಸ್ಲಾಮ್ ದೀಕ್ಷೆ ತೊಡುವುದಕ್ಕಿಂತ ಮುಂಚೆ ಪ್ರವಾ ವರ್ಯರ(ಸ) ಕಠಿಣ ಶತ್ರುಗಳಲ್ಲೊಬ್ಬರಾಗಿದ್ದರು. ಒಂದು ದಿನ ಕೋಪದ ಭರದಲ್ಲಿ ಖ ಹಿಡಿದು ಇಂದು ಅವರ ಕಥೆಯನ್ನೇ ಮುಗಿಸಿ ಬಿಡುತ್ತೇನೆಂಬ ಛಲದಿಂದ ಹೊರಟಿದ್ದರ ಆದರೆ ದಾರಿಯಲ್ಲಿ ತಮ್ಮ ಸೋದರಿಯ ಮನೆಯಲ್ಲಿ ತಾಹಾ ಅಧ್ಯಾಯವನ್ನು ಆಲಿಸು ಸುಯೋಗ ಒದಗಿ ಬಂತು. ಅದನ್ನು ಕೇಳಿದ್ದೇ ತಡ, ಇಸ್ಲಾಮ್ ಮತ್ತು ಪ್ರವಾದಿಯ ಬಗ್ಗೆಗಿ ಶತ್ರುತ್ವವು ವಿಶ್ವಾಸ ಮತ್ತು ಶ್ರದ್ಧೆಯಾಗಿ ಮಾರ್ಪಟ್ಟಿತು. (ಇಬ್ನುಹಿಶಾಮ್ ಭಾಗ-1

7) ಜುಬೈರ್ ಬಿನ್ ಮುತ್‌ಇಮ್ ರಸ್ತೆಯಲ್ಲಿ ನಡೆಯುತ್ತಿದ್ದರು. ಪ್ರವಾದಿ(ಸ ಮಗ್ರಿಬ್ ನಮಾಝ್‌ನಲ್ಲಿ ಅತ್ತೂರ್ ಅಧ್ಯಾಯವನ್ನು ಪಠಿಸುತ್ತಿದ್ದರು. ನಿಂತು ಆಲಿ ತೊಡಗಿದರು. ಶಬ್ದಗಳು ಬಾಣಗಳಂತೆ ಅವರ ಮನಸ್ಸಿಗೆ ನಾಟಿದುವು. ಕೊನೆಗೆ ಅವ ಸತ್ಯವಿಶ್ವಾಸಿ ಗಳಲ್ಲಿ ಸೇರಿಕೊಂಡರು.

ಕುರ್‌ಆನಿನ ವಶೀಕರಣ ಶಕ್ತಿಯುಳ್ಳ ವಾಕ್‌ಝುರಿಯ ಮಹಿಮೆ ಇದು. ಅದು ಒಂದ ಕಾವ್ಯ ಮತ್ತು ಸಾಹಿತ್ಯದ ಗ್ರಂಥವಾಗಿರದೆ ನೈತಿಕತೆ, ಉಪದೇಶ, ಆಜ್ಞೆ ಮತ್ತು ನಿರ್ದೇಶಗ ಗ್ರಂಥವಾಗಿದೆ. ವಾಕ್ ವೈಭವಗಳ ಮಹಿಮೆಯ ರಂಗವು ಕಾವ್ಯ, ಸಾಹಿತ್ಯ ಮತ ಯುದ್ಧಗೀತೆಗಳ ರಂಗವಾಗಿದೆ. ಆದ್ದರಿಂದ ಜಗತ್ತಿನ ಇತಿಹಾಸದಲ್ಲಿ ತಮ್ಮ ವಾ ವೈಭವವನ್ನು ಮೆರೆದವರು ತಮ್ಮ ಸಾಹಿತ್ಯ ಕೃತಿ ಮತ್ತು ಕಾವ್ಯಗಳ ಮೂಲಕ ಹಾ ಮಾಡಿರುವರು. ನೈತಿಕತೆ ಮತ್ತು ಧರ್ಮಗಳಂತಹ ಒಣ ವಿಷಯಗಳ ಬಗ್ಗೆ ಮಾತನಾ ವಾಕ್ಚಾತುರ್ಯದ ಉನ್ನತ ಮಾದರಿಯನ್ನು ಮುಂದಿರಿಸಿದಂತಹ ಯಾವ ನಿದರ್ಶನವ ಇತಿಹಾಸದಲ್ಲಿ ಸಿಗಲಾರದು. ಸಾಹಿತ್ಯಿಕ ಲೇಖನ ಮತ್ತು ಕಾವ್ಯಗಳಲ್ಲಿಯೂ ಎಷ್ಟೇ ಉನ್ನ ಕೃತಿಯಾಗಿದ್ದರೂ ಮೊದಲಿನಿಂದ ಕೊನೆಯ ತನಕ ವಾಕ್‌ಝುರಿಯ ಒಂದೇ ಮಟ್ಟವಿ ವುದಿಲ್ಲ. ಅದರ ಕೆಲವು ಭಾಗಗಳು ಸಾಹಿತ್ಯಿಕ ದೃಷ್ಟಿಯಿಂದ ಉತ್ತಮವೆನಿಸಿದರೆ ಅನೇ

ಭಾಗಗಳು ಸಾಮಾನ್ಯ ಮಟ್ಟದ್ದೂ ಇರಬಹುದು. ಆದರೆ ಕುರ್‌ಆನಿನ ಸ್ಥಿತಿಯು ಇದಕ್ಕಿಂತ ತೀರಾ ಭಿನ್ನವಾಗಿದೆ. ಅದು ಧಾರ್ಮಿಕ ಶಿಕ್ಷಣ ಮತ್ತು ಅನುಷ್ಠಾನ ವಿಧಿಗಳನ್ನು ಹೊಂದಿದ ಗ್ರಂಥವಾಗಿದ್ದು ಅತ್ಯುನ್ನತ ಸಾಹಿತ್ಯಿಕ ಕೃತಿಯಾಗಿದೆ. ಅದರ ಔನ್ನತ್ಯವು ಮೊದಲಿಂದ ಕೊನೆಯ ತನಕ ಪ್ರತಿಯೊಂದು ವಾಕ್ಯದಿಂದಲೂ ಸ್ಪಷ್ಟವಾಗುತ್ತದೆ. ಆದ್ದರಿಂದ ಮನುಷ್ಯ ಬುದ್ಧಿಯು ಇದು ಮಾನವ ಕೃತಿ ಎಂಬುದನ್ನು ಒಪ್ಪಲಾರದು. ಅದು ಹ. ಮುಹಮ್ಮದ್‌ರ(ಸ) ಅಥವಾ ಇತರ ಮನುಷ್ಯರ ವಚನವಾಗಿರದೆ ದೊಡ್ಡ ದೊಡ್ಡ ವಾಗ್ಮಿಗಳನ್ನೂ ಸಾಹಿತಿಗಳನ್ನೂ ಮಾತ್ರವಲ್ಲ ಸ್ವಯಂ ಅತ್ಯುನ್ನತ ಸಾಹಿತ್ಯ ಕೃತಿಗಳನ್ನೂ ಸೃಷ್ಟಿಸಬಲ್ಲ ದೇವನ ವಚನವಾಗಿದೆ ಎಂಬುದನ್ನು ಮನುಷ್ಯ ಬುದ್ಧಿಯು ಒಪ್ಪಲೇಬೇಕು.

**ಎಂಟನೆಯ ಪುರಾವೆ:**

ಕುರ್‌ಆನ್ ದೇವವಾಣಿಯಾಗಿದೆ ಎಂಬುದಕ್ಕೆ ಎಂಟನೆಯ ಪುರಾವೆ ಅದರ ಬೋಧನೆಗಳಾಗಿವೆ. ಏಕೆಂದರೆ ಈ ಬೋಧನೆಗಳ ಅವಲೋಕನ ನಡೆಸಿದರೆ ಅವುಗಳಲ್ಲಿ ಉನ್ನತ ಮಟ್ಟದ ಸಮತೋಲನ ಮತ್ತು ಸಹಜ ವೈಚಾರಿಕತೆ ಕಾಣ ಸಿಗುತ್ತದೆ. ಅದು ಮಾನವ ಕುಲಕ್ಕೆ ಒಂದು ಸಮಗ್ರ ಮಾರ್ಗದರ್ಶಕ ಗ್ರಂಥವಾಗಿದೆ. ಅದರಲ್ಲಿ ದೇವತ್ವದ ಬಗ್ಗೆ ಅಗತ್ಯ ಮಾಹಿತಿಗಳಿವೆ. ಧರ್ಮದ ತತ್ವ-ಸಿದ್ಧಾಂತಗಳ ಮತ್ತು ವಿಶ್ವಾಸ-ಶ್ರದ್ಧೆಗಳ ವಿವರಣೆಗಳಿವೆ. ಮಾನವೀಯ ನೈತಿಕತೆ ಮತ್ತು ಶಿಷ್ಟಾಚಾರಗಳ ವಿವರಣೆಗಳಿವೆ. ನೈಜ ಆರಾಧ್ಯನಾದ ಏಕದೇವನ ಆರಾಧನೆ-ಉಪಾಸನೆಗಳ ಬಗ್ಗೆ ಸ್ಪಷ್ಟ ನಿರ್ದೇಶನಗಳಿವೆ. ಅವನ ಹಕ್ಕುಗಳ ಬಗ್ಗೆ ವಿವರವಾದ ಉಪದೇಶಗಳಿವೆ. ವ್ಯಕ್ತಿಯ ತರಬೇತಿಯ ರೂಪರೇಷೆಗಳಿವೆ. ಸಮಾಜ ನಿರ್ಮಾಣದ ತತ್ವಗಳಿವೆ. ಕೌಟುಂಬಿಕ, ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ರಾಜಕೀಯ ವಿಧಿಗಳಿವೆ. ಯುದ್ಧ ಮತ್ತು ಶಾಂತಿಯ ಶಿಷ್ಟಾಚಾರ ಮತ್ತು ಕಾನೂನುಗಳಿವೆ. ಈ ಬೋಧನೆಗಳ ಪೈಕಿ ಸಾಮೂಹಿಕ ಜೀವನಕ್ಕೆ ಸಂಬಂಧಿಸಿದ ಆಜ್ಞೆಗಳು ಲೋಕದ ಇತರೆಲ್ಲ ಜೀವನ ವ್ಯವಸ್ಥೆಗಳಿಗಿಂತ ಭಿನ್ನವಾಗಿವೆ. ಅವು ಎಲ್ಲ ಜನಾಂಗ, ಎಲ್ಲ ಕಾಲ ಮತ್ತು ಎಲ್ಲ ದೇಶಗಳಿಗೆ ಸಮಾನವಾಗಿ ಉಪಯುಕ್ತವಾಗಿವೆ. ಶತಮಾನಗಳ ವರೆಗೆ ಅವುಗಳ ಉಪಯುಕ್ತತೆ ಸಾಬೀತಾಗಿದೆ. ಇನ್ನು ಮುಂದೆಯೂ ಅವುಗಳನ್ನು ಸ್ವೀಕರಿಸಿದರೆ ಉಪಯುಕ್ತವೇ ಆಗಿರುವುವು. ಈ ಬೋಧನೆಗಳ ವೈಚಾರಿಕತೆ, ಪ್ರಾಮಾಣಿಕತೆ ಮತ್ತು ಪ್ರಾಯೋಗಿಕ ಪರಿಣಾಮಗಳ ಬಗ್ಗೆ ಸ್ಪಷ್ಟ ಪುರಾವೆಗಳೂ ಇವೆ. ಅವುಗಳ ಬುನಾದಿಯಲ್ಲಿ ಮನುಷ್ಯ ಜೀವನದ ನಿರ್ಮಾಣ ಮಾಡಿದಾಗಲೆಲ್ಲಾ ಅವು ಸುಖ-ಸಂತೋಷಗಳನ್ನೇ ನೀಡಿವೆ. ಈ ಅಸದೃಶ ಶಿಕ್ಷಣಗಳು ಹ. ಮುಹಮ್ಮದ್‌ರವರ(ಸ) ಸ್ವಂತ ಬುದ್ಧಿಯ ಸೃಷ್ಟಿಗಳೇ? ಈ ಬಗ್ಗೆ ಯೋಚಿಸುವಾಗ ಎರಡು ಸಂಭಾವ್ಯ ವಾಸ್ತವಿಕತೆಗಳನ್ನು ಅವಶ್ಯ ಮನದಲ್ಲಿರಿಸಬೇಕು. ಮೊದಲನೆಯದಾಗಿ ಪವಿತ್ರ ಕುರ್‌ಆನ್ ಇಷ್ಟು ಯಶಸ್ವಿಯಾಗಿ ಪ್ರತಿಪಾದಿಸಿರುವ ಈ ಆಧ್ಯಾತ್ಮಿಕ, ಧಾರ್ಮಿಕ, ನೈತಿಕ, ಸಾಂಸ್ಕೃತಿಕ ಹಾಗೂ ರಾಜಕೀಯ

ಶಿಕ್ಷಣ ಮತ್ತು ಚರ್ಚೆಗಳು ಸಾಮಾನ್ಯ ಮಟ್ಟದ ಶಿಕ್ಷಣ ಮತ್ತು ಚರ್ಚೆಗಳಾಗಿರದೆ ಆಯುಷ್ಯ ಪೂರ್ತಿ ಶ್ರಮಪಟ್ಟು ಅತ್ಯಪೂರ್ವವೆಂಬಂತೆ ಒಬ್ಬಿಬ್ಬರು ಮಾತ್ರ ಜನರ ಮುಂದಿಡಲು ಸಾಧ್ಯವಾಗುವಂತಹ ಬೋಧನೆಗಳಾಗಿವೆ. ಎರಡನೆಯದಾಗಿ ಕುರ್‌ಆನನ್ನು ಜಗತ್ತಿನ ಮುಂದೆ ಇರಿಸಿದ ವ್ಯಕ್ತಿ. ಅವರ ಜೀವನದ ಸ್ಥಿತಿಗಳನ್ನು ಅವಲೋಕಿಸಿದರೆ ಅವರು ಅರೇಬಿಯಾದಂತಹ ಒಂದು ಹಿಂದುಳಿದ ರಾಷ್ಟ್ರದಲ್ಲಿ ಜನ್ಮ ತಾಳಿದ್ದರು; ಅವರ ಬಾಲ್ಯವು ಅನಾಥಾವಸ್ಥೆಯಲ್ಲಿ ಕಳೆಯಿತು; ಯೌವನವು ಆಡು ಮೇಯಿಸುವುದರಲ್ಲಿ ಕಳೆಯಿತು; ಮತ್ತು ಪ್ರೌಢಾವಸ್ಥೆಯು ವ್ಯಾಪಾರ ವಹಿವಾಟಿನಲ್ಲಿ ಕಳೆಯಿತು ಎಂದು ತಿಳಿದು ಬರುತ್ತದೆ. ಅವರು ನಿರಕ್ಷರಿಯಾಗಿದ್ದರು ಓದು ಬರಹದ ಗಂಧ ಗಾಳಿಯೂ ಅವರಿಗೆ ಸೋಂಕಿರಲಿಲ್ಲ. ಕವಿ ಮತ್ತು ಸಾಹಿತಿಗಳ ಹೆಸರೂ ಅವರಿಗೆ ತಿಳಿದಿರಲಿಲ್ಲ. ಅವರನ್ನು ಮಕ್ಕಾ ನಿವಾಸಿಗಳು ಓರ್ವ ಮೌನಪ್ರಿಯ ನೀತಿವಂತ, ಶಾಂತಿಪ್ರಿಯ, ಸತ್ಯಸಂಧ ಮತ್ತು ಸಜ್ಜನನೆಂಬ ನೆಲೆಯಲ್ಲಿ ಖಂಡಿತ ಅರಿತಿದ್ದರು. ಆದರೆ ನಲ್ವತ್ತು ವರ್ಷ ವಯಸ್ಸಾಗುವ ತನಕ ಅವರು ವಿದ್ಯೆ ಮತ್ತು ಜಾಣ್ಮೆಯ ಮಾತುಗಳನ್ನಾಡಿರುವುದನ್ನು ಯಾರೂ ಆಲಿಸಿರಲಿಲ್ಲ. ಅವರು ಆಧ್ಯಾತ್ಮಿಕತೆ ತತ್ವಜ್ಞಾನ, ನೈತಿಕತೆ, ಜೀವನದ ಸಾಮೂಹಿಕ ಸಮಸ್ಯೆಗಳು, ಕಾನೂನು ಮತ್ತು ರಾಜಕೀಯದ ಬಗ್ಗೆ ಒಂದು ದಿನವಾದರೂ ಚರ್ಚಿಸಿದುದನ್ನು ಯಾರೂ ಕಂಡಿರಲಿಲ್ಲ. ಅವರು ದೇವಾಸ್ತಿತ್ವ ಏಕದೇವತ್ವ, ದಿವ್ಯವಾಣಿ, ದೇವಸಂದೇಶವಾಹಕತ್ವ, ಪರಲೋಕ ಜೀವನ, ಅಲ್ಲಿಯ ಶಿಕ್ಷೆ ಮತ್ತು ಪುರಸ್ಕಾರ, ಸ್ವರ್ಗ ಮತ್ತು ನರಕ, ದೈವಿಕ ಗ್ರಂಥಗಳು ಮತ್ತು ಪೂರ್ವ ಗ್ರಂಥಗಳ ಬಗ್ಗೆ ಎಂದೂ ಒಂದೇ ಒಂದು ಮಾತು ಆಡಿರುವುದನ್ನು ಯಾರೂ ಕೇಳಿಲ್ಲ. ಆದರೆ ತಮ್ಮ ನಲ್ವತ್ತು ವರ್ಷಗಳ ಸರಳ ಮತ್ತು ನಿರಾಡಂಬರ ಜೀವನದ ಬಳಿಕ ಒಮ್ಮೆಲೇ ಅವರು ಪವಿತ್ರ ಕುರ್‌ಆನನ್ನು ಜನರ ಮುಂದಿಟ್ಟರು. ಅವು ಈ ರೀತಿಯ ಅದ್ವಿತೀಯ ಬೋಧನೆಗಳನ್ನು ಒಳಗೊಂಡಿತ್ತು. ಮಧ್ಯಾಹ್ನದ ಸೂರ್ಯನಂತೆ ನಿರಾಕರಿಸಲಾಗದಂಥ ಈ ಎರಡೂ ವಾಸ್ತವಿಕತೆಗಳನ್ನು ಮುಂದಿರಿಸಿ ಆಲೋಚಿಸುವ ಯಾವನೂ ಅದನ್ನು ಹ. ಮುಹಮ್ಮದ್ ರವರ(ಸ) ಬುದ್ಧಿಯ ಸೃಷ್ಟಿಯೆಂದು ಖಂಡಿತ ಸಾರಲಾರ. ಅದನ್ನು ಜಗತ್ತಿನ ಮುಂದಿರಿಸಿದವರು ಹೇಳಿದಂತೆ ಈ ಬೋಧನೆಗಳು ದಿವ್ಯವಾಣಿಯಾಗಿವೆ ಎಂಬುದೇ ಅವನ ತೀರ್ಮಾನವಾದೀತು

**ಒಂಭತ್ತನೆಯ ಪುರಾವೆ:**

ಈ ವಾದದ ಒಂಭತ್ತನೆಯ ಪುರಾವೆ ಕುರ್‌ಆನಿನ ಅನುಸರಣೆಯಿಂದ ಜಗತ್ತಿನ ಮುಂದೆ ಬಂದ ಪರಿಣಾಮಗಳಾಗಿವೆ. ಹ. ಈಸಾರವರು(ಅ) ಸತ್ಯ ಪ್ರವಾದಿಗಳನ್ನು ಅವರ ಶಿಕ್ಷಣಗಳ ಪರಿಣಾಮದಿಂದ ಗುರುತಿಸಬಹುದೆಂದು ಹೇಳಿರುವರು. ಇದೇ ಮಾತನ್ನು ಪವಿತ್ರ ಕುರ್‌ಆನ್ ಇನ್ನೊಂದು ಶೈಲಿಯಲ್ಲಿ ಈ ರೀತಿ ಹೇಳಿದೆ: "ಅಲ್ಲಾಹನು 'ಪವಿತ್ರ ವಚನ'ವನ್ನು ಯಾವುದಕ್ಕೆ ಹೋಲಿಸಿರುತ್ತಾನೆಂದು ನೀವು ನೋಡುತ್ತಿಲ್ಲವೇ? ಅದರ ಉಪಮೆ ಹೀಗಿದೆ: ಒಂದು ಉತ್ತಮ ಜಾತಿಯ ಮರ. ಅದರ ಬೇರುಗಳು ನೆಲದೊಳಗೆ ಆಳಕ್ಕೆ

ಸ್ಥಿರವಾಗಿ ನಾಟಿವೆ. ಗೆಲ್ಲುಗಳು ಆಕಾಶಕ್ಕೆ ಮುಟ್ಟಿವೆ. ಅದು ಸದಾಕಾಲವೂ ತನ್ನ ಪ್ರಭುವಿನ ಅನುಜ್ಞೆಯಿಂದ ತನ್ನ ಫಲಗಳನ್ನು ಕೊಡುತ್ತಿದೆ." (14:24-25) ಒಂದು ಗ್ರಂಥವು ಮನುಷ್ಯನನ್ನು ವೈಚಾರಿಕವಾಗಿಯೂ ವ್ಯಾವಹಾರಿಕವಾಗಿಯೂ ಸತ್ಯಸಂಧ, ಸಜ್ಜನ ಮತ್ತು ಸಾರ್ಥಕನನ್ನಾಗಿ ಮಾಡುತ್ತದೆ ಎಂಬುದು ಅದು ದೇವಗ್ರಂಥವಾಗಿದೆಯೆಂಬುದರ ಸ್ಪಷ್ಟ ಸಂಕೇತವಾಗಿದೆ. ಇದು ಯಾವುದೇ ಗ್ರಂಥ ಅಥವಾ ಪ್ರವಾದಿಯ ಪ್ರಾಮಾಣಿಕತೆಯನ್ನು ತೂಗುವ ನೈಜ ಮಾನದಂಡವಾಗಿದ್ದರೆ ಪ್ರವಾದಿ ಮುಹಮ್ಮದ್(ಸ) ದೇವನ ಪ್ರವಾದಿ ಯಾಗಿದ್ದಾರೆಂಬುದೂ ಪವಿತ್ರ ಕುರ್‌ಆನ್ ದೇವಗ್ರಂಥವಾಗಿದೆಯೆಂಬುದೂ ನಿರಾಕರಿಸಲಾದ ವಾಸ್ತವಿಕತೆಯಾಗಿದೆ ಎಂದು ಒಪ್ಪಲೇಬೇಕಾಗುತ್ತದೆ. ಏಕೆಂದರೆ ನಮಗೆ ತಿಳಿದಿರುವ ಧರ್ಮಗಳ ಇತಿಹಾಸದಲ್ಲಿ ಯಾವುದೇ ಗ್ರಂಥವು ಪವಿತ್ರ ಕುರ್‌ಆನಿನಷ್ಟು ಯಶಸ್ವಿಯಾಗಿ ಈ ಮಾನದಂಡವನ್ನು ಪೂರೈಸುವುದಿಲ್ಲ. ಈ ಗ್ರಂಥದ ಮುಖಾಂತರ ಅಸ್ತಿತ್ವಕ್ಕೆ ಬಂದಷ್ಟು ಮಹಾನ್, ಪರಿಪೂರ್ಣ ಮತ್ತು ಅತ್ಯುತ್ತಮ ಕ್ರಾಂತಿಯ ಉದಾಹರಣೆ ಬೇರೆ ಸಿಗುವುದಿಲ್ಲ. ಹನ್ನೆರಡು ಲಕ್ಷ ಚದರ ಮೈಲಿ ವಿಸ್ತೀರ್ಣದ ಭೂಭಾಗದಲ್ಲಿ ನೆಲೆಸಿದ್ದಂತಹ ಅನಾಗರಿಕ, ಕ್ರೂರ, ಅಜ್ಞಾನಿ ಮತ್ತು ವಿಚ್ಛಿದ್ರ ಅರಬರನ್ನು ಈ ಗ್ರಂಥವು ಲೋಕದ ಅತ್ಯಧಿಕ ಮಾನವಪ್ರೇಮಿ, ಶಿಸ್ತುಬದ್ಧ, ಮೃದು ಸ್ವಭಾವಿ ಮತ್ತು ಪರಹಿತಾಕಾಂಕ್ಷಿ ಜನಾಂಗವಾಗಿ ಮಾರ್ಪಡಿಸಿತು. ಅದರ ಬೋಧನೆಗಳು ಪರಿಪೂರ್ಣ ಮನುಷ್ಯನ ಪ್ರತೀಕಗಳಾದ ವ್ಯಕ್ತಿಗಳನ್ನು ನಿರ್ಮಿಸಿತು. ಅಡಿಯಿಂದ ಮುಡಿತನಕ ನ್ಯಾಯ ಮತ್ತು ಸಹಾನುಭೂತಿಯ ಪ್ರತೀಕವಾದ ಸಮಾಜವನ್ನು ನಿರ್ಮಿಸಿತು. ಭೂಮುಖದ ಮೇಲೆ ನಿಜಾರ್ಥದಲ್ಲಿ ದೇವ ಸಾಮ್ರಾಜ್ಯದ ಪ್ರತೀಕವಾದ ರಾಷ್ಟ್ರಕ್ಕೆ ಅದು ಜನ್ಮ ನೀಡಿತು. ಕುರ್‌ಆನ್ ನೀಡಿದ ಈ ಫಲಗಳನ್ನು ನೋಡಿದ ಬಳಿಕ ಅದರ ವಾದವು ಸುಳ್ಳೆಂದು ಯಾರು ತಾನೇ ಹೇಳಿಯಾರು? ಕೆಡುಕಿನ ಬಳ್ಳಿಯಿಂದ ಒಳಿತು ಮತ್ತು ಸುಳ್ಳಿನ ಬೇರಿನಿಂದ ಸತ್ಯದ ಹೂ ಎಂದೂ ಮೊಳೆಯಲಿಲ್ಲ. ಹಾಗಿರುವಾಗ ಯಾವ ಗ್ರಂಥದ ಬುನಾದಿಯೇ ಸುಳ್ಳು ಮತ್ತು ವಂಚನೆಯಾಗಿದೆಯೋ ಅದರಿಂದ ಲೋಕದಲ್ಲಿ ಸತ್ಯಸಂಧತೆ ಮತ್ತು ಪ್ರಾಮಾಣಿಕತೆಯ ವಸಂತಕಾಲ ಸಂಜಾತ ವಾಗುವುದಾದರೂ ಹೇಗೆ?

### ಹತ್ತನೆಯ ಪುರಾವೆ:

ಇದರ ಹತ್ತನೆಯ ಪುರಾವೆ ಕುರ್‌ಆನಿನ ಪಂಥಾಹ್ವಾನದ ವಿರುದ್ಧ ಅಸಹಾಯಕತೆಯ ಕುರಿತು ಸಂಪೂರ್ಣ ಮೌನ ತಳೆದಿರುವುದಾಗಿದೆ. ಕುರ್‌ಆನನ್ನು ನಿರಾಕರಿಸುವವರು ಎಲ್ಲ ಪುರಾವೆಗಳಿಗೂ ಕಿವಿ ಮುಚ್ಚಿಕೊಂಡಾಗ ಮತ್ತು ಅದು ಅಲ್ಲಾಹನ ವತಿಯಿಂದ ಅವತೀರ್ಣ ವಾಗಿದೆಯೆಂದು ಒಪ್ಪಲು ನಿರಂತರ ನಿರಾಕರಿಸಿದಾಗ ಅದು ತನ್ನನ್ನು ಅವತೀರ್ಣಗೊಳಿಸಿದಾತನ ಕಡೆಯಿಂದ ಈ ಪಂಥಾಹ್ವಾನವನ್ನು ಮುಂದಿಟ್ಟಿತು:

"ನಾವು ನಮ್ಮ ದಾಸನಿಗೆ ಅವತೀರ್ಣಗೊಳಿಸಿದ ಈ ಗ್ರಂಥವು ನಮ್ಮದೇ ಅಲ್ಲವೋ ಎಂಬ ವಿಷಯದಲ್ಲಿ ನಿಮಗೆ ಸಂದೇಹವಿದ್ದರೆ ಇದಕ್ಕೆ ಸರಿಸಮಾನವಾ ಒಂದು ಅಧ್ಯಾಯವನ್ನಾದರೂ ರಚಿಸಿ ತನ್ನಿರಿ. ಅಲ್ಲಾಹನ ಹೊರತು ನಿಮ್ಮೆಲ್ಲ ಸಾ ಗಳನ್ನೂ ನಿಮ್ಮ ಸಹಾಯಕ್ಕಾಗಿ ಕರೆದು ತನ್ನಿರಿ. ನೀವು ಸತ್ಯವಾದಿಗಳಾಗಿದ್ದರೆ ಈ ಕಾರ್ಯವ ಮಾಡಿ ತೋರಿಸಿರಿ." (ಪವಿತ್ರ ಕುರ್‌ಆನ್, 2:2

ಅರ್ಥಾತ್ ಕುರ್‌ಆನ್ ದೇವನ ವಾಣಿಯಲ್ಲ ಬದಲಾಗಿ ಮನುಷ್ಯ ವಾಣಿಯಾಗಿ ಎಂಬ ನಿಮ್ಮ ವಾದದಲ್ಲಿ ನೀವು ಸತ್ಯವಂತರಾಗಿದ್ದರೆ ಈ ಸಮಸ್ಯೆಯು ಈಗಲೇ ನಿಮ ಅನುಕೂಲವಾಗುವಂತೆ ಕೊನೆಗೊಳ್ಳುವುದು. ಅದು ಹೇಗೆಂದರೆ ಮಾತು ಮತ್ತು ಅರ್ಥದ ಕುರ್‌ಆನ್‌ನಂತಹ ಒಂದು ಗ್ರಂಥವನ್ನು ನೀವು ರಚಿಸಿ ತನ್ನಿ. ಬೇಡ, ಅದರಂತಹ ಒಂ ಅಧ್ಯಾಯವನ್ನಾದರೂ ರಚಿಸಿ ತನ್ನಿ. ನಿಮ್ಮ ಪೈಕಿ ಯಾರಾದರೂ ಒಬ್ಬರೇ ಈ ಕಾಯ ಮಾಡಬೇಕೆಂಬ ಶರ್ತವೂ ಇಲ್ಲ. ನಿಮಗೆ ಈ ಬಗ್ಗೆ ಪೂರ್ಣ ಸ್ವಾತಂತ್ರ್ಯವಿದೆ. ನೀವೆಲ್ಲ ಸೇರಿ ನಿಮಗೆ ನೆರವಾಗಲು ಯಾರನ್ನು ಕರೆಯಬಲ್ಲಿರೋ ಅವರನ್ನು ಕರೆದುಕೊಂ ಪ್ರಯತ್ನ ಮಾಡಿ ನೋಡಿರಿ. ಇದಕ್ಕಾಗಿ ಸಂಪೂರ್ಣ ಮಾನವಕುಲವನ್ನೇ ನೆರವಿಗೆ ಕರೆ ಕೊಳ್ಳಲು ನಿಮಗೆ ಸ್ವಾತಂತ್ರ್ಯವಿದೆ. ಈ ರೀತಿ ನೀವು ಈ ಪಂಥಾಹ್ವಾನವನ್ನು ಯಶಸ್ವಿಯ ಸ್ವೀಕರಿಸಿದರೆ ಕುರ್‌ಆನ್ ಮಾನವ ವಾಣಿಯಾಗಿದೆ ಎಂಬುದು ಸಾಬೀತಾಗಿ ಬಿಡುತ್ತ ಆ ಬಳಿಕ ಅದು ದೇವವಾಣಿಯೆಂಬ ತನ್ನ ವಾದವನ್ನು ಹಿಂತೆಗೆದು ಕೊಳ್ಳುವು ನಿರಕ್ಷರಿಯಾದ, ಭಾಷಣ ಮತ್ತು ಕಾವ್ಯದ ಒಂದೇ ಒಂದು ತುಣುಕನ್ನೂ ಈ ತ ಮುಂದಿಡದ ಓರ್ವ ವ್ಯಕ್ತಿ [ಮುಹಮ್ಮದ್(ಸ)] ಈ ಕುರ್‌ಆನ್ ಒಬ್ಬಂಟಿಗರಾಗಿ ರ ತರಬಹುದಾದರೆ ದೊಡ್ಡ ದೊಡ್ಡ ಕವಿಗಳೂ ಹೆಸರಾಂತ ವಾಗ್ಮಿಗಳೂ ಇರುವ ನಿ ಪೂರ್ಣ ವರ್ಗಕ್ಕೆ ಅದರ ಸರಿಸಾಟಿಯನ್ನು ರಚಿಸುವುದು ಕಷ್ಟದ ಕೆಲಸವೇನಲ್ಲ. ನೀ ಬಹಳ ಸುಲಭವಾಗಿ ಈ ಪಂಥಾಹ್ವಾನವನ್ನು ಸ್ವೀಕರಿಸಿ ಈ ಮನುಷ್ಯನ ಬಾ ಮುಚ್ಚಿಸಬಹುದು. ಈ ಪಂಥಾಹ್ವಾನವನ್ನು ಅರಬರಿಗೆ ನೀಡಲಾಗಿತ್ತು. ಅವರಿಗೆ ತಮ ವಾಕ್ ವೈಭವದ ಅಸದೃಶತೆಯ ಬಗ್ಗೆ ಹೆಮ್ಮೆ ಇತ್ತು. ಅವರು ಸಹಜವಾಗಿಯೇ ತಮ ಭಾಷಣ ಕಲೆಯ ಉತ್ತುಂಗತೆಯ ಬಗ್ಗೆ ಹೆಮ್ಮೆಯಿಂದ ಉಳಿದ ಎಲ್ಲರನ್ನೂ ಅಜಮ (ಮೂಕ) ಎನ್ನುತ್ತಿದ್ದರು. ಆದರೆ ಈ ಪಂಥಾಹ್ವಾನವನ್ನು ಕೇಳಿ ಸಂಪೂರ್ಣ ಅರ ಜನಾಂಗವೇ ಮೂಕವಾಯಿತು. ಅವರಿಗೆ ಪವಿತ್ರ ಕುರ್‌ಆನನ್ನು ಮನುಷ್ಯ ವಾಣಿಯೆಂ ಸಾಬೀತುಪಡಿಸುವ ಅದಮ್ಯ ಆಸೆಯಿತ್ತೆಂಬುದನ್ನು ಇಲ್ಲಿ ಪ್ರಸ್ತಾಪಿಸುವ ಅಗತ್ಯವೇ ಇ ಅವರು ತಮ್ಮ ಈ ಆಸೆಯನ್ನು ಈಡೇರಿಸುವ ಯಾವುದಾದರೂ ವಿಧಾನ ಅಥವಾ ಉಪಾ ಅವರ ಬಳಿ ಇರುತ್ತಿದ್ದರೆ ಖಂಡಿತ ಅವರು ಅದನ್ನು ಮಾಡುವ ಕುರಿತು ಹಿಂದೆ ಮು ನೋಡುತ್ತಿರಲಿಲ್ಲ. ಅವರು ಕುರ್‌ಆನನ್ನು ದೇವಗ್ರಂಥವೆಂದು ಒಪ್ಪದೆ ಎಷ್ಟೋ ಕ ನಷ್ಟಗಳನ್ನು ಅನುಭವಿಸಿದರು. ಅವರ ನಾಯಕತ್ವ ಅವರಿಂದ ಕಿತ್ತುಕೊಳ್ಳಲ್ಪಟ್ಟಿತು. ಸೆರೆವಾ

ಂದ್ಯತೆಯನ್ನೂ ಅವರು ಅನುಭವಿಸಿದರು. ಕಅಬಾ ಭವನದಿಂದ ಅವರ ಪರಂಪರಾಗತ ೇವರುಗಳನ್ನು ಕಿತ್ತೆಸೆಯುವ ದುರ್ದಿನವನ್ನು ಅವರು ಕಾಣ ಬೇಕಾಯಿತು. ಅನೇಕ ಯುದ್ಧಗಳನ್ನು ಅವರು ಎದುರಿಸಬೇಕಾಯಿತು. ಆದರೂ ಈ ಅಪಾಯ ಮತ್ತು ುಷ್ಪರಿಣಾಮಗಳಿಂದ ರಕ್ಷಣೆ ಹೊಂದಲು ಅವರ ಮುಂದೆ ಇರಿಸಲಾಗಿದ್ದ ಒಂದು ುಲಭೋಪಾಯವನ್ನು ಅವರು ಎಂದೂ ಬಳಸಲಿಲ್ಲ. ಇಷ್ಟಾಗಿ ಅವರಿಗೆ ಅದರ ಬಗ್ಗೆ ಅನೇಕ ಲ ಸೂಚನೆ ನೀಡಲಾಗಿತ್ತು. ಮಕ್ಕಾದಲ್ಲಿಯೂ ಅನೇಕ ಸಲ ಅವರ ಮುಂದೆ ಈ ಂಥಾಹ್ವಾನವನ್ನು ಇಡಲಾಗಿತ್ತು ಮತ್ತು ಮದೀನಾದಲ್ಲೂ ಅದನ್ನು ಪುನರಾವರ್ತಿಸಲಾಗಿತ್ತು. ದರೆ ಅವರೆಂದೂ ಅದನ್ನು ಸ್ವೀಕರಿಸಿರಲಿಲ್ಲ. ಅವರು ಆ ಪಂಥಾಹ್ವಾನವನ್ನು ಎದುರಿಸುವ ಕ್ತಿ ಇದ್ದೂ ಅವರು ಹಾಗೆ ಮಾಡಲಿಲ್ಲವೆಂದರೆ ಅದನ್ನು ಸಾಮಾನ್ಯ ಬುದ್ಧಿ ಅಂಗೀಕರಿಸೀತೆ?

ಈ ಪಂಥಾಹ್ವಾನವು ಇಂದಿಗೂ ಬಾಕಿ ಇದೆ. ಲೋಕದ ಇತರ ದೇವಗ್ರಂಥಗಳ ಾಷೆಯಂತೆ ಪವಿತ್ರ ಕುರ್‌ಆನಿನ ಭಾಷೆಯು ಸತ್ತು ಹೋಗಿಲ್ಲ. ಅದು ತನ್ನ ಪುರಾತನ ುತ್ತು ಆಧುನಿಕ ಶೈಲಿಗಳೊಂದಿಗೆ ಇಂದಿಗೂ ಜೀವಂತವಿದೆ. ಅದನ್ನು ಆಡುವ ಮತ್ತು ರಿಯುವ ಜನರಲ್ಲಿ ದೊಡ್ಡ ದೊಡ್ಡ ಹೆಸರಾಂತ ಸಾಹಿತಿಗಳೂ ಕವಿಗಳೂ ಇದ್ದಾರೆ. ವರ ಪೈಕಿ ಇಸ್ಲಾಮಿನ ಕಡು ವೈರಿಗಳಿಗೇನೂ ಕೊರತೆಯಿಲ್ಲ. ಅವರು ಬೇಕಾದರೆ ಈ ಂಥಾಹ್ವಾನವನ್ನು ಸ್ವೀಕರಿಸಬಹುದು. ಆದರೆ ಹದಿನಾಲ್ಕು ಶತಮಾನಗಳ ಮೌನವನ್ನು ುರಿಯುವ ಯಾವ ಲಕ್ಷಣವೂ ಕಾಣುವುದಿಲ್ಲ.

ಈ ಪಂಥಾಹ್ವಾನವು ಪ್ರಥಮ ಹಿಜರಿ ಶತಮಾನದಿಂದಲೇ ಮುಸ್ಲಿಮರು ್ಯಾಪಿಸುವ ಹಾಗೂ ಅವರ ಜೊತೆಗೆ ಪವಿತ್ರ ಕುರ್‌ಆನಿನ ಕೋಟಿಗಟ್ಟಲೆ ಪ್ರತಿಗಳು ುಪುವ ಮೂಲಕ ಲೋಕದ ಮೂಲೆ ಮೂಲೆಗೆ ತಲುಪಿದೆ. ಅದನ್ನು ಎಂದಾದರೂ ಲ್ಲಾದರೂ ಸ್ವೀಕರಿಸುತ್ತಿದ್ದರೆ ಖಂಡಿತ ಲೋಕದಾದ್ಯಂತ ಆ ಘಟನೆಯು ಪ್ರಚಾರ ಾಗುತ್ತಿತ್ತು. ಏಕೆಂದರೆ ಇದು ಇಸ್ಲಾಮ್ ಮತ್ತು ಕುರ್‌ಆನಿನ ವಿರೋಧಿಗಳಿಗೆ ಒಂದು ಷ್ಟ ವಿಜಯ ಹಾಗೂ ಒಂದು ಮಹಾನ್ ಸೌಭಾಗ್ಯವಾಗುತ್ತಿತ್ತು. ಅವರು ಆ ಸುದ್ದಿಯನ್ನು ುತ್ತು ಕುರ್‌ಆನಿನ ಪಂಥಾಹ್ವಾನಕ್ಕೆ ಉತ್ತರವನ್ನು ಪೂರ್ಣ ಹುಮ್ಮಸ್ಸಿನೊಂದಿಗೆ ಗತ್ತಿನಾದ್ಯಂತ ಪಸರಿಸುತ್ತಿದ್ದರು. ತನ್ಮೂಲಕ ಮುಸ್ಲಿಮೇತರ ಜಗತ್ತಿಗೆ ಕುರ್‌ಆನಿನ ಾಕರಣೆಗೆ ಒಂದು ಪ್ರಬಲವಾದ ಆಧಾರ ದೊರಕುತ್ತಿತ್ತು. ಮಾತ್ರವಲ್ಲ ಈ ಘಟನೆಯು ಯಂ ಮುಸ್ಲಿಮರಿಗೆ ಧರ್ಮ ತ್ಯಾಗದ ಹೇತುವಾಗುತ್ತಿತ್ತು. ಆದರೆ ಇತಿಹಾಸದಲ್ಲಿ ುತಹ ಒಂದು ಘಟನೆ ನಡೆಸಿದ ಉಲ್ಲೇಖವಿಲ್ಲವೆಂಬ ವಾಸ್ತವಿಕತೆಯನ್ನು ಮುಸ್ಲಿಮರು ತ್ತು ಮುಸ್ಲಿಮೇತರರೆಲ್ಲರೂ ಒಪ್ಪುತ್ತಾರೆ.

ಹನ್ನೊಂದನೆಯ ಪುರಾವೆ:

ಕುರ್‌ಆನ್ ದೇವಗ್ರಂಥವೆಂಬುದಕ್ಕೆ ಕೊನೆಯ ಪುರಾವೆ ಅದರ ಪ್ರತ್ಯಕ್ಷದರ್ಶಿ ಸಾಕ್ಷ್ಯವಾಗಿದೆ. ಈ ಕುರ್‌ಆನನ್ನು ಜಗತ್ತಿಗೆ ಸಮರ್ಪಿಸಿದವರು ಹ. ಮುಹಮ್ಮದ್( ಆಗಿರುವರು. ಅವರು ಅದನ್ನು ತಮ್ಮ ಕಡೆಯಿಂದ ಪ್ರಸ್ತುತಪಡಿಸಿದುದಲ್ಲ, ಅಲ್ಲಾ ಕಡೆಯಿಂದ ಜಗತ್ತಿನ ಮುಂದಿರಿಸಿದರು. ಅರ್ಥಾತ್ ಅವರು ಪ್ರತಿಯೊಂದು ಸಲ ಅದನ್ನು ಸರ್ವಲೋಕ ಪರಿಪಾಲಕನಾದ ಅಲ್ಲಾಹನ ವಾಣಿಯೆಂಬ ನೆಲೆಯಲ್ಲೇ ಜಗ ಮುಂದಿರಿಸಿದರು. ಅಲ್ಲಾಹನು ತನ್ನ ಶ್ರೇಷ್ಠ ದೇವಚರ(ಜಿಬ್ರೀಲ್)ನನ್ನು ನನ್ನ ಕಳಿಸುತ್ತಾನೆ. ಅವರು ನನಗೆ ಈ ವಾಣಿಯನ್ನು ಓದಿ ಕೇಳಿಸುತ್ತಾರೆ ಎಂಬ ಮುಹಮ್ಮದ್‌ರವರ(ಸ) ಈ ಸಾಕ್ಷ್ಯವನ್ನು ಸತ್ಯವೆಂದೇ ಏಕೆ ಪರಿಗಣಿಸಬೇಕು ಎಂ ನೀವು ಪ್ರಶ್ನಿಸಬಹುದು. ಅದರ ಉತ್ತರ ಹೀಗಿದೆ: ಹ. ಮುಹಮ್ಮದ್‌ರವರ(ಸ) ಸತ್ಯಸಂಧತೆ ಎಲ್ಲ ರೀತಿಯಲ್ಲೂ ಸಂಶಯಾತೀತವಾಗಿದೆ. ಕೇವಲ ತನ್ನವರ ಮಟ್ಟಿಗೆ ಮಾತ್ರವಲ್ಲ ಪ ಮಟ್ಟಿಗೂ ಅದು ಸಂಶಯಾತೀತವೇ ಆಗಿತ್ತು. ಆದ್ದರಿಂದಲೇ ಅವರ ವಿರೋಧ ಅರಬರು ತಮಗೆ ಸಾಧ್ಯವಿದ್ದ ಎಲ್ಲವನ್ನೂ ಹೇಳಿದರು ಹಾಗೂ ಮಾಡಿದರು. ಆ ಅವರೊಬ್ಬ ಸತ್ಯಸಂಧ ಮತ್ತು ಪ್ರಾಮಾಣಿಕ ವ್ಯಕ್ತಿ ಎಂಬುದನ್ನು ಅವರೆಂದೂ ನಿರಾಕರಿಸಲಿ ಪ್ರವಾದಿತ್ವಕ್ಕೆ ಮೊದಲು ಮಕ್ಕಾ ನಿವಾಸಿಗಳು ಅವರಿಗೆ 'ಸಾದಿಕ್' (ಸತ್ಯವಂತ) ಮ 'ಅಮೀನ್' (ಪ್ರಾಮಾಣಿಕ) ಎಂಬ ಬಿರುದು ನೀಡಿದ್ದರು. ಪ್ರವಾದಿತ್ವದ ಘೋಷಣೆ ಬಳಿಕವೂ ಅವರ 'ಪ್ರವಾದಿತ್ವ' ಒಂದನ್ನು ಬಿಟ್ಟು ಉಳಿದ ಎಲ್ಲ ವಿಷಯಗಳಲ್ಲಿ ಅ ಸತ್ಯಸಂಧತೆ ಮತ್ತು ಪ್ರಾಮಾಣಿಕತೆಯನ್ನು ಸಂಪೂರ್ಣವಾಗಿ ಒಪ್ಪುತ್ತಿದ್ದ ಅಬೂಸುಫ್ಯಾನ್‌ನಂತಹ ಪ್ರವಾದಿಯ ಕಡು ವೈರಿ ಕೂಡಾ ರೋಮನ್ ಚಕ್ರವರ್ತಿ ಸೀಝ ತನ್ನ ಆಸ್ಥಾನದಲ್ಲಿ "ಈ ವ್ಯಕ್ತಿಯ ಮೇಲೆ ಪ್ರವಾದಿ ಘೋಷಣೆಯ ಮೊ ನೀವೆಂದಾದರೂ ಸುಳ್ಳಿನ ಆರೋಪ ಹೊರಿಸಿರುವಿರಾ?" ಎಂದು ಪ್ರಶ್ನಿಸಿದಾಗ ಅ ತಮ್ಮ ಅತ್ಯಧಿಕ ವೈರದ ಹೊರತಾಗಿಯೂ 'ಹೌದು' ಎನ್ನುವ ಪುರಾವೆ ಅವ ದೊರೆಯಲಿಲ್ಲ. ಸೀಝರ್ ಮತ್ತೆ ಕೇಳಿದನು, "ಈ ವ್ಯಕ್ತಿ ವಚನಭಂಗ ಮಾಡುತ್ತಿದ್ದನೆ ಮತ್ತೆ ಅಬೂಸುಫ್ಯಾನ್‌ರಿಗೆ "ಇಲ್ಲ ಈ ತನಕ ಅವರು ಹಾಗೆ ಮಾಡಿಲ್ಲ. ಆದರೆ ನಮ್ಮ ಮತ್ತು ಅವರ ಮಧ್ಯೆ ಒಂದು ಶಾಂತಿ ಒಪ್ಪಂದ ಏರ್ಪಟ್ಟಿದೆ. (ಹುದೈಬಿ ಸಂಧಿ) ಈ ಬಗ್ಗೆ ಅವರ ವರ್ತನೆ ಹೇಗಿರಬಹುದೆಂದು ಹೇಳುವುದು ಅಸಾಧ್ಯ" (ಬುಖ ಎಂದಷ್ಟೇ ಹೇಳಬೇಕಾಯಿತು. ಇದೇ ರೀತಿ ಇಸ್ಲಾಮಿನ ಶತ್ರುಗಳ ಸರದಾರ ಅಬೂಜಹಲ್ ಒಮ್ಮೆ ಪ್ರವಾದಿ ಮುಹಮ್ಮದ್‌ರ(ಸ) ಜೊತೆ ಮಾತನಾಡುತ್ತಾ ಈ ಹೇಳಿದ: "ನಾವು ನಿಮ್ಮನ್ನು ಸುಳ್ಳುಗಾರನೆನ್ನುವುದಿಲ್ಲ. ಆದರೆ ನೀವು ಮುಂದಿರಿ ವಚನಗಳನ್ನು ನಾವು ಸುಳ್ಳೆಂದೇ ಬಗೆಯುತ್ತೇವೆ." ಬದ್ರ್ ಯುದ್ಧದ ವೇಳೆ ಆತನ ಓ ಸಂಗಾತಿ ರಹಸ್ಯವಾಗಿ ಆತನನ್ನು ಕೇಳಿದ: "ಸತ್ಯ ಹೇಳಿ, ನೀವು ಮುಹಮ್ಮದ್‌ರನ್ನು

ಸತ್ಯವಂತನೆಂದು ಭಾವಿಸುತ್ತೀರೋ ಅಥವಾ ಸುಳ್ಳನೆಂದು ಭಾವಿಸುತ್ತೀರೋ." ಆತ ಹೇಳಿದ: ದೇವನಾಣೆ ಮುಹಮ್ಮದ್(ಸ) ಓರ್ವ ಸತ್ಯವಂತ ವ್ಯಕ್ತಿ. ಜೀವನಾದ್ಯಂತ ಅವರೆಂದೂ ಸುಳ್ಳು ಹೇಳಿಲ್ಲ." (ಇಬ್ನು ಜರೀರ್) ಕುರ್‌ಆನ್ ದೇವಗ್ರಂಥವಾಗಿದೆಯೆಂಬ ಮುಹಮ್ಮದ್‌ರ(ಸ) ಸಾಕ್ಷ್ಯವನ್ನು ಸತ್ಯವೆಂದು ಒಪ್ಪಬೇಕೇ ಬೇಡವೇ ಎಂಬುದನ್ನು ಈ ವಾಸ್ತವಿಕತೆಗಳನ್ನು ಆಧಾರದಲ್ಲಿರಿಸಿ ವಿಚಾರ ಮಾಡಿ ನೋಡಿರಿ. ಓರ್ವ ವ್ಯಕ್ತಿ ತಾನು ಹುಟ್ಟಿದ ದಿನದಿಂದಲೇ ಸತ್ಯವಂತನಾಗಿದ್ದು, ಜೀವನದಲ್ಲಿ ಒಮ್ಮೆಯೂ ಜನರೊಂದಿಗೆ ಯಾವುದೇ ವಿಷಯಕ್ಕೆ ಸುಳ್ಳಾಡದೆ ತನ್ನ ದೇವನ ಬಗ್ಗೆ ಇಂತಹ ಬಹಿರಂಗ ಸುಳ್ಳು ಹೇಳುವರೇ? ಸರ್ವಜ್ಞನೂ ಸರ್ವಶ್ರುತನೂ ಆದ ದೇವನ ಬಗ್ಗೆ, ಸರ್ವಶಕ್ತನೂ ಲೋಕಾಧಿಪತಿಯೂ ಆದ ದೇವನ ಬಗ್ಗೆ ಅವರು ಸುಳ್ಳಾಡುವುದು ಸಾಧ್ಯವೇ? ಅದೂ ಒಂದೆರಡು ಸಲ ಅಲ್ಲ ನಿರಂತರ ಇಪ್ಪತ್ತಮೂರು ವರ್ಷಗಳ ತನಕ ಸುಳ್ಳು ಹೇಳಿರಬಹುದೇ? ತನ್ನ ಶತ್ರುಗಳ ಮೇಲೂ ಎಂದೂ ಸುಳ್ಳಾರೋಪ ಮಾಡದವರು ತನ್ನ ಪರಿಪಾಲಕ ಪ್ರಭುವಿನ ಬಗ್ಗೆ ಸದಾ ಸುಳ್ಳು ಹೇಳುತ್ತಿದ್ದರೇ! ಮನುಷ್ಯರ ವ್ಯವಹಾರದಲ್ಲಿ ಎಂದೂ ಸುಳ್ಳಾಡದವರು ದೇವನ ಬಗ್ಗೆ ಎಂದೂ ಸತ್ಯ ಹೇಳಲಿಲ್ಲವೇ? ಮನಶ್ಶಾಸ್ತ್ರದ ಅಧ್ಯಯನವಾಗಲೀ ಅನುಭವದ ಸಾಕ್ಷ್ಯವಾಗಲೀ ಬುದ್ಧಿಯ ಸಮೀಕ್ಷೆಯಾಗಲೀ ಯಾವುದಾದರೂ ಈ ವಿಚಿತ್ರವಾದ ಮಾತನ್ನು ಸಮರ್ಥಿಸುತ್ತದೆಯೇ? ಇಲ್ಲ, ಖಂಡಿತ ಇಲ್ಲ. ಆದ್ದರಿಂದ ಪವಿತ್ರ ಕುರ್‌ಆನ್ ದೇವಗ್ರಂಥ ವಾಗಿದೆ ಎಂಬ ಪ್ರವಾದಿ ಮುಹಮ್ಮದ್‌ರ(ಸ) ಸಾಕ್ಷ್ಯವು ಒಂದು ಸ್ಪಷ್ಟ ಪುರಾವೆಯಾಗಿದೆ. ಅದರ ನಂತರ ಯಾವನೇ ಸಭ್ಯ ವ್ಯಕ್ತಿಗೆ ಬೇರಾವುದೇ ಪುರಾವೆಯ ಅಗತ್ಯವಿರುವುದಿಲ್ಲ.

ಕುರ್‌ಆನ್ ದೇವಗ್ರಂಥವಾಗಿದೆ ಎಂಬುದಕ್ಕೆ ಸಾಕಷ್ಟು ಪುರಾವೆಗಳು ನಿಮ್ಮ ಮುಂದೆ ಬಂದಿವೆ. ಈ ಎಲ್ಲ ಪುರಾವೆಗಳ ಸಮೀಕ್ಷೆ ನಡೆಸಿದಾಗ ಯಾವುದೇ ಗ್ರಂಥವನ್ನು ದೇವಗ್ರಂಥವೆಂದು ಪರಿಗಣಿಸಬೇಕಾದರೆ ಇರಬೇಕಾದ ಎಲ್ಲ ಸಹಜ ತರ್ಕಗಳು ಈ ಪುರಾವೆಗಳಲ್ಲಿವೆಯೆಂಬುದು ನಿಮಗೆ ತಿಳಿಯುವುದು. ಈ ಪುರಾವೆಗಳನ್ನು ನೋಡಿದ ಬಳಿಕ ಸತ್ಯ ಮತ್ತು ನ್ಯಾಯದೊಂದಿಗೆ ತೀರ್ಮಾನ ಮಾಡುವುದಾದರೆ ಕುರ್‌ಆನ್ ದೇವಗ್ರಂಥ ಎಂಬುದನ್ನು ಒಪ್ಪಲೇಬೇಕು. ಆ ಬಗ್ಗೆ ಯಾವುದೇ ರೀತಿಯ ಸಂಶಯಕ್ಕೆ ಎಡೆ ಇಲ್ಲ.

## ಕುರ್‌ಆನ್ ಮತ್ತು ಇತರ ದೇವಗ್ರಂಥಗಳ ಸಂಬಂಧ

ದೈವಿಕ ಮಾರ್ಗದರ್ಶನವು ಮನುಷ್ಯನ ಅತ್ಯಂತ ಪ್ರಮುಖವಾದ ಬೇಡಿಕೆಯೆಂಬುದನ್ನು ಬುದ್ಧಿ ಮತ್ತು ಪ್ರಕೃತಿಯು ಒಪ್ಪುತ್ತದೆ. ಅದು ಮನುಷ್ಯನಿಗೆ ತಲುಪ ಬೇಕಾದುದು ಕೂಡಾ ಅನಿವಾರ್ಯವಾಗಿದೆ. ಅದು ಬಂದಿತ್ತು ಮತ್ತು ಎಲ್ಲ ಕಾಲಗಳ ಜನರಿಗೆ ತಲುಪಿತ್ತು ಎಂಬುದಕ್ಕೆ ಇತಿಹಾಸದ ನಿರಂತರ ಸಾಕ್ಷ್ಯವಿದೆ. ಆದರೆ ಈಗ ಈ ಪ್ರಮುಖ ಸಮಸ್ಯೆಯ ಕುರಿತು ಅನೇಕ ಮೂಲಭೂತ ಪ್ರಶ್ನೆಗಳು ಏಳುತ್ತವೆ. ಅವುಗಳಿಗೆ ಉತ್ತರ ದೊರಕಲೇ ಬೇಕು. ಉದಾ: ದೇವ ಮಾರ್ಗದರ್ಶನವು ಚರಿತ್ರೆಯಲ್ಲಿ ಹೇಗೆ ಜಾರಿಯಲ್ಲಿತ್ತು? ಅದು

ನಿರಂತರವಾಗಿ ಮನುಷ್ಯನಿಗೆ ತಲುಪಬೇಕಾದ ಅಗತ್ಯವೇನು? ಅದು ಸದಾ ಒಂದ ರೀತಿಯಾಗಿರುತ್ತಿತ್ತೆ? ಅಥವಾ ಕಾಲ ಕಾಲಕ್ಕೆ ಬದಲಾಗುತ್ತಿತ್ತೆ? ಅದು ಒಂದೇ ರೀ ಯಾಗಿರುತ್ತಿದ್ದರೆ ಮೂಲ ಸ್ವರೂಪದಲ್ಲಿ ಅದು ಏನಾಗಿತ್ತು? ಅದು ಬದಲಾಗುತ್ತಿತ್ತೆಂದಾದ ಈ ತನಕ ಯಾವ ಆದೇಶಗಳು ಬಂದಿವೆ? ಈ ಪ್ರಶ್ನೆಗಳಿಗೆ ತೃಪ್ತಿಕರವಾದ ಉತ್ತರ ಬೇರಾವ ಮೂಲದಿಂದಲೂ ದೊರೆಯಲಾರದು. ಅದು ದೊರೆಯುವುದಾದರೆ ಸೃಷ್ಟಿಕರ್ತನಾ ಅಲ್ಲಾಹನ ಕಡೆಯಿಂದ ಮಾತ್ರ. ಅವನಿಂದ ಅವತೀರ್ಣವಾದ ಗ್ರಂಥಗಳತ್ತ ಗಮನಹರಿಸುವುದ ಅದಕ್ಕಿರುವ ಸರಿಯಾದ ರೂಪ. ಆದ್ದರಿಂದ ಈ ಉದ್ದೇಶಕ್ಕಾಗಿ ನಾವು ಪವಿತ್ರ ಕುರ್‌ಆನನ ನೋಡಬೇಕು. ಅದು ದೇವಗ್ರಂಥವೆಂಬುದಕ್ಕೆ ಎಲ್ಲ ರೀತಿಯ ಪುರಾವೆಗಳಿವೆಯೆಂಬುದನ ನಾವು ಈಗಾಗಲೇ ಕಂಡುಕೊಂಡಿದ್ದೇವೆ. ಪವಿತ್ರ ಕುರ್‌ಆನ್ ನಮ್ಮ ಈ ಎಲ್ಲ ಪ್ರ ಗಳಿಗೂ ನಿಖರವಾದ ಉತ್ತರ ನೀಡುತ್ತದೆ. ಅದನ್ನು ಈ ರೀತಿ ಸಂಕ್ಷೇಪಿಸಬಹುದು:

ಈ ಭೂಮುಖದ ಮೇಲೆ ಮನುಷ್ಯ ಜೀವನ ಆರಂಭವಾದ ದಿನದಿಂದಲೇ ದೈವಿ ಮಾರ್ಗದರ್ಶನದ ಅವತರಣವೂ ಆರಂಭವಾಗಿತ್ತು. ಆ ಮಾರ್ಗದರ್ಶನವು ಮೂಲಭೂ ವಾಗಿ ಹೀಗಿತ್ತು: ಸಂಪೂರ್ಣ ವಿಶ್ವದ ಒಡೆಯನು ಮನುಷ್ಯರಾದ ನಿಮ್ಮನ್ನು ಈ ಭೂಮುಖದ ಮೇಲೆ ಖಲೀಫ ಅಥವಾ ಪ್ರತಿನಿಧಿಯಾಗಿ ಸೃಷ್ಟಿಸಿದನು. ಅದಕ್ಕಾಗಿ ನಿಮ ಒಂದು ಹಂತದವರೆಗೆ ಇಚ್ಛೆ ಮತ್ತು ಅಧಿಕಾರದ ಸ್ವಾತಂತ್ರ್ಯ ನೀಡಿದನು. ಆದ್ದರಿಂ ನೀವು ನಿಮ್ಮ ಕರ್ಮಗಳ ಬಗ್ಗೆ ಹಾಗೂ ಈ ಲೋಕವನ್ನು ಬಳಸುವ ಬಗ್ಗೆ ಸ್ವತಂ ರಾಗಿದ್ದೀರಿ. ನೀವು ಯಾವ ಮಾರ್ಗ ಬೇಕಾದರೂ ಅನುಸರಿಸಬಹುದು. ಆದರೆ ಒಂದ ಮಾತು ನೀವು ನೆನಪಿಡಬೇಕು. ಅದೇನೆಂದರೆ ನಿಮ್ಮ ಸೃಷ್ಟಿಕರ್ತನೂ ಒಡೆಯನೂ ಆ ಅಲ್ಲಾಹನನ್ನೂ ಅವನ ಹಕ್ಕುಗಳನ್ನೂ ಮಾನ್ಯ ಮಾಡಬೇಕು. ಅವನ ನೆಲೆಯ ನ್ಯೆ ಮಾನ್ಯತೆಯು ತನ್ನನ್ನು ತಾನೇ ಸ್ವತಂತ್ರನೆಂದು ಪರಿಗಣಿಸಬಾರದು. ಅಲ್ಲಾಹನ ಹೊರತ ಇತರರ ದಾಸ ತಾನಲ್ಲವೆಂಬುದನ್ನೂ ಅವನು ದೃಢೀಕರಿಸಬೇಕು. ತನ್ನನ್ನು ಅಲ್ಲಾಹ ದಾಸನೆಂದೂ ಅಲ್ಲಾಹನನ್ನು ತನ್ನ ಅಧಿಪತಿ, ಆರಾಧ್ಯ ಎಂದೂ ಪರಿಗಣಿಸಬೇಕು. ಅವ ಹೊರತು ಇತರರನ್ನು ತನ್ನ ಅನುಸರಣೆಗೆ ಮತ್ತು ಪೂಜೆಗೆ ಯೋಗ್ಯನೆಂದು ಪರಿಗಣಿಸಬಾರದು ಇತರ ಯಾರನ್ನಾದರೂ ಮೆಚ್ಚಿಸುವುದು ತನ್ನ ಮೇಲೆ ಕಡ್ಡಾಯವೆಂದು ಭಾವಿಸಬಾರದು ಅವನ ಹಕ್ಕುಗಳನ್ನು ಮಾನ್ಯ ಮಾಡುವುದೆಂದರೆ ನಿಮ್ಮನ್ನೇ ನೀವು ಅವನ ಇಚ್ಛೆಗಳಿ ಅಧೀನಗೊಳಿಸುವುದು. ಅವನು ನಿಮಗೆ ನೀಡಿದ ಜೀವನ ಕ್ರಮದಲ್ಲಿ ಇರುವ ಎಲ ವಿಧಿಗಳನ್ನು ಪಾಲಿಸುವುದು. ನಿಮ್ಮ ಜೀವನವನ್ನು ಅವುಗಳ ಬೆಳಕಿನಲ್ಲೇ ಕಟ್ಟುವುದು. ಈ ಲೋಕವು ವಾಸ್ತವದಲ್ಲಿ ಒಂದು ಪರೀಕ್ಷಾಗೃಹವಾಗಿದೆ. ನಿಮಗೆ ಇಲ್ಲಿ ವಿಚಾರ ಸ್ವಾತಂತ್ರ ನೀಡಿ ಕಳುಹಿಸಿರುವುದು ನಿಮ್ಮನ್ನು ಪರೀಕ್ಷಿಸುವ ಸಲುವಾಗಿಯೇ. ನೀವು ನಿಮ್ಮ ವಿಚಾ ಸ್ವಾತಂತ್ರ್ಯವನ್ನು ಯಾವುದೇ ಬಾಹ್ಯ ಒತ್ತಡವಿಲ್ಲದೆ ದೇವಾನುಸರಣೆಗೆ ಒಪ್ಪಿಸುತ್ತೀರೊ ಇಲ್ಲವೋ ಎಂದು ಪರೀಕ್ಷಿಸುವುದೇ ಇದರ ಉದ್ದೇಶ ಒಂದು ದಿನ ನಿಮ್ಮ ಈ ಜೀವನ

ಕೊನೆಗೊಂಡು ನೀವೊಂದು ಹೊಸ ವಿಶ್ವಕ್ಕೆ ಕಾಲಿಡಲಿದ್ದೀರಿ. ಅಲ್ಲಿ ಅವನು ನಿಮ್ಮ ಲೌಕಿಕ ಜೀವನದ ಬಗ್ಗೆ ನಿಮ್ಮ ನಿಲುಮೆ ಮತ್ತು ನಿಮ್ಮ ಎಲ್ಲ ಕರ್ಮಗಳನ್ನು ನೋಡಿ ನೀವು ಈ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದೀರೋ ಇಲ್ಲವೋ ಎಂಬುದನ್ನು ನಿರ್ಧರಿಸುವನು. ಇಹಲೋಕದ ಜೀವನದಲ್ಲಿ ಸನ್ಮಾರ್ಗವನ್ನು ಪಡೆದವನು ಇಲ್ಲಿಯೂ ಶಾಂತಿ ಮತ್ತು ಸಮಾಧಾನದಿಂದಿರುವನು ಮತ್ತು ಪರಲೋಕದಲ್ಲಿಯೂ ಅವನಿಗೆ ಸುಖ ಸಂತೋಷಗಳ ಬೀಡಾದ ಸ್ವರ್ಗವು ಲಭಿಸುವುದು. ಈ ನಿಲುಮೆ ಸ್ವೀಕರಿಸಲು ಸಾಧ್ಯವಾಗದವನು ಇಹಲೋಕದಲ್ಲಿ ಅಶಾಂತಿ ಮತ್ತು ಚಿಂತೆಯ ಜೀವನ ಸಾಗಿಸುವನು ಮತ್ತು ಪರಲೋಕದಲ್ಲಿ ತಲುಪಿಯೂ ಅವನನ್ನು ದುಃಖ ಮತ್ತು ಸಂಕಷ್ಟಗಳ ಭಯಾನಕ ಅಗ್ನಿ ಕುಂಡದಲ್ಲಿ ಎಸೆಯಲಾಗುವುದು. ಅದರ ಹೆಸರೇ ಜಹನ್ನಮ್ ಅಥವಾ ನರಕ. ಮನುಷ್ಯನು ಈ ಮಾರ್ಗದರ್ಶನದೊಂದಿಗೆ ಈ ಜೀವನವನ್ನು ಆರಂಭಿಸಿದನು. ಆದರೆ ಒಂದು ದೀರ್ಘ ಅವಧಿ ಕಳೆದ ಬಳಿಕ ಈ ಮಾರ್ಗದರ್ಶನದಿಂದ ದೂರ ಚಲಿಸುವ ಶಕ್ತಿಗಳು ತಮ್ಮ ಪ್ರಾಬಲ್ಯವನ್ನು ತೋರಿಸಿದವು. ಅನಂತರ ಒಂದು ಕಾಲ ಬಂತು. ಆಗ ಜನರು ಈ ಸನ್ಮಾರ್ಗವನ್ನು ಪೂರ್ಣ ಮರೆತು ಬಿಟ್ಟರು. ನೇರ ಮಾರ್ಗವನ್ನು ಬಿಟ್ಟು ವಕ್ರ ಮಾರ್ಗಗಳಲ್ಲಿ ನಡೆಯತೊಡಗಿದರು. ಸಹಜವಾಗಿಯೇ ದೇವನ ಕೃಪಾಕಟಾಕ್ಷ ಮತ್ತೆ ಮನುಷ್ಯನ ಮೇಲೆ ಬಿತ್ತು. ಮಾರ್ಗದರ್ಶನದ ಈ ದೀವಟಿಗೆ ಮತ್ತೆ ಉಜ್ವಲವಾಯಿತು. ಮುಂದಿನ ಪೀಳಿಗೆಯು ಮಾರ್ಗದರ್ಶನದ ಬೆಳಕಿಲ್ಲದೆ ಕತ್ತಲೆಯಲ್ಲಿ ನಿಂತು ದುರ್ಮಾರ್ಗ ಗಳಲ್ಲಿ ಅಲೆಯುತ್ತಿರಲು ವಿವಶರಾಗಬಾರದು. ಮುಂದೆ ಆದಮ್‌ರ(ಅ) ಸಂತತಿಗಳು ಭೂಮಿಯ ಮೂಲೆ ಮೂಲೆಗೆ ವ್ಯಾಪಿಸಿದರು. ಆದ್ದರಿಂದ ಅಲ್ಲಾಹನು ಅಗತ್ಯಾನುಸಾರ ಎಲ್ಲ ಭೂಭಾಗದ ಜನರಿಗೂ ಬೇರೆ ಬೇರೆ ಮಾರ್ಗದರ್ಶನವನ್ನು ನೀಡಿದನು. ಕಟ್ಟಕಡೆಗೆ ಪ್ರತಿಯೊಂದು ಗ್ರಂಥದ ಜೊತೆ ಈ ಹಿಂದೆ ಮಾಡಿದಂತಹ ವರ್ತನೆಯನ್ನೇ ಅವರು ಪುನಃ ಮಾಡಿದರು, ಅದನ್ನು ನಿರ್ಲಕ್ಷಿಸಿದರು, ಮರೆತರು, ಅದನ್ನು ವಿರೂಪಗೊಳಿಸಿ ತಮ್ಮ ಇಚ್ಛೆಯ ಪ್ರಕಾರ ಮಾರ್ಪಡಿಸಿಕೊಂಡರು. ಆದ್ದರಿಂದ ದೇವನ ವತಿಯಿಂದ ಮಾರ್ಗದರ್ಶನವು ಬರುವುದು ಮತ್ತು ನಿರಂತರ ಬರುತ್ತಿರುವುದು, ತನ್ಮೂಲಕ ಮಾರ್ಗದರ್ಶಕ ಬೆಳಕಿನಿಂದ ವಂಚಿತರಾದವರಿಗೆ ಸರಿದಾರಿ ತೋರಲೇ ಬೇಕಾಗಿತ್ತು. ಕುರ್‌ಆನ್ ಎಂಬ ಹೆಸರಿನ ಮಾರ್ಗದರ್ಶಕ ಗ್ರಂಥ ಅವತೀರ್ಣವಾಗುವ ತನಕ ಈ ಪರಂಪರೆ ಜಾರಿಯಲ್ಲಿತ್ತು. ದೇವ ಕರುಣೆಯ ಕೊನೆಯ ಕೊಂಡಿಯಾಗಿತ್ತದು. ಮೂಲಭೂತವಾಗಿ ದೇವನಿಂದ ಅವತೀರ್ಣವಾದ ಎಲ್ಲ ಗ್ರಂಥಗಳೂ ಒಂದೇ ಆಗಿದ್ದುವು. ಅವುಗಳ ಮಧ್ಯೆ ಕೇವಲ ವಿಶದಾಂಶಗಳ ವ್ಯತ್ಯಾಸವಿತ್ತು. ಧ್ಯೇಯ ಮತ್ತು ತತ್ವಗಳಲ್ಲಿ ಯಾವುದೇ ರೀತಿಯ ವ್ಯತ್ಯಾಸವಿರಲಿಲ್ಲ. ಧ್ಯೇಯ ಮತ್ತು ತತ್ವಗಳನ್ನು ಪರಿಗಣಿಸಿದರೆ ಒಂದೇ ಸಂದೇಶ ಮತ್ತು ಒಂದೇ ಆಜ್ಞೆಯನ್ನು ಮನುಷ್ಯರಿಗೆ ಕಳುಹಿಸಲಾಗಿತ್ತು.

ದೇವ ಮಾರ್ಗದರ್ಶನದ ಬಗ್ಗೆ ಈ ವಿವರಣೆಯು ಮುಂದೆ ಬಂದ ಬಳಿಕ ಒಂದ ದೊಡ್ಡ ಹಾಗೂ ಪ್ರಮುಖ ವಾಸ್ತವಿಕತೆಯ ಮೇಲೆ ಬೆಳಕು ಬೀಳುತ್ತದೆ. ಅದೇನೆಂದ ಲೋಕದಲ್ಲಿ ದೇವನ ವತಿಯಿಂದ ಬಂದ ಮಾರ್ಗದರ್ಶನಗಳಾವುವೂ ಪರಸ್ಪ ಪ್ರತಿಸ್ಪರ್ಧಿಗಳಾಗಿರಲಿಲ್ಲ. ಪವಿತ್ರ ಕುರ್‌ಆನ್ ಕೂಡಾ ಅವುಗಳಲ್ಲೊಂದಾಗಿರುವುದರಿಂ ಅದರ ನೆಲೆಯು ಪ್ರತ್ಯೇಕ ಅಥವಾ ಭಿನ್ನವಾಗಿರುವುದು ಸಾಧ್ಯವಿಲ್ಲ. ಸಹಜವಾಗಿಯೇ ಅದ ಇತರ ದೇವಗ್ರಂಥಗಳಿಗೆ ಪೂರಕವಾಗಿದ್ದು ಅದರೊಂದಿಗೆ ಹೊಂದಿಕೊಳ್ಳುತ್ತದೆ. ಇದ ಅವತೀರ್ಣವಾದ ಉದ್ದೇಶವೂ ಇತರ ದೈವಿಕ ಗ್ರಂಥಗಳಂತೆಯೇ ಆಗಿದೆ. ಅದ ಶಿಕ್ಷಣಗಳ ಬುನಾದಿ ಮತ್ತು ತಾತ್ವಿಕ ವಿಷಯಗಳು ಇತರ ದಿವ್ಯ ಗ್ರಂಥಗಳಂತೆಯೇ ಆಗಿದೆ ಆದ್ದರಿಂದ ಅವುಗಳು ಪರಸ್ಪರ ಸ್ಪರ್ಧಿಗಳದ್ದಾಗಿರದೆ ಪರಸ್ಪರ ಪೂರಕವೂ ಒಂದೂ ಆಗಿದೆ ಉದಾಹರಣೆಗೆ ಅದು ಹೀಗೆ ಹೇಳುತ್ತದೆ:

"ಅವನು ನೂಹರಿಗೆ ಆಜ್ಞಾಪಿಸಿದ್ದ ಧರ್ಮ ವಿಧಾನವನ್ನೇ ನಿಮಗಾಗಿಯ ನಿಶ್ಚಯಿಸಿಕೊಟ್ಟಿದ್ದಾನೆ ಮತ್ತು (ಮುಹಮ್ಮದರೇ) ಈಗ ನಾವು ಅದನ್ನೇ ದಿವ್ಯವಾಣಿಯ ಮೂಲಕ ನಿಮ್ಮ ಕಡೆಗೆ ಕಳುಹಿಸಿರುತ್ತೇವೆ. ಇದನ್ನೇ ನಾವು ಇಬ್‌ರಾಹೀಮ್, ಮೂಸ ಮತ್ತು ಈಸಾರಿಗೂ ಬೋಧಿಸಿದ್ದೆವು. ಈ ಧರ್ಮವನ್ನು ಸಂಸ್ಥಾಪಿಸಿರಿ ಮತ್ತು ಇದರಲ್ಲಿ ವಿಭಿನ್ನರಾಗದಿರಿ ಎಂಬ ಆದೇಶದೊಂದಿಗೆ." (ಪವಿತ್ರ ಕುರ್‌ಆನ್, 42:13

ಕುರ್‌ಆನ್ ಕೇವಲ ತನ್ನ ಮೇಲೆ ವಿಶ್ವಾಸವಿರುವ ಜನರನ್ನುದ್ದೇಶಿಸಿ ಹೀ ಹೇಳಿದ್ದಲ್ಲ. ಬದಲಾಗಿ ಅದು ಸ್ವಯಂ ಪ್ರವಾದಿಯನ್ನುದ್ದೇಶಿಸಿ ಈ ರೀತಿ ಹೇಳುತ್ತದ

"ಇವರು ಅಲ್ಲಾಹನ ವತಿಯಿಂದ ಮಾರ್ಗದರ್ಶನ ಪಡೆದ ಜನರು. ಆದ್ದರಿಂ (ಮುಹಮ್ಮದರೇ!) ನೀವೂ ಅವರ ಮಾರ್ಗದರ್ಶನವನ್ನೇ ಅನುಸರಿಸಿರಿ."

(ಪವಿತ್ರ ಕುರ್‌ಆನ್, 6:9

ಒಟ್ಟಿನಲ್ಲಿ ಪವಿತ್ರ ಕುರ್‌ಆನ್, ತನ್ನ ಶಿಕ್ಷಣಗಳು ಹಿಂದಿನ ಗ್ರಂಥಗಳ ಶಿಕ್ಷಣ ಒಂದು ಹೊಸ ಆವೃತ್ತಿ ಎಂದೇ ಹೇಳುತ್ತದೆ. ಇಂದು ಜಗತ್ತಿನಲ್ಲಿ ಲಭ್ಯವಿರು ದೇವಗ್ರಂಥಗಳಲ್ಲಿ ಪವಿತ್ರ ಕುರ್‌ಆನಿನ ಶಿಕ್ಷಣಕ್ಕೆ ವಿರುದ್ಧವಾಗಿ ಮೂಲದಲ್ಲೇ ವ್ಯತ್ಯಾ ಕಂಡು ಬರುತ್ತಿರುವುದು ಬೇರೆಯೇ ವಿಚಾರವಾಗಿದೆ. ಇದರರ್ಥ ಅವು ಮೂಲತಃ ದೈವಿ ಗ್ರಂಥಗಳೇ ಆಗಿದ್ದರೂ ಈಗ ಅವುಗಳಲ್ಲಿರುವುದು ಅವುಗಳ ಮೂಲ ಸಂದೇಶವಾಗಿರುವುದ ಅಸಾಧ್ಯ. ಅದು ಅದರ ಅನುಯಾಯಿಗಳ ನಿರ್ಲಕ್ಷ್ಯ, ಅಗೌರವ ಮತ್ತು ತಿದ್ದುಪಡಿ ಎರೆಯಾಗಿದೆ ಎಂಬುದೇ ವಾಸ್ತವಿಕತೆ. ಅಲ್ಲಾಹನು ಯಾವುದೇ ಕಾಲದಲ್ಲಿ ಅವತೀರ್ಣ ಗೊಳಿಸಿದ ಗ್ರಂಥದ ಮೂಲ ಶಿಕ್ಷಣ ಪವಿತ್ರ ಕುರ್‌ಆನಿನ ಶಿಕ್ಷಣಕ್ಕೂ ಸರಿಹೊಂದ ಇದ್ದರೆ ಅದು ದೈವಿಕ ಗ್ರಂಥವಾಗಿರುವುದು ಸಾಧ್ಯವೇ ಇಲ್ಲ.

## ವಿತ್ರ ಕುರ್‌ಆನಿನ ವೈಶಿಷ್ಟ್ಯಗಳು

[1] ಪವಿತ್ರ ಕುರ್‌ಆನಿಗೆ ಇತರ ದೇವಗ್ರಂಥಗಳಿಗಿಂತ ಕೆಲವು ವೈಶಿಷ್ಟ್ಯಗಳಿವೆ. ದಕ್ಕೆ ತನ್ನದೇ ಆದ ಒಂದು ನೆಲೆ ಇದೆ. ಆ ವೈಶಿಷ್ಟ್ಯಗಳನ್ನು ಕುರ್‌ಆನ್ ಸ್ವಯಂ ವರಿಸಿದೆ. ಅದನ್ನು ಜಗತ್ತಿನ ಮುಂದಿರಿಸಿದ ಪ್ರವಾದಿಯೂ ಆ ವೈಶಿಷ್ಟ್ಯಗಳ ಬಗ್ಗೆ ಳಿದ್ದಾರೆ. ಅವು ಹೀಗಿವೆ:

"ತನ್ನ ದಾಸನ ಮೇಲೆ ಅವತೀರ್ಣಗೊಳಿಸಿದವನು ಪರಮ ಸುಮಂಗಲನು."

(ಪವಿತ್ರ ಕುರ್‌ಆನ್, 25:1)

"(ಪೈಗಂಬರರೇ,) ನಾವು ನಿಮ್ಮನ್ನು ಸಕಲ ಮಾನವರಿಗೆ ಸುವಾರ್ತೆ ಕೊಡುವವ ಗಿಯೂ ಎಚ್ಚರಿಕೆ ನೀಡುವವರಾಗಿಯೂ ಮಾಡಿ ಕಳುಹಿಸಿರುತ್ತೇವೆ."

(ಪವಿತ್ರ ಕುರ್‌ಆನ್, 34:28 ಮತ್ತು 7:158)

ಅದರ ಈ ಹೇಳಿಕೆಗಳು ಕೂಡಾ ಅದು ಎಲ್ಲ ಮನುಷ್ಯರ ಕಡೆಗೆ ಅವತೀರ್ಣವಾಗಿದೆ ಎಂಬುದನ್ನು ಸಾಬೀತುಪಡಿಸುತ್ತದೆ.

ಈ ಸ್ಥಾನಮಾನವು ಹಿಂದಿನ ಯಾವುದೇ ದೇವಗ್ರಂಥಕ್ಕೆ ಇರಲಿಲ್ಲ. ಪ್ರವಾದಿ(ಸ) ದನ್ನು ಈ ರೀತಿ ಸ್ಪಷ್ಟಪಡಿಸಿರುವರು. "ನನಗಿಂತ ಹಿಂದಿನ ಪ್ರತಿಯೊಬ್ಬ ಪ್ರವಾದಿಯೂ ಮ್ಮ ಜನಾಂಗದ ಕಡೆಗೇ ನಿಯೋಗಿಸಲ್ಪಡುತ್ತಿದ್ದರು." (ಬುಖಾರಿ) ಅರ್ಥಾತ್ ಪವಿತ್ರ ರ್‌ಆನಿಗಿಂತ ಮುಂಚೆ ಬಂದ ಪ್ರತಿಯೊಂದು ದೈವಿಕ ಗ್ರಂಥವೂ ಒಂದು ವಿಶಿಷ್ಟ ನಾಂಗಕ್ಕಾಗಿಯೇ ಅವತೀರ್ಣಗೊಂಡಿತ್ತು.

[2] ಕುರ್‌ಆನ್ ಎಲ್ಲ ದೃಷ್ಟಿಯಿಂದಲೂ ಒಂದು ಸಮಗ್ರ ಮಾರ್ಗದರ್ಶನವಾಗಿದೆ. ದೊಂದು ಧರ್ಮ, ಒಂದು ಶರೀಅತ್, ಒಂದು ಜೀವನ ಕ್ರಮವಾಗಿದೆ. ಅದರಲ್ಲಿ ನುಷ್ಯನ ವಿಶ್ವಾಸ, ಶ್ರದ್ಧೆ, ಅವನ ಕರ್ಮಗಳು, ಅವನ ಅಂತರಂಗ ಮತ್ತು ಬಹಿರಂಗ, ಯಕ್ತಿಕ ಮತ್ತು ಸಾಮೂಹಿಕ, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಾತ್ರವಲ್ಲ ವನದ ಒಂದೊಂದು ರಂಗಕ್ಕೂ ಬೇಕಾದ ಮಾರ್ಗದರ್ಶನಗಳೊಂದಿಗೆ ಇಂದಿಗೂ ಇದೆ. ಗರಿಮೆ ಬೇರೆ ಯಾವ ಗ್ರಂಥಕ್ಕೂ ಪ್ರಾಪ್ತವಿಲ್ಲ. ಆದ್ದರಿಂದಲೇ ಅಲ್ಲಾಹನು ಇದಕ್ಕಿಂತ ಮುಂಚಿನ ಯಾವ ಗ್ರಂಥವನ್ನೂ ಎಲ್ಲ ದೃಷ್ಟಿಯಿಂದಲೂ ಸಮಗ್ರವಾಗಿದೆ ಎಂದು ರಲಿಲ್ಲ. ಅದು ಕೇವಲ ಪವಿತ್ರ ಕುರ್‌ಆನಿನ ವೈಶಿಷ್ಟ್ಯ. ಅದು ಈ ರೀತಿ ಘೋಷಿಸುತ್ತದೆ.

"ಇಂದು ನಾನು ನಿಮ್ಮ ಧರ್ಮವನ್ನು ನಿಮಗಾಗಿ ಪರಿಪೂರ್ಣಗೊಳಿಸಿದ್ದೇನೆ. ನನ್ನ ಡುಗೆಯನ್ನು ನಿಮ್ಮ ಮೇಲೆ ಪರಿಪೂರ್ಣಗೊಳಿಸಿದ್ದೇನೆ."

(ಪವಿತ್ರ ಕುರ್‌ಆನ್, 5:3)

ಈ ಸೂಕ್ತದ ಅರ್ಥವು ಬಹಳ ಸ್ಪಷ್ಟವಾಗಿದೆ. ಅದೇನೆಂದರೆ ಮಾನವ ಜನಾಂಗ ಆರಂಭದಿಂದಲೇ ದೈವಿಕ ಮಾರ್ಗದರ್ಶನದ ಪರಂಪರೆ ನಡೆದು ಬಂದಿತ್ತು. ಅವು ತನ ಮೂಲ ಶಿಕ್ಷಣದಲ್ಲಿ ಸದಾ ಒಂದೇ ಆಗಿದ್ದರೂ ವಿಶದಾಂಶಗಳಲ್ಲಿ ಅಗತ್ಯಕ್ಕನುಸಾರ ಆಗಾ ಬದಲಾಗುತ್ತಾ ಬಂದಿದೆ. ನಾಗರಿಕತೆಯ ಬೆಳವಣಿಗೆಯೊಂದಿಗೆ ಬೆಳೆಯುತ್ತಾ ಸಾಗಿದ ಅದೀಗ ಎಲ್ಲ ದೃಷ್ಟಿಕೋನದಿಂದಲೂ ಸಂಪೂರ್ಣತೆಗೆ ತಲುಪಿದೆ.

[3] ಕುರ್‌ಆನಿನ ಬೋಧನೆಗಳ ಶೈಲಿಯು ವಿಶ್ವವ್ಯಾಪಿ ಮತ್ತು ಅಂತಾರಾಷ್ಟ್ರೀಯ ವಾಗಿದೆ. ಅವುಗಳ ಮೇಲೆ ಯಾವುದೇ ಒಂದು ವಿಶಿಷ್ಟ ಕಾಲದ ಬೇಡಿಕೆಗಳ ಛಾಪು ಇಲ್ಲ ಅವು ಯಾವುದೇ ಜನಾಂಗ ಅಥವಾ ವರ್ಣವನ್ನು ತನ್ನ ಮುಂದಿರಿಸುವುದಿಲ್ಲ. ಕೇವ ಮನುಷ್ಯ ಮತ್ತು ಮನುಷ್ಯ ಪ್ರಕೃತಿಯನ್ನದು ತನ್ನ ಮುಂದಿಡುತ್ತದೆ. ಆದ್ದರಿಂದ ಅ ಎಲ್ಲ ಕಾಲ, ಜನಾಂಗ, ವರ್ಣ ಮತ್ತು ದೇಶಗಳ ಜನರಿಗೆ ಸಮಗ್ರ ರೂಪದಲ್ಲಿ ಅನ್ವಯಿಸುತ್ತದೆ ಮತ್ತು ಅವರ ಬೇಡಿಕೆಗಳಿಗೆ ಪೂರಕವಾಗಿವೆ. ಇತರ ದೇವ ಗ್ರಂಥಗ ಸ್ಥಿತಿಯೇನೆಂದರೆ ಅವುಗಳ ಶೈಲಿಯು ಒಂದು ಜನಾಂಗಕ್ಕೆ ಸೀಮಿತವಾಗಿರುವುದನ್ನು ಯಾ ಸಾಮಾನ್ಯ ಮನುಷ್ಯನೂ ಕಾಣುವನು. ಆದ್ದರಿಂದ ಇತರ ಜನಾಂಗಗಳಿಗೆ ಅವು ಅನ್ವಯ ವಾಗುವ ಪ್ರಮೇಯವೇ ಬರುವುದಿಲ್ಲ. ಕುರ್‌ಆನ್ ತನ್ನ ಈ ವೈಶಿಷ್ಟ್ಯದ ಕಾರಣದಿಂದಲ ತಾನು ಸಮರ್ಪಿಸಿದ ಧರ್ಮವನ್ನು ಪ್ರಕೃತಿ ಧರ್ಮ ಎಂದು ಕರೆದಿದೆ.

"ಅಲ್ಲಾಹನು ಮಾನವನನ್ನು ಸೃಷ್ಟಿಸಿದ ಪ್ರಕೃತಿಯಲ್ಲೇ ಸ್ಥಿರವಾಗಿರಿ."

(ಪವಿತ್ರ ಕುರ್‌ಆನ್, 30:3

ಮತ್ತು ಅದು ಲೋಕದ ಜನತೆಯೆದುರು ಸ್ಪಷ್ಟ ಶಬ್ದಗಳಲ್ಲಿ ಈ ರೀತಿ ಘೋಷಿಸುತ್ತದ

"ವಾಸ್ತವದಲ್ಲಿ ಈ ಕುರ್‌ಆನ್ ಅತ್ಯಂತ ನೇರ ಮಾರ್ಗವನ್ನು ತೋರಿಸಿ ಕೊಡುತ್ತದೆ.

(ಪವಿತ್ರ ಕುರ್‌ಆನ್, 17:

[4] ಇದು ಅಲ್ಲಾಹನ ಅಂತಿಮ ಗ್ರಂಥ. ಇದರ ಅನಂತರ ದಿವ್ಯವಾಣಿಯ ಅವತೀರ್ಣದ ಪರಂಪರೆಯು ಕೊನೆಗೊಂಡಿತು. ಇನ್ನು ಯಾವುದೇ ಗ್ರಂಥವಾಗಲೀ ಪ್ರವಾದಿಯಾಗಲಿ ಬರಲಿಕ್ಕಿಲ್ಲ. ಕುರ್‌ಆನನ್ನು ತಂದ ಪ್ರವಾದಿ(ಸ) ಈ ಬಗ್ಗೆ ಈ ರೀ ಸ್ಪಷ್ಟೀಕರಣ ನೀಡಿರುವರು.

"ಪ್ರವಾದಿತ್ವ ಮತ್ತು ಸಂದೇಶವಾಹಕತ್ವದ ಪರಂಪರೆ ಕೊನೆಗೊಂಡಿದೆಯೆಂಬುದರಲ್ಲಿ ಸಂದೇಹವಿಲ್ಲ. ಆದ್ದರಿಂದ ನನ್ನ ನಂತರ ಯಾವುದೇ ಪ್ರವಾದಿಯಾಗಲೀ, ಸಂದೇಶವಾಹ ರಾಗಲೀ ಬರಲಿಕ್ಕಿಲ್ಲ." (ತಿರ್ಮಿ

ಮತ್ತು ಕುರ್‌ಆನ್ ತನ್ನನ್ನು ತಂದ ಪ್ರವಾದಿಯ ಕುರಿತು ಅಲ್ಲಾಹನ ತೀರ್ಮಾನವನ್ನು ಘೋಷಿಸುತ್ತದೆ:

"ಅವರು ಅಲ್ಲಾಹನ ಸಂದೇಶವಾಹಕರು ಮತ್ತು ಪ್ರವಾದಿಗಳಲ್ಲಿ ಕೊನೆಯವ ಾಗಿರುತ್ತಾರೆ." (ಪವಿತ್ರ ಕುರ್‌ಆನ್, 33:40)

ಕುರ್‌ಆನ್ ಮತ್ತು ಪ್ರವಾದಿ(ಸ) ಘೋಷಿಸಿದಂತೆ ಬೇರಾವ ಗ್ರಂಥವಾಗಲಿ, ವಾದಿಯಾಗಲಿ ಘೋಷಿಸಿಲ್ಲ.

[5] ಈ ದೈವಿಕ ಗ್ರಂಥವು ಹಿಂದಿನ ಎಲ್ಲ ದೈವಿಕ ಗ್ರಂಥಗಳನ್ನು ಅನೂರ್ಜಿತ ಳಿಸಿದೆ. ಅಲ್ಲಾಹನ ಮನ್ನಣೆ ಗಳಿಸಿದಂತಹ ಬೇರಾವ ಗ್ರಂಥವೂ ಈಗ ಬಾಕಿ ಉಳಿದಿಲ್ಲ. ಗ ಜೀವನದ ನೇರ ಮಾರ್ಗ ಮತ್ತು ಆಚಾರ ವಿಚಾರಗಳ ವಿಜಯೀ ಪಥವು ಕೇವಲ ಕುರ್‌ಆನ್‌ನಿಂದ ಲಭಿಸುತ್ತದೆ. ಇದರ ಅರ್ಥ ನಾವು ಇನ್ನುಳಿದ ದೈವಿಕ ಗ್ರಂಥಗಳನ್ನು ವಿಕ ಗ್ರಂಥವಲ್ಲವೆಂದು ಸಾರುತ್ತೇವೆಂದಲ್ಲ. ಬದಲಾಗಿ ಯಾವ ಆರಾಧ್ಯ ಪ್ರಭು ಮತ್ತು ಜ್ಞಾಧಿಕಾರಿಯ ಕಡೆಯಿಂದ ಅವು ಅವತೀರ್ಣವಾಗಿವೆಯೋ ಅವನದೇ ತೀರ್ಮಾನವಿದು. ಂದರೆ ಈ ಗ್ರಂಥಗಳನ್ನು ಇನ್ನು ಮುಂದೆ ಜೀವನ ಸಂವಿಧಾನವಾಗಿ ಸ್ವೀಕರಿಸಲಾಗದು. ನ್ನ ಕೊನೆಯ ಗ್ರಂಥವಾದ ಕುರ್‌ಆನಿಗೆ ಮಾತ್ರ ಈ ಸ್ಥಾನ ನೀಡಬೇಕು. ದೇವನ ಈ ರ್ಮಾನದ ಮೇರೆಗೆ ಅರಬರೂ ಅರಬೇತರರೂ ಕರಿಯರೂ ಬಿಳಿಯರೂ ಏಷ್ಯನರೂ ರೋಪ್ಯರೂ ಎಲ್ಲರೂ ಈ ಕುರ್‌ಆನನ್ನು ಅನುಸರಿಸಬೇಕು. ಏಕೆಂದರೆ ಅದರ ನುಸರಣೆಯನ್ನು ಮಾತ್ರ ಈಗ ದೇವದಾಸ್ಯವೆಂದು ಪರಿಗಣಿಸಲಾಗುವುದು. ಅಲ್ಲಾಹನ ತೀರ್ಮಾನವು ಕುರ್‌ಆನಿನ ಈ ವಚನದಲ್ಲಿ ಕಾಣಬಹುದು:

"ಅಲ್ಲಾಹನ ಬಳಿ ಧರ್ಮವು ಇಸ್ಲಾಮ್ ಮಾತ್ರ." (ಪವಿತ್ರ ಕುರ್‌ಆನ್, 3:19)

"ಯಾರಾದರೂ ಈ ವಿಧೇಯತೆಯ (ಇಸ್ಲಾಮ್) ಹೊರತು ಯಾವುದಾದರೂ ಇತರ ದ್ಧತಿಯನ್ನು ಸ್ವೀಕರಿಸಲಿಚ್ಛಿಸಿದರೆ, ಅವನ ಆ ಪದ್ಧತಿಯನ್ನು ಎಷ್ಟು ಮಾತ್ರಕ್ಕೂ ಮಾನ್ಯ ಾಡಲಾಗದು" (ಪವಿತ್ರ ಕುರ್‌ಆನ್, 3:85)

ಈ ಸೂಕ್ತಗಳಲ್ಲಿ ಸಕಾರಾತ್ಮಕ ಮತ್ತು ನಕಾರಾತ್ಮಕವಾಗಿ 'ಇಸ್ಲಾಮ್ ಧರ್ಮ'ದ ರಿತು ಈ ರೀತಿ ಘೋಷಿಸಲಾಗಿರುವುದು ಆ ಧರ್ಮವು ಕುರ್‌ಆನಿನ ಪರ್ಯಾಯ ದವೆಂಬ ನೆಲೆಯಲ್ಲಾಗಿದೆ. ಇಸ್ಲಾಮಿನ ಹೊರತು ಬೇರಾವ ಧರ್ಮವೂ ಅಲ್ಲಾಹನ ನ್ನಣೆ ಪಡೆಯದು ಎಂದು ಹೇಳಿರುವುದರ ತಾತ್ಪರ್ಯವು ಈಗ ಕುರ್‌ಆನ್ ಅಲ್ಲದೆ ರಾವುದೇ ಗ್ರಂಥವೂ ಅನುಸರಣೆಗೆ ಯೋಗ್ಯವಾಗಿ ಉಳಿದಿಲ್ಲ ಎಂದಾಗಿದೆ. ಯಹೂದಿಗಳು ತ್ತು ಕ್ರೈಸ್ತರ ಪೈಕಿ ಈ ಕುರ್‌ಆನಿನ ಮೇಲೆ ವಿಶ್ವಾಸವಿರಿಸದವರನ್ನು ಅದು ಸ್ಪಷ್ಟ ಬ್ದಗಳಲ್ಲಿ 'ಕಾಫಿರ್' ಅರ್ಥಾತ್ ಸತ್ಯನಿಷೇಧಿ, ಅಲ್ಲಾಹನ ವಿದ್ರೋಹಿ ಮತ್ತು ಆತನ ಕ್ಷೆಗೆ ಅರ್ಹನೆಂದು ಘೋಷಿಸಿರುವುದು ಈ ಮಾತನ್ನು ಇನ್ನಷ್ಟು ಸ್ಪಷ್ಟಪಡಿಸುತ್ತದೆ.

[6] ಕುರ್‌ಆನಿನ ಮೇಲೆ ವಿಶ್ವಾಸವಿಡುವುದು ಮತ್ತು ಅದನ್ನು ಅನುಸರಿಸುವುದು ಮನುಷ್ಯನ ಮೋಕ್ಷಕ್ಕಿರುವ ಶರತ್ತಾಗಿದೆ. ಅದರ ನಿರಾಕರಣೆ ಮಾಡಿ ಯಾವನೂ ಪರಲೋಕದಲ್ಲಿ ನಿಂದ್ಯತೆ ಮತ್ತು ವಿನಾಶದಿಂದ ರಕ್ಷಣೆ ಪಡೆಯಲಾರ. ಇನ್ನಾವುದೇ ದೈವೀ ಗ್ರಂಥದ ಅನುಸರಣೆಯು ಮನುಷ್ಯನನ್ನು (ಅವನಿಗೆ ಕುರ್‌ಆನಿನ ಸಂದೇಶ ತಲುಪಿದ್ದರೆ) ಮೋಕ್ಷಕ್ಕೆ ಅರ್ಹನಾಗಿ ಮಾಡುವುದಿಲ್ಲ. ಈ ವಾಸ್ತವಿಕತೆ ಕೂಡಾ ಮೇಲಿನ ಎರಡು ಸೂಕ್ತಗಳ ಅನಿವಾರ್ಯ ಬೇಡಿಕೆಯಾಗಿದೆ. ಆದ್ದರಿಂದ ಮೇಲೆ ಉದ್ಧರಿಸಿದ ಎರಡನೆಯ ಸೂಕ್ತದಲ್ಲಿ **"ಯಾರಾದರೂ ಈ ವಿಧೇಯತೆಯ (ಇಸ್ಲಾಮ್) ಹೊರತು ಯಾವುದಾದರೂ ಇತರ ಪದ್ಧತಿಯನ್ನು ಸ್ವೀಕರಿಸಲಿಚ್ಛಿಸಿದರೆ, ಅವನ ಆ ಪದ್ಧತಿಯನ್ನು ಎಷ್ಟು ಮಾತ್ರಕ್ಕೂ ಮಾನ್ಯ ಮಾಡಲಾಗದು"(ಪವಿತ್ರ ಕುರ್‌ಆನ್, 3:85)** ಎಂದು ಹೇಳಿದ ಬಳಿಕ **"ಮತ್ತು ಅವರು ಪರಲೋಕದಲ್ಲಿ ನಷ್ಟಕ್ಕೊಳಗಾಗುವರು"** ಎಂದು ಹೇಳಲಾಗಿದೆ.

[7] ಈಗ ಸಂಪೂರ್ಣ ಸುರಕ್ಷಿತವಾಗಿರುವ ದೇವಗ್ರಂಥ ಇದೊಂದೇ ಆಗಿದೆ. ಅದರಲ್ಲೇನೂ ಏರುಪೇರಾಗಲಿಲ್ಲ. ಅದು ತಿದ್ದುಪಡಿಗೆ ಒಳಗಾಗಲಿಲ್ಲ. ಯಾವ ಭಾಷೆಯಲ್ಲಿ, ಯಾವ ಶಬ್ದಗಳಲ್ಲಿ, ಯಾವ ವಚನಗಳಲ್ಲಿ ಅದು ಅಲ್ಲಾಹನ ವತಿಯಿಂದ ಇಳಿದಿತ್ತೋ ಅದೇ ರೀತಿ ಇಂದಿಗೂ ಬಾಕಿ ಉಳಿದಿದೆ. ಇದು ಅಲ್ಲಾಹನ ವಿಶೇಷ ಏರ್ಪಾಡಿನಿಂದ ಸಾಧ್ಯವಾಗಿದೆ. ಅದನ್ನು ಅವನು ತನ್ನ ಈ ಗ್ರಂಥದಲ್ಲಿ ವಿವರಿಸಿರುವನು:

**"ಈ 'ಉಪದೇಶ'ವನ್ನು ನಿಶ್ಚಯವಾಗಿಯೂ ನಾವು ಅವತೀರ್ಣಗೊಳಿಸಿರುತ್ತೇವೆ ಮತ್ತು ಸ್ವತಃ ನಾವೇ ಅದರ ರಕ್ಷಕರೂ ಆಗಿರುತ್ತೇವೆ." (ಪವಿತ್ರ ಕುರ್‌ಆನ್, 15:09)**

ಅಲ್ಲಾಹನ ಈ ಏರ್ಪಾಡು ಮತ್ತು ಘೋಷಣೆಯ ಬಳಿಕ ಕಾಲವು ಅದನ್ನು ಬದಲಿಸುವುದು ಅಸಾಧ್ಯವಾಗಿತ್ತು. ಐತಿಹಾಸಿಕವಾಗಿಯೂ ಈ ಗ್ರಂಥವು ಅತ್ಯಂತ ಕ್ಷುಲ್ಲಕ ಎನಿಸಬಹುದಾದ ತಿದ್ದುಪಡಿಗೂ ಒಳಗಾಗದೆ ಉಳಿದಿದೆ ಎಂಬುದು ಒಂದು ಸರ್ವಸಮ್ಮತ ವಾಸ್ತವಿಕತೆಯಾಗಿದೆ. (ಈ ಬಗ್ಗೆ ಹೆಚ್ಚಿನ ವಿವರಣೆಯು ಮುಂದೆ ಬರಲಿಕ್ಕಿದೆ)

ಇದಕ್ಕೆ ಹೋಲಿಸಿದರೆ ಇತರ ಗ್ರಂಥಗಳ ಸ್ಥಿತಿಯೇ ಬೇರೆ. ಅದನ್ನು ಅಲ್ಲಾಹನ ಸಂರಕ್ಷಿಸುವನು ಎಂಬ ಘೋಷಣೆಯಾಗಲಿ, ಅದಕ್ಕೆ ಯಾವುದೇ ಏರ್ಪಾಡಾಗಲಿ ಆಗಿಲ್ಲ. ಐತಿಹಾಸಿಕವಾಗಿಯೂ ಅದು ಸುರಕ್ಷಿತವಾಗಿದೆ ಎಂಬುದನ್ನು ಸಾಬೀತುಗೊಳಿಸಲು ಸಾಧ್ಯವಿಲ್ಲ. ಮಾತ್ರವಲ್ಲ ಯಾವುದೇ ಗ್ರಂಥದ ಅನುಯಾಯಿಗಳು ಕೂಡಾ ಅದು ಸಂಪೂರ್ಣ ಸುರಕ್ಷಿತವಾಗಿದೆ ಎಂದು ವಾದಿಸುವುದಿಲ್ಲ. ಈ ಬಗ್ಗೆ ಪವಿತ್ರ ಕುರ್‌ಆನಿನ ಸಾಕ್ಷ್ಯವು ಅದುವೇ ಆಗಿದೆ. ಅದರಲ್ಲಿ ಪ್ರಸ್ತಾಪಿಸಲ್ಪಟ್ಟ ಗ್ರಂಥಗಳ ಕುರಿತು ಅದು ಮಾನವ ಹಸ್ತಕ್ಷೇಪಕ್ಕೆ ಒಳಗಾಗಿದೆ ಎಂದೇ ಹೇಳುತ್ತದೆ. ಉದಾಃ ತೌರಾತ್ ಮತ್ತು ಇಂಜೀಲ್‌ನ ಕುರಿತು ಅದರ ವಾಹಕರು ಅದರ ಕೆಲವು ಭಾಗಗಳನ್ನು ಬದಲಿಸಿರುವರೆಂದು ಸಾರುತ್ತದೆ ಇನ್ನು ಕೆಲವು ಭಾಗಗಳನ್ನು ಮರೆತು ಬಿಟ್ಟರು ಎನ್ನುತ್ತದೆ. (ಅಲ್ ಮಾಇದಃ

ಪವಿತ್ರ ಕುರ್‌ಆನಿನ ವಿಶಿಷ್ಟ ಮಹಿಮೆಗೆ ಇನ್ನೊಂದು ಕಾರಣ ಅದರ ಭಾಷೆಯಾಗಿದೆ. ಯಾವ ಭಾಷೆಯಲ್ಲಿ ಕುರ್‌ಆನ್ ಅವತೀರ್ಣಗೊಂಡಿತ್ತೋ ಅದು ಒಂದು ಜೀವಂತ ಭಾಷೆಯಾಗಿದೆ. ಇಂದು ಏಶ್ಯಾ ಮತ್ತು ಆಫ್ರಿಕದ ಅನೇಕ ರಾಷ್ಟ್ರಗಳಿಗೆ ಸೇರಿದ ಕೋಟಿಗಟ್ಟಲೆ ಜನರು ಅದನ್ನು ಆಡುತ್ತಾರೆ. ಆ ಭಾಷೆಯನ್ನು ಕಲಿತವರ ಸಂಖ್ಯೆಯಂತೂ ಅದಕ್ಕಿಂತಲೂ ಅಧಿಕವಿದೆ. ಬೇರೆ ಮಾತುಗಳಲ್ಲಿ ಅದೊಂದು ಶೈಕ್ಷಣಿಕ, ಸಾರ್ವಜನಿಕ ಮತ್ತು ಅಂತಾರಾಷ್ಟ್ರೀಯ ಭಾಷೆಯಾಗಿದೆ. ಇತರ ದೇವಗ್ರಂಥಗಳು ಅವತೀರ್ಣವಾದ ಭಾಷೆಗಳು ಸಾರ್ವಜನಿಕ ಜೀವನದಿಂದ ಹೊರ ಹೋಗಿವೆ. ಆ ಪೈಕಿ ಯಾವುದನ್ನೂ ಜೀವಂತ ಭಾಷೆ ಎಂದು ಹೇಳಲು ಸಾಧ್ಯವಿಲ್ಲ. ಒಂದು ಗ್ರಂಥವು ಸುರಕ್ಷಿತವಾಗಿರಬೇಕಾದರೆ ಅದರ ಭಾಷೆಯು ಜೀವಂತ ಭಾಷೆಯಾಗಿ ಉಳಿಯಬೇಕಾದುದು ಎಷ್ಟು ಅಗತ್ಯ ಎಂಬುದಕ್ಕೆ ಯಾವುದೇ ಪುರಾವೆಯ ಅಗತ್ಯವೇ ಇಲ್ಲ.

[8] ಅಲ್ಲಾಹನ ಮೂಲ ಸಂದೇಶ ಮತ್ತು ಯಥಾರ್ಥ ಧರ್ಮ ಏನಾಗಿತ್ತು? ಇದರ ತೀರ್ಮಾನ ಮಾಡುವ ಹಕ್ಕು ನಿಶ್ಶರ್ತವಾಗಿ ಕೇವಲ ಕುರ್‌ಆನಿಗಿದೆ. ಏಕೆಂದರೆ ಇತರ ಯಾವುದೇ ಗ್ರಂಥ ತನ್ನ ಮೂಲರೂಪದಲ್ಲಿ ಪೂರ್ಣ ಸುರಕ್ಷಿತವಾಗಿ ಉಳಿದಿಲ್ಲ. ಆದ್ದರಿಂದ ನೈಜ ಮತ್ತು ನಿಷ್ಕಳಂಕ ಮಾರ್ಗದರ್ಶನವು ಇದರಿಂದಲೇ ಹೊರತು ಬೇರೆಲ್ಲಿಂದಲೂ ಲಭಿಸದು. ಈ ರೀತಿ ಕೇವಲ ಕುರ್‌ಆನಿನ ಬೋಧನೆಗಳು ತಮ್ಮ ಮೂಲ ರೂಪದಲ್ಲಿ ಉಳಿದುಕೊಂಡಿವೆ ಎಂಬುದು ಮಾತ್ರವಲ್ಲ ವಾಸ್ತವದಲ್ಲಿ ಇತರ ದೈವಿಕ ಗ್ರಂಥಗಳ ನೈಜ ಶಿಕ್ಷಣವನ್ನೂ ನಾವು ಕುರ್‌ಆನಿನಲ್ಲೇ ಕಂಡುಕೊಳ್ಳಬೇಕಾಗಿದೆ. ಇತರ ಗ್ರಂಥಗಳು ಮಾನವ ಹಸ್ತಕ್ಷೇಪಕ್ಕೆ ಒಳಗಾಗಿರುವುದರಿಂದ ಇದು ಬುದ್ಧಿಯ ಬೇಡಿಕೆಯಾಗಿದೆ. ಮಾತ್ರವಲ್ಲ ಅಲ್ಲಾಹನ ಕಡೆಯಿಂದ ಅದಕ್ಕೆ ಸ್ಪಷ್ಟ ಪುರಾವೆಯೂ ಇದೆ:

**"ಓ ಪೈಗಂಬರರೇ, ನಾವು ಈ ಗ್ರಂಥವನ್ನು ನಿಮಗೆ ಕಳುಹಿಸಿದೆವು. ಇದು ಸತ್ಯದೊಂದಿಗೆ ಬಂದಿದೆ ಮತ್ತು 'ಅಲ್ ಕಿತಾಬ್'ನ ಪೈಕಿ ತನ್ನ ಮುಂದಿರುವುದನ್ನೆಲ್ಲ ದೃಢಪಡಿಸುವಂತಹದು ಮತ್ತು ಅದರ 'ಮುಹೈಮಿನ್'(ಸಂರಕ್ಷಕ) ಆಗಿರುತ್ತದೆ."**

**(ಪವಿತ್ರ ಕುರ್‌ಆನ್, 5:48)**

'ಮುಹೈಮಿನ್' ಎಂಬ ಅರಬೀ ಪದದ ಅರ್ಥ ಮೇಲ್ನೋಟ ಮಾಡುವ ಅಥವಾ ರಕ್ಷಿಸುವ ಎಂದಾಗುತ್ತದೆ. ಪವಿತ್ರ ಕುರ್‌ಆನ್ ಹಿಂದಿನ ಗ್ರಂಥಗಳ ಸಂರಕ್ಷಕವಾಗಿದೆ. ಅಂದರೆ ಅವುಗಳ ನೈಜ ಸಂದೇಶದ ಮೇಲೆ ಹಾಕಲ್ಪಟ್ಟ ಹಸ್ತಕ್ಷೇಪ ಮತ್ತು ತಿದ್ದುಪಡಿಯ ಪರದೆಯನ್ನು ಅದು ಕಿತ್ತೆಸೆಯುತ್ತದೆ. ಈ ರೀತಿ ಅವುಗಳ ಮೂಲಗಳನ್ನು ಅನಾವರಣಗೊಳಿಸುತ್ತದೆ. ಈ ದೇವ ವಚನದ ಆಧಾರದಲ್ಲಿ ಒಬ್ಬನಿಗೆ ಹಿಂದಿನ ಯಾವುದೇ ದೇವಗ್ರಂಥದ ಶಿಕ್ಷಣ ಏನೆಂದು ತಿಳಿಯಬೇಕಾದರೆ ಅವನಿಗಿರುವುದು ಕೇವಲ ಒಂದೇ ದಾರಿ. ಅದೇನೆಂದರೆ ಸ್ವಯಂ ಆ ಗ್ರಂಥಗಳನ್ನು ನೋಡುವ ಬದಲು

ಕುರ್‌ಆನನ್ನು ನೋಡಬೇಕು. ಏಕೆಂದರೆ ಅವುಗಳ ಮೂಲಭೂತ ಶಿಕ್ಷಣಗಳು ಇಲ್ಲಿಯೆ ಲಭಿಸುತ್ತವೆ. ಇಷ್ಟು ಮಾತ್ರವಲ್ಲ ಆ ಗ್ರಂಥಗಳ ಅನುಸರಣೆ ನಿಜವಾಗಿ ಕುರ್‌ಆನಿ ಅನುಸರಣೆಯಲ್ಲೇ ಅಡಗಿದೆ.

[9] ಪವಿತ್ರ ಕುರ್‌ಆನ್ ದೇವಗ್ರಂಥವಾಗಿದೆ ಎಂಬುದಕ್ಕೆ ಪುರಾವೆ ವ್ಯಾವಹಾರಿಕವಾ ಅಸ್ತಿತ್ವದಲ್ಲಿರುವ ವಾಸ್ತವಿಕತೆಗಳ ಮತ್ತು ಪ್ರತಿಕ್ಷಣವೂ ಹೊಸ ಸಾಕ್ಷ್ಯಗಳ ಮೇಲೆ ನಿಂತಿದ ಅದು ಕೇವಲ ಗತಕಾಲದ ಕೆಲವು ಘಟನೆಗಳ ಮತ್ತು ಕೆಲವು ವರದಿಗಳ ಮೇಲೆ ಆಧಾರಿ ವಾಗಿಲ್ಲ. ಅದಕ್ಕೆ ಕಾರಣವೇನೆಂದರೆ ಕುರ್‌ಆನ್ ದೇವಗ್ರಂಥವಾಗಿದೆ ಎಂಬುದಕ್ಕೆ ( ಗ್ರಂಥವೇ ಪುರಾವೆಯಾಗಿದೆ. ಏಕೆಂದರೆ ಅದು ತನ್ನ ಆಂತರಿಕ ಗುಣ ಮತ್ತು ಬಾಹ ಪರಿಣಾಮಗಳ, ದೃಷ್ಟಿಯಲ್ಲಿ ಒಟ್ಟಿನಲ್ಲಿ ಎಲ್ಲ ದೃಷ್ಟಿಕೋನಗಳಲ್ಲೂ ಒಂದು ಪವಾಡವಾಗಿದ ಕಣ್ಣುಳ್ಳ ಪ್ರತಿಯೊಬ್ಬನಿಗೂ ಕಾಣುವ ಪವಾಡ. ಯಾವನೇ ಸತ್ಯವಂತ ವ್ಯಕ್ತಿ ಅದ ಗುಣಗಳನ್ನು ಮತ್ತು ವ್ಯವಹಾರಿಕ ಸಮೃದ್ಧಿಗಳನ್ನು ಮನಸ್ಸಿನ ಕಣ್ಣು ತೆರೆದು ನೋಡಿದ ಅವನ ಕಿವಿಯಲ್ಲಿ ಈ ಮಾತು ಪ್ರತಿಧ್ವನಿಸದೆ ಇರಲಾರದು: "ದೇವನಾಣೆ! ಇದು ಮನುಷ್ಯ ವಾಣಿಯಲ್ಲ." ಈ ವಸ್ತುಸ್ಥಿತಿಯ ತಾತ್ಪರ್ಯವೇನೆಂದರೆ ಕುರ್‌ಆನ್ ಎಲ್ಲಿ, ಯಾ ಸ್ಥಳದಲ್ಲಿ, ಯಾವ ಸಮಯದಲ್ಲಿ ಓದಲ್ಪಟ್ಟರೂ ಅಲ್ಲಿ ಅದರ ಪ್ರಾಮಾಣಿಕತೆಯ ಪುರಾವೆಗಳು ಇರುವುವು ಮತ್ತು ಯಾವ ಸಮಯದಲ್ಲೂ ಕಣ್ಣಿಗೆ ಕಾಣದಂತಹ ಪುರಾವೆಗ ಅಗತ್ಯ ಇದಕ್ಕೆ ಇರಲಾರದು. ಬೇರೆ ಮಾತುಗಳಲ್ಲಿ ಹೇಳುವುದಾದರೆ ಈ ಗ್ರಂಥದ ಅಸ್ತಿತ ಮತ್ತು ಅದರ ಸಂದೇಶ ಮಾತ್ರ ಜೀವಂತ, ಸುರಕ್ಷಿತ ಹಾಗೂ ಶಾಶ್ವತವಾಗಿರದೆ ಅದ ದೇವಗ್ರಂಥವಾಗಿದೆ ಎಂಬುದರ ಪುರಾವೆಯೂ ಅಷ್ಟೇ ಜೀವಂತ, ಸುರಕ್ಷಿತ ಮತ್ತ ಶಾಶ್ವತವಾಗಿದೆ. ಬೇರೆ ಗ್ರಂಥಗಳ ಸ್ಥಿತಿಯು ಇದಕ್ಕಿಂತ ತೀರಾ ಭಿನ್ನವಾಗಿದೆ. ಏಕೆಂದ ಅವುಗಳ ಪ್ರಾಮಾಣಿಕತೆಯ ಪುರಾವೆ ಅವುಗಳೊಳಗೆ ಕಾಣಸಿಗುವುದಿಲ್ಲ. ಅದು ಕೇವ ಇತಿಹಾಸದಲ್ಲಿ ಲೀನವಾಗಿದೆ. ಅದನ್ನು ಕಂಡುಕೊಳ್ಳಲು ಬಲು ದೂರದ ತನಕ ಹಿಂದ ಹೋಗಬೇಕಾಗಿದೆ. ತೌರಾತ್ ಅಲ್ಲಾಹನ ಗ್ರಂಥವೆಂದು ಸಾಬೀತಾಗಬೇಕಾದರೆ ಅದನ ಪ್ರತಿಪಾದಿಸಿದ ವ್ಯಕ್ತಿಯ ಪ್ರವಾದಿತ್ವವು 'ಅಸಾ' (ಲಾಠಿ) 'ಯದೆ ಬೈಝಾ' (ಪ್ರಕಾಶಮಾನವಾ ಹಸ್ತ)ದಂತಹ ಪ್ರತ್ಯಕ್ಷ ಕಾಣುವ ತಾತ್ಕಾಲಿಕ ಪವಾಡಗಳನ್ನು ನೋಡಿ ಅಂಗೀಕರಿಸಲ್ಪಟ್ಟಿತ್ತು ಮೃತರನ್ನು ಜೀವಂತಗೊಳಿಸುವುದು, ಕುಷ್ಟ ರೋಗಿಗಳ ರೋಗ ಶಮನಗೊಳಿಸುವುದ ಅಂಧರನ್ನು ಕಣ್ಣುಳ್ಳವರಾಗಿ ಮಾರ್ಪಡಿಸುವುದು ಮುಂತಾದ ಎರಡು ಸಾವಿರ ವರ್ಷಗ ಹಿಂದಿನ ಘಟನೆಗಳು ಹ. ಈಸಾರನ್ನು(ಅ) ಅಲ್ಲಾಹನ ಪ್ರವಾದಿ ಎಂಬುದನ್ನು ಅಂಗೀಕರಿಸು ತನಕ ಇಂಜೀಲ್‌ನ ಪ್ರಾಮಾಣಿಕತೆಯು ಚರ್ಚಾಸ್ಪದ ವಿಷಯವಾಗಿಯೇ ಉಳಿಯುವುದ ಈ ಗ್ರಂಥಗಳ ಪ್ರಾಮಾಣಿಕತೆಯ ಬಗ್ಗೆ ಈ ಪುರಾವೆಯು ಅದನ್ನು ಕಣ್ಣಾರೆ ಕಂಡ ಜನರಿ ಮಾತ್ರ ಅನ್ವಯಿಸಬಹುದು. ಆದರೆ ಅನಂತರದ ಜನರಿಗೆ ಅದು ನೇರ ಪುರಾವೆಯಾ ಲಾರದು. ಪರೋಕ್ಷ ಪುರಾವೆ ಮಾತ್ರ ಆದೀತು. ಮನುಷ್ಯನು ಮೊದಲು ಈ ಪವಾಡಗ

ಸತ್ಯಾಸತ್ಯತೆಯನ್ನು ಮತ್ತು ಅವು ಲಭಿಸಿದ ಮಾಧ್ಯಮವನ್ನು ವಿವೇಚಿಸಿ ತಿಳಿಯುವನು. ಮಾಧ್ಯಮವು ನಂಬಲರ್ಹವೆಂದು ಸಾಬೀತಾದರೆ ಮಾತ್ರ ಅದನ್ನು ಅಂಗೀಕರಿಸುವನು ಇಲ್ಲದಿದ್ದರೆ ಬಿಟ್ಟುಬಿಡುವನು. ಆದರೆ ಪವಿತ್ರ ಕುರ್‌ಆನಿನ ಸ್ಥಿತಿ ಇದಲ್ಲ. ಅದನ್ನು ನಂಬಬೇಕಾದರೆ ಹದಿನಾಲ್ಕು ಶತಮಾನಗಳ ಹಿಂದೆ ಪ್ರವಾದಿ ಮುಹಮ್ಮದ್‌ರಿಂದ(ಸ) ಸಂಭವಿಸಿದ ಪವಾಡವನ್ನು ನೋಡಬೇಕಾಗಿಲ್ಲ. ಕುರ್‌ಆನ್ ಸ್ವಯಂ ಒಂದು ಪವಾಡ ವಾಗಿದೆ. ಅನುಭವಿಸಿದ್ದ ಮತ್ತು ತಾತ್ಕಾಲಿಕ ಪವಾಡವಲ್ಲ. ಶುದ್ಧ ವೈಚಾರಿಕ ಪವಾಡ ವಾಗಿದೆ. ಎಲ್ಲ ಕಾಲದ ಜನತೆಯ ಮುಂದೆ ಒಂದು ವಾಸ್ತವಿಕತೆಯ ರೂಪದಲ್ಲಿ ಬರುವ ಪವಾಡ. ಅದು ಮಾನವಕುಲದ ಪ್ರತಿಯೊಬ್ಬ ವ್ಯಕ್ತಿಗೆ ಚಿಂತನೆಯ ಆಹ್ವಾನ ನೀಡುತ್ತದೆ. ಈ ಪರಿಸ್ಥಿತಿಯ ಕುರಿತೇ ಪ್ರವಾದಿ(ಸ) ಈ ರೀತಿ ಹೇಳಿರುವರು:

"ಪ್ರತಿಯೊಬ್ಬ ಪ್ರವಾದಿಗೂ ನಿರ್ದಿಷ್ಟ ಪವಾಡಗಳು ನೀಡಲ್ಪಟ್ಟಿವೆ. ಅವನ್ನು ನೋಡಿ ಜನರು ವಿಶ್ವಾಸವಿಡಬಹುದಾಗಿತ್ತು. ನನಗೆ ನೀಡಲ್ಪಟ್ಟ (ಅತ್ಯಂತ ಮಹತ್ವಪೂರ್ಣ) ಪವಾಡವು ಈ ಕುರ್‌ಆನ್ ಆಗಿದೆ. ಅದನ್ನು ಅಲ್ಲಾಹನು ನನ್ನೆಡೆಗೆ ಅವತೀರ್ಣಗೊಳಿಸಿರುವನು."

(ಬುಖಾರಿ-ಫಝಾಇಲುಲ್ ಕುರ್‌ಆನ್)

ತಮ್ಮ ಈ ವಚನದಲ್ಲಿ ಪ್ರವಾದಿ ಮುಹಮ್ಮದ್(ಸ) ಪವಿತ್ರ ಕುರ್‌ಆನನ್ನು ತಮ್ಮ ಸಮಗ್ರ ಪವಾಡ'ವೆಂದು ಸಾರಿದ್ದಾರೆ. ವಸ್ತುತಃ ಪ್ರವಾದಿವರ್ಯರಿಗೆ(ಸ) ಪಂಚೇಂದ್ರಿಯಗಳಿಗೆ ನಿಲುಕುವ ಅನೇಕ ಪವಾಡಗಳೂ ನೀಡಲ್ಪಟ್ಟಿದ್ದುವು. ಆದ್ದರಿಂದ ಪ್ರವಾದಿಯವರ(ಸ) ಈ ವಚನದ ತಾತ್ಪರ್ಯವೇನೆಂದರೆ ಅವರ ವಾಸ್ತವಿಕ ಹಾಗೂ ಅತಿದೊಡ್ಡ ಪವಾಡ ಕುರ್‌ಆನ್ ಮಾತ್ರವಾಗಿದೆ. ಅದಕ್ಕೆ ಹೋಲಿಸಿದರೆ ಇತರ ಪವಾಡಗಳಿಗೆ ಅಷ್ಟೊಂದು ಮಹತ್ವ ಇಲ್ಲ. ಕುರ್‌ಆನ್ ಕೂಡಾ ಈ ವಾಸ್ತವಿಕತೆಯ ಕಡೆಗೆ ಸೂಚನೆ ನೀಡಿದೆ. ಕಣ್ಣಿಗೆ ಕಾಣುವ ಪವಾಡ ತೋರಿಸಬೇಕೆಂದು ಕುರೈಶ್ ಸರದಾರರು ಪಟ್ಟು ಹಿಡಿದಾಗ ಅದನ್ನು ಉಲ್ಲೇಖಿಸುತ್ತಾ ಒಂದೆಡೆ ಹೀಗೆ ಹೇಳಿದೆ:

"ನಾವು ಇವರಿಗೆ ಓದಿ ಹೇಳಲಾಗುತ್ತಿರುವ ಗ್ರಂಥವನ್ನು ನಿಮ್ಮ ಮೇಲೆ ಅವತೀರ್ಣಗೊಳಿಸಿರುವುದು ಇವರಿಗೆ (ನಿದರ್ಶನಕ್ಕೆ) ಸಾಕಾಗದೇ?"

(ಅಲ್ ಅನ್‌ಕಬೂತ್: 51)

ಕುರ್‌ಆನನ್ನು ಇತರ ಗ್ರಂಥಗಳಿಂದ ಪ್ರತ್ಯೇಕಿಸುವ ಅದರ ವೈಶಿಷ್ಟ್ಯಗಳೂ ಮಹತ್ವಗಳೂ ನಮ್ಮ ಮುಂದೆ ಬಂದಾಯಿತು. ಇವು ಬೇರೆ ಬೇರೆ ಮತ್ತು ಪರಸ್ಪರ ಸಂಬಂಧವಿಲ್ಲದ ವೈಶಿಷ್ಟ್ಯಗಳೇನಲ್ಲ. ಇವುಗಳ ಮಧ್ಯೆ ಆಳವಾದ ಸಹಜ ಸಂಬಂಧವಿದೆ. ಇವೆಲ್ಲವೂ ಒಂದೇ ಮಹಾನ್ ವಾಸ್ತವಿಕತೆಯ ಬೇರೆ ಬೇರೆ ಬೇಡಿಕೆಗಳಾಗಿವೆ. ಇಡೀ ಮಾನವಕುಲಕ್ಕಾಗಿ ಬಂದಿರುವ ಗ್ರಂಥ, ಅಲ್ಲಾಹನ ಕೊನೆಯ ಮಾರ್ಗದರ್ಶನವಾಗಿರುವ ಗ್ರಂಥ ಎಲ್ಲ ರೀತಿಯಲ್ಲಿ ಸಮಗ್ರವಾಗಿರಬೇಕಾದುದು ಅತ್ಯಗತ್ಯ. ಹಾಗೆಯೇ ಅದು ಅಪ್ಪಟ ತಾತ್ವಿಕ

ಮತ್ತು ಅಂತಾರಾಷ್ಟ್ರೀಯ ಶೈಲಿಯನ್ನು ಹೊಂದಿರಬೇಕು. ಅದರ ನಂತರ ಹಿಂದಿನ ಎ ಗ್ರಂಥಗಳನ್ನು ಅನೂರ್ಜಿತಗೊಳಿಸುವುದಾಗಿರಬೇಕು. ಪರಲೋಕ ಮೋಕ್ಷಕ್ಕೆ ಅದ ಅನುಸರಣೆಯು ಕಡ್ಡಾಯವಾಗಬೇಕು. ಈ ಭೂಮುಖದ ಮೇಲೆ ಮನುಷ್ಯರು ಜೀವಿಸಿರು ತನಕ ಅದನ್ನು ಪೂರ್ಣ ಸುರಕ್ಷಿತವಾಗಿ ಇಡಬೇಕು ಮತ್ತು ಕಡೆಯದಾಗಿ ಅದು ದೈ ಗ್ರಂಥವಾಗಿದೆ ಎಂಬ ಪುರಾವೆಯೂ ಸತ್ಯಪೂರ್ಣ ಮತ್ತು ಶಾಶ್ವತ ಸ್ವರೂಪದ ಆಗಿರಬೇಕು. ಇದರಿಂದ ತಾನು ದೇವಗ್ರಂಥವೆಂಬ ಕುರ್‌ಆನಿನ ಘೋಷಣೆಯ ಅಂಗೀಕರಿಸುವ ಮೊದಲು ಯಾವನಾದರೂ ಆ ಪವಾಡವನ್ನು ಕಂಡುಕೊಳ್ಳಬಹುದು ಮ ಆ ಬಗ್ಗೆ ಪೂರ್ಣ ಸಂತೃಪ್ತಿಯನ್ನು ಹೊಂದಬಹುದು.

## ಕುರ್‌ಆನ್ ಅಧ್ಯಯನದ ಹೊಣೆ

ಮೇಲಿನ ಚರ್ಚೆಯು ಕುರ್‌ಆನಿನ ಅವತರಣವನ್ನು ಜಗತ್ತಿನ ಅತ್ಯಂತ ಮಹತ್ವ ಘಟನೆ ಹಾಗೂ ಮಾನವಕುಲದ ಅತ್ಯಂತ ಪ್ರಮುಖ ವಿಷಯವಾಗಿ ಮಾಡುತ್ತ ಎಂಬುದು ಸಂದೇಹಾತೀತವಾಗಿ ತಿಳಿದುಬಂತು. ಅದು ಮಾನವಕುಲದ ಪ್ರತಿಯೊ ಸದಸ್ಯನಿಗೆ ಕುರ್‌ಆನ್ ಅಧ್ಯಯನದ ಬಗ್ಗೆ ಅನಾಸ್ಥೆ ವಹಿಸಬಾರದೆಂದು ಎಚ್ಚರಿಸುತ್ತ ಅದರ ಅಧ್ಯಯನವು ತನ್ನ ಆದ್ಯ ಕರ್ತವ್ಯವೆಂಬುದನ್ನು ಮನುಷ್ಯನಿಗೆ ತಿಳಿಸುತ್ತದೆ. ಮುಸ್ಲಿ ಆಗಿದ್ದು ಕುರ್‌ಆನಿನ ಈ ಸ್ಥಾನಮಾನವನ್ನು ಒಪ್ಪುವವರ ಮಟ್ಟಿಗೆ ಅದರ ಆಜ್ಞೆಗಳನ ನಿರ್ದೇಶಗಳನ್ನೂ ತಿಳಿಯುವುದು. ಅವುಗಳನ್ನು ದೃಷ್ಟಿಯಲ್ಲಿರಿಸಿ ಮನಃಪೂರ್ವಕ ಪಾಲಿಸುವ ಅವರ ಹೊಣೆಯಾಗಿದೆ. ಮುಸ್ಲಿಮೇತರರಾಗಿದ್ದು ಕುರ್‌ಆನಿನ ಮೇಲೆ ವಿಶ್ವಾಸ ಇಡದವ ಅದರ ವಾಸ್ತವಿಕ ನೆಲೆಯ ಬಗ್ಗೆ ಪ್ರಾಮಾಣಿಕವಾದ ಸಂಶೋಧನೆ ನಡೆಸಬೇ ಮುಸ್ಲಿಮೇತರರಾಗಿರುವುದೆಂದರೆ ಕುರ್‌ಆನಿನ ಬಗ್ಗೆ ಯಾವುದೇ ಸಂಬಂಧ ಇರಿ ಇರುವುದು ಎಂದರ್ಥವಲ್ಲ. ಒಂದು ವೇಳೆ ಕುರ್‌ಆನ್ ತನ್ನನ್ನು ಒಂದು ಸಾಮಾ ದೇವಗ್ರಂಥವೆಂದು ಸಾರುತ್ತಿದ್ದರೆ ಹಾಗೆ ಅರ್ಥ ಮಾಡಬಹುದಾಗಿತ್ತು. ಏಕೆಂದರೆ ಪರಿಸ್ಥಿತಿಯಲ್ಲಿ ಇತರ ದೈವಿಕ ಗ್ರಂಥಗಳ ಅನುಯಾಯಿಗಳು ಇದರ ಬಗ್ಗೆ ಸಂಶೋ ನಡೆಸುವ ಅಗತ್ಯವೇ ಇರಲಿಲ್ಲ. ಆದರೆ ಅದು ತನ್ನ ಕುರಿತು ಸಂಪೂರ್ಣ ಮಾನವಕು ಅವತರಿಸಲ್ಪಟ್ಟ ದೇವಗ್ರಂಥವೆಂದು ಸಾರಿರುವಾಗ; ಅದರ ಬಳಿಕ ಹಿಂದಿನ ಎ ದೇವಗ್ರಂಥಗಳೂ ಅಸಿಂಧುವಾಗಿರುವಾಗ ಮತ್ತು ಪರಲೋಕದ ಮೋಕ್ಷವು ಸಂಪೂರ್ಣ ಅದರ ಅನುಸರಣೆಯನ್ನು ಅವಲಂಬಿಸಿರುವಾಗ ವಿಷಯ ಬಹಳ ಗಂಭೀರವಾಗುತ್ತ ಯಾವನೇ ಮುಸ್ಲಿಮೇತರನಿಗೆ ಈ ಕುರ್‌ಆನನ್ನು ನಿರ್ಲಕ್ಷಿಸುವ ಔಚಿತ್ಯವೇ ಇಲ್ಲ. ಹ ಮಾಡಿದರೆ ಅವನು ತನ್ನ ಅತ್ಯುತ್ತಮ ಹಿತಗಳ ಮೇಲೆ ಅನ್ಯಾಯ ಮಾಡಿದಂತಾಗುತ್ತ ಅದು ಅತ್ಯಂತ ಹೊಣೆಗೇಡಿತನದ ಕೆಲಸವಾಗಿದೆ. ಏಕೆಂದರೆ ಅವನು ನಡೆಸುತ್ತಿ ಜೀವನಯಾತ್ರೆ ಕುರ್‌ಆನಿನ ಮಾರ್ಗದರ್ಶನದಲ್ಲಿ ಮಾತ್ರ ನೈಜ ಗುರಿ ತಲುಪೀತೆಂದು ಅ

ಸಾರಿ ಹೇಳುತ್ತದೆ. ಆದರೆ ಅವನು ಅದರ ವಾಣಿಯನ್ನು ಕೇಳುವ ಮತ್ತು ಅದರ ವಾಸ್ತವಿಕತೆಯನ್ನು ಅರಿಯುವ ಗೊಡವೆಗೇ ಹೋಗುವುದಿಲ್ಲ. ಕುರ್‌ಆನಿನ ಈ ಘೋಷಣೆಯು ಅವನ ಬಳಿ ಕೇವಲ ಒಂದು ವಾದವಾಗಿದೆ ಎಂಬುದು ನಿಜ. ಎಲ್ಲ ವಾದಗಳೂ ಸತ್ಯವಾಗಿರಬೇಕೆಂದೇನಿಲ್ಲ. ಆದರೆ ಪ್ರತಿಯೊಂದು ವಾದವೂ ಅಸತ್ಯವಾಗಿರಬೇಕೆಂದೂ ಇಲ್ಲವಲ್ಲಾ! ಆದುದರಿಂದ ಯಾವುದಾದರೂ ಗಂಭೀರ ವಾದದ ಕುರಿತು ಹೊಣೆಯರಿತ ಸಂಶೋಧನೆಯಿಂದ ಅದು ಸುಳ್ಳೆಂದು ಖಾತ್ರಿಯಾಗುವ ತನಕ ಅದನ್ನು ಸತ್ಯವೆಂದು ಒಪ್ಪದಿದ್ದರೂ ಸುಳ್ಳೆಂದು ಸಾರುವ ಹಕ್ಕು ಅವನಿಗಿರುವುದಿಲ್ಲ. ಕುರ್‌ಆನಿನ ಈ ವಾದವು ಗಂಭೀರ ಮತ್ತು ಚಿಂತನಾರ್ಹವೆಂಬುದು ಸೂರ್ಯ ಪ್ರಕಾಶದಷ್ಟು ಸ್ಪಷ್ಟವಾಗಿದೆ. ಒಂದು ವೇಳೆ ಈ ಗ್ರಂಥದಲ್ಲಿ ವಿವರಿಸಲಾಗಿರುವ ಪುರಾವೆಗಳು ಅವನ ಮುಂದೆ ಬಾರದೆ ಇದ್ದರೂ ಅವನ ಕಣ್ಣಿಗೆ ಕುರ್‌ಆನಿನ ಪ್ರತ್ಯಕ್ಷ ಪುರಾವೆ ಕಾಣದೆ ಹೋಯಿತೆ, ಕೋಟಿಗಟ್ಟಲೆ ಜನರು ಕುರ್‌ಆನಿನ ಈ ವಾದವನ್ನು ಅಂಗೀಕರಿಸುತ್ತ ಬಂದಿರುವರು. ಅದನ್ನು ಅನುಸರಿಸಿ ಜೀವಿಸಿದಾಗಲೆಲ್ಲಾ ವ್ಯಕ್ತಿ, ಸಮಾಜ ಮತ್ತು ರಾಷ್ಟ್ರ, ಒಟ್ಟಿನಲ್ಲಿ ಎಲ್ಲ ರೀತಿಯ ಜೀವನದ ಒಳಿತು ಮತ್ತು ದೇವಭಕ್ತಿಯು ಹಾಸು ಹೊಕ್ಕಾಯಿತು. ಇದೊಂದು ಬಹಿರಂಗ ಘಟನೆಯಾಗಿದೆ. ಇದನ್ನು ತಿಳಿಯಲು ಯಾವುದೇ ಪ್ರಯತ್ನದ ಅಗತ್ಯವಿಲ್ಲ. ಆದ್ದರಿಂದ ಕುರ್‌ಆನಿನ ವಾದವನ್ನು ಗಂಭೀರ ಮತ್ತು ಚಿಂತನಾರ್ಹವೆಂದು ಪರಿಗಣಿಸದಿರುವುದು ದೊಡ್ಡ ಹಠಮಾರಿತನ ಮತ್ತು ಅವೈಚಾರಿಕ ನಿಲುವಾಗಿದೆ.

# ಅವತರಣ ಮತ್ತು ಕ್ರೋಢೀಕರಣ

## ಅವತರಣದ ಕಾಲ

ಹ. ಮುಹಮ್ಮದ್(ಸ) ಅವರ ಮೇಲೆ ಕುರ್‌ಆನ್ ಅವತರಣದ ಆರಂ ರಮಝಾನ್ ತಿಂಗಳಲ್ಲಾಯಿತು. ಪವಿತ್ರ ಕುರ್‌ಆನಿನಲ್ಲೇ ಇದರ ಸ್ಪಷ್ಟ ಉಲ್ಲೇಖವಿ

"'ಕುರ್‌ಆನ್' ಅವತೀರ್ಣಗೊಂಡ ತಿಂಗಳು 'ರಮಝಾನ್' ಆಗಿರುತ್ತದೆ."

(ಪವಿತ್ರ ಕುರ್‌ಆನ್, 2:18

ಸೌರಮಾನ ಕಾಲಗಣನೆಯ ಪ್ರಕಾರ, ಇದು ಹಿ.ಶ. ಆಗಸ್ಟ್ 610 ಆಗುತ್ತ ಪ್ರಥಮ 'ವಹೀ' (ದೇವವಾಣಿ) ಅವತೀರ್ಣವಾದಾಗ ಅವರು ಮಕ್ಕಾದ ಹೊರಗಿನ ಪರ್ವ ಶ್ರೇಣಿಯಲ್ಲಿ ಹಿರಾ ಎಂಬ ಒಂದು ಗುಹೆಯಲ್ಲಿ ಧ್ಯಾನಮಗ್ನರಾಗಿ ಇದ್ದರು. ಪ್ರಥ ವಹೀ (ದೇವವಾಣಿ) ಈ ಕೆಳಗಿನ ವಾಕ್ಯಗಳನ್ನೊಳಗೊಂಡಿತು.

"(ಸಂದೇಶವಾಹಕರೇ) ಓದಿರಿ, ನಿಮ್ಮನ್ನು ಸೃಷ್ಟಿಸಿದ ನಿಮ್ಮ ಪ್ರಭುವಿನ ನಾಮದೊಂದಿ ಅವನು, ಹೆಪ್ಪುಗಟ್ಟಿದ ರಕ್ತದ ಒಂದು ಪಿಂಡದಿಂದ ಮಾನವನನ್ನು ಸೃಷ್ಟಿಸಿದನು. ಓದಿ ಮತ್ತು ನಿಮ್ಮ ಪ್ರಭು ಮಹಾ ಉದಾರಿ, ಅವನು ಲೇಖನಿಯ ಮೂಲಕ ವಿದ್ಯೆ ಕಲಿಸಿದನ ಮಾನವನು ತಿಳಿದಿರದಂತಹ ಜ್ಞಾನವನ್ನು ಅವನಿಗೆ ದಯಪಾಲಿಸಿದನು."

(ಪವಿತ್ರ ಕುರ್‌ಆನ್, 96:1-

ಆಗ ಅವರ ಪ್ರಾಯ ಸೌರಮಾನ ಕಾಲಗಣನೆಯ ಪ್ರಕಾರ 39 ವರ್ಷ ಮೂರೂವ ತಿಂಗಳು ಮತ್ತು ಚಾಂದ್ರಮಾನ ಕಾಲಗಣನೆಯ ಪ್ರಕಾರ 40 ವರ್ಷ 6 ತಿಂಗಳಾಗಿತ್ತು ದಿವ್ಯವಾಣಿ ಅವತರಣದ ಈ ಶುಭ ಪರಂಪರೆಯು 23 ವರ್ಷದಷ್ಟು ದೀರ್ಘ ಕಾ ಜಾರಿಯಲ್ಲಿತ್ತು. ಕೊನೆಯ ವಹೀ ಸೂರಃ ತೌಬಾದ ಕೊನೆಯ ಎರಡು ಸೂಕ್ತಗಳನ ಒಳಗೊಂಡಿತ್ತು. ಅದು ಕ್ರಿ.ಶ. 633ರಲ್ಲಿ ಅವರ ನಿಧನದ ಕೆಲವು ದಿನ ಮುಂ ಅವತೀರ್ಣವಾಗಿತ್ತು. ಈ ಅವಧಿಯಲ್ಲಿ ಅರ್ಧಕ್ಕಿಂತ ಹೆಚ್ಚು ಅಂದರೆ ಸುಮಾರು ಹನ್ನೆರಡುವ ವರ್ಷಗಳು ಮಕ್ಕಾದಲ್ಲಿ ಕಳೆಯಿತು. ಉಳಿದ ಹತ್ತು ವರ್ಷ ಮದೀನಾದಲ್ಲಿ ಕಳೆಯಿತು. ಮಕ ಜೀವನ ಕಾಲದಲ್ಲಿ ಅವತೀರ್ಣವಾದ ಅಧ್ಯಾಯಗಳ ಸಂಖ್ಯೆ 90 ಆಗಿತ್ತು. ಅದು ಗಾತ್ರದ

ುರ್‌ಆನಿನ ಮೂರನೇ ಎರಡರಷ್ಟಾಗುತ್ತದೆ. ಮದೀನಾದಲ್ಲಿ ಅವತೀರ್ಣಗೊಂಡ ಅಧ್ಯಾಯಗಳ ಂಖ್ಯೆ 24. ಅದು ಕುರ್‌ಆನಿನ ಸುಮಾರು ಮೂರನೇ ಒಂದರಷ್ಟಾಗುತ್ತದೆ. ಈ ರೀತಿ ಒಟ್ಟು ಧ್ಯಾಯಗಳ ಸಂಖ್ಯೆ 114 ಆಗಿದೆ. ಈ 114 ಅಧ್ಯಾಯಗಳಲ್ಲಿ ಒಟ್ಟು 6236 ಸೂಕ್ತಗಳು 7,933 ಪದಗಳು ಹಾಗೂ 3,32,015 ಅಕ್ಷರಗಳಿವೆ.

## ವತರಣದ ಸ್ಥಿತಿ

ಸಂಪೂರ್ಣ ಕುರ್‌ಆನ್ 23 ವರ್ಷಗಳ ದೀರ್ಘ ಅವಧಿಯಲ್ಲಿ ಅವತೀರ್ಣ ೊಂಡಿದೆ. ಅದು ಒಮ್ಮೆಲೇ ಅವತೀರ್ಣಗೊಂಡಿದೆ ಎಂದು ಭಾವಿಸಲು ಯಾವ ವಕಾಶವೂ ಇಲ್ಲ. ಅಂತೆಯೇ ಅದು ಇತರ ಗ್ರಂಥಗಳ ಹಾಗೆ ಒಂದು ವಿಷಯದ ಬಗ್ಗೆ ಾಹಿತ್ಯಿಕ ಶೈಲಿಯಲ್ಲಿ ಚರ್ಚಿಸುವ ಗ್ರಂಥವಾಗಿದೆ ಎಂದು ಭಾವಿಸಲಿಕ್ಕೂ ಅವಕಾಶವಿಲ್ಲ. ದು ತನ್ನ ಕುರಿತು ಸ್ವಯಂ ಈ ರೀತಿ ಹೇಳುತ್ತದೆ:

"ಸತ್ಯನಿಷೇಧಿಗಳು, "ಇವನ ಮೇಲೆ ಇಡೀ ಕುರ್‌ಆನ್ ಏಕಕಾಲದಲ್ಲಿ ಏಕೆ ಅವತೀರ್ಣ ೊಳಿಸಲ್ಪಡಲಿಲ್ಲ?" ಎಂದು ಕೇಳುತ್ತಾರೆ. ಇದನ್ನು ನಿಮಗೆ ಸರಿಯಾಗಿ ಮನದಟ್ಟು ಾಡಿಕೊಡಲಿಕ್ಕಾಗಿ ಹೀಗೆ ಮಾಡಲಾಗಿದೆ ಮತ್ತು (ಈ ಉದ್ದೇಶಕ್ಕಾಗಿಯೇ) ನಾವು ಇದಕ್ಕೆ ಂದು ನಿರ್ದಿಷ್ಟ ಕ್ರಮಕ್ಕನುಸಾರ ಬೇರೆ ಬೇರೆ ಭಾಗಗಳ ರೂಪ ಕೊಟ್ಟಿದ್ದೇವೆ."

(ಪವಿತ್ರ ಕುರ್‌ಆನ್, 25:32)

ಒಟ್ಟಿನಲ್ಲಿ ಪವಿತ್ರ ಕುರ್‌ಆನ್ ಒಮ್ಮೆಲೇ ಪೂರ್ಣವಾಗಿ ಅವತೀರ್ಣಗೊಂಡಿಲ್ಲ. ದು ಸ್ವಲ್ಪ ಸ್ವಲ್ಪವಾಗಿ ಅವತೀರ್ಣಗೊಂಡಿದೆ. ಕೆಲವೊಮ್ಮೆ ಕೆಲವು ಸೂಕ್ತಗಳು ಮಾತ್ರ ವತೀರ್ಣಗೊಂಡವು. ಮತ್ತೆ ಕೆಲವೊಮ್ಮೆ ಒಂದು ಪೂರ್ಣ ಅಧ್ಯಾಯ ಅವತೀರ್ಣ ೊಂಡಿತು. ಎರಡು ಅವತರಣಗಳ ನಡುವೆ ಒಮ್ಮೊಮ್ಮೆ ಕೇವಲ ಕೆಲವು ದಿನಗಳ ಂತರವಿರುತ್ತಿತ್ತು. ಕೆಲವೊಮ್ಮೆ ವಾರಗಳ ಮತ್ತು ತಿಂಗಳುಗಳ ಅವಧಿಯಲ್ಲಿ ಅದು ವತೀರ್ಣಗೊಳ್ಳುತ್ತಿತ್ತು. ಕಾರಣವೇನೆಂದರೆ ಪವಿತ್ರ ಕುರ್‌ಆನ್ ಕೇವಲ ತಾತ್ವಿಕ ಗ್ರಂಥ ಾಗಿರದೆ ವ್ಯಾವಹಾರಿಕ ಮಾರ್ಗದರ್ಶನವೂ ಆಗಿದೆ. ಅದರ ಅವತರಣವು ಒಂದು ಂದೇಶದ ಜೊತೆಗೆ ಆಗಿದೆ. ವ್ಯಾವಹಾರಿಕ ಮತ್ತು ಪ್ರಗತಿಪರ ಸಂದೇಶ. ಅದು ಒಂದು ಂದುವಿನಿಂದ ಆರಂಭವಾಯಿತು. ಮುಂದುವರಿಯುತ್ತಾ ವಿಭಿನ್ನ ಪರಿಸ್ಥಿತಿಗಳಲ್ಲಿ ಮತ್ತು ಟ್ಟಗಳಲ್ಲಿ ವಿಜಯದ ಗುರಿಯನ್ನು ತಲುಪಿತು. ಇಂತಹ ಸಂದೇಶದ ಸಹಜ ಬೇಡಿಕೆ ಂತೆ ಕುರ್‌ಆನ್ ಹಂತ ಹಂತವಾಗಿ ಇಳಿಯಿತು. ದೇವವಾಣಿಯು ಸಂದೇಶ ಪ್ರಚಾರದ ಂತ ಮತ್ತು ಅದರ ಬೇಡಿಕೆಗಳನ್ನು ಮುಂದಿರಿಸಿಯೇ ಅವತೀರ್ಣವಾಗುತ್ತಿತ್ತು.

ಈ ವಿಷಯವನ್ನು ಚೆನ್ನಾಗಿ ತಿಳಿಯಲು ಈ ಸಂದೇಶ ಪ್ರಚಾರದ ಸಂಕ್ಷಿಪ್ತ ಸ್ಥಿತಿ ತ್ತು ಅದರ ವ್ಯಾವಹಾರಿಕ ರೂಪವನ್ನು ಮುಂದಿರಿಸಬೇಕು.

ಪ್ರವಾದಿ ಮುಹಮ್ಮದ್(ಸ) ತಮ್ಮ ಪ್ರವಾದಿತ್ವದ ಘೋಷಣೆ ಮಾಡುತ್ತಲೇ ಮ ಏಕನೂ ಭಾಗೀದಾರನಿಲ್ಲದವನೂ ಆದ ಅಲ್ಲಾಹನ ದಾಸ್ಯದ ಕಡೆಗೆ ಕರೆ ನೀಡುತ್ತಲೇ ಮಕ್ಕಾ ಬಹುದೇವಾರಾಧಕ ಮತ್ತು ಮೂರ್ತಿಪೂಜಕ ಸಮಾಜದಲ್ಲಿ ಕೋಲಾಹಲವೆದ್ದಿತು. ಕೇ ನಿರಾಕರಣೆ ಮತ್ತು ಭಿನ್ನಮತ ಮಾತ್ರವಲ್ಲ ಕೋಪಾಟೋಪಗಳ ಅಗ್ನಿಯೇ ಉರಿದೆದ್ದಿ ಕೇವಲ ಕೆಲವೇ ಮಂದಿ ಮಾತ್ರ ಈ ಸಂದೇಶ ಪ್ರಚಾರದ ಆರಂಭದಲ್ಲಿ ಅದರ ಗಂಭೀರವಾಗಿ ಚಿಂತಿಸಿ ಅದರ ಮೇಲೆ ವಿಶ್ವಾಸವಿಟ್ಟರು. ಉಳಿದಂತೆ ಶತ್ರುತ್ವ ಮ ಭಿನ್ನಮತವೇ ವ್ಯಾಪಕವಾಗಿತ್ತು. ಈ ಪ್ರತಿಕ್ರಿಯೆಯು ಅನಿರೀಕ್ಷಿತವಾಗಿರಲಿಲ್ಲ. ಅದ ಕಂಡು ಪ್ರವಾದಿ ಮುಹಮ್ಮದ್(ಸ) ಹೆದರಿ ಸುಮ್ಮನಿರುವ ಪ್ರಮೇಯವೂ ಇರಲಿ ಆದ್ದರಿಂದ ಎಲ್ಲ ರೀತಿಯ ವಿರೋಧ ಮತ್ತು ಪ್ರತಿಕೂಲ ವಾತಾವರಣದ ಹೊರತಾಗಿಯ ಅವರು ತಮ್ಮ ಸಂದೇಶ ಪ್ರಚಾರ ಕಾರ್ಯವನ್ನು ನಿರಂತರ ಜಾರಿಯಲ್ಲಿಟ್ಟರು. ಕೇಳ ಮತ್ತು ತಿಳಿಯಲು ಸಿದ್ಧರಿಲ್ಲದ ಜನರನ್ನೂ ನಿರಂತರ ಸಂಪರ್ಕಿಸಿ ಕೇಳಿಸುವ ಮ ತಿಳಿಸುವ ಎಲ್ಲ ಪ್ರಯತ್ನಗಳನ್ನು ಮಾಡುತ್ತಿದ್ದರು. ಇದರ ಪರಿಣಾಮವಾಗಿ ಜನ ಒಬ್ಬೊಬ್ಬರಾಗಿ ಇಸ್ಲಾಮ್ ಧರ್ಮದ ದೀಕ್ಷೆ ತೊಡುತ್ತಲೇ ಹೋದರು. ಆದರೆ ಇಸ್ಲಾ ಧರ್ಮ ಸ್ವೀಕರಿಸಿದವರ ಸಂಖ್ಯೆ ಏರುತ್ತ ಹೋದಂತೆ ವಿರೋಧದ ಕೋಪಾಟೋಪಗ ಕಠೋರವಾಗುತ್ತ ಸಾಗಿದುವು. ಅದು ಬೇಗನೇ ಅಕ್ರಮ ದೌರ್ಜನ್ಯಗಳ ರೂಪ ತಾಳಿ ಕೊನೆಗೆ ಇಸ್ಲಾಮ್ ಸ್ವೀಕರಿಸುವುದೆಂದರೆ ಸಂಕಷ್ಟಗಳಿಗೆ ಆಹ್ವಾನ ನೀಡುವಂತಾಯಿ ವಿರೋಧಿಗಳ ಬಳಿ ಸಂಪತ್ತು, ಶಕ್ತಿ, ಪ್ರಭಾವ, ಅಧಿಕಾರ ಮತ್ತು ಸಂಖ್ಯಾಬಲ ಎಲ್ಲ ಇತ್ತು. ಅದಕ್ಕೆ ಹೋಲಿಸಿದರೆ ಸತ್ಯವಿಶ್ವಾಸಿಗಳ ಬಳಿ ಏನೂ ಇರಲಿಲ್ಲ. ಬಾಹ್ಯ ನೋ ಬಲಹೀನತೆ ಮತ್ತು ಬಲಾಢ್ಯತೆಯ ಮಧ್ಯೆ ಸಂಘರ್ಷವೇರ್ಪಟ್ಟಿತ್ತು. ಇಂತಹ ಪರಿಸ್ಥಿತಿಯ ಪ್ರವಾದಿ(ಸ) ಮತ್ತವರ ಅನುಯಾಯಿಗಳ ಸ್ಥಿತಿಯು ಹೇಗಿತ್ತೆಂಬುದನ್ನು ಊಹಿಸಿಕೊ ಬಹುದು. ಬಹಿರಂಗವಾಗಿ ದೇವನ ಏಕತೆಯನ್ನು ಸಾರುವಂತಿರಲಿಲ್ಲ. ನಮಾಝ್ ಮಾ ವಂತಿರಲಿಲ್ಲ. ಸಂದೇಶ ಪ್ರಚಾರ ಕಾರ್ಯವು ಇಂತಹ ಸ್ಥಿತಿಯಲ್ಲಿ ಸಂಘರ್ಷ ಮಾಡು ಮುಂದುವರಿಯುತ್ತದೆ. ಹತ್ತು ಹನ್ನೆರಡು ವರ್ಷಗಳಾಗುವಾಗ ಅದು ಒಂದು ನಿರ್ಣಾ ಘಟ್ಟವನ್ನು ತಲುಪುತ್ತದೆ. ಕುರೈಶರ ಎಲ್ಲ ಗೋತ್ರಗಳೂ ಸೇರಿ ಈ ಹೊಸ ಆಂದೋಲನವ ಮುಗಿಸಿ ಬಿಡಲು ನಿರ್ಧರಿಸುತ್ತಾರೆ. ಹಝ್ರತ್ ಮುಹಮ್ಮದ್‌ರನ್ನು(ಸ) ಕೊಂದು ಅದ ಶಾಶ್ವತವಾಗಿ ಕೊನೆಗೊಳಿಸಲು ಪಣತೊಡುತ್ತಾರೆ. ಈ ಪರಿಸ್ಥಿತಿ ಬಂದೊದಗಿದಾಗ ಪ್ರವ ಮತ್ತವರ ಅನುಯಾಯಿಗಳಿಗೆ ಮಕ್ಕಾ ಬಿಟ್ಟು ಮದೀನಾಕ್ಕೆ ವಲಸೆ ಹೋಗುವ ಅಲ್ಲಾಹನ ಆಜ್ಞೆಯಾಯಿತು. ಸಂಪೂರ್ಣ ಅರಬ್ ದೇಶದಲ್ಲಿ ಮಕ್ಕಾ ಬಿಟ್ಟರೆ ಮದೀನಾದ ಮಾತ್ರ ಈ ಸಂದೇಶ ತಲುಪಿತ್ತು. ಅಲ್ಲಿ ಗಣನೀಯ ಸಂಖ್ಯೆಯಲ್ಲಿ ಜನರು ಅದರ ಮ ವಿಶ್ವಾಸವಿಟ್ಟಿದ್ದರು. ಆದ್ದರಿಂದ ಪ್ರವಾದಿ(ಸ) ಮತ್ತವರ ಸಂಗಾತಿಗಳು ತಮ್ಮ ಮನೆಮ ಗಳನ್ನು ತೊರೆದು ಮದೀನಾ ತಲುಪಿದರು. ಅಂದಿನಿಂದ ಇದುವೇ ಸಂದೇಶ ಪ್ರಚಾ

ಂದ್ರವಾಯಿತು. ಇಲ್ಲಿ ಸತ್ಯವಿಶ್ವಾಸಿಗಳು ಮಕ್ಕಾದಂತೆ ಮರ್ದಿತರೂ ಕ್ರೋಧಕ್ಕೆ ಪಾತ್ರರೂ ಗಿರಲಿಲ್ಲ. ಅವರಿಗೆ ಇಲ್ಲಿ ಒಂದು ಸ್ವತಂತ್ರ ವಾತಾವರಣ ಲಭ್ಯವಾಯಿತು. ಅಧರಲ್ಲಿ ಫರಿಗೆ ತಮ್ಮ ಜೀವನ ವ್ಯವಹಾರಗಳನ್ನು ನಡೆಸುವ ಪೂರ್ಣ ಸ್ವಾತಂತ್ರ್ಯವಿತ್ತು. ಬೇರೆ ಾತುಗಳಲ್ಲಿ ಹೇಳುವುದಾದರೆ ಅವರಿಗೆ ಅವರದೇ ಆದ ಒಂದು ರಾಷ್ಟ್ರ ಅಸ್ತಿತ್ವಕ್ಕೆ ಂದಿತ್ತು. ಜೊತೆಗೆ ಸಂದೇಶ ಪ್ರಚಾರದ ವಲಯವೂ ವಿಸ್ತಾರಗೊಂಡಿತು. ಮಕ್ಕಾದಲ್ಲಿ ಮ ಕೇವಲ ಬಹುದೇವ ವಿಶ್ವಾಸಿಗಳನ್ನು ಸಂಬೋಧಿಸಿತ್ತು. ಆದರೆ ಮದೀನಾದಲ್ಲಿ ಂಥದವರೂ ಆ ಸಂಬೋಧನೆಯಲ್ಲಿ ಸೇರಿಕೊಂಡರು. ಏಕೆಂದರೆ ಇಲ್ಲಿ ಅವರೂ ಣನೀಯ ಸಂಖ್ಯೆಯಲ್ಲಿ ವಾಸವಾಗಿದ್ದರು. ವಿಶ್ವವ್ಯಾಪೀ ಸಂದೇಶವೆಂಬ ನೆಲೆಯಲ್ಲಿ ಂಥದವರಿಗೆ ಸಂದೇಶ ನೀಡಬೇಕಾದುದು ಅನಿವಾರ್ಯವಾಗಿತ್ತು. ಪ್ರಾರಂಭ ದಿನಗಳಲ್ಲಿ ಂದೇಶ ಪ್ರಚಾರ ಚಟುವಟಿಕೆಗಳ ಪರಿಣಾಮ ನಿರೀಕ್ಷಿಸಿದಂತೆ ಇಲ್ಲಿಯೂ ನಿರಾಕರಣೆ ತ್ತು ಸ್ವೀಕಾರ, ವಿರೋಧ ಮತ್ತು ಅಂಗೀಕಾರ ಎರಡೂ ರೂಪದಲ್ಲಿ ಪ್ರಕಟಗೊಂಡುವು. ಂವರು ವಿಶ್ವಾಸವಿಟ್ಟರು. ಹೆಚ್ಚಿನವರು ವಿರೋಧಿಸಿದರು. ವಿಶೇಷವಾಗಿ ಯಹೂದಿಯರ ಶೇ. ಜನರು ಕೊನೆಯ ತನಕ ವಿರೋಧಿಯಾಗಿಯೇ ಉಳಿದರು. ಆದರೆ ಇಲ್ಲಿ ಸ್ಲಾಮ್ ಮತ್ತು ಕುಫ್ರ್‌ನ ಪ್ರಮಾಣವು ಮಕ್ಕಾದಂತೆ ಇರಲಿಲ್ಲ. ಆದ್ದರಿಂದ ಮಕ್ಕಾದಂತೆ ನ್ಯಾಯ, ಹಿಂಸೆ ದೌರ್ಜನ್ಯಗಳನ್ನು ನಡೆಸಲು ಕುಫ್ರ್‌ಗೆ ಇಲ್ಲಿ ಅವಕಾಶವಿರಲಿಲ್ಲ. ಇಲ್ಲಿ ಸ್ಲಾಮ್‌ಗೆ ಸಾಮಾಜಿಕ ಮತ್ತು ರಾಜಕೀಯ ಪ್ರಾಬಲ್ಯ ಲಭಿಸಿತ್ತು. ಆದ್ದರಿಂದ ವಿರೋಧಿಗಳು ಡಾ ಬಹಿರಂಗ ವಿರೋಧದ ಬದಲು ಒಳಸಂಚುಗಳ ಮಾರ್ಗವನ್ನೇ ಅವಲಂಬಿಸಿದರು. ಧೋರಣೆಯ ಪ್ರಕಾರ ಮುಸ್ಲಿಮ್ ಸಮಾಜದಲ್ಲಿ ಅನೇಕ ಕಪಟ ವಿಶ್ವಾಸಿಗಳು ನುಗ್ಗಿ ಂದರು. ಮಕ್ಕಾದಲ್ಲಾದರೆ ಕೇವಲ ಒಂದೇ ಕಡೆಯಿಂದ ವಿರೋಧವಿತ್ತು. ಆದರೆ ಇಲ್ಲಿ ರಡೂ ಕಡೆಗಳಿಂದ ವಿರೋಧವನ್ನು ಎದುರಿಸಬೇಕಾಯಿತು. ಮೊದಲನೆಯದಾಗಿ ಅದರ ಿರಂಗ ಶತ್ರುಗಳಾದ ಸತ್ಯನಿಷೇಧಿಗಳು ಮತ್ತು ಬಹುದೇವಾರಾಧಕರಿಂದ. ಎರಡನೆಯದಾಗಿ ವರ ರಹಸ್ಯ ಶತ್ರುಗಳಾದ ಕಪಟ ವಿಶ್ವಾಸಿಗಳ ಕಡೆಯಿಂದ, ಈ ರಹಸ್ಯ ಶತ್ರುಗಳು ಮನಾಫಿಕ್‌ಗಳು) ಸಂದೇಶ ಪ್ರಚಾರ ಕಾರ್ಯಕ್ಕೆ ಒಂದು ಹೊಸ ವಿಪತ್ತು ಮತ್ತು ಒಂದು ಂಖ್ಯ ಸಮಸ್ಯೆಯಾಗಿದ್ದರು. ಏಕೆಂದರೆ ಅವರು ಇಸ್ಲಾಮಿನ ಸೌಧವನ್ನು ಕೆಡವಲು ಅದನ್ನೇ ಮ್ಮ ಆಶ್ರಯವಾಗಿ ಮಾಡಿಕೊಂಡಿದ್ದರು. ಮಕ್ಕಾ ನಿವಾಸಿಗಳೂ ಕೂಡಾ ಪೀಡೆ ತೊಲಗಿತು ಂದು ಸುಮ್ಮನೆ ಕುಳಿತುಕೊಳ್ಳಲಿಲ್ಲ. ತಮ್ಮ ಇಚ್ಛೆ, ಉಪಾಯ ಮತ್ತು ಪ್ರಯತ್ನದ ರತಾಗಿಯೂ ಇಸ್ಲಾಮಿನ ಸಂದೇಶ ಪ್ರಚಾರ ಕಾರ್ಯ ಪ್ರಗತಿ ಪಥದಲ್ಲಿ ಸಾಗುತ್ತಿರು ವನ್ನು ಕಂಡು ಅವರು ಮತ್ತಷ್ಟು ಕೊರಗ ತೊಡಗಿದರು. ಸಶಸ್ತ್ರ ಆಕ್ರಮಣದ ಮೂಲಕ ವನ್ನು ಅಳಿಸಿ ಬಿಡುವ ಸನ್ನಾಹದಲ್ಲಿ ತೊಡಗಿದರು. ಮದೀನಾದ ಯಹೂದಿಗಳು ಮತ್ತು ನಾಫಿಕರು ಅವರೊಂದಿಗೆ ರಹಸ್ಯ ಒಡಂಬಡಿಕೆಗಳನ್ನು ಮಾಡಿಕೊಂಡರು. ಆದ್ದರಿಂದ

ಮದೀನಕ್ಕೆ ಬಂದು ಎರಡೇ ವರ್ಷ ಪೂರ್ತಿಯಾಗುವ ಮುಂಚೆ ಮುಸ್ಲಿಮರ ವಿರು
ಯುದ್ಧದ ಸಿದ್ಧತೆ ಮಾಡತೊಡಗಿದರು. ಈ ಪರಿಸ್ಥಿತಿಯಲ್ಲಿ ಪ್ರವಾದಿ(ಸ) ಮತ್ತು ಅ
ಅನುಯಾಯಿಗಳಿಗೆ ಮದೀನಾದಲ್ಲಿಯೂ ನೆಮ್ಮದಿ ಸಿಗಲಿಲ್ಲ. ತರುವಾಯ ಅನ
ವರ್ಷಗಳ ತನಕ ಈ ಮಕ್ಕಾ ನಿವಾಸಿಗಳು ಆಗಾಗ ಅವರ ಮೇಲೆ ಆಕ್ರಮಣ ಮಾಡುತ್ತ
ಇದ್ದರು. ಕಪಟ ವಿಶ್ವಾಸಿಗಳು ಆಂತರಿಕ ಶತ್ರುಗಳಾಗಿ ಮಾರ್ಪಟ್ಟಿದ್ದರು. ಯಹೂದಿಗ
ತಾತ್ವಿಕ ಮತ್ತು ರಾಜಕೀಯ ಒಳಸಂಚು ಮಾಡುತ್ತಲೇ ಇದ್ದರು. ಈ ರೀತಿ ಸಂದೆ
ಪ್ರಚಾರ ಕಾರ್ಯವು ಬಲವಾಗಿ ಬೇರೂರಿ ಒಂದು ಶಕ್ತಿಯಾಗಿ ಮುಂದುವರಿಯುತ್ತಿದ್ದ
ವಿರೋಧಿಗಳ ಬಣವು ದಿನದಿಂದ ದಿನಕ್ಕೆ ಶಕ್ತಿಶಾಲಿ ಯಾಗುತ್ತಿತ್ತು. ಕಟ್ಟಕಡೆಗೆ
ಸಂಘರ್ಷ ಇಸ್ಲಾಮಿನ ಪರವಾಗಿ ತನ್ನ ತೀರ್ಪು ನೀಡುತ್ತದೆ. ವಿರೋಧಿ ಶಕ್ತಿಗ
ಭಯಭೀತವಾಗುತ್ತವೆ. ಪ್ರಧಾನ ಶತ್ರುವಾದ ಮಕ್ಕಾ ನಿವಾಸಿಗಳು ಈಗ ಯುದ್ಧವನ್ನು ಬಿ
ಸಂಧಾನವನ್ನು ಮಾಡತೊಡಗುತ್ತಾರೆ. ಆದರೆ ದ್ವೇಷದ ಕಿಚ್ಚು ಇನ್ನೂ ಆರದೆ ಸಂದ
ಸಿಕ್ಕಾಗಲೆಲ್ಲಾ ಅವರು ಒಪ್ಪಂದ ಮುರಿಯುತ್ತಾರೆ. ಆ ಬಳಿಕ ಪ್ರವಾದಿ ಮುಹಮ್ಮದ್(
ತಮ್ಮ ಸಹಸ್ರಾರು ಅನುಯಾಯಿಗಳ ಜೊತೆ ಮಕ್ಕಾದೆಡೆಗೆ ತೆರಳುತ್ತಾರೆ. ಈಗ ಶತ್ರುಗ
ಅವರನ್ನು ಎದುರಿಸುವ ಧೈರ್ಯ ಬರುವುದಿಲ್ಲ. ಆದ್ದರಿಂದ ಯಾವುದೇ ಪ್ರತಿಭಟನೆ ಇಲ್ಲ
ವಿಜಯಿಯಾಗಿ ಪ್ರವಾದಿ(ಸ) ಮಕ್ಕಾ ಪ್ರವೇಶಿಸುತ್ತಾರೆ. ಸಂದೇಶ ಪ್ರಚಾರದ ಸ
ಕೇಂದ್ರವಾದ ಕಅಬಾ ಭವನವನ್ನು ಬಹುದೇವಾರಾಧನೆಯ ಎಲ್ಲಾ ಕುರುಹುಗಳಿ
ಮುಕ್ತಗೊಳಿಸುತ್ತಾರೆ. ಈ ಸ್ಪಷ್ಟ ಹಾಗೂ ಸಂಪೂರ್ಣ ವಿಜಯದ ಬಳಿಕ ಇಡೀ ಅರ
ದೇಶದಲ್ಲಿ ಇಸ್ಲಾಮ್ ಒಂದು ಮಹಾಪೂರದಂತೆ ವ್ಯಾಪಿಸುತ್ತದೆ. ಜನರು ತಂಡೋ
ತಂಡವಾಗಿ ಇಸ್ಲಾಮ್ ಸ್ವೀಕರಿಸುತ್ತಾರೆ. ಇಡೀ ದೇಶದಲ್ಲಿ ಇಸ್ಲಾಮ್ ನೈಜ ಶಕ್ತಿಯಾಗುತ್ತ
ಮುಸ್ಲಿಮ್ ಸಮಾಜವು ಎಲ್ಲ ನೆಲೆಗಳಲ್ಲೂ ಒಂದು ಸಮಗ್ರ ಸಮಾಜವಾಗಿ ಮಾರ್ಪಡುತ್ತ
ಅದು ತನಗೆ ಇಷ್ಟ ಬಂದಂತೆ ಜೀವನ ಸಾಗಿಸಲು ಪೂರ್ಣ ಸ್ವಾತಂತ್ರ್ಯ ಪಡೆಯುತ್ತ
ಯಾವ ಸಂವಿಧಾನ ಮತ್ತು ಯಾವ ಕಾನೂನು ಅದು ಬಯಸುತ್ತದೋ ಅದ
ಜಾರಿಗೊಳಿಸಬಹುದಾಗಿತ್ತು. ಯಾವುದೇ ಬಾಹ್ಯ ವಿರೋಧವು ಉಳಿದಿರಲಿಲ್ಲ. ಈ ರ
ಈ ಸಂದೇಶ ಪ್ರಚಾರ ಕಾರ್ಯವು ಅರೇಬಿಯಾದಲ್ಲಿ ತನ್ನ ಉತ್ತುಂಗಕ್ಕೇರುತ್ತದೆ.

ಇದು ಇಸ್ಲಾಮಿನ ಸಂದೇಶ ಪ್ರಚಾರ ಕಾರ್ಯದ ಪ್ರಗತಿಯ ಸಂಕ್ಷಿಪ್ತ ಇತಿಹಾ
ಈ ಕಾರ್ಯಕ್ಕೆ ಮಾರ್ಗದರ್ಶಿಯಾಗಿ ಬಂದಿರುವ ಪವಿತ್ರ ಕುರ್‌ಆನ್ ಒಮ್ಮೆಲೇ ಇ
ಗ್ರಂಥದ ರೂಪದಲ್ಲಿ ಬಂದು ಈ ಎಲ್ಲ ಘಟ್ಟಗಳಿಗೆ ಮಾರ್ಗದರ್ಶನ ಮಾಡುವ
ಅಸಾಧ್ಯವಾಗಿತ್ತು. ಅದರ ಅವತರಣವು ಸಹಜವಾಗಿಯೇ ಸಂದೇಶ ಪ್ರಚಾರ ಕಾ
ಆರಂಭಿಸುವಾಗ ಆರಂಭಗೊಂಡು ಅದು ತನ್ನ ಉತ್ತುಂಗಕ್ಕೆ ತಲುಪಿದಾಗ ಕೊ
ಗೊಳ್ಳಬೇಕಿತ್ತು. ಈ ಮಧ್ಯೆ ಸಂದೇಶ ಪ್ರಚಾರ ಕಾರ್ಯದ ಪರಿಸ್ಥಿತಿಗನುಗುಣವಾಗಿ ಅ
ವಿಭಿನ್ನ ಭಾಗಗಳು ಆಗಾಗ ಒಂದು ಕ್ರಮಬದ್ಧ ರೂಪದಲ್ಲಿ ಅವತರಿಸಬೇಕಾದು

ಅನಿವಾರ್ಯವಾಗಿತ್ತು. ಅರ್ಥಾತ್ ಮೊದಲು ಇಸ್ಲಾಮಿನ ಮೂಲ ವಿಷಯಗಳು ಮುಂದೆ ಬರಬೇಕಾಗಿತ್ತು. ಅವುಗಳ ಪ್ರಾಮಾಣಿಕತೆಯ ಬಗ್ಗೆ ಪುರಾವೆಗಳು ಮುಂದೆ ಬರಬೇಕಾಗಿತ್ತು. ಅವುಗಳ ಮೇಲೆ ವಿಶ್ವಾಸವಿಡುವ ಮತ್ತು ಇಡದಿರುವ ಪರಿಣಾಮಗಳೇನಾಗಲಿವೆ ಎಂಬುದು ಸ್ಪಷ್ಟವಾಗಬೇಕಿತ್ತು. ಆಗ ಅವತೀರ್ಣದ ಗತಿಯೂ ಮಂದವಾಗಿರುವುದು ಅನಿವಾರ್ಯವಾಗಿತ್ತು. ಏಕೆಂದರೆ ಜನರಿಗೆ ಈ ಮೂಲ ಬೋಧನೆಗಳ ಬಗ್ಗೆ ಗಂಭೀರವಾಗಿ ಚಿಂತಿಸುವ ಸಂದರ್ಭ ಸಿಗಬೇಕಾಗಿತ್ತು. ತರುವಾಯ ವಿಶ್ವಾಸವಿಡಬೇಕೆಂಬ ಆಹ್ವಾನವು ಕಠಿಣವಾಗಬೇಕಾಗಿತ್ತು. ಕೊಣೆ ಮುಕ್ತರಾಗುವ ಎಲ್ಲ ವಿಧಾನಗಳನ್ನೂ ಸ್ವೀಕರಿಸಬೇಕಾಗಿತ್ತು. ಅದಕ್ಕಾಗಿ ಮನುಷ್ಯನ ಅಂತರಾತ್ಮವನ್ನು ಬಡಿದೆಬ್ಬಿಸುವ, ಪ್ರಭಾವ ಪೂರ್ಣವಾದ ಮತ್ತು ಪುರಾವೆಗಳಿಂದ ಕೂಡಿದ ದಿವ್ಯವಾಣಿಯ ಅವತೀರ್ಣದ ಒಂದು ದೀರ್ಘ ಪರಂಪರೆ ಜಾರಿಯಲ್ಲಿರ ಬೇಕಾಗಿತ್ತು. ಇನ್ನೊಂದೆಡೆ ಸತ್ಯವಿಶ್ವಾಸಿಗಳಿಗೆ ಕೇವಲ ಧರ್ಮದ ಮೂಲಭೂತ ವಿಷಯಗಳ ಬೋಧನೆ ಮಾತ್ರ ಮಾಡಬೇಕಾಗಿತ್ತು. ಅವರು ತಮ್ಮ ವಿಶ್ವಾಸದಲ್ಲಿ ದೃಢವಾಗಿ ನಿಲ್ಲುವ ಮತ್ತು ಅಲ್ಲಾಹನ ಮಾರ್ಗದಲ್ಲಿ ದೌರ್ಜನ್ಯಗಳನ್ನು ಸಹಿಸುವ ಬೋಧನೆ ನೀಡಬೇಕಾಗಿತ್ತು. ಸದ್ಗತಿಯ ಸುವಾರ್ತೆಗಳೊಂದಿಗೆ ಅವರಿಗೆ ನಿರಂತರ ಆಶ್ವಾಸನೆ ನೀಡಬೇಕಾಗಿತ್ತು. ವಲಸೆಯ ಸಮಯ ಹತ್ತಿರ ಬಂದಾಗ ದೇವ ಮಾರ್ಗದಲ್ಲಿ ಸೊತ್ತು-ವಿತ್ತ, ಮನೆ-ಮಾರು, ನೆಂಟರಿಷ್ಟರು ಎಲ್ಲವನ್ನೂ ಬಿಡುವ ಮತ್ತು ಎಲ್ಲ ಲೌಕಿಕ ಸಂಬಂಧಗಳನ್ನು ತ್ಯಾಗ ಮಾಡುವ ಸಲುವಾಗಿ ಅವರನ್ನು ಸಿದ್ಧಗೊಳಿಸಬೇಕಾಗಿತ್ತು. ಅದಕ್ಕಾಗಿ ದೇವನ ಮೇಲೆ ಪೂರ್ಣ ಭರವಸೆಯಿಡಲು ಅವರನ್ನು ಸಿದ್ಧಗೊಳಿಸಬೇಕಾಗಿತ್ತು. ಮದೀನಾ ತಲುಪಿದ ಬಳಿಕ ಒಂದೆಡೆ ಸತ್ಯವಿಶ್ವಾಸಿಗಳಿಗೆ ವಿವರವಾದ ಧರ್ಮ ವಿಧಿಗಳು ಅವತರಿಸಬೇಕಿತ್ತು. ಜೀವನದ ವಿವಿಧ ರಂಗಗಳಿಗೆ ಸಮಗ್ರ ಮಾರ್ಗದರ್ಶನ ನೀಡಬೇಕಾಗಿತ್ತು. ಸಶಸ್ತ್ರ ದಾಳಿಯನ್ನು ಎದುರಿಸಲು ತನು-ಮನ-ಧನವನ್ನು ತ್ಯಾಗ ಮಾಡಬೇಕಾದ ಅಗತ್ಯವನ್ನು ಅವರ ಮುಂದೆ ಸ್ಪಷ್ಟಪಡಿಸಬೇಕಾಗಿತ್ತು. ಇನ್ನೊಂದೆಡೆ ಕಪಟ ವಿಶ್ವಾಸಿಗಳನ್ನು ಖಂಡಿಸಿ ಸತ್ಯಸಂಧತೆಯನ್ನು ಅನುಸರಿಸಲು ಎಚ್ಚರಿಕೆ ನೀಡಬೇಕಾಗಿತ್ತು. ಅವರ ಒಳಸಂಚುಗಳ ಬಗ್ಗೆ ನೈಜ ಸತ್ಯ ವಿಶ್ವಾಸಿಗಳನ್ನು ಎಚ್ಚರಿಸಬೇಕಾಗಿತ್ತು. ಮತ್ತೊಂದೆಡೆ ಏಹುದೇವ ವಿಶ್ವಾಸಿಗಳು, ಯಹೂದಿಗಳು, ಕ್ರೈಸ್ತರೇ ಮೊದಲಾದ ಮುಸ್ಲಿಮೇತರರಿಗೆ ಇಸ್ಲಾಮಿನ ಆಹ್ವಾನ ನೀಡುವ ಕಾರ್ಯವು ನಿರಂತರ ಜಾರಿಯಲ್ಲಿರಬೇಕಾಗಿತ್ತು. ಕೇವಲ ಮದೀನಾ ಮತ್ತದರ ಪರಿಸರ ಹಾಗೂ ಅರೇಬಿಯಾ ಪರಿಸ್ಥಿತಿ ಮಾತ್ರವಲ್ಲ, ಅನುಕೂಲವಾದಾಗ ಅರೇಬಿಯಾದಿಂದ ಹೊರಗಿನ ಇತರ ಜನಾಂಗಗಳಿಗೂ ಇಸ್ಲಾಮಿನ ಸಂದೇಶ ತಲುಪಿಸುವ ಕಾರ್ಯ ಆರಂಭ ವಾಗಬೇಕಿತ್ತು. ತರುವಾಯ ಕೊನೆಯ ದಿನಗಳಲ್ಲಿ ಅಂದರೆ ಇಸ್ಲಾಮ್ ಸಂದೇಶವು ಕುಫ್ರ್‌ನ ಶಕ್ತಿಯನ್ನು ಬಗ್ಗು ಬಡಿದು ಸಂಪೂರ್ಣ ದೇಶದಲ್ಲಿ ಮೇಲ್ಮೆ ಸಾಧಿಸಿದಾಗ ಸತ್ಯವಿಶ್ವಾಸಿಗಳಿಗೆ ವಿಸ್ತೃತ ಆಜ್ಞೆಗಳನ್ನು ಶೀಘ್ರವಾಗಿ ನೀಡಿ ಸಂದೇಶ ಪ್ರಚಾರ ಉತ್ತುಂಗಕ್ಕೆ ತಲುಪಿದಾಗ ಈ ಆಜ್ಞೆಗಳನ್ನು ಪೂರ್ಣಗೊಳಿಸಿ ಕುರ್‌ಆನನ್ನು ಪರಿಪೂರ್ಣಗೊಳಿಸಬೇಕಾಗಿತ್ತು.

ಸ್ವಲ್ಪ ಗಹನವಾಗಿ ಪವಿತ್ರ ಕುರ್‌ಆನಿನ ಅಧ್ಯಯನ ಮಾಡುವವನು ಆದರ ಅವತರಣಃ ಮೇಲೆ ಹೇಳಿದಂತೆಯೇ ಆಗಿದೆ ಎಂಬುದನ್ನು ಕಂಡುಕೊಳ್ಳುವನು, ಹದೀಸ್‌ನಲ್ಲಿ ಈ ರೀ ಬಂದಿದೆ:

"ಅಲ್ಲಾಹನು ತನ್ನ ಪ್ರವಾದಿಯ ನಿಧನದ ಸಮಯ ಹತ್ತಿರ ಬಂದಾಗ ನಿರಂತ ದಿವ್ಯವಾಣಿ ಅವತೀರ್ಣಗೊಳಿಸಿದನು. ಅವರ ನಿಧನದ ದಿನಗಳಲ್ಲಿ ಅತ್ಯಧಿಕ ದಿವ್ಯವಾ ಅವತೀರ್ಣವಾಯಿತು." (ಬುಖಾರಿ-ಫಝಾಇಲುಲ್ ಕುರ್‌ಆನ್

ಇದು ಕೂಡಾ ವಾಸ್ತವದಲ್ಲಿ ಕುರ್‌ಆನ್ ಅವತರಣದ ರೀತಿ ಮತ್ತು ಅದ ಜಾಣ್ಮೆಯ ಒಂದು ಅಭಿವ್ಯಕ್ತಿಯಾಗಿದೆ. ಪ್ರವಾದಿಯವರ(ಸ) ನಿಧನ ಹತ್ತಿರ ಬರುವುದೆಂದ ಇಸ್ಲಾಮೀ ಸಂದೇಶ ಪ್ರಚಾರವು ಪೂರ್ಣಗೊಂಡು ಇಸ್ಲಾಮಿನ ಅಧಿಕಾರವು ಸುಭದ್ರವಾಗ ವುದೆಂದರ್ಥ. ಶರೀಅತ್‌ನ ಹೆಚ್ಚಿನ ನಿಯಮಗಳನ್ನು ಅವತೀರ್ಣಗೊಳಿಸುವ ಕಾಲಷ ಇದುವೇ ಆಗಿದೆ. ಆದ್ದರಿಂದ ಇದಕ್ಕೆ ಮೊದಲು ಸಹಜವಾಗಿಯೇ ಈ ವಿಧಿ ನಿಯಮ ಗಳನ್ನು ತಡೆಹಿಡಿಯಲಾಗಿತ್ತು. ಅವು ಇಸ್ಲಾಮಿನ ಅಧಿಕಾರ ಸುದೃಢವಾಗುತ್ತಲೇ ವಿವರವಾ ನೀಡಲ್ಪಟ್ಟುವು.

## ಕುರ್‌ಆನಿನ ಕ್ರೋಢೀಕರಣ

ಕುರ್‌ಆನ್ ಯಾವ ಕ್ರಮದಲ್ಲಿ ಅವತೀರ್ಣಗೊಂಡಿದೆಯೋ ಅದೇ ಕ್ರಮದಲ್ಲಿ ಕ್ರೋಢೀಕರಿಸಲ್ಪಟ್ಟಿಲ್ಲ. ಕೆಲವು ಅಧ್ಯಾಯಗಳ ಕ್ರಮವು ಅವತೀರ್ಣದ ಕ್ರಮದಲ್ಲೇ ಇದೆ ಆದರೆ ಹೆಚ್ಚಿನ ಅಧ್ಯಾಯಗಳ ಸ್ಥಿತಿ ಇದಕ್ಕೆ ವ್ಯತಿರಿಕ್ತವಾಗಿದೆ. ಅವುಗಳ ಬೇರೆ ಬೇ ಭಾಗಗಳು ಬೇರೆ ಬೇರೆ ಸಮಯದಲ್ಲಿ ಅವತೀರ್ಣಗೊಂಡುವು. ಅಧ್ಯಾಯದ ಒಂದು ಭಾಗವು ಇಂದು ಅವತೀರ್ಣಗೊಂಡರೆ ಇನ್ನೊಂದು ಭಾಗವು ಹಲವು ತಿಂಗಳುಗಳ ನಂತ ಅವತೀರ್ಣಗೊಂಡಿತು. ಮತ್ತೊಂದು ಭಾಗವು ವರ್ಷದ ನಂತರ ಅವತೀರ್ಣಗೊಂಡಿತು ಪ್ರಾರಂಭಿಕ ಸೂಕ್ತಗಳು ಮಕ್ಕಾದಲ್ಲಿ ಅವತೀರ್ಣಗೊಂಡಿದ್ದರೆ ಕೊನೆಯ ಸೂಕ್ತಗಳ ಮದೀನಾದಲ್ಲಿ ಅವತೀರ್ಣಗೊಂಡಿತು.. ಈಗ ಒಂದು ಅಧ್ಯಾಯದ ಕೊನೆಯಲ್ಲಿ ಕಾಣುವ ಸೂಕ್ತಗಳು ಅವತೀರ್ಣದ ಕ್ರಮದಂತೆ ಅದರ ಹಿಂದಿನ ಸೂಕ್ತಗಳಿಗಿಂತ ಮುಂ ಅವತೀರ್ಣಗೊಂಡಿವೆ. ಒಂದೇ ಸಮಯದಲ್ಲಿ ವಿಭಿನ್ನ ಅಧ್ಯಾಯಗಳು ಅವತರಿಸುತ್ತಿವೆ ಈಗ ಅವತರಿಸಿರುವ ಸೂಕ್ತಗಳನ್ನು ಯಾವುದೇ ಒಂದು ಅಧ್ಯಾಯದಲ್ಲಿ ಇರಿಸಲಾಗುತ್ತಿದೆ ಸ್ವಲ್ಪ ನಂತರ ಮತ್ತೆ ಕೆಲವು ಸೂಕ್ತಗಳು ಅವತರಿಸುತ್ತವೆ. ಅವುಗಳನ್ನು ಇನ್ನೊಂದು ಅಧ್ಯಾಯದಲ್ಲಿ ಇರಿಸುವಂತೆ ಆಜ್ಞೆಯಾಗುತ್ತದೆ. ಈ ರೀತಿ ಅನೇಕ ಅಧ್ಯಾಯಗಳ ಏಕಕಾಲದಲ್ಲಿ ಪೂರ್ಣಗೊಳ್ಳುತ್ತವೆ. ಆದರೆ ತಿಂಗಳುಗಳು ಹಿಂದೆಯೇ ಅವತೀರ್ಣಗೊಂಡ ಇನ್ನೊಂದು ಅಧ್ಯಾಯದ ಪೂರ್ಣತೆಗೆ ಇನ್ನೂ ಅನೇಕ ತಿಂಗಳುಗಳ ಅಥವಾ ವರ್ಷಗಳ ಕಾಯಬೇಕಾಗುತ್ತದೆ. ಹಝ್ರತ್ ಉಸ್ಮಾನ್(ರ) ಈ ರೀತಿ ಹೇಳಿರುವರು:

ಪ್ರವಾದಿ(ಸ) ಅವರ ಮೇಲೆ ಒಂದೇ ಸಮಯದಲ್ಲಿ ಅನೇಕ ಅಧ್ಯಾಯಗಳು ವತೀರ್ಣಗೊಳ್ಳುತ್ತಿದ್ದುವು. ಯಾವುದಾದರೂ ಸೂಕ್ತ ಅವತೀರ್ಣಗೊಂಡಾಗ ಪ್ರವಾದಿ(ಸ) ರೆಹಗಾರರನ್ನು ಕರೆದು ಇದನ್ನು ಇಂತಿಂತಹ ಅಧ್ಯಾಯದಲ್ಲಿ ಸೇರಿಸಿ ಎಂದು ಹೇಳುತ್ತಿದ್ದರು. (ತಿರ್ಮಿದಿ)

ಒಂದೊಂದು ಅಧ್ಯಾಯದ ಆಂತರಿಕ ಕ್ರೋಡೀಕರಣದಂತೆ ಅಧ್ಯಾಯಗಳ ಪರಸ್ಪರ ್ರೋಡೀಕರಣವೂ ಆಗಿದೆ. ಕುರ್‌ಆನ್ ಪೂರ್ತಿಯಾಗಿ ಕ್ರೋಡೀಕರಣಗೊಂಡಾಗ ಮೊದಲು ಂದ ಅಧ್ಯಾಯಗಳನ್ನು ಮೊದಲು, ಅನಂತರ ಬಂದುದನ್ನು ಅನಂತರ ಇರಿಸಲಾಗಲಿಲ್ಲ. ೀಗೆ ಪೂರ್ಣ ಕುರ್‌ಆನಿನ ಎಲ್ಲ ಅಧ್ಯಾಯಗಳನ್ನು ಅವತೀರ್ಣವಾದಂತಹ ಕ್ರಮದಲ್ಲಿ ್ರೋಡೀಕರಿಸಲಾಗಲಿಲ್ಲ. ಹೀಗೆ ಮಾಡಿರುವುದರ ಉದ್ದೇಶ ಮತ್ತು ಯುಕ್ತಿಯನ್ನು ನಾವು ುಂದೆ ವಿವರಿಸುವೆವು. ಆದರೆ ಯೋಚಿಸಿದರೆ ನೀವೇ ಅದನ್ನು ತಿಳಿಯಬಹುದು. ಧ್ಯಾಯಗಳನ್ನು ಅವುಗಳ ಅವತೀರ್ಣದ ಕ್ರಮದಲ್ಲಿ ಕ್ರೋಡೀಕರಿಸುವ ಯಾವ ಸಾಧ್ಯತೆಯೂ ಲ್ಲ. ಏಕೆಂದರೆ ಅದು ಯಾವ ಕ್ರಮದಲ್ಲಿ ಅವತರಣಗೊಳ್ಳುತ್ತಿತ್ತೋ ಅದನ್ನು ನೋಡಿದರೆ ಯಾವುದು ಮೊದಲು ಬಂದದ್ದು ಯಾವುದು, ಅನಂತರ ಬಂದದ್ದು ಎಂಬುದನ್ನು ರ್ಣಯಿಸುವುದೇ ಅಸಾಧ್ಯ. ಒಂದು ಅಧ್ಯಾಯದ ಕೆಲವು ಭಾಗಗಳು ಇನ್ನೊಂದು ಧ್ಯಾಯಕ್ಕಿಂತ ಮುಂಚೆ ಅವತೀರ್ಣಗೊಂಡಿದ್ದರೆ ಅನಂತರದ ಭಾಗಗಳು ಆ ಅಧ್ಯಾಯದ ಳಿಕ ಅವತೀರ್ಣಗೊಂಡಿವೆ. ಇದೇ ರೀತಿ ಮಕ್ಕಾದಲ್ಲಿ ಅವತೀರ್ಣವಾದ ಎಲ್ಲ ಅಧ್ಯಾಯ ಳನ್ನು ಒಂದು ಕಡೆ ಜೋಡಿಸಿ ಮದೀನಾದಲ್ಲಿ ಅವತೀರ್ಣಗೊಂಡ ಅಧ್ಯಾಯಗಳನ್ನು ನ್ನೊಂದು ಕಡೆ ಜೋಡಿಸಿ ಇಡಲಾಗಿಲ್ಲ. ಈ ಎಲ್ಲ ಗಣನೆಗಳನ್ನು ಬದಿಗಿರಿಸಿ ಬೇರೆಯೇ ಂದು ಕ್ರಮದಲ್ಲಿ ಅದನ್ನು ಕ್ರೋಡೀಕರಿಸಲಾಗಿದೆ. ಅದು ಏಕೆ ಅವತೀರ್ಣಗೊಂಡ ಮದಲ್ಲೇ ಕ್ರೋಡೀಕರಿಸಲ್ಪಟ್ಟಿಲ್ಲ, ಅದರ ಉದ್ದೇಶ ಮತ್ತು ಯುಕ್ತಿ ಏನು? ಕುರ್‌ಆನ್ ವತೀರ್ಣವಾದಾಗಿನ ಪರಿಸ್ಥಿತಿಯನ್ನು ನೀವು ನೆನಪಿಗೆ ತಂದರೆ ಇದು ಬಹಳ ಸುಲಭ ಗುತ್ತದೆ. ಕುರ್‌ಆನ್ ಸಾಮಾನ್ಯ ಅರ್ಥದಲ್ಲಿ ಒಂದು ಗ್ರಂಥವಲ್ಲ. ಅದು ನಿಜವಾಗಿ ರ್ವ ಮಾರ್ಗದರ್ಶಕನು ಕಾಲಕಾಲಕ್ಕೆ ನೀಡಿದ ವ್ಯಾವಹಾರಿಕ ಮಾರ್ಗದರ್ಶನವಾಗಿದೆ. ರ್ವ ಸಂದೇಶವಾಹಕನ ಪ್ರವಚನ[1]ಗಳಾಗಿವೆ. ಅದರ ಅವತರಣವು ಸಂದೇಶಪ್ರಚಾರದ ತಿಯೊಂದಿಗೆ ಸಾಗಿತ್ತು. ಸಂದೇಶಪ್ರಚಾರ ಕಾರ್ಯವು ಉತ್ತುಂಗಕ್ಕೆ ತಲುಪಿದಾಗ ಅದರ ವತರಣವೂ ಪೂರ್ಣಗೊಂಡಿತು. ಈ ಎಲ್ಲ ದಿವ್ಯವಾಣಿಯನ್ನು ಕ್ರೋಡೀಕರಿಸಲು ಂದೇಶಪ್ರಚಾರದ ದೈನಂದಿನ ಅಗತ್ಯದ ಆ ಕ್ರಮವು ಎಷ್ಟಕ್ಕೂ ಸಮಂಜಸವಲ್ಲ. ಈ ವಿಕ ಆದೇಶಗಳನ್ನು ಒಂದು ಗ್ರಂಥದ ರೂಪದಲ್ಲಿ ಕ್ರೋಡೀಕರಿಸಲು ಒಂದು ಹೊಸ ಮದ ಅಗತ್ಯ ಖಂಡಿತವಾಗಿಯೂ ಇತ್ತು. ಅದರಲ್ಲಿ ಸಂದೇಶ ಪ್ರಚಾರ ಪೂರ್ಣಗೊಂಡ ಳಿಕದ ಸ್ಥಿತಿಯನ್ನು ಪರಿಗಣಿಸಬೇಕಾಗಿತ್ತು. ಹೀಗೆ ಮಾಡುವುದು ಈ ಧರ್ಮದ ಮೇಲೆ

---

ಕುರ್‌ಆನ್ 69:40

ವಿಶ್ವಾಸವಿಟ್ಟವರ ದೃಷ್ಟಿಯಿಂದಲೂ ಅಗತ್ಯವಾಗಿತ್ತು. ವಿಶ್ವಾಸವಿಡದ ಹಾಗೂ ಪ್ರಳಯ ಕಾಲ ತನಕ ಹುಟ್ಟಿ ಈ ಕುರ್‌ಆನಿನ ಅಭಿಸಂಬೋಧಿತರಾಗುವ ಎಲ್ಲ ಜನರ ದೃಷ್ಟಿಯಿಂದಲ ಅಗತ್ಯವಾಗಿತ್ತು.

ವಿಶ್ವಾಸವಿಟ್ಟವರ ದೃಷ್ಟಿಯಿಂದ ಅದರ ಅಗತ್ಯವೇನು? ಮೊದಲು ಅವರ ಸ್ಥಿ ಇಸ್ಲಾಮಿನ ಬಗ್ಗೆ ಸಂಪೂರ್ಣ ಅಜ್ಞಾನದ್ದಾಗಿತ್ತು. ಪ್ರವಾದಿಯವರು(ಸ) ಅವರ ಮೇ ಆರಂಭದಿಂದ ಕಾರ್ಯವೆಸಗಬೇಕಿತ್ತು. ಆದ್ದರಿಂದ ಅವರ ಮಾರ್ಗದರ್ಶನ ಮತ ವಿಧಿಗಳ ಬಗ್ಗೆ ಅವರ ಆಂತರಿಕ ಮತ್ತು ಬಾಹ್ಯ ಪರಿಸ್ಥಿತಿ ಹೇಗಿತ್ತು, ಹಾಗೂ ಅವರಿ ಯಾವಾಗ ಯಾವ ರೀತಿಯ ಮಾರ್ಗದರ್ಶನದ ಅಗತ್ಯವಿತ್ತು, ಎಂಬುದನ್ನು ನೋ ಬೇಕಾಗಿತ್ತು. ಆದರೆ ಸಂದೇಶಪ್ರಚಾರ ಪೂರ್ಣಗೊಂಡಾಗ ಅವರ ಸ್ಥಿತಿ ತೀರಾ ಭಿನ್ನವಾಗಿತ್ತ ಈಗ ಅವರು ಪೂರ್ಣ ಮನಸ್ಸಿನೊಂದಿಗೆ ವಿಶ್ವಾಸ ತಂದಿದ್ದರು. ಒಂದು ಮುಸ್ಲಿಮ ಸಮುದಾಯವಾಗಿ ಮಾರ್ಪಟ್ಟಿದ್ದರು. ಅವರು ಸ್ವಯಂ ಈಗ ಆ ಸಂದೇಶ ಪ್ರಚಾರ ಹೊಣೆಗಾರರಾಗಿದ್ದರು. ಯಾವ ಧರ್ಮವನ್ನು ಪ್ರವಾದಿ(ಸ) ಅರೇಬಿಯಾದಲ್ಲಿ ಮಾತ ಕೃತಿಗಳ ಮೂಲಕ ಸ್ಥಾಪಿಸಿದ್ದರೋ ಅದನ್ನು ವಿಶ್ವವ್ಯಾಪಕಗೊಳಿಸುವ ಹೊಣೆಯೂ ಅವ ಮೇಲಿತ್ತು. ಪರಿಸ್ಥಿತಿಯ ಈ ಪೂರ್ಣ ಮಾರ್ಪಾಟು ಕುರ್‌ಆನಿನ ಕ್ರೋಡೀಕರಣಕ್ಕೆ ಅದ ಅವತರಣಕ್ಕಿಂತ ಭಿನ್ನವಾದ ಒಂದು ಕ್ರಮವನ್ನು ಬಯಸುತ್ತಿತ್ತು.

ಇನ್ನುಳಿದಂತೆ ಕುರ್‌ಆನಿನ ಮೇಲೆ ವಿಶ್ವಾಸವಿಡದವರು ಅಥವಾ ಅದರ ಸಂದೇ ತಲುಪಿಲ್ಲದವರು ಅಥವಾ ಈಗಿನ್ನೂ ಲೋಕದಲ್ಲಿ ಹುಟ್ಟಿ ಬರದವರು ಹಾಗೂ ಮುಂ ಅದರ ಸಂಬೋಧಿತರಾಗಲಿರುವವರು ಅವರ ಮಟ್ಟಿಗೂ ಒಂದು ಹೊಸ ಕ್ರೋಡೀಕರ ಕ್ರಮವೇ ಅಗತ್ಯವಾಗಿತ್ತು. ಮಾತ್ರವಲ್ಲ ಅದಕ್ಕಿಂತಲೂ ಹೆಚ್ಚು ಅಗತ್ಯವಾಗಿತ್ತು. ಯಾವು ವಾಣಿಯ ಇಂಗಿತವು ಸ್ಪಷ್ಟವಾಗಬೇಕಾದರೆ ಅದು ಅತ್ಯುತ್ತಮ ರೀತಿಯಲ್ಲಿ ಕ್ರೋಡೀಕರಿ ಲ್ಪಟ್ಟಿರಬೇಕು. ವಾಣಿಯ ಇಂಗಿತವೇ ಸ್ಪಷ್ಟವಾಗದಿದ್ದರೆ ಅದರ ಮೇಲೆ ವಿಶ್ವಾಸವಿಡು ಆಕರ್ಷಣೆಯಾದರೂ ಏನಿರುತ್ತದೆ. ಕುರ್‌ಆನ್ ಪ್ರಳಯ ಕಾಲದ ವರೆಗೆ ಅಲ್ಲಾಹನ ಮನ್ನ ಪಡೆದಿರುವ ಏಕೈಕ ಮಾರ್ಗದರ್ಶಕ ಗ್ರಂಥವೆಂಬ ನೆಲೆಯಲ್ಲಿ ಎಲ್ಲ ವ್ಯಕ್ತಿ ಮತ್ತು ಎ ಜನಾಂಗಗಳು ಅದನ್ನು ದೇವಗ್ರಂಥವೆಂದು ಅಂಗೀಕರಿಸಬೇಕು ಎಂದಾಗಿರುವಾಗ ಸ್ವ ಯೋಚಿಸಿ ನೋಡಿ. ಕುರ್‌ಆನನ್ನು ತಿಳಿಯಲು ಸನ್ನದ್ಧರಾಗಿ ಮುಂದೆ ಬರುವವರಿಗ ಅದನ್ನು ಅವತೀರ್ಣದ ಕ್ರಮದಲ್ಲೇ ಇರಿಸಿದ್ದರೆ ತಿಳಿಯುವುದು ಎಷ್ಟು ಕಷ್ಟಕರವಾಗುತ್ತಿತ್ತ ಅಲ್ಲಾಹನ ಈ ಗ್ರಂಥವು ಜನರ ಮುಂದೆ ವೈಚಾರಿಕ ಕ್ರಮದಲ್ಲಿ ಕ್ರೋಡೀಕರಿಸಲ್ಪಟ ಅತ್ಯುತ್ತಮ ಶೈಲಿಯ ಎಲ್ಲ ಯುಕ್ತಿಗಳನ್ನು ಒಳಗೊಳ್ಳದೆ ಇದ್ದರೆ ಜನರ ಮೇಲೆ ಸಾಕ್ಷ್ಯ ಕರ್ತವ್ಯವನ್ನು ಪೂರೈಸುವುದಾದರೂ ಹೇಗೆ?

ಈ ಎಲ್ಲ ಕಾರಣಗಳಿಂದಾಗಿ ಕುರ್‌ಆನನ್ನು ಅವತರಣದ ಕ್ರಮದಲ್ಲಿ ಕ್ರೋಡೀಕರಿಸಿದ ಅದು ದೇವವಾಣಿಯ ಅವತೀರ್ಣದ ಒಂದು ದಿನಚರಿಯಾಗಿ ಅವತೀರ್ಣದ ತಾರೀಕುಗಳ

ಅರಿಯುವ ಅಭಿರುಚಿ ಉಳ್ಳವರಿಗೆ ಒಂದು ಕೈಪಿಡಿಯಾಗುತ್ತಿತ್ತೇ ಹೊರತು ಅದರಿಂದ ಮಾರ್ಗದರ್ಶನ ಬಯಸುವವರಿಗೆ ಅದರ ಎಷ್ಟೋ ಆಧ್ಯಾತ್ಮಿಕ ಅನುಭೂತಿಗಳು ಸಿಗದೇ ಹೋಗುತ್ತಿತ್ತು.

## ಕ್ರೋಢೀಕರಣದ ಕಾಲ

ಈಗ ಕುರ್‌ಆನಿನ ಕ್ರೋಢೀಕರಣ ಯಾವಾಗ ಆಯಿತೆಂದೂ ಯಾರಿಂದ ಆಯಿತೆಂದೂ ನೋಡೋಣ. ಈ ಉದ್ದೇಶಕ್ಕಾಗಿ ನಮಗೆ ಎರಡು ಮಾಧ್ಯಮಗಳನ್ನು ನೋಡಬೇಕಾಗಿದೆ. ಮೊದಲನೆಯದು ಸ್ವತಃ ಕುರ್‌ಆನಿನ ಹೇಳಿಕೆ. ಎರಡನೆಯದು ಇತಿಹಾಸದ ಸಾಕ್ಷ್ಯ.

[1] ಈ ವಿಷಯದ ಬಗ್ಗೆ ಕುರ್‌ಆನಿನ ಹೇಳಿಕೆ ಈ ರೀತಿ ಇದೆ:

"ಇದನ್ನು ಕಂಠಪಾಠ ಮಾಡಿಸುವ ಮತ್ತು ಓದಿಸುವ ಹೊಣೆ ನಮ್ಮ ಮೇಲಿದೆ. ಆದುದರಿಂದ ನಾವು ಇದನ್ನು ಓದುತ್ತಿರುವಾಗ ನೀವು ಇದರ ಪಠಣವನ್ನು ಗಮನವಿಟ್ಟು ಆಲಿಸುತ್ತಿರಿ." (ಪವಿತ್ರ ಕುರ್‌ಆನ್, 75:17-18)

'ನಾವದನ್ನು ಓದಿ ಕೇಳಿಸಿದಾಗ' ಎಂದರೆ ನಮ್ಮ ವಾಣಿಯನ್ನು ಮುಟ್ಟಿಸುವ ಮಲಕ್ (ದೇವಚರ ಜಿಬ್ರೀಲ್) ಓದಿ ನಿಮಗೆ ಕೇಳಿಸಿದಾಗ. ಈ ವಾಕ್ಯಗಳು ತಮ್ಮ ಇಂಗಿತವನ್ನು ಪೂರ್ಣ ಸ್ಪಷ್ಟಗೊಳಿಸುತ್ತವೆ. ಇದರಿಂದ ಕುರ್‌ಆನ್ ಕ್ರೋಢೀಕರಣದ ಪ್ರತಿಯೊಂದು ಸಮಸ್ಯೆಯ ಮೇಲೂ ಬೆಳಕು ಬೀಳುತ್ತದೆ. ಉದಾ:

ಕುರ್‌ಆನ್ ಕ್ರೋಢೀಕರಣ ಕಾರ್ಯದಲ್ಲಿ ಸ್ವಯಂ ಪ್ರವಾದಿಯವರ(ಸ) ಇಚ್ಛೆ, ಕ್ರಿಯೆ, ಅಧಿಕಾರ ಮತ್ತು ಜಿಜ್ಞಾಸೆಗೆ ಯಾವುದೇ ಪಾತ್ರವಿರಲಿಲ್ಲ. ಅದನ್ನು ಪೂರ್ಣವಾಗಿ ಅಲ್ಲಾಹನೇ ಮಾಡಿರುವನು. ಪ್ರವಾದಿಯ(ಸ) ಕರ್ತವ್ಯ ಕೇವಲ ಜಿಬ್ರೀಲರ ಬಾಯಿಯಿಂದ ಅದನ್ನು ಕೇಳಿ ಅದರಂತೆಯೇ ಓದುವುದು ಮಾತ್ರವಾಗಿತ್ತು.

ಕುರ್‌ಆನನ್ನು "ಜಮ್‌ಅ" ಮಾಡುವುದೆಂದರೆ ಕ್ರಮಬದ್ಧವಾಗಿ ಕ್ರೋಢೀಕರಿಸುವುದು ಸಹ ಸೇರಿದೆ. ಅರ್ಥಾತ್ ಈ ಸೂಕ್ತದಿಂದ ಪೂರ್ತಿ ಕುರ್‌ಆನ್ ಅಲ್ಲಾಹನಿಂದ ಒಟ್ಟು ಗೂಡಿಸಲ್ಪಟ್ಟಿದೆ ಎಂದು ಮಾತ್ರ ತಿಳಿದು ಬರುವುದಲ್ಲ. ಅದರ ಕ್ರೋಢೀಕರಣವೂ ದೈವಿಕ ವಾಗಿದೆ ಎಂದೂ ತಿಳಿದು ಬರುತ್ತದೆ. ಏಕೆಂದರೆ ಜಿಬ್ರೀಲರು ಪ್ರವಾದಿಯವರಿಗೆ(ಸ) ಒಂದಲ್ಲ ಒಂದು ಕ್ರಮದಲ್ಲೇ ಈ ಕುರ್‌ಆನನ್ನು ಓದಿ ಕೇಳಿಸಿರಬೇಕು. ಆದ್ದರಿಂದ 'ಫತ್ತಬಿಲ್ ಕುರ್‌ಆನಃ' ಎಂಬುದರ ತಾತ್ಪರ್ಯ ಜಿಬ್ರೀಲರು ಓದಿ ಕೇಳಿಸಿದ್ದರು. ನೀವೂ ಓದಿರಿ ಎಂದು ಮಾತ್ರವಾಗಿರದೆ ಅವರು ಸೂಕ್ತಗಳ ಮತ್ತು ಅಧ್ಯಾಯಗಳ ಯಾವ ಕ್ರಮವನ್ನು ಕಲಿಸಿ ಕೊಟ್ಟಿರೋ ಅದೇ ಕ್ರಮವನ್ನು ಅಳವಡಿಸುವುದು ಕೂಡಾ ಅದರಲ್ಲಿ ಸೇರಿದೆ.

ಕ್ರೋಢೀಕರಣದ ಕಾರ್ಯವು ಪ್ರವಾದಿಯವರ(ಸ) ಉಪಸ್ಥಿತಿಯಲ್ಲೇ ಆಗಿದೆ. ಕುರ್‌ಆನ್ ಪ್ರವಾದಿವರ್ಯರ(ಸ) ಮೇಲೆ ವಿಭಿನ್ನ ಸೂಕ್ತಗಳ ಮತ್ತು ಅಧ್ಯಾಯಗಳ ರೂಪದಲ್ಲಿ ಇಳಿದು

ಪ್ರವಾದಿಯ ಕಾಲಾನಂತರ ಅದನ್ನು ಕ್ರೋಡೀಕರಿಸಲಾಯಿತು ಎಂಬುದು ಸರಿಯಲ್ಲ ಹಾಗಾಗುತ್ತಿದ್ದರೆ "ನಾವದನ್ನು ಓದಿ ಕೇಳಿಸಿದಾಗ ನೀವೂ ಹಾಗೆಯೇ ಓದಿರಿ" ಎಂದ ಹೇಳಿರುವುದು ಅರ್ಥಹೀನವೆನಿಸುತ್ತಿತ್ತು.

ಈ ಎಲ್ಲ ವಿಷಯಗಳ ಜೊತೆಗೆ ಒಂದು ವಿಷಯವು ವೈಚಾರಿಕವಾಗಿಯೂ ಐತಿಹಾಸಿಕವಾಗಿಯೂ ಒಂದು ಸರ್ವಸಮ್ಮತ ವಾಸ್ತವಿಕತೆಯ ರೂಪದಲ್ಲಿದೆ. ಅದಾವುದೆಂದರೆ ಪ್ರವಾದಿಯವರು(ಸ) ಅವರ ಪ್ರವಾದಿತ್ವದ ಕೊನೆಯ ಕ್ಷಣಗಳಲ್ಲಿ ಕುರ್‌ಆನನ್ನು ಯಾವ ನೆಲೆ, ರೂಪ ಮತ್ತು ಕ್ರಮದಲ್ಲಿ ಸಮುದಾಯದ ಕೈಗೆ ನೀಡಿದರೋ ಅದು ಅಲ್ಲಾಹನ ಕಡೆಯಿಂದ ಸಿಕ್ಕಿದ ಕ್ರಮವೇ ಆಗಿತ್ತು. ಪ್ರಳಯ ಕಾಲದ ತನಕ ಮನುಷ್ಯ ಜೀವನಕೆ ಮಾರ್ಗದರ್ಶನ ಮಾಡಬೇಕಾದ ಗ್ರಂಥವು ಪ್ರವಾದಿವರ್ಯರಿಂದ(ಸ) ಅವರ ಅನುಯಾಯಿ ಗಳಾದ ಮುಸ್ಲಿಮ್ ಸಮಾಜಕ್ಕೆ ಸುರಕ್ಷಿತವಾಗಿ ತಲುಪಿಲ್ಲ ಎಂಬ ಮಾತನ್ನು ಸಾಮಾನ್ಯ ಜ್ಞಾನವೂ ಒಪ್ಪುವುದಿಲ್ಲ.

ಅಲ್ಲಾಹನು ತನ್ನ ಪ್ರವಾದಿಗೆ ನೀಡಿರುವ ಈ ಆಜ್ಞೆ:

"ಓ ಸಂದೇಶವಾಹಕರೇ, ನಿಮ್ಮ ಪಾಲಕಪ್ರಭುವಿನ ಕಡೆಯಿಂದ ನಿಮ್ಮ ಮೇಲೆ ಅವತೀರ್ಣಗೊಳಿಸಲ್ಪಟ್ಟುದನ್ನು ಜನರಿಗೆ ತಲುಪಿಸಿರಿ. ಹಾಗೆ ಮಾಡದಿದ್ದರೆ ನೀವು ಅವರ ದೌತ್ಯದ ಬಾಧ್ಯತೆಯನ್ನು ನೆರವೇರಿಸಲಿಲ್ಲ." (ಪವಿತ್ರ ಕುರ್‌ಆನ್ 5:67)

ಖಂಡಿತ ಹೀಗೆಯೇ ಆಗಿರಬೇಕೆಂದು ಸಾಕ್ಷ್ಯವಹಿಸುತ್ತದೆ. ಏಕೆಂದರೆ ಕುರ್‌ಆನಿನ ಪದಗಳು ಮತ್ತು ವಾಕ್ಯಗಳು ಮಾತ್ರವಲ್ಲ ಈ ಹಿಂದಿನ ಸೂಕ್ತದಲ್ಲಿ ಹೇಳಿದಂತೆ ಅದರ ಕ್ರಮ ಮತ್ತು ಕ್ರೋಡೀಕರಣವೂ ಅಲ್ಲಾಹನ ವತಿಯಿಂದ ಆಗಿದೆ. ಹೀಗಿರುತ್ತಾ ಕ್ರಮ ಮತ್ತು ಕ್ರೋಡೀಕರಣವು ಕೂಡಾ "ನಿಮ್ಮ ಪ್ರಭುವಿನ ಕಡೆಯಿಂದ ನಿಮ್ಮ ಮೇಲೆ ಅವತೀರ್ಣವಾದುದು" ಎಂದು ಹೇಳಿದುದರ ವ್ಯಾಪ್ತಿಗೆ ಸೇರುತ್ತದೆ. ತಲುಪಿಸುವ ಆಜ್ಞೆಯಲ್ಲಿ ಕುರ್‌ಆನಿನ ಪದಗಳು ಮತ್ತು ವಾಕ್ಯಗಳನ್ನು ಮಾತ್ರವಲ್ಲ ಅದೇ ಕ್ರಮ ಮತ್ತು ಕ್ರೋಡೀಕರಣದೊಂದಿಗೆ ತಲುಪಿಸುವುದು ಸೇರುತ್ತದೆ.

[2] ಇತಿಹಾಸದಿಂದ ಈ ವಿಷಯದ ಬಗ್ಗೆ ಸಿಗುವ ಸ್ಪಷ್ಟೀಕರಣವು ವಸ್ತುಸ್ಥಿತಿಯನ್ನು ಇನ್ನಷ್ಟು ಪ್ರಕಾಶಮಾನಗೊಳಿಸುತ್ತದೆ. ತಿರ್ಮಿದಿಯ ವರದಿ ಹಾಗೂ ಹ. ಉಸ್ಮಾನ್(ರ) ಅವರ ಮಾತು ಈ ಹಿಂದೆ ವಿವರಿಸಲ್ಪಟ್ಟಿದೆ. ಪ್ರವಾದಿಯವರಿಗೆ(ಸ) ಏನಾದರೂ ದಿವ್ಯವಾಣಿ ಅವತೀರ್ಣಗೊಂಡಾಗ ಅವರು ಬರಹಗಾರರನ್ನು ಕರೆದು ಅದನ್ನು ಬರೆಸುತ್ತಿದ್ದರು ಮತ್ತು ಅದನ್ನು ಇಂತಿಂತಹ ಅಧ್ಯಾಯದಲ್ಲಿ ಇಂತಿಂತಹ ಸ್ಥಳದಲ್ಲಿ ಸೇರಿಸಬೇಕೆಂದೂ ಆಜ್ಞಾಪಿಸು ತ್ತಿದ್ದರು. ಈ ಬಗ್ಗೆ ಇನ್ನಷ್ಟು ವಿವರಣೆಯನ್ನು ನೋಡಿರಿ:

ಹ. ಜಿಬ್ರೀಲರು(ಅ) ರಮಝಾನ್ ತಿಂಗಳ ಪ್ರತಿಯೊಂದು ರಾತ್ರಿ ಪ್ರವಾದಿ(ಸ)ರನ್ನು ಬಂದು ಭೇಟಿಯಾಗುತ್ತಿದ್ದರು. ಈ ಭೇಟಿಯಲ್ಲಿ ಪ್ರವಾದಿ(ಸ) ಜಿಬ್ರೀಲರಿಗೆ(ಅ) ಕುರ್‌ಆನ್ ಓದಿ ಕೇಳಿಸುತ್ತಿದ್ದರು. (ಬುಖಾರಿ - ಫಝಾಇಲುಲ್ ಕುರ್‌ಆನ್)

ಹ. ಜಿಬ್ರೀಲ್(ಅ) ಪ್ರತಿವರ್ಷ ರಮಝಾನ್‌ನಲ್ಲಿ ಒಮ್ಮೆ ಕುರ್‌ಆನ್ ಓದಿ ಕೇಳಿಸುತ್ತಿದ್ದರು. ಪ್ರವಾದಿವರ್ಯರ(ಸ) ನಿಧನದ ವರ್ಷ ಎರಡು ಸಲ ಕುರ್‌ಆನ್ ಓದಿ ಕೇಳಿಸಿದ್ದರು. (ಬುಖಾರಿ - ಫಝಾಇಲುಲ್ ಕುರ್‌ಆನ್)

ಈ ವರದಿಗಳಿಂದ ಒಂದು ಮಾತು ಸ್ಪಷ್ಟವಾಗುತ್ತದೆ. ಕುರ್‌ಆನ್ ಅವತೀರ್ಣಗೊಳಿಸುವ ಹ. ಜಿಬ್ರೀಲ್‌ರ(ಅ) ಹೊಣೆಯು ಕುರ್‌ಆನಿನ 'ವಹೀ'ಯನ್ನು ತಲುಪಿಸುವುದು ಮಾತ್ರವಾಗಿರದೆ ಅದನ್ನು ಕ್ರೋಡೀಕರಿಸಿ ಕೊಡುವುದು ಕೂಡಾ ಆಗಿತ್ತು. ಇದಕ್ಕಾಗಿ ಪ್ರತಿವರ್ಷ ರಮಝಾನ್‌ನಲ್ಲಿ ಅಲ್ಲಿಯ ತನಕ ಅವತೀರ್ಣಗೊಂಡಿರುವ ಕುರ್‌ಆನಿನ ಭಾಗಗಳನ್ನು ಓದಿ ಕೇಳಿಸುತ್ತಿದ್ದರು ಮಾತ್ರವಲ್ಲ ಅವರಿಂದಲೂ ಓದಿಸಿ ಕೇಳುತ್ತಿದ್ದರು. ಪ್ರವಾದಿಯವರ(ಸ) ಜೀವನದ ಕೊನೆಯ ರಮಝಾನ್ ತಿಂಗಳಲ್ಲಿ ಸಂಪೂರ್ಣ ಕುರ್‌ಆನನ್ನು ಎರಡು ಸಲ ಹಾಗೆ ಓದಿ ಕೇಳಿಸಿದರು ಮತ್ತು ಅವರಿಂದ ಓದಿಸಿ ಕೇಳಿದರು. ಹೀಗೆ ಎರಡು ಸಲ ಪೂರ್ಣ ಕುರ್‌ಆನನ್ನು ಓದಿ ಕೇಳಿಸುವಾಗ ಸೂಕ್ತಗಳ ಮತ್ತು ಅಧ್ಯಾಯಗಳ ಕ್ರಮ ಇದ್ದಿರಲಾರದೆ? ಖಂಡಿತ ಇದ್ದಿರಬೇಕು. ಅದು ಅಲ್ಲಾಹನ ಬಳಿ ಮೊದಲಿಂದಲೇ ನಿಶ್ಚಯಿಸಲ್ಪಟ್ಟ ಕ್ರಮವಾಗಿತ್ತು. ಆ ಬಗ್ಗೆ ಕುರ್‌ಆನ್ ಈ ರೀತಿ ಹೇಳಿದೆ:

**"(ಅವರ ನಿರಾಕರಣೆಯಿಂದ ಈ ಕುರ್‌ಆನಿಗೇನೂ ನಷ್ಟವಿಲ್ಲ) ವಾಸ್ತವದಲ್ಲಿ ಈ ಕುರ್‌ಆನ್ ಅತ್ಯುನ್ನತ ಮಟ್ಟದ್ದಾಗಿದೆ. ಸುರಕ್ಷಿತವಾಗಿರುವ ಹಾಳೆಯಲ್ಲಿ (ಮುದ್ರಿತವಿದೆ)."**
**(ಪವಿತ್ರ ಕುರ್‌ಆನ್, 85:21-22)**

ಇದೇ ಕ್ರಮವನ್ನು ಪ್ರವಾದಿ(ಸ) ತಮ್ಮ ಸಮುದಾಯಕ್ಕೂ ಕಲಿಸಿ ಕೊಟ್ಟಿದ್ದರು. ಆ ಸಮುದಾಯವು ಅದೇ ಕ್ರಮದಲ್ಲಿ ಅದನ್ನು ಇಂದಿನ ತನಕ ಓದುತ್ತಾ ಬಂದಿದೆ. ಇಂದು ಮುಸ್ಲಿಮ್ ಸಮುದಾಯವು ಯಾವ ಕ್ರಮದಲ್ಲಿ ಕುರ್‌ಆನ್ ಓದುತ್ತದೋ ಅದುವೇ ಪ್ರವಾದಿ(ಸ) ಅವರಿಗೆ ಕಲಿಸಿಕೊಟ್ಟ ಕ್ರಮವೆಂಬುದಕ್ಕೆ ಇತಿಹಾಸ ಸಾಕ್ಷಿಯಾಗಿದೆ. ಪ್ರವಾದಿವರ್ಯರು(ಸ) ಅದನ್ನು ತಮ್ಮ ಸಂಗಾತಿಗಳಿಗೆ ಕಲಿಸಿಕೊಟ್ಟರು. ಅವರು ಅವರ ಸಂಗಾತಿಗಳಿಗೆ (ತಾಬಈನ್) ಕಲಿಸಿಕೊಟ್ಟರು. ತಾಬಈನ್‌ಗಳು ತಮ್ಮ ನಂತರದ ಜನರಿಗೆ ಕಲಿಸಿಕೊಟ್ಟರು. ಈ ರೀತಿ ಅದರ ಪರಂಪರೆಯು ಇಂದಿನವರೆಗೂ ಜಾರಿಯಲ್ಲಿದೆ.

ಒಟ್ಟಿನಲ್ಲಿ ಕುರ್‌ಆನಿನ ಕ್ರೋಡೀಕರಣ ಕ್ರಮವು ದೇವದತ್ತವಾಗಿದೆ. ಈ ಕುರಿತು ಇದುದೆಲ್ಲಾ ಅಲ್ಲಾಹನ ವತಿಯಿಂದಲೇ ಆಗಿವೆ. ಪ್ರವಾದಿ(ಸ) ಅವರಿಗೆ ಕೂಡಾ ಇದರಲ್ಲಿ ಯಾವುದೇ ಹಸ್ತಕ್ಷೇಪವಿರಲಿಲ್ಲ.

ಈ ರೀತಿಯ ಕ್ರೋಡೀಕರಣದ ಕೆಲವು ಆಂಶಿಕ ಕಾರ್ಯಗಳು ಪ್ರವಾದಿಯ(ಸ) ಬಳಿಕ ಖಿಲಫಾಉರ್ರಾಶಿದೀನರ ಕಾಲದಲ್ಲೂ ಆಗಿವೆ. ಪವಿತ್ರ ಕುರ್‌ಆನಿನ ಕ್ರಮ, ಕ್ರೋಡೀಕರಣ, ಬರವಣಿಗೆ ಮತ್ತು ಅದೇ ಕ್ರಮದಲ್ಲಿ ಸಹಾಬಿಗಳಿಗೆ ಕಲಿಸಿ ಕೊಡುವ ಕಾರ್ಯ ಲವಲೇಶವೂ ಸಂಶಯಕ್ಕೆ ಎಡೆ ಇಲ್ಲದಂತೆ ಪ್ರವಾದಿ ಮುಹಮ್ಮದ್(ಸ) ಅವರ ಕಾಲದಲ್ಲೇ ಆಗಿದೆ. ಸಹಸ್ರಾರು ಹಾಫಿಝ್‌ಗಳ ಹೃದಯದಲ್ಲಿ ಅದೇ ಕ್ರಮದಲ್ಲಿ ಅದು ಕ್ರೋಡೀಕರಣವಾಗಿದೆ. ಆದರೆ ಕುರ್‌ಆನ್ ಬರೆಸಲ್ಪಟ್ಟ ಬೇರೆ ಬೇರೆ ಫಲಕಗಳು, ಅವುಗಳ ಬೇರೆ ಬೇರೆ ಭಾಗಗಳು ವಿಭಿನ್ನ ರೂಪದಲ್ಲಿದ್ದುವು. ಪ್ರವಾದಿಯವರ(ಸ) ನಿಧನಾನಂತರ ಮೊದಲ ವರ್ಷವೇ ಯಮಾಮ ಎಂಬಲ್ಲಿ ಬನೂ ಹನೀಫ್ ಎಂಬ ಗೋತ್ರದೊಂದಿಗೆ ಮುಸ್ಲಿಮರ ಯುದ್ಧ ನಡೆಯಿತು. ಅದರಲ್ಲಿ ಹಲವು ಮಂದಿ ಹಾಫಿಝ್‌ಗಳು ಹುತಾತ್ಮರಾದರು. ಆಗ ಹ. ಉಮರ್‌ರಿಗೆ(ರ) ಒಂದು ಯೋಚನೆ ಹೊಳೆಯಿತು. ಅಲ್ಲಾಹನು ಪವಿತ್ರ ಕುರ್‌ಆನಿನ ಸಂರಕ್ಷಣೆಯ ಹೊಣೆ ಹೊತ್ತಿರುವನಾದರೂ ನಾವು ಯಾಕೆ ಆ ಪಾವನ ಕಾರ್ಯದಲ್ಲಿ ನಮ್ಮ ಪಾಲಿನ ಕರ್ತವ್ಯವನ್ನು ನಿರ್ವಹಿಸಬಾರದು? ಆದ್ದರಿಂದ ಪವಿತ್ರ ಕುರ್‌ಆನಿನ ಸಮಗ್ರ ಸಂರಕ್ಷಣೆಗಾಗಿ ಬಾಹ್ಯವಾದ ಎಲ್ಲ ಮುನ್ನೆಚ್ಚರಿಕೆಯನ್ನು ವಹಿಸಬೇಕು. ಈ ಯೋಚನೆ ಹೊಳೆಯುತ್ತಲೇ ಅವರದನ್ನು ಹ. ಅಬೂಬಕರ್‌ರವರ(ರ) ಮುಂದಿರಿಸಿದರು. ಅವರು ಆಗ ಖಲೀಫಾ ಆಗಿದ್ದರು. ವಿಭಿನ್ನ ವಸ್ತುಗಳಲ್ಲಿ ಬರೆಯಲ್ಪಟ್ಟಿರುವ ಕುರ್‌ಆನನ್ನು ಒಂದೆಡೆ ಕ್ರೋಡೀಕರಿಸಬೇಕು ಎಂದು ಅವರು ಸಲಹೆ ನೀಡಿದರು. ಮೊದಲಂತೂ ಅವರು ಈ ಸಲಹೆಯನ್ನು ಪ್ರವಾದಿವರ್ಯರು(ಸ) ಹಾಗೆ ಮಾಡದಿರುವಾಗ ನಾವೇಕೆ ಮಾಡಬೇಕು ಎಂದು ಹೇಳಿ ನಿರಾಕರಿಸಿದರು. ಆದರೆ ಇದು ಪ್ರವಾದಿಯ ಅನುಸರಣೆಯ ಉತ್ತುಂಗ ರೂಪದ ದರ್ಶನ ಮಾತ್ರವಾಗಿತ್ತು. ಈ ಸಲಹೆಯಲ್ಲಿ ದೇವೇಚ್ಛೆಗೆ ಅಥವಾ ಪ್ರವಾದಿಯ ಇಚ್ಛೆಗೆ ವಿರುದ್ಧವಾದ ಏನೂ ಇರಲಿಲ್ಲ. ಹ. ಉಮರ್(ರ) ಅವರ ಯುಕ್ತಿ ಮತ್ತು ಅದರಿಂದಾಗುವ ಪ್ರಯೋಜನಗಳನ್ನು ಅವರಿಗೆ ಚೆನ್ನಾಗಿ ಮನವರಿಕೆ ಮಾಡಿಕೊಟ್ಟಾಗ ಅವರದಕ್ಕೆ ಸಿದ್ಧರಾದರು ಅದಕ್ಕಾಗಿ ಕ್ರಮವನ್ನೂ ಕೈಗೊಂಡರು. ಪ್ರವಾದಿಯವರ(ಸ) ಜೊತೆ ಸದಾ ಇರುತ್ತಿದ್ದ ಮತ್ತು ದಿವ್ಯವಾಣಿಯನ್ನು ಬರೆಯುತ್ತಿದ್ದ ಮಾತ್ರವಲ್ಲ ಕುರ್‌ಆನ್ ಬರಹಗಾರರ ನಾಯಕರೆನಿಸಿದ ಹಝ್ರತ್ ಝೈದ್ ಬಿನ್ ಸಾಬಿತ್‌ರನ್ನು(ರ) ಕರೆಸಿ ಕುರ್‌ಆನನ್ನು ನಿರಂತರ ಬರೆದು ಒಂದೇ ಆವೃತ್ತಿಯಲ್ಲಿ ಕ್ರೋಡೀಕರಿಸಲು ಆಜ್ಞಾಪಿಸಿದರು. ಇನ್ನು ಕೆಲವು ಪ್ರಮುಖ ಸಹಾಬಿಗಳ ಜೊತೆ ಸೇರಿ ಹ. ಝೈದ್(ರ) ಈ ಕಾರ್ಯವನ್ನು ಆರಂಭಿಸಿದರು. ಮಸ್ಜಿದುನ್ನಬವಿಯಲ್ಲಿ ನಿಂತು ಹ. ಉಮರ್(ರ) ಘೋಷಿಸಿದರು: "ಯಾರ ಬಳಿ ಎಷ್ಟಂಶ ಕುರ್‌ಆನ್ ಲಿಖಿತ ರೂಪದಲ್ಲಿದೆಯೋ ಅದನ್ನವರು ನಮ್ಮ ಬಳಿ ತರಬೇಕು. ಪ್ರತಿಯೊಬ್ಬರು ತಂತಮ್ಮ ಫಲಕಗಳನ್ನು ತಂದೊಪ್ಪಿಸಿದರು. ಹ. ಝೈದ್(ರ) ಮತ್ತವರ ಸಂಗಾತಿಗಳು ಸ್ವಯಂ ಕುರ್‌ಆನ್ ಪೂರ್ಣ ಕಂಠಸ್ಥಗೊಳಿಸಿದವರಾಗಿದ್ದರೂ ಅವರ ಬಳಿಯೂ ಪ್ರವಾದಿ ಮುಹಮ್ಮದ್(ಸ) ಬರೆಸಿದ ಫಲಕಗಳಿದ್ದುವು. ಮುಂಜಾಗ್ರತೆಯ ಪರಮ ಸೀಮೆ

ಕಲುಪಿದವರು ಎಂಬಂತೆ ಇತರರ ಸಾಕ್ಷ್ಯವನ್ನೂ ಅವರು ಬಯಸಿದರು. ಪ್ರತಿಯೊಂದು ಸಲ ಬರೆಯುವಾಗಲೂ ತಾವು ಬರೆದಿರುವುದು ಪ್ರವಾದಿವರ್ಯರ(ಸ) ಸಮ್ಮುಖದಲ್ಲಿ ಎಂಬುದಕ್ಕೆ ಇಬ್ಬಿಬ್ಬರು ಸಾಕ್ಷಿಗಳನ್ನು ಪಡೆಯುತ್ತಿದ್ದರು. ಸಾಕ್ಷಿಗಳು ಸಾಕ್ಷ್ಯ ನೀಡಿಯಾದ ಬಳಿಕ ಅದನ್ನು ತಮ್ಮ ಬಳಿಯಿದ್ದ ಫಲಕದೊಂದಿಗೆ ಹೋಲಿಸಿ ನೋಡುತ್ತಿದ್ದರು. ಆ ಬಳಿಕ ವಷ್ಟೇ ಅವರು ಅದನ್ನು ಬರೆಯುತ್ತಿದ್ದರು. ಪೂರ್ಣ ಕುರ್‌ಆನ್ ಈ ರೀತಿ ಬರೆಯಲ್ಪಟ್ಟ ನಂತರ ಅದನ್ನು ಪ್ರವಾದಿಯ ಉತ್ತರಾಧಿಕಾರಿ ಮತ್ತು ಖಲೀಫಾ ಎಂಬ ನೆಲೆಯಲ್ಲಿ ಹ. ಅಬೂಬಕರ್‌ರವರ(ರ) ಬಳಿ ಇರಿಸಲಾಯಿತು. ಅವರ ನಿಧನಾನಂತರ ದ್ವಿತೀಯ ಖಲೀಫಾ ಹ. ಉಮರ್‌ರವರ(ರ) ಬಳಿ ಇರಿಸಲಾಯಿತು. ಅವರ ನಿಧನದ ವೇಳೆ ಯಾವ ಉತ್ತರಾಧಿಕಾರಿಯನ್ನೂ ನೇಮಿಸದ ಕಾರಣ ಅದನ್ನು ಅವರ ಮಗಳೂ ಪ್ರವಾದಿವರ್ಯರ(ಸ) ಪತ್ನಿಯೂ ಆದ ಉಮ್ಮುಲ್ ಮೂಮಿನೀನ್ ಹ. ಹಫ್ಸಾರ(ರ) ಬಳಿ ಇರಿಸಲಾಯಿತು. ಇದು ಪವಿತ್ರ ಕುರ್‌ಆನಿನ ಅಧಿಕೃತ ಪ್ರತಿಯ ಸ್ಥಾನ ಹೊಂದಿತ್ತು. ಆದ್ದರಿಂದ ಇತರರ ಬಳಿ ಇದ್ದ ಕುರ್‌ಆನ್‌ಗಿಂತಲೂ ಹೆಚ್ಚಿನ ಮಹತ್ವ ಅದಕ್ಕಿತ್ತು.

ಈ ರೀತಿ ಒಂದು ದೀರ್ಘ ಅವಧಿಯ ತನಕ ಕುರ್‌ಆನ್ ಒಂದೇ ಆವೃತ್ತಿಯಲ್ಲಿ ಇಸ್ಲಾಮೀ ರಾಷ್ಟ್ರದ ರಾಜಧಾನಿಯಲ್ಲಿತ್ತು. ಸಾಮಾನ್ಯ ಜನರು ತಮ್ಮ ಬಳಿ ಇದ್ದ ಪ್ರತಿಗಳು ಮತ್ತು ತಮ್ಮ ಕಂಠಪಾಠವನ್ನೇ ಅವಲಂಬಿಸಿದ್ದರು. ಹ. ಉಸ್ಮಾನ್(ರ) ತೃತೀಯ ಖಲೀಫರಾಗಿ ಆಯ್ಕೆಯಾದಾಗ ಹಿ.ಶ. 23ರಲ್ಲಿ ಇಸ್ಲಾಮೀ ರಾಷ್ಟ್ರದ ಸೀಮೆಗಳು ಪೂರ್ವದಲ್ಲಿ ಇರಾನ್ ತನಕ ಮತ್ತು ಪಶ್ಚಿಮದಲ್ಲಿ ಈಜಿಪ್ಟ್ ತನಕ ವ್ಯಾಪಿಸಿದಾಗ ಕೋಟಿಗಟ್ಟಲೆ ಸಂಖ್ಯೆಯಲ್ಲಿ ಇಸ್ಲಾಮ್ ಸ್ವೀಕರಿಸಿದ ಅರಬೇತರರು ಅರಬೀ ಭಾಷೆ ಬಲ್ಲವರಾಗಿರಲಿಲ್ಲ. ಆದ್ದರಿಂದ ಕುರ್‌ಆನ್ ಓದುವಾಗ ತಪ್ಪುತ್ತಿತ್ತು. ಸಿರಿಯಾ ಮತ್ತು ಇರಾಕ್‌ನ ಜನರೂ ಇದಕ್ಕೆ ಹೊರತಾಗಿರಲಿಲ್ಲ. ಅರ್ಮೇನಿಯಾ ಮತ್ತು ಆಝರ್ ಬೈಜಾನ್‌ನ ಯುದ್ಧದ ವೇಳೆ ಈ ಎರಡೂ ಪ್ರದೇಶಗಳ ಜನರು ಒಟ್ಟು ಸೇರಿದಾಗ ಅವರು ಕುರ್‌ಆನ್ ಓದುವಲ್ಲಿ ಹಳಷ್ಟು ತಪ್ಪು ಮಾಡುತ್ತಾರೆಂಬುದನ್ನು ಕಂಡು ಹ. ಹುದೈಫರಿಗೆ(ರ) ಬಹಳ ಕಳವಳವಾಯಿತು. ಯುದ್ಧದಿಂದ ಮರಳಿದ ಬಳಿಕ ಅವರು ಹ. ಉಸ್ಮಾನ್‌ರಿಗೆ(ರ) ಈ ಪರಿಸ್ಥಿತಿಯನ್ನು ಮನಗಾಣಿಸಿದರು. ಈ ಭಿನ್ನಾಭಿಪ್ರಾಯದಿಂದಾಗಿ ಭವಿಷ್ಯದಲ್ಲಿ ಉಂಟಾಗಬಹುದಾದ ಕೇಡಿನಿಂದ ರಕ್ಷಿಸುವ ಉಪಾಯ ಹೂಡಬೇಕು. ಅನ್ಯಥಾ ಇತರ ಸಮುದಾಯಗಳು ತಮ್ಮ ಧರ್ಮ ಗ್ರಂಥಗಳನ್ನು ಹಾಳು ಮಾಡಿದಂತೆ ಮುಸ್ಲಿಮರಲ್ಲಿಯೂ ಆದೀತು ಎಂಬ ಆಶಂಕೆಯನ್ನು ಅವರು ಹ. ಉಸ್ಮಾನರಲ್ಲಿ(ರ) ತೋಡಿಕೊಂಡರು. ಹ. ಉಸ್ಮಾನ್‌ರ(ರ) ಕಾಲದ ಈ ಪ್ರಮುಖ ಬೇಡಿಕೆಯನ್ನು ಮನಗಂಡು ಪವಿತ್ರ ಕುರ್‌ಆನಿನ ಮೂಲ ಪ್ರತಿಯಂತೆ ಕುರೈಶಿ ಓದುವಿಕೆಯ ಪ್ರಕಾರ ತಯಾರು ಮಾಡಿ ಎಲ್ಲ ಇಸ್ಲಾಮೀ ಪ್ರಾಂತ್ಯಗಳಿಗೂ ಕಳುಹಿಸಿ ಕೊಡಬೇಕೆಂಬ ತೀರ್ಮಾನ ಮಾಡಿದರು. ಇದಕ್ಕಾಗಿ ಅವರು

ಹ. ಹಪ್ಸಾರವರ(ರ) ಬಳಿ ಇದ್ದ ಹ. ಅಬೂಬಕರ್‌ರಿಂದ(ರ) ಬರೆಸಲ್ಪಟ್ಟ ಆವೃತ್ತಿಯನ್ನ ಪಡೆಕೊಂಡರು. ಹ.ಝೈದ್ ಬಿನ್ ಸಾಬಿತ್(ರ) ಹಾಗೂ ಇತರ ಮೂವರು ಪ್ರಮು ಸಹಾಬಿಗಳಾದ ಅಬ್ದುಲ್ಲಾ ಬಿನ್ ಝುಬೈರ್(ರ), ಸಈದ್ ಬಿನ್ ಆಸ್(ರ) ಮ ಅಬ್ದುರ್ರಹ್ಮಾನ್ ಬಿನ್ ಹಾರಿಸ್‌ರ(ರ) ಜೊತೆ ಸೂಕ್ತ ನಿರ್ದೇಶನಗಳೊಂದಿಗೆ ಮಹತ್ಕಾರ್ಯವನ್ನು ವಹಿಸಿಕೊಟ್ಟರು. ಅನೇಕ ಪ್ರತಿಗಳು ಸಿದ್ಧವಾದಾಗ ಅವರು (ಒಂದೊಂ ಪ್ರತಿಯನ್ನು) ಈಜಿಪ್ಟ್, ಕೂಫ, ಬಸ್ರಾ, ಮಕ್ಕಾ, ಸಿರಿಯಾ, ಯಮನ್ ಮತ್ತು ಬಹ್ರೈನ್‌ಗ ರಾಜ್ಯಪಾಲರಿಗೆ ಕಳುಹಿಸಿಕೊಟ್ಟರು. ಈ ಪ್ರತಿಯನ್ನು ಸರಿಯಾದ ಓದುವ ಕ್ರಮದೊಂದಿ ಬರೆಸಲಾಗಿದೆ, ಜನರು ಪ್ರತಿಯಲ್ಲಿರುವಂತೆಯೇ ಓದಬೇಕು ಎಂಬ ಆಜ್ಞೆಯೊಂದಿ ಅವುಗಳನ್ನು ಕಳುಹಿಸಲಾಗಿತ್ತು. ಒಂದು ಪ್ರತಿಯನ್ನು ಮದೀನಾದಲ್ಲಿ ತಮ್ಮ ಬಳಿಯೆ ಇರಿಸಿಕೊಂಡರು. ಅದಕ್ಕೆ 'ಇಮಾಮ್' ಎಂಬ ಹೆಸರು ನೀಡಿದರು. ಹ. ಉಸ್ಮಾನ್( ವಧಿಸಲ್ಪಟ್ಟಾಗ ಇದೇ ಪ್ರತಿಯಿಂದ ಕುರ್‌ಆನ್ ಪಠಿಸುತ್ತಿದ್ದರು. ಹ. ಉಸ್ಮಾನ್‌ರಿಂದ( ಬರೆಸಲ್ಪಟ್ಟ ಪ್ರತಿಗಳು ಮಕ್ಕಾ, ಮದೀನಾ, ಡಮಾಸ್ಕಸ್ ಮತ್ತು ಫಾಸ್(ಮೊರೊಕ್ಕೊ)ಗಳ ಈಗಲೂ ಇದೆ.

ಕುರ್‌ಆನ್ ಕ್ರೋಡೀಕರಣದ ಬಗ್ಗೆ ಪ್ರವಾದಿಯವರ(ಸ) ನಿಧನಾನಂತರ ಆದದ ಇವೆರಡು ಕಾರ್ಯಗಳು ಮಾತ್ರ. ಕುರ್‌ಆನ್ ಕ್ರೋಡೀಕರಣವು ದೇವದತ್ತವಾದುದೆಂಬುದ ಈ ಘಟನೆಗಳೇನೂ ಪ್ರತಿಕೂಲವಲ್ಲ. ಇದು ಕುರ್‌ಆನ್ ಕ್ರೋಡೀಕರಣಕ್ಕೆ ಸಂಬಂಧಿಸಿ ವಿಷಯವೇ ಅಲ್ಲ. ಇದು ಕುರ್‌ಆನ್ ಸಂರಕ್ಷಣೆಗೆ ಸಂಬಂಧಪಟ್ಟ ವಿಷಯ. ನಿಜವಾ ಇವು ಕೂಡಾ ಪ್ರಳಯ ಕಾಲದ ತನಕ ಕುರ್‌ಆನ್ ಸಂರಕ್ಷಣೆಯ ಬಗ್ಗೆ ಅಲ್ಲಾಹ ವಾಗ್ದಾನದ ಪೂರೈಕೆಯ ವಿಧಾನಗಳು ಮಾತ್ರ.

ಈ ಕಾರ್ಯವಂತೂ ಹ. ಅಬೂಬಕರ್ ಮತ್ತು ಹ. ಉಮರ್‌ರ( ಮಹತ್ಕಾರ್ಯಗಳಾಗಿವೆ. ನಿಜವಾಗಿ ಅಲ್ಲಾಹನು ತನ್ನ ಆ ನಿಷ್ಠದಾಸರ ಮೇಲೆ ಮಾಡಿ ಅತಿದೊಡ್ಡ ಅನುಗ್ರಹವದು.

# ಸುರಕ್ಷಿತ ಗ್ರಂಥ

ಪವಿತ್ರ ಕುರ್‌ಆನ್ ಯಥಾವತ್ತಾಗಿ ಸುರಕ್ಷಿತವಿದೆಯೆಂಬುದು ಅದರ ಒಂದು ವಿಶಿಷ್ಟ ಮತ್ತು ಶ್ರೇಷ್ಠ ಗುಣವಾಗಿದೆ. ಈ ಬಗ್ಗೆ ಒಂದು ಉಲ್ಲೇಖ ಹಿಂದಿನ ಪುಟಗಳಲ್ಲಿ ಬಂದಿದೆ. ಆದರೆ ಇದೊಂದು ಸಾಮಾನ್ಯ ಮಹತ್ವದ ವಿಷಯವೇನಲ್ಲ. ಬಹಳ ದೊಡ್ಡ ಮತ್ತು ದೂರಗಾಮಿ ಪರಿಣಾಮ ಬೀರುವ ವಿಷಯವಾಗಿದೆ. ಅದರ ಈ ಮಹತ್ವದಿಂದಾಗಿ ಆ ಬಗ್ಗೆ ಸ್ವಲ್ಪ ಕೂಲಂಕುಶ ಚರ್ಚೆ ನಡೆಸಬೇಕಾಗಿದೆ.

## ಸುರಕ್ಷಿತವಾಗಿರುವುದರ ತಾತ್ಪರ್ಯ

ಈ ನಿಟ್ಟಿನಲ್ಲಿ ಎಲ್ಲಕ್ಕಿಂತ ಮೊದಲು ಗಮನಿಸಬೇಕಾದ ವಿಷಯ 'ಸುರಕ್ಷಿತ' ವಾಗಿರುವುದರ ತಾತ್ಪರ್ಯವೇನೆಂಬುದನ್ನು ಅರಿಯುವುದಾಗಿದೆ. ಅರ್ಥಾತ್ ಯಾವುದೇ ದೇವಗ್ರಂಥವು ಸುರಕ್ಷಿತವಾಗಿರುವುದರ ತಾತ್ಪರ್ಯವೇನೆಂಬುದನ್ನು ಮೊದಲು ತಿಳಿಯಬೇಕು. ನಿಘಂಟು, ಸಾಮಾನ್ಯ ಜ್ಞಾನ, ದಿವ್ಯವಾಣಿಯ ಇಂಗಿತ ಇವುಗಳಿಂದ ಈ ಪ್ರಶ್ನೆಯ ಉತ್ತರವನ್ನು ಕಂಡುಕೊಳ್ಳಬೇಕು. ಅವುಗಳಿಂದ ಈ ಪ್ರಶ್ನೆಗೆ ದೊರಕುವ ಉತ್ತರ ಈ ಕೆಳಗಿನಂತಿದೆ:

ಯಾವುದೇ ದೇವಗ್ರಂಥವು ಸುರಕ್ಷಿತವಾಗಿ ಉಳಿದಿರುವುದರ ತಾತ್ಪರ್ಯವಿದು:

1) ಅದರ ಪದಗಳು ಅಲ್ಲಾಹನಿಂದ ಅವತೀರ್ಣವಾದ ಶಬ್ದಗಳೇ ಆಗಿವೆ.

2) ಆ ಪದಗಳ ಪರಸ್ಪರ ಜೋಡನೆ ಮತ್ತು ಕ್ರಮೀಕರಣ ಹಾಗೂ ಅವುಗಳಿಂದ ಉಂಟಾದ ವಾಕ್ಯಗಳ ಮತ್ತು ನುಡಿಗಳ ಸರಣಿ ಕೂಡಾ ಅಲ್ಲಾಹನ ವತಿಯಿಂದ ಆತನ ಪ್ರವಾದಿಗಳು ಮುಂದಿರಿಸಿದವುಗಳೇ ಆಗಿವೆ.

3) ಕಾಣೆಯಾಗುವ ಮೂಲಕವಾಗಲೀ ಪದಗಳ ಬದಲಾವಣೆಯ ಮೂಲಕವಾಗಲೀ ಅಥವಾ ಇತರ ಭಾಷೆಗಳಿಗೆ ತರ್ಜುಮೆ ಮಾಡುವ ಮೂಲಕವಾಗಲೀ ಅದರಲ್ಲಿರುವ ಮೂಲ ದೇವವಚನದ ಒಂದೇ ಒಂದು ಪದವೂ ನಾಶಗೊಂಡಿಲ್ಲ.

4) ಅದರಲ್ಲಿ ಒಂದೇ ಒಂದು ಪದವು ಹೆಚ್ಚಿಗೆ ಸೇರಿಸಲ್ಪಟ್ಟಿಲ್ಲ. ಅದನ್ನು ತಂದ ಪೈಗಂಬರರ ಒಂದೇ ಒಂದು ನುಡಿ ಕೂಡಾ ಅದರಲ್ಲಿ ಸೇರಿಸಲ್ಪಟ್ಟಿಲ್ಲ.

ಈ ಪೈಕಿ ಒಂದಾದರೂ ಇಲ್ಲದಿದ್ದರೆ ಗ್ರಂಥವನ್ನು ನಿಜಾರ್ಥದಲ್ಲಿ ಸುರಕ್ಷಿ ವೆನ್ನುವಂತಿಲ್ಲ. ಏಕೆಂದರೆ ಆ ಬಳಿಕ ಆ ಗ್ರಂಥದಿಂದ ದೇವನ ಅಭೀಷ್ಟವನ ತಿಳಿಯುವುದು ಅಸಾಧ್ಯವಾಗಿ ಬಿಡುತ್ತದೆ. ಯಾವುದಾದರೂ ವಾಕ್ಯದಲ್ಲಿ ಶಬ್ದಗ ಬದಲಾವಣೆಯಂತಿರಲಿ, ಅದೇ ಶಬ್ದಗಳ ಜೋಡನೆ ಮತ್ತು ಕ್ರೋಡೀಕರಣವು ಬದಲಾ ಬಿಟ್ಟರೂ ಅದರ ಅರ್ಥ ಒಂದಕ್ಕೊಂದು ಆಗಿ ಬಿಡುತ್ತದೆ.

## ಕುರ್‌ಆನ್ ಸುರಕ್ಷಿತತೆಯ ಅನಿವಾರ್ಯ ಪ್ರಶ್ನೆ

ತಾನು ಪ್ರವಾದಿ ಎಂದು ವಾದಿಸುವ ವ್ಯಕ್ತಿಯ ಬಗ್ಗೆ ಅವನ ವಾದವು ಸರಿಯಾಗಿ ಎಂಬುದಕ್ಕಿರುವ ಪುರಾವೆಗಳೇನು ಎಂಬುದು ಪ್ರಥಮ ಪ್ರಶ್ನೆಯಾಗಿದೆ. ಅದೇ ರೀತಿ ಓವ ಸತ್ಯ ಪ್ರವಾದಿಯ ಹೆಸರಲ್ಲಿ ಮುಂದಿರಿಸಲ್ಪಟ್ಟ ಗ್ರಂಥದ ಬಗ್ಗೆ, ಆ ಪ್ರವಾದಿಯ ಮೇ ಅವತೀರ್ಣವಾದ ಗ್ರಂಥ ಅದೇ ಆಗಿದೆಯೇ? ಅದೇ ಆಗಿದ್ದರೂ ಪೂರ್ಣವಾಗಿ ಸುರಕ್ಷಿತವಾ ಉಳಿದಿದೆಯೇ? ಏಕೆಂದರೆ ಒಬ್ಬ ಸತ್ಯ ಪ್ರವಾದಿಯಾಗಿದ್ದೂ ಆತನು ಅಲ್ಲಾಹನ ವತಿಯಿಂ ಜನರ ಮುಂದಿರಿಸಿದ ಗ್ರಂಥವು ಕಳೆದು ಹೋಗಿರಬಹುದು. ಇಂದು ಅದರ ಹೆಸರ ಬೇರಾವುದಾದರೂ ಗ್ರಂಥ ನಮ್ಮ ಮುಂದಿರಬಹುದು. ಹೆಸರಿಗೆ ಅದೇ ಗ್ರಂಥವಾ ಬಹುದು. ಆದರೆ ಅದರಲ್ಲಿ ಏರುಪೇರುಗಳನ್ನು ಮಾಡಿರಬಹುದು ಅಥವಾ ಅದ ಶಬ್ದಗಳು ಮತ್ತು ವಾಕ್ಯಗಳ ರಚನೆಯಲ್ಲಿ ತಿದ್ದುಪಡಿಗಳಾಗಿರಬಹುದು ಅಥವಾ ಮೂ ಗ್ರಂಥವು ಯಾವುದೋ ಬೇರೆ ಭಾಷೆಯಲ್ಲಿದ್ದು ಈಗ ನಮ್ಮ ಬಳಿ ಕೇವಲ ಅದ ಅನುವಾದ ಕೃತಿಗಳು ಮಾತ್ರ ಉಳಿದಿರಬಹುದು. ಇಂತಹ ಯಾವುದಾದರೂ ವಿಷ ಸಂಭವಿಸಿದ್ದರೆ ಆಗ ಆ ಗ್ರಂಥವನ್ನು ಸುರಕ್ಷಿತವಾಗಿದೆ ಎನ್ನುವಂತಿಲ್ಲ. ಯಾವ ಗ್ರಂಥ ಸುರಕ್ಷಿತವಾಗಿಲ್ಲವೋ ಅದರಿಂದ ದೈವಿಕ ಗ್ರಂಥದ ಉದ್ದೇಶ ಪೂರ್ತಿಯಾಗಲಾರದ ಅದಕ್ಕೆ ಆ ತಿದ್ದುಪಡಿಯ ಮೊದಲಿದ್ದ ಸ್ಥಾನಮಾನವೂ ಸಿಗಲಾರದು. ಅದರ ಅನುಸರ ಕೂಡಾ ಹಿಂದಿನಷ್ಟು ಕಡ್ಡಾಯವೆಂದು ಪರಿಗಣಿಸಲಾಗದು.

ಆದುದರಿಂದ ಯಾವುದೇ ದೇವಗ್ರಂಥದ ಬಗ್ಗೆ ಮನುಷ್ಯ ಬುದ್ಧಿ ಈ ರೀತಿ ಪ್ರಶ್ನೆ ಹಾಕುವುದು ಮತ್ತು ಸಂಶೋಧನೆ ಮಾಡುವುದು ಸಹಜವೇ ಆಗಿದೆ. ವಿಶೇಷವ ಪವಿತ್ರ ಕುರ್‌ಆನಿನ ಬಗ್ಗೆ ಈ ತರದ ಪ್ರಶ್ನೆ ಏಳುವುದು ಮತ್ತು ಜಿಜ್ಞಾಸೆ ಮೂಡುವು ಅನಿವಾರ್ಯವಾಗಿದೆ. ಏಕೆಂದರೆ ಅದು ಇತರ ದೇವಗ್ರಂಥಗಳಿಗಿಂತ ವಿಶಿಷ್ಟವಾದ ಸ್ಥಾನವ ಹೊಂದಿದೆ. ಅದು ಹಿಂದಿನ ಎಲ್ಲ ಗ್ರಂಥಗಳನ್ನು ಅಸಿಂಧುಗೊಳಿಸಿದ ಗ್ರಂಥ. ಇ ಯಾವುದೇ ಗ್ರಂಥ ಬರಲಿಕ್ಕಿಲ್ಲ. ಇಡೀ ಲೋಕದ ಜನರ ಮೇಲೆ ಅದರ ಅನುಸ ಕಡ್ಡಾಯವಾಗಿದೆ. ಪ್ರಳಯ ಕಾಲದ ತನಕ ಎಲ್ಲ ಮನುಷ್ಯರಿಗಾಗಿರುವ ಅಲ್ಲಾಹನ ಮನ್ನ ಮತ್ತು ಸ್ವೀಕಾರ ಪಡೆದ ಗ್ರಂಥವೆಂದು ಅದು ಸ್ವಯಂ ಘೋಷಿಸುತ್ತದೆ. ಹೀಗಿರುವ ಅದರ ಸುರಕ್ಷಿತತೆಯ ಸಮಸ್ಯೆಯು ಕೇವಲ ಒಂದು ತಾತ್ವಿಕ ಮತ್ತು ವಿದ್ಯೆಗೆ ಸಂಬಂಧಿ

ಸಮಸ್ಯೆಯಾಗಿ ಉಳಿಯುವುದಿಲ್ಲ. ಅದು ಮನುಷ್ಯ ಜೀವನದ ಅತಿ ದೊಡ್ಡ ಸಮಸ್ಯೆಯಾಗಿ ಮಾರ್ಪಡುತ್ತದೆ. ಅವನ ಲೌಕಿಕ ಶ್ರೇಯಸ್ಸು ಮತ್ತು ಪಾರತ್ರಿಕ ಮೋಕ್ಷವು ಅದನ್ನು ಹೊಂದಿಕೊಂಡಿರುತ್ತವೆ. ಅದರ ಈ ವಿಶಿಷ್ಟ ಸ್ಥಾನಮಾನವು ಅದು ಭೂಮುಖದ ಮೇಲೆ ಮನುಷ್ಯರು ಇರುವ ತನಕ ಸುರಕ್ಷಿತವಾಗಿರಬೇಕೆಂದು ಬಯಸುತ್ತದೆ. ಅನ್ಯಥಾ ಮನುಷ್ಯನು ಮಾರ್ಗದರ್ಶನ ಎಲ್ಲಿಂದ ಪಡೆಯಬೇಕು? ಆದುದರಿಂದ ಕುರ್‌ಆನ್ ತನ್ನ ವಾದದಲ್ಲಿ ಸತ್ಯವಾಗಿದ್ದರೆ ಅದರ ಸ್ಥಿತಿಯು ಹಿಂದಿನ ಗ್ರಂಥಗಳಂತೆ ಆಗಬಾರದು. ಅದು ಕಡ್ಡಾಯವಾಗಿ ಸುರಕ್ಷಿತವಾಗಿರಬೇಕು. ಅದರ ಸುರಕ್ಷಿತತೆಯು ಅದರ ಪ್ರಾಮಾಣಿಕತೆಯ ಒಂದು ಪುರಾವೆ ಕೂಡಾ ಆಗಿದೆ. ಈ ಎಲ್ಲ ವಿಷಯಗಳನ್ನು ಪರಿಗಣಿಸಿದಾಗ ಕುರ್‌ಆನ್ ಪೂರ್ಣ ಸುರಕ್ಷಿತವಾಗಿ ಉಳಿದಿದೆಯೇ? ಈಗ ಕುರ್‌ಆನಿನ ಹೆಸರಲ್ಲಿ ಲೋಕದ ಮುಂದಿರುವ ಗ್ರಂಥದ ಭಾಷೆ, ಪದ, ವಾಕ್ಯ, ಕ್ರೋಡೀಕರಣ, ವಾಚನ ಇತ್ಯಾದಿ ಎಲ್ಲ ವಿಷಯಗಳಲ್ಲೂ ಅದು ದೇವನ ಕಡೆಯಿಂದ ಹ. ಮುಹಮ್ಮದ್(ಸ) ಅವರು ಸಮರ್ಪಿಸಿದುದೇ ಆಗಿವೆಯೇ ಎಂಬ ಪ್ರಶ್ನೆ ಏಳುವುದು ಸಹಜ.

## ಕುರ್‌ಆನ್ ಸಂರಕ್ಷಣೆಯ ವ್ಯಾವಹಾರಿಕ ವ್ಯವಸ್ಥೆ

ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವ ಮೊದಲು ಪ್ರವಾದಿ(ಸ) ಕುರ್‌ಆನನ್ನು ಸಂರಕ್ಷಿತವಾಗಿಡಲು ಯಾವ್ಯಾವ ವ್ಯವಸ್ಥೆ ಮಾಡಿದ್ದರು ಎಂಬುದನ್ನು ತಿಳಿಯುವುದು ಅತ್ಯಗತ್ಯ. ಇತಿಹಾಸ ಮತ್ತು ಪ್ರವಾದಿ ವಚನಗಳಲ್ಲಿ ಈ ವ್ಯವಸ್ಥೆಯ ಕುರಿತು ಬಂದಿರುವ ವಿವರಗಳು ಈ ರೀತಿ ಇವೆ:

1) ಪ್ರವಾದಿಯವರ(ಸ) ಆಸ್ಥಾನದಲ್ಲಿ ವಿಧಿವತ್ತಾಗಿ ದಿವ್ಯವಾಣಿಯನ್ನು ಬರೆದಿಡುವವರನ್ನು ನೇಮಿಸಲಾಗಿತ್ತು. ಅವರು ಪ್ರವಾದಿಯವರ(ಸ) ಸಂಗಾತಿಗಳ ಪೈಕಿ ಅಗ್ರಗಣ್ಯರಾಗಿದ್ದರು. ಮಕ್ಕಾ ಜೀವನ ಕಾಲದಲ್ಲಿ ಹ. ಅಬೂಬಕರ್, ಹ. ಉಸ್ಮಾನ್ ಮತ್ತು ಹ. ಅಲೀ(ರ) ಹಾಗೂ ಮದೀನಾಕ್ಕೆ ವಲಸೆ ಬಂದ ಬಳಿಕ ಇವರಲ್ಲದೆ ಹ. ಝುಬೈರ್ ಬಿನ್ ಅವ್ವಾಮ್, ಉಬೈ ಬಿನ್ ಕಅಬ್, ಹನ್ಝಲ ಬಿನ್ ರಬೀಲ್, ಝೈದ್ ಬಿನ್ ಸಾಬಿತ್, ಉಬೈ ಬಿನ್ ಫಾತಿಮಾ, ಅಬ್ದುಲ್ಲಾ ಬಿನ್ ಅರ್ಕಮ್, ಶರ್ಜೀಲ್ ಬಿನ್ ಹುಸ್ನ, ಅಬ್ದುಲ್ಲಾ ಬಿನ್ ರವಾಹ, ಅಮೀರ್ ಮುಆವಿಯ, ಖಾಲಿದ್ ಬಿನ್ ಸಈದ್, ಅಬ್ಬಾಸ್ ಬಿನ್ ಸಈದ್(ರ) ಮೊದಲಾದ 24 ಅಥವಾ 42 ಸಹಾಬಿಗಳು ಈ ಕೆಲಸಕ್ಕಾಗಿ ನಿಯುಕ್ತರಾಗಿದ್ದರು. ಇವರ ಕುರಿತು ಕುರ್‌ಆನ್ 'ಗೌರವಾನ್ವಿತ ಮತ್ತು ಸಜ್ಜನರಾದ ಬರಹಗಾರರು' ಎಂದು ವರ್ಣಿಸಿದೆ. ಒಂದು ವಹ್ಯೀ (ದಿವ್ಯವಾಣಿ) ಅವತೀರ್ಣಗೊಂಡ ಕೂಡಲೇ ಪ್ರವಾದಿ(ಸ) ಯಾವನಾದರೂ ಬರಹಗಾರರನ್ನು ಕರೆದು ಈ ಸೂಕ್ತಗಳನ್ನು ಇಂತಿಂತಹ ಅಧ್ಯಾಯದಲ್ಲಿ ಇಂತಿಂತಹ ಸೂಕ್ತದ ನಂತರ ಬರೆಯಿರಿ ಎಂದು ಆಜ್ಞಾಪಿಸುತ್ತಿದ್ದರು. ಬರಹಗಾರರು ಅದನ್ನು ಬರೆದಾದ ಮೇಲೆ ಆ ಬರೆಯಲ್ಪಟ್ಟುದನ್ನು

ಪ್ರವಾದಿ(ಸ) ಓದಿಸಿ ಕೇಳುತ್ತಿದ್ದರು ಮತ್ತು ಅದರಲ್ಲಿ ಬರವಣಿಗೆಯ ದೋಷವೇನಾದರ ಸಂಭವಿಸಿದ್ದರೆ ಅದನ್ನು ಆಗಲೇ ಸರಿಪಡಿಸುತ್ತಿದ್ದರು. ಬರಹಗಾರರ ಸರದಾರರಾಗಿ ಝೈದ್ ಬಿನ್ ಸಾಬಿತ್(ರ) ಈ ರೀತಿ ಹೇಳಿರುವರು: 'ನಾನು ಬರೆದು ಮುಗಿಸಿದಾ ಪ್ರವಾದಿ(ಸ) ಓದು ಎಂದು ಆಜ್ಞಾಪಿಸುತ್ತಿದ್ದರು. ನಾನದನ್ನು ಅವರಿಗೆ ಓದಿ ಕೇಳಿಸುತ್ತಿದ ಅದರಲ್ಲೇನಾದರೂ ತಪ್ಪು ಸಂಭವಿಸಿದ್ದರೆ ಅದನ್ನು ತಿದ್ದುತ್ತಿದ್ದರು.' ಅನಂತರ ಅದ ಸಾರ್ವಜನಿಕವಾಗಿ ಘೋಷಿಸಬೇಕೆಂದು ಹೇಳುತ್ತಿದ್ದರು. ವಹ್ಯ್ ಬರಹಗಾರರು ತಮ ಬರವಣಿಗೆಯನ್ನು ಮುಗಿಸಿ ಹೊರಬಂದು ಈಗ ಅವತೀರ್ಣವಾದ ಸೂಕ್ತಗಳನ್ನು ಎ ಮುಸ್ಲಿಮರಿಗೆ ಘೋಷಿಸಿ ಹೇಳುತ್ತಿದ್ದರು. ಬರೆಯಬಲ್ಲವರು ಅದನ್ನು ಸ್ವತಃ ಬರೆ ಕೊಳ್ಳುತ್ತಿದ್ದರು. ಉಳಿದವರು ಅದನ್ನು ಕಂಠಪಾಠ ಮಾಡಿಕೊಳ್ಳುತ್ತಿದ್ದರು. ಈ ರಿ ಒಂದೆಡೆ ಕುರ್‌ಆನಿನ ಬರವಣಿಗೆಯು ಅಧಿಕೃತವಾಗಿ ನಡೆಯುತ್ತಿತ್ತು. ಇನ್ನೊಂದೆಡೆ ಅನೆ ಸಹಾಬಿಗಳು ಅದನ್ನು ಖಾಸಗಿಯಾಗಿ ಬರೆದಿಡುತ್ತಿದ್ದರು. ಹೀಗೆ ಹ. ಮುಆದ್ ಬಿ ಜಬಲ್, ಹ. ಉಬೈ ಬಿನ್ ಕಅಬ್, ಹ. ಝೈದ್ ಬಿನ್ ಸಾಬಿತ್ ಮತ್ತು ಹ. ಅಬ ಝೈದ್(ರ) ಮುಂತಾದವರು ಪೂರ್ತಿ ಕುರ್‌ಆನನ್ನು ಕ್ರಮ ಪ್ರಕಾರ ಕ್ರೋಡೀಕರಿಸಿಟ್ಟಿದ್ದ (ಬುಖಾರಿ-ಫಝಾಯಿಲುಲ್ ಕುರ್‌ಆನ

ಬರವಣಿಗೆಗೆ ತೆಳುವಾದ ಪೊರೆ ಹದಗೊಳಿಸಿದ ತೆಳುವಾದ ಚರ್ಮ, ಖರ್ಜೂ ಸೋಗೆಯ ಕೆಳಗಿನ ಭಾಗ, ಬಿಳಿ ಕಲ್ಲಿನ ತೆಳುವಾದ ಸ್ಲೇಟುಗಳು, ಒಂಟೆಯ ಅಗಲವಾ ಎಲುಬುಗಳು ಇತ್ಯಾದಿ ಬಳಸಲ್ಪಡುತ್ತಿದ್ದುವು.

2) ಪ್ರವಾದಿ(ಸ) ತಮ್ಮ ಮಾತುಗಳನ್ನು - ಅವು ಧರ್ಮದ ಕುರಿತೇ ಆಗಿದ್ದ ಬರೆಯಬಾರದೆಂದು ತಮ್ಮ ಸಂಗಾತಿಗಳಿಗೆ ಆಜ್ಞೆ ಮಾಡಿದ್ದರು. "ಕುರ್‌ಆನಿನ ಹೊರತು ನ ಬಾಯಿಯಿಂದ ಕೇಳುವ ಯಾವ ಮಾತನ್ನೂ ನೀವು ಬರೆಯಬೇಡಿರಿ." (ಸುನನ್ ದಾರಿಮಿ ಅವರ ಮಾತು ಮತ್ತು ಕುರ್‌ಆನ್ ಎಲ್ಲಿ ಬೆರೆತು ಹೋಗುವುದೋ ಎಂಬ ಭೀತಿಯೇ ಇದ ಕಾರಣವಾಗಿತ್ತು.

3) ಒಂದೆಡೆ ಅಲ್ಲಾಹನ ವತಿಯಿಂದ ಅವತೀರ್ಣವಾಗುವ ಪ್ರತಿಯೊಂದು ಪದವ ಕೂಡಲೇ ಬರೆಸುತ್ತಿದ್ದರು. ಇನ್ನೊಂದೆಡೆ ಸ್ವಯಂ ಪ್ರವಾದಿಯವರಂತೂ ಅದನ್ನು ಕಂಠಪ ಮಾಡಿಯೇ ಇರುತ್ತಿದ್ದರು. ಜೊತೆಗೆ ತಮ್ಮ ಸಂಗಾತಿಗಳಿಗೂ ಅದನ್ನು ಕಂಠಪ ಮಾಡಿಸುತ್ತಿದ್ದರು. ಅವರಿಂದ ಆಗಾಗ ಓದಿಸಿ ಕೇಳುತ್ತಿದ್ದರು. ಇದು ಯಾವುದೇ ಪದ ತಪ್ಪಾಗಿ ಕಂಠಪಾಠವಾಗುವುದನ್ನು ತಪ್ಪಿಸಲಿಕ್ಕಾಗಿತ್ತು. ಆ ಸಮಯದಲ್ಲಿ ಅಲ್ಲಿ ಉಪಸ್ಥಿ ರಿಲ್ಲದ ಸಹಾಬಿಗಳಿಗೆ ಆ ಬಳಿಕ ಅದನ್ನು ಕಲಿಸಿಕೊಡಲಾಗುತ್ತಿತ್ತು. ಸಾಮೂಹಿಕವಾಗಿಯ ಕುರ್‌ಆನ್ ಓದುವ ಮತ್ತು ಆಲಿಸುವ ವ್ಯವಸ್ಥೆ ಮಾಡಲಾಗುತ್ತಿತ್ತು. ಮಕ್ಕಾದಲ್ಲಿ ಅರ್ಖಮ್ ಮಖ್‌ಝೂಮಿಯವರ(ರ) ಮನೆಯನ್ನು 'ಪಠಣ ಗೃಹ'ವೆಂದು ನಿಶ್ಚಯಿಸಿದ್ದ

ಲ್ಲಿಗೆ ಸಹಾಬಿಗಳೊಂದಿಗೆ ಹೋಗಿ ಕುರ್‌ಆನ್ ಪಠಣ ನಡೆಸುತ್ತಿದ್ದರು. (ಈ ಐತಿಹಾಸಿಕ ಮತ್ತು ಸುಮಂಗಳ ಗೃಹವು ಇಂದಿಗೂ ಮಕ್ಕಾದಲ್ಲಿದೆ.) ಮದೀನಾಕ್ಕೆ ಹೋದ ಬಳಿಕ ಕುರ್‌ಆನ್ ಓದುವ ಮತ್ತು ಓದಿಸುವ ಒಂದು ಸಮೂಹವೇ ಸ್ಥಾಪಿತವಾಯಿತು. ಇಸ್ಲಾಮಿ ಇತಿಹಾಸದಲ್ಲಿ ಅವರನ್ನು 'ಅಸ್‌ಹಾಬುಸ್ಸುಫ್ಫ' ಎನ್ನಲಾಗುತ್ತದೆ. ಇವರು ತಮ್ಮ ಸರ್ವಸ್ವವನ್ನೂ ಬಿಟ್ಟು ಬಂದ ಬಡ ಜನ ಮಕ್ಕಾದವರಾಗಿದ್ದರು. ಮದೀನಾದಲ್ಲಿ ಅವರಿಗೆ ಇವರ ಖಾಸಗಿ ನೆಲೆಯೆಂಬುದಿರಲಿಲ್ಲ. ಮಸ್ಜಿದುನ್ನಬವೀಯ ಹೊರಾಂಗಣವೇ ಇವರ ನೆಲೆಯಾಗಿತ್ತು. ಇವರು ಸುಮಾರು ಎಂಭತ್ತು ಮಂದಿ ಇದ್ದರು. ಇವರು ತಮ್ಮ ಜೀವನವನ್ನು ಪೂರ್ಣವಾಗಿ ಧರ್ಮದ ಸೇವೆಗೆ ಮುಡಿಪಾಗಿಟ್ಟವರಾಗಿದ್ದರು. ಮದೀನಾದ ಹೊರಗೆ ಯಾರಾದರೂ ಇಸ್ಲಾಮ್ ಸ್ವೀಕರಿಸಿದರೆ ಅವರಿಗೆ ಕುರ್‌ಆನ್ ಕಲಿಸಲು ಇವರು ಹೋಗುತ್ತಿದ್ದರು. ಇನ್ನೊಂದೆಡೆ ಅವರು ವಹ್ಯ್ ಬಂದಾಗಲೆಲ್ಲಾ ಅದನ್ನು ಪೂರ್ಣ ಕಂಠಪಾಠ ಮಾಡಿ ಮದೀನಾದ ಎಲ್ಲೆಡೆ ವ್ಯಾಪಿಸುತ್ತಿದ್ದರು ಮತ್ತು ಜನರಿಗೆ ಅದನ್ನು ಕಲಿಸುತ್ತಿದ್ದರು. ಈ ವ್ಯವಸ್ಥೆಯ ಕಾರಣದಿಂದ ಸ್ವಯಂ ಪ್ರವಾದಿವರ್ಯರಂತೂ ಪೂರ್ಣ ಕುರ್‌ಆನ್ ಕಂಠಸ್ಥಗೊಳಿಸಿಯೇ ಇದ್ದರು. ಜೊತೆಗೆ ಅನೇಕ ಸಹಾಬಿಗಳು ಕೂಡಾ ಕುರ್‌ಆನ್ ಪೂರ್ತಿ ಕಂಠಪಾಠ ಮಾಡಿಕೊಂಡಿದ್ದರು. ಇವರು ಇತರ ಸಹಾಬಿಗಳಿಗಿಂತ ಪ್ರವಾದಿಯವರ(ಸ) ಒಡನಾಟ ಹೆಚ್ಚು ಲಭಿಸಿದ ಸಹಾಬಿಗಳಾಗಿದ್ದರು. ಉಳಿದ ಸಹಾಬಿಗಳು ಕೂಡಾ ಹೆಚ್ಚು ಕಡಿಮೆ ಕುರ್‌ಆನಿನ ಭಾಗಗಳನ್ನು ಕಂಠಪಾಠ ಮಾಡಿದವರೇ ಆಗಿದ್ದರು. ಅವರಲ್ಲಿ ಒಬ್ಬರಾದರೂ ಕುರ್‌ಆನಿನ ಯಾವುದಾದರೂ ಭಾಗವನ್ನು ಕಂಠಪಾಠ ಮಾಡದವರಿರಲಿಲ್ಲ. ಏಕೆಂದರೆ ಅದು ಸಾಧ್ಯವೇ ಇರಲಿಲ್ಲ. ಇಸ್ಲಾಮ್ ಮತ್ತು ಈಮಾನ್‌ನ ಜೊತೆಗೆ ಕುರ್‌ಆನ್ ಸ್ವಲ್ಪವೂ ಅರಿಯದೆ ಇರುವುದು ಹೋಲಿಕೆ ಇಲ್ಲದ ಸಂಗತಿಯಾಗಿದೆ.

ಅರಬರು ತಮ್ಮ ಸ್ಮರಣ ಶಕ್ತಿಯ ಬಗ್ಗೆ ಅದ್ವಿತೀಯರಾಗಿದ್ದರು ಎಂಬ ವಾಸ್ತವಿಕತೆಯನ್ನು ಇಲ್ಲಿ ವಿಶೇಷವಾಗಿ ಗಮನಿಸಬೇಕಾಗಿದೆ. ಅವರು ಅದ್ಭುತ ಸ್ಮರಣ ಶಕ್ತಿಯನ್ನು ತೋರಿಸುವ ಘಟನೆಗಳನ್ನು ಇತಿಹಾಸದಲ್ಲಿ ನಾವು ಓದಿದರೆ ಅದು ಕಾದಂಬರಿಯೋ ಎಂಬ ಸಂಶಯ ಹುಟ್ಟುತ್ತದೆ. ದೊಡ್ಡ ದೊಡ್ಡ ಪದ್ಯಗಳನ್ನವರು ಕೆಲವು ಸಲ ಕೇಳಿ ಬಾಯಿಪಾಠ ಮಾಡಿಕೊಳ್ಳುತ್ತಿದ್ದರು. ತಮ್ಮ ಕುದುರೆ ಅಥವಾ ಒಂಟೆಯ ವಂಶ ವೃಕ್ಷವೂ ಅವರಿಗೆ ನೆನಪಿರುತ್ತಿದ್ದುವು. ಇದು ಕೂಡಾ ವಾಸ್ತವದಲ್ಲಿ ದೇವನು ಪವಿತ್ರ ಕುರ್‌ಆನನ್ನು ಸಂರಕ್ಷಿಸಲು ಮಾಡಿದಂತಹ ಒಂದು ಏರ್ಪಾಡೇ ಆಗಿದೆ. ಅದರ ಪ್ರಪ್ರಥಮ ಸಂರಕ್ಷಕರಾಗಿ ಜಗತ್ತಿನ ಅತ್ಯಧಿಕ ಸ್ಮರಣ ಶಕ್ತಿ ಇರುವ ಒಂದು ಜನಾಂಗವನ್ನು ಆರಿಸಿರುವುದು ಆ ದೇವನ ಮಹಾ ಯುಕ್ತಿಯಾಗಿದೆ.

# ಕುರ್‌ಆನ್ ಸುರಕ್ಷಿತವಾಗಿದೆ ಎಂಬುದಕ್ಕೆ ಪುರಾವೆಗಳು

ಈ ಪ್ರಾಥಮಿಕ ವಿಷಯಗಳ ಬಗ್ಗೆ ತಿಳಿದುಕೊಂಡ ಬಳಿಕ ಈಗ ಕುರ್‌ಆನ್ ಪ್ರವಾದಿ ಮುಹಮ್ಮದ್(ಸ) ಸಮರ್ಪಿಸಿದ ಕುರ್‌ಆನ್ ಆಗಿದೆಯೇ ಎಂಬ ಬಗ್ಗೆ ತಿಳಿಯೋಣ.

ಈ ಉದ್ದೇಶಕ್ಕಾಗಿ ನೀವು ಈ ವಿಷಯಕ್ಕೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಅವಲೋಕಿಸಿದರೆ ಅವು ಎರಡು ವಿಧದವುಗಳೆಂದು ಮನಗಾಣುವಿರಿ. ಮೊದಲನೆಯದು ವೈಚಾರಿಕ ಪುರಾವೆಗಳು. ಇವು ಮುಸ್ಲಿಮರಿಗೂ ಮುಸ್ಲಿಮೇತರರಿಗೂ ಏಕಪ್ರಕಾರ ಕುರ್‌ಆನಿನ ಸುರಕ್ಷಿತತೆಯ ಪುರಾವೆಗಳಾಗಿವೆ. ಎರಡನೆಯದು ಕುರ್‌ಆನಿನ ಹೇಳಿಕೆಗಳಲ್ಲಿರುವ ಪುರಾವೆಗಳು. ಇವು ಕೇವಲ ಮುಸ್ಲಿಮರಿಗೆ ಮಾತ್ರ ಪುರಾವೆಗಳಾಗಬಲ್ಲವು.

### ವೈಚಾರಿಕ ಪುರಾವೆಗಳು

ಮೊದಲು ವೈಚಾರಿಕ ಪುರಾವೆಗಳನ್ನು ತೆಗೆದುಕೊಳ್ಳಿ. ಅಪ್ಪಟ ಜ್ಞಾನ, ಇತಿಹಾಸ ಮತ್ತು ಬುದ್ಧಿಯನ್ನುಪಯೋಗಿಸಿ ಸಂಶೋಧನೆ ನಡೆಸಿದರೆ ಕುರ್‌ಆನ್ ಸುರಕ್ಷಿತವಾಗಿದೆಯೆಂದು ಸಾಬೀತಾಗುತ್ತದೆಯೇ? ಯಾವುದೇ ಮಾರ್ಗದರ್ಶನ, ಕಾನೂನು ಅಥವಾ ಗ್ರಂಥವನ್ನು ಸುರಕ್ಷಿತವಾಗಿಡುವ ಕೇವಲ ಎರಡು ವಿಧಾನಗಳಿವೆ. ಒಂದನೆಯದು ಕಂಠಪಾಠ ಮಾಡುವುದು. ಎರಡನೆಯದು ಬರೆದಿಡುವುದು. ಪವಿತ್ರ ಕುರ್‌ಆನಿನ ಸುರಕ್ಷಿತತೆಯ ಸ್ಥಿತಿ ತಿಳಿಯುವುದೆಂದರೆ ಅದನ್ನು ಬಹುಮಟ್ಟಿಗೆ ಕಂಠಪಾಠ ಮಾಡಲಾಗಿದೆಯೇ ಎಂದು ನೋಡಬೇಕು. ಒಂದ ವೇಳೆ ಇಲ್ಲವೆಂದಾದರೆ ಅದನ್ನು ಸರಿಯಾಗಿ ಬರೆದಿಡಲಾಗಿದೆಯೇ ಎಂದು ನೋಡಬೇಕು ಮತ್ತು ಈ ರೀತಿ ಕಂಠಪಾಠ ಮಾಡುವ ಅಥವಾ ಬರೆದಿಡುವ ಕಾರ್ಯವು ಎಲ್ಲ ಕಾಲಗಳಲ್ಲೂ ಸರಿಯಾಗಿ ಜಾರಿಯಲ್ಲಿತ್ತೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.

1. ಪವಿತ್ರ ಕುರ್‌ಆನಿನ ಬಗ್ಗೆ ಆದರ ಸುರಕ್ಷಿತತೆಯ ಒಂದನೆಯ ರೂಪದ ಕುರಿತ ನೈಜ ವಸ್ತುಸ್ಥಿತಿಯನ್ನು ತಿಳಿಯಲು ಈ ಐತಿಹಾಸಿಕ ವಾಸ್ತವಿಕತೆಗಳನ್ನು ಅವಲೋಕಿಸಿರಿ.

1) ಹಝ್ರತ್ ಮುಹಮ್ಮದ್‌ರು(ಸ) ಈ ಲೋಕ ಯಾತ್ರೆ ಮುಗಿಸಿ ತೆರಳುತ್ತಿದ್ದಾಗ ಸಹಸ್ರಾರು ಅಲ್ಲ, ಲಕ್ಷಗಟ್ಟಲೆ ಅನುಯಾಯಿಗಳನ್ನು ಬಿಟ್ಟಗಲಿದ್ದರು.

2) ಕುರ್‌ಆನ್ ಓದುವ, ಓದಿಸುವ ಮತ್ತು ಕಂಠಪಾಠ ಮಾಡುವ ಕುರಿತು ಪ್ರವಾದಿ(ಸ) ಜನರಿಗೆ ನಿರಂತರ ಉತ್ತೇಜನ ನೀಡುತ್ತಿದ್ದರು. ಅವುಗಳ ವಿವರವು ಹದೀಸ್ ಗ್ರಂಥಗಳಲ್ಲಿ ತುಂಬಿ ಹೋಗಿವೆ. ಉದಾಹರಣೆಗೆ "ಕುರ್‌ಆನ್ ಓದಿರಿ. ಅದು ನಿರ್ಣಾಯಕ ದಿನದಂದು ತನ್ನ ಓದುಗರಿಗೆ ಶಿಫಾರಸು ಮಾಡೀತು."

(ಬುಖಾರಿ- ಫಝಾಇಲುಲ್ ಕುರ್‌ಆನ್)

"ನಿಮ್ಮ ಪೈಕಿ ಕುರ್‌ಆನ್ ಕಲಿತವರು ಮತ್ತು ಕಲಿಸಿದವರು ಅತ್ಯುತ್ತಮರು."

(ಬುಖಾರಿ - ಫಝಾಇಲುಲ್ ಕುರ್‌ಆನ್)

"ಕುರ್‌ಆನ್‌ನ ಸ್ಮರಣೆಯನ್ನು ಆವರ್ತಿಸುತ್ತಲಿರಿ."

(ಬುಖಾರಿ-ಫಝಾಇಲುಲ್ ಕುರ್‌ಆನ್)

ಇದೇ ರೀತಿ ಕುರ್‌ಆನಿನಲ್ಲೂ ಈ ರೀತಿಯ ಉತ್ತೇಜನಗಳು ಮತ್ತು ನಿರ್ದೇಶನಗಳು ಧಾರಾಳವಿದೆ.

ಇನ್ನೊಂದೆಡೆ ಯಹೂದಿಗಳು ಮತ್ತು ಕ್ರೈಸ್ತರು ತಮ್ಮ ಗ್ರಂಥಗಳಲ್ಲಿ ತಿದ್ದುಪಡಿ ಮಾಡಿದುದಕ್ಕೆ ಹಾಗೂ ಅವುಗಳ ಕೆಲವು ಭಾಗಗಳನ್ನು ಮರೆತು ಬಿಟ್ಟುದಕ್ಕೆ ಅವರಿಗೆ ಕುರ್‌ಆನ್ ನೀಡಿದ ಎಚ್ಚರಿಕೆ ಮತ್ತು ಬೆದರಿಕೆಗಳು ಅವರ ಮುಂದಿವೆ. ಈ ಜನಾಂಗಗಳ ಮರೆಗುಳಿತನದ ಸ್ಥಿತಿ ಮತ್ತದರ ಪರಿಣಾಮವನ್ನು ವಿವರಿಸಿ ಅವರನ್ನು ಎಚ್ಚರಿಸಲಾಗಿದೆ: ನೀವು ಕೂಡಾ ಕುರ್‌ಆನಿನ ಜೊತೆ ಇದೇ ವರ್ತನೆ ಮಾಡಿದರೆ, ಅದರ ಒಂದು ಭಾಗವನ್ನು ಮರೆತುಬಿಟ್ಟು ಇನ್ನೊಂದು ಭಾಗವನ್ನು ತಿದ್ದಿದರೆ ಅಲ್ಲಾಹನ ನ್ಯಾಯದ ಕಾನೂನು ನಿಮ್ಮ ಜೊತೆಯೂ ಯಹೂದಿಗಳು ಮತ್ತು ಕ್ರೈಸ್ತರಂತೆಯೇ ವರ್ತಿಸೀತು. ಪರಲೋಕದಲ್ಲಿ ಅವರಿಗೆ ಇನ್ನಷ್ಟು ಶಿಕ್ಷೆಯನ್ನು ನೀಡಲಿರುವನು. ಪ್ರವಾದಿವರ್ಯರೂ ಅಂತಹ ಬೆಚ್ಚಿ ಬೀಳಿಸುವ ಎಚ್ಚರಿಕೆಗಳನ್ನು ನೀಡಿರುವರು: "ಯಾವನು ಕುರ್‌ಆನ್ ಪಠಿಸಿ ಅದನ್ನು ಮರೆತು ಬಿಡುವನೋ ಅವನು ನಿರ್ಣಾಯಕ ದಿನದಂದು ಕುಷ್ಠರೋಗಿಯಾಗಿ ಎದ್ದೇಳುವನು." (ಅಬೂ ದಾವೂದ್)

3) ಪ್ರವಾದಿಯವರ ಕಾಲದಲ್ಲಿ ಧಾರ್ಮಿಕ ಮತ್ತು ಲೌಕಿಕವಾದ ಎಲ್ಲ ಮಾನ, ಹಿರಿಮೆ ಮತ್ತು ವಿಜಯಗಳ ಮಾನದಂಡ ಕುರ್‌ಆನಿನ ವಿದ್ಯೆಯಾಗಿತ್ತು. ಯಾರಿಗೆ ಎಷ್ಟು ಹೆಚ್ಚು ಕುರ್‌ಆನಿನ ಜ್ಞಾನವಿದೆಯೋ ಅವನ ಸ್ಥಾನಮಾನಗಳು ಅಷ್ಟೇ ಉನ್ನತವೆನಿಸುತ್ತಿತ್ತು. ಸರಕಾರಿ ಕಾರ್ಯಗಳಿಗೆ ಸಣ್ಣ ಹುದ್ದೆಗಳಿಂದ ಹಿಡಿದು ದೊಡ್ಡ ಹುದ್ದೆಯವರೆಗಿನ ನಾಯಕತ್ವದ ಮಾನದಂಡ ಕುರ್‌ಆನಿನ ಜ್ಞಾನವಾಗಿತ್ತು. ಏಕೆಂದರೆ ಕುರ್‌ಆನ್ ಸಮಾಜ ಮತ್ತು ರಾಷ್ಟ್ರದ ಮೂಲಭೂತ ಕಾನೂನಾಗಿತ್ತು. ಆದ್ದರಿಂದ ಯಾರು ಈ ಕಾನೂನಿನ ಹೆಚ್ಚು ಜ್ಞಾನ ಹೊಂದಿದ್ದಾನೆ ಎಂಬುದನ್ನು ನೋಡುವುದು ಅನಿವಾರ್ಯವಾಗಿತ್ತು. ಒಮ್ಮೆ

ಪ್ರವಾದಿವರ್ಯರು(ಸ) ಒಂದು ಅಭಿಯಾನಕ್ಕಾಗಿ ಒಂದು ದೊಡ್ಡ ತಂಡವನ್ನು ರಚಿಸಿದರು ಅವರಲ್ಲಿ ಅತ್ಯಂತ ಕಿರಿಯವನಾದ ವ್ಯಕ್ತಿಯನ್ನು ಅವರ ನಾಯಕನಾಗಿ ನೇಮಿಸಿದರು ಏಕೆಂದರೆ, ಸಂಶೋಧನೆಯಿಂದ ಅವರು ಅಧಿಕ ಕುರ್‌ಆನ್ ಬಲ್ಲವರಾಗಿದ್ದರೆಂಬುದ ತಿಳಿದು ಬಂತು. (ತಿರ್ಮಿದಿ) ಧಾರ್ಮಿಕ ವಿಷಯದ ಬಗ್ಗೆ ಕುರ್‌ಆನಿನ ಜ್ಞಾನ ಎಷ್ಟು ನಿರ್ಣಾಯಕ ಎಂಬುದನ್ನು ಕೇವಲ ಒಂದು ಘಟನೆಯಿಂದ ತಿಳಿಯಬಹುದಾಗಿದೆ. ಉಹುದ ಯುದ್ಧದ ಹುತಾತ್ಮರನ್ನು ಅವರು ಹೆಚ್ಚಿನ ಸಂಖ್ಯೆಯಲ್ಲಿದ್ದುದರಿಂದ ಒಂದೊಂದು ಕಬರ (ದಫನಸ್ಥಳ)ನಲ್ಲಿ ಒಂದಕ್ಕಿಂತ ಹೆಚ್ಚು ಮೃತದೇಹಗಳನ್ನು ಇರಿಸುವ ಪ್ರಸಂಗ ಬಂದಿತ್ತು ಇವರ ಪೈಕಿ ಕುರ್‌ಆನ್ ಹೆಚ್ಚು ಬಲ್ಲವರು ಯಾರು ಎಂದು ಜನರಲ್ಲಿ ಕೇಳುತ್ತಿದ್ದರು. ಅದ ಅವರಿಗೆ ತಿಳಿಸಿ ಹೇಳಿದಾಗ ಅಂಥವರನ್ನು ಮುಂದೆ ಕಿಬ್ಲಾದ ಕಡೆಗೆ ಇರಿಸುತ್ತಿದ್ದರು. (ಬುಖಾರಿ- ಜನಾಇಝ್)

4) ಪ್ರವಾದಿಯವರ(ಸ) ಸಂಗಾತಿಗಳ ಧಾರ್ಮಿಕ ಅಭಿರುಚಿ, ಅನುರಾಗ ಹುಚ್ಚೆನ್ನ ಬಹುದಾದಷ್ಟು ಹೆಚ್ಚಿತ್ತು. ಅವರಿಗೆ ತಮ್ಮ ಪ್ರವಾದಿಯೊಂದಿಗೆ(ಸ) ಅತೀವ ಪ್ರೇಮ ಮತ್ತು ಗ್ರಂಥದೊಂದಿಗೆ ಅಸಾಮಾನ್ಯ ಆಸಕ್ತಿ ಇತ್ತು. ಪವಿತ್ರ ಕುರ್‌ಆನಿನ ಪಠಣ ಅವರ ಮಟ್ಟಿಗ ಅತ್ಯಂತ ಪ್ರೀತಿಯ ಕೆಲಸವಾಗಿತ್ತು. ಅದು ಅವರ ಆತ್ಮದ ಅತ್ಯಂತ ಪ್ರಿಯಕ ಆಹಾರವಾಗಿತ್ತು. ಅವರ ಪೈಕಿ ಯಾರು ಒಂದು ದಿನದ ಮಟ್ಟಿಗಾದರೂ ಅದನ್ನು ಓದದ ಇರಲು ಸಾಧ್ಯವಿರಲಿಲ್ಲ. ಅನೇಕರು ಒಂದೇ ದಿನದಲ್ಲಿ ಸಂಪೂರ್ಣ ಕುರ್‌ಆನ್ ಓದಿಯೆ ಮುಗಿಸುತ್ತಿದ್ದರು. ಉದಾಹರಣೆಗಾಗಿ ಹ. ಉಸ್ಮಾನ್, ಹ. ಅಬ್ದುಲ್ಲಾ ಬಿನ್ ಅಮ್ರ್ ಮತ್ತು ಹ. ತಮೀಮ್ ದಾರಿಯವರ(ರ) ಜೀವನ ಚರಿತ್ರೆಯನ್ನು ಓದಿರಿ. ಪ್ರವಾದಿ ಯವರ(ಸ) ಕಾಲದಲ್ಲಿ ಅವರು ತಮ್ಮ ಸಂಗಾತಿಗಳನ್ನು ಕುರ್‌ಆನ್ ಕಡಿಮೆ ಓದಿದ್ದಕ ಛೀಮಾರಿ ಹಾಕಿದ ಒಂದೇ ಒಂದು ಘಟನೆಯೂ ನಮಗೆ ಲಭಿಸುವುದಿಲ್ಲ. ಆದ ಕುರ್‌ಆನ್ ಓದುವ ಬಗ್ಗೆ ಸಂಯಮ ತೋರಿಸಬೇಕು. ಅದನ್ನು ಓದುವುದರಲ್ಲಿ ಅತಿರೇ ಮಾಡಬಾರದು ಎಂದು ಪ್ರವಾದಿ(ಸ) ಹೇಳಿದ ಅನೇಕ ಘಟನೆಗಳು ನಮಗೆ ಸಿಗುತ್ತವೆ ಉದಾಹರಣೆಗೆ ಹ. ಅಬ್ದುಲ್ಲಾ ಬಿನ್ ಅಮ್ರ್(ರ) ಅವರ ಕುರಿತು ಅವರು ರಾತ್ರಿ ಇಡಿ ಕುರ್‌ಆನ್ ಓದುತ್ತಾ ಕಳೆಯುತ್ತಾರೆ ಎಂಬ ವಿಷಯ ತಿಳಿದಾಗ ಅವರನ್ನು ಅದರಿಂದ ತಡೆದು, 'ಕುರ್‌ಆನ್ ಒಂದು ತಿಂಗಳಲ್ಲಿ ಪೂರ್ಣಗೊಳಿಸಿರಿ.' 'ನನಗೆ ಅದಕ್ಕಿಂತ ಹೆಚ್ಚು ಸಾಮರ್ಥ್ಯವಿದೆ' ಎಂದು ಹೇಳಿದಾಗ "ಹಾಗಾದರೆ ಏಳು ರಾತ್ರಿಗಳಲ್ಲಿ ಪೂರ್ಣಗೊಳಿಸಿ ಮತ್ತು ಅದಕ್ಕಿಂತ ಹೆಚ್ಚು ಓದಬೇಡಿರಿ" ಎಂದರು. (ಬುಖಾರಿ-ಫಝಾಇಲುಲ್ ಕುರ್‌ಆನ್) ಇದೇ ರೀತಿ ಹ. ಕೈಸ್ ಬಿನ್ ಸಲಸಲ(ರ) ಪ್ರವಾದಿಯವರಲ್ಲಿ(ಸ) ಕೇಳಿದರು: 'ನಾನು ಕುರ್‌ಆನ ಎಷ್ಟು ದಿನಗಳಲ್ಲಿ ಓದಿ ಮುಗಿಸಬೇಕು?' ಆಗ ಪ್ರವಾದಿ(ಸ) ಹೇಳಿದರು: 'ಹದಿನೈದ ದಿನಗಳಲ್ಲಿ.' ಆಗ ಮತ್ತೆ ಕೈಸ್(ರ) ನಿವೇದಿಸಿಕೊಂಡರು: 'ನಾನು ಅದಕ್ಕಿಂತ ಕಡಿಮೆ ಸಮಯದಲ್ಲಿ ಸುಲಭವಾಗಿ ಮುಗಿಸಬಲ್ಲೆ.' ಆಗ ಪ್ರವಾದಿ(ಸ) ಹೇಳಿದರು: 'ಒಂದು ವಾರದಲ್ಲಿ

ಿದನ್ನು ಮುಗಿಸಿ.' ಆಗ ಮತ್ತೆ ಹೇಳಲಾಯಿತು. 'ಇದಕ್ಕಿಂತಲೂ ಕಡಿಮೆ ದಿನಗಳಲ್ಲಿ ನಾನು ಪೂರ್ತಿಗೊಳಿಸಬಲ್ಲೆ.' ಆಗ ಹೇಳಿದರು: 'ಇಲ್ಲ. ಅದಕ್ಕಿಂತ ಕಡಿಮೆ ಸಮಯದಲ್ಲಿ ಸಲ್ಲದು.' ಕನ್‌ಝುಲ್ ಅಮ್ಮಾಲ್)

5) ಕುರ್‌ಆನ್ ಇಪ್ಪತ್ತಮೂರು ವರ್ಷಗಳ ಕಾಲ ಸ್ವಲ್ಪ ಸ್ವಲ್ಪವಾಗಿ ಅವತೀರ್ಣ ಹೊಂಡಿತ್ತು. ಅದರರ್ಥ ಪ್ರವಾದಿ(ಸ) ಅವರ ಸಂಗಾತಿಗಳಿಗೆ ಕುರ್‌ಆನ್ ಕಂಠಪಾಠ ಮಾಡಲು ಹೆಚ್ಚೆಚ್ಚು ದೀರ್ಘ ಅವಧಿ ಲಭಿಸುತ್ತಿತ್ತು. ಸಾಮಾನ್ಯವಾಗಿ ಪೂರ್ಣ ಕುರ್‌ಆನ್ ಂಠಪಾಠ ಮಾಡಲು ಎರಡು ಎರಡೂವರೆ ವರ್ಷ ಧಾರಾಳ ಸಾಕಾಗುತ್ತದೆ. ಹಾಗೆ ಪೂರ್ಣ ಾಯಿಪಾಠ ಮಾಡಿದ ಲಕ್ಷಗಟ್ಟಲೆ ನಿದರ್ಶನವಿದೆ.

6) ಸಹಾಬಿಗಳ ಸ್ಮರಣ ಶಕ್ತಿಯು 'ಲೈಫ್ ಆಫ್ ಮುಹಮ್ಮದ್' ಗ್ರಂಥಕರ್ತ ಸರ್ ಲ್ಲಿಯಮ್ ಮೂರ್‌ನಂತಹ ಇಸ್ಲಾಮಿನ ಪಾಶ್ಚಿಮಾತ್ಯ ವಿಮರ್ಶಕನ ಭಾಷೆಯಲ್ಲಿ ಅತ್ಯಂತ ಉನ್ನತ'ವಾಗಿತ್ತು. ಏಕೆಂದರೆ ಅವರು ಅರಬ್ ಜನಾಂಗಕ್ಕೆ ಸೇರಿದವರು ಮತ್ತು ಅರಬರು ತಮ್ಮ ಸ್ಮರಣ ಶಕ್ತಿಯ ಮಟ್ಟಿಗೆ ಸರಿಸಾಟಿ ಇಲ್ಲದವರಾಗಿದ್ದರು.

ಈ ಎಲ್ಲ ವಿಷಯಗಳನ್ನು ದೃಷ್ಟಿಯಲ್ಲಿರಿಸಿ- ಅವು ಚರಿತ್ರೆಯ ಅನಿಷೇಧ್ಯ ಯಥಾರ್ಥಗಳು- ಯೋಚಿಸಿದಾಗ ಅವುಗಳ ಫಲಿತಾಂಶ ಅನುಭವದ ಬೆಳಕಿನಲ್ಲಿ ಮತ್ತು ವೈಚಾರಿಕವಾಗಿ ಏನು ಆಗಿರಬೇಕು? ಪ್ರವಾದಿಯವರ(ಸ) ಲಕ್ಷಗಟ್ಟಲೆ ಅನುಯಾಯಿಗಳ ಪೈಕಿ ಅಲ್ಪಸ್ವಲ್ಪ ಕುರ್‌ಆನ್ ತಿಳಿಯದವರು ಯಾರೂ ಇರಲಿಲ್ಲ. ಸಂಪೂರ್ಣ ಕುರ್‌ಆನನ್ನು ಅಕ್ಷರಶಃ ಕಂಠಪಾಠ ಮಾಡಿದ ಅಸಂಖ್ಯ ಸಹಾಬಿಗಳಿದ್ದರು. ಈ ಎಲ್ಲ ವಸ್ತುಸ್ಥಿತಿಯನ್ನು ಂಡು ಮಾನವ ಬುದ್ಧಿಯು ಸಹ ಯಾವುದೇ ಸಂಕೋಚವಿಲ್ಲದೆ ಈ ವಾಸ್ತವಿಕತೆಯನ್ನು ಒಪ್ಪಿಕೊಳ್ಳುತ್ತದೆ. ಇತಿಹಾಸವೂ ಅದಕ್ಕೆ ಸಾಕ್ಷ್ಯವಹಿಸುತ್ತದೆ. ಅದು ಹೇಳುತ್ತದೆ: ಮದೀನಾದ ಹೊರಗೆ ಯಾರಾದರೂ ಇಸ್ಲಾಮ್ ಸ್ವೀಕರಿಸಿದರೆ ಪ್ರವಾದಿ(ಸ) ಕುರ್‌ಆನ್ ಹಾಫಿಝ್ (ಕಂಠಪಾಠ ಮಾಡಿದವರು)ಗಳನ್ನು ಕಳುಹಿಸುತ್ತಿದ್ದರು. ಅನೇಕ ಸಲ ಅವರ ಸಂಖ್ಯೆ ಹೆಚ್ಚಾಗಿರುತ್ತಿತ್ತು. ಉದಾಹರಣೆಗೆ ಅಬುಲ್ ಬರಾಅ್ ಎಂಬ ವ್ಯಕ್ತಿ ನಜ್ದ್‌ನಿಂದ ಮದೀನಾಕ್ಕೆ ಬಂದರು. ತಮ್ಮ ಪ್ರದೇಶದಲ್ಲಿ ಕುರ್‌ಆನ್ ಕಲಿಸಿ ಕೊಡಲು ಶಿಕ್ಷಕರನ್ನು ಕಳುಹಿಸಿ ಕೊಡಬೇಕೆಂದು ಪ್ರವಾದಿಯವರನ್ನು(ಸ) ಕೇಳಿಕೊಂಡರು. ಆಗ ಪ್ರವಾದಿಯವರು(ಸ) ಅವರ ಜೊತೆ ಕಳುಹಿಸಿಕೊಟ್ಟ ಹಾಫಿಝ್‌ಗಳ ಸಂಖ್ಯೆ 70 ಆಗಿತ್ತು. (ಝಾದುಲ್ ಮಆದ್) ಕೇವಲ ಒಂದು ಸ್ಥಳಕ್ಕೆ ಕಳುಹಿಸಿಕೊಟ್ಟ ಹಾಫಿಝ್‌ಗಳ ಸಂಖ್ಯೆ 70 ಆದರೆ ಒಟ್ಟು ಎಷ್ಟು ದೊಡ್ಡ ಸಂಖ್ಯೆಯ ಮಂದಿ ಹಾಫಿಝ್‌ಗಳಾಗಿದ್ದರು ಎಂಬುದನ್ನು ಊಹಿಸಿಕೊಳ್ಳಿರಿ. ಪ್ರವಾದಿವರ್ಯರ(ಸ) ನಿಧನದ ಒಂದು ವರ್ಷ ನಂತರ ಯಮಾಮದಲ್ಲಿ ಭೀಕರ ಯುದ್ಧವಾಗಿ ಅದರಲ್ಲಿ 1200 ಅಥವಾ 1400 ಮಂದಿ ಹುತಾತ್ಮರಾಗಿದ್ದರು. ಆ ಪೈಕಿ 700 ಹಾಫಿಝ್‌ಗಳಿದ್ದರು. ಮುಜ್‌ಮುಝ್ಝವಾಯಿದ್)

ಸಹಾಬಿಗಳ ಕಾಲದಲ್ಲಿದ್ದ ಹಾಫಿಝ್‌ಗಳ ಈ ಸಂಖ್ಯೆಯು ಅನಂತರದ ಕಾಲದಲು ಮುಂದುವರಿಯಿತು. ಮಾತ್ರವಲ್ಲ ಮುಸ್ಲಿಮರ ಜನಸಂಖ್ಯೆಯ ವೃದ್ಧಿಯೊಂದಿಗೆ ಹಾಫಿಝ್‌ಗ ಸಂಖ್ಯೆಯೂ ಹೆಚ್ಚುತ್ತ ಹೋಯಿತು. ಆ ಬಳಿಕದ ಎಲ್ಲ ಕಾಲಗಳಲ್ಲಿಯೂ ಮುಸ್ಲಿಮರ ಹಾಫಿಝ್‌ಗಳ ಒಂದು ದೊಡ್ಡ ಸಂಖ್ಯೆಯು ಇರುತ್ತಿತ್ತು. ಇಸ್ಲಾಮಿ ಇತಿಹಾಸದ ಸಹ ವಾಸ್ತವಿಕತೆ ಇದು. ಇದರಲ್ಲಿ ಸಂಶಯಕ್ಕೆ ಎಡೆಯೇ ಇಲ್ಲ. ಸಾಮಾನ್ಯ ಮುಸ್ಲಿಮ ಧರ್ಮದ ಕುರಿತು ಅಭಿರುಚಿಯು ಪಾತಾಳಕ್ಕೆ ಇಳಿದಿರುವ ಹಿಂದಿನ ಕಾಲಕ್ಕೆ ಹೋಲಿಸಿದ 10ಶೇ. ಅಥವಾ 5 ಶೇ. ದಷ್ಟು ಮಾತ್ರ ಇರುವ ಇಂದಿನ ಕಾಲದಲ್ಲೂ ಪ್ರತಿಯೊಂ ಮುಸ್ಲಿಮ್ ಜನವಾಸ ಕೇಂದ್ರದಲ್ಲೂ ಒಬ್ಬಿಬ್ಬರು ಹಾಫಿಝ್‌ಗಳು ಇದ್ದೇ ಇರುತ್ತಾ

2. ಇನ್ನು ಸುರಕ್ಷಿತತೆಯ ಇನ್ನೊಂದು ರೂಪ. ಬರಹ ಮೂಲಕ ಸುರಕ್ಷಿತವಾಗಿಡು ಬಗ್ಗೆ ಚರ್ಚಿಸುವ ಮೊದಲು ಈ ಬಗ್ಗೆ ಈ ಕೆಳಗಿನ ವಾಸ್ತವಿಕತೆಗಳನ್ನು ಗಮನಿಸಿರಿ

1) ಕುರ್‌ಆನ್ ಅವತೀರ್ಣಗೊಳ್ಳುತ್ತಿದ್ದ ಕಾಲದಲ್ಲಿ ಅರಬ್ ದೇಶದಲ್ಲಿ ಬರವಣಿಗೆಯ ಹೆಚ್ಚು ಚಾಲ್ತಿಯಲ್ಲಿರಲಿಲ್ಲ. ಅದಕ್ಕೆ ಬೇಕಾದ ಅನುಕೂಲತೆಗಳು ಕಡಿಮೆ ಇದ್ದುವು. ಆದ ಬರೆಯುವ ಕ್ರಮವೇ ಅಲ್ಲಿರಲಿಲ್ಲ ಎಂದು ಇದರರ್ಥವಲ್ಲ. ಅರಬ್ ಇತಿಹಾಸ ಅಧ್ಯಯನ ಮಾಡಿದರೆ ಈ ಬಗ್ಗೆ ನಿರಾಕರಿಸಲಾಗದ ಹಲವು ಸಾಕ್ಷ್ಯಗಳು ನಿಮ ಲಭಿಸುವುವು. ಅರಬ್ ದೇಶದಲ್ಲಿ ವಿಶೇಷವಾಗಿ ಮಕ್ಕಾ ಪಟ್ಟಣದಲ್ಲಿ ಬರವಣಿಗೆಯ ಕ್ರ ಗಣನೀಯ ಸಂಖ್ಯೆಯಲ್ಲಿತ್ತು. ಅಲ್ಲಿ ಜನರು ಒಪ್ಪಂದಗಳನ್ನು ಬರೆದು ದಸ್ತಾವೇಜುಗಳ ಮಾಡುತ್ತಿದ್ದರು. ಪದ್ಯಗಳನ್ನು ಮತ್ತು ಸ್ತುತಿಗೀತೆಗಳನ್ನು ಬರೆದಿಡುತ್ತಿದ್ದರು. ಉದ ಮಕ್ಕಾದಲ್ಲಿ ಕುರೈಶರ ಎಲ್ಲ ಗೋತ್ರಗಳು ಪ್ರವಾದಿ ಮುಹಮ್ಮದ್(ಸ) ಮತ್ತವ ಮನೆತನವಾದ ಬನೀಹಾಶಿಮ್ ಮತ್ತು ಎಲ್ಲ ಮುಸ್ಲಿಮರ ವಿರುದ್ಧ ಸಂಪೂರ್ಣ ಬಹಿಷ್ಕಾ ಮಾಡುವ ಒಪ್ಪಂದ ಮಾಡಿಕೊಂಡಾಗ ಅದನ್ನು ಬರೆದು ಕಅಬಾದೊಳಗೆ ಅದನ್ನು ತೂ ಹಾಕಿದರು. (ಇಬ್ನು ಹಿಶಾಮ್‌ರ ಚರಿತ್ರೆ, ಭಾಗ-1) ಇದೇ ರೀತಿ ಅರಬಿ ಭಾಷೆ ಬ ಪ್ರತಿಯೊಬ್ಬನಿಗೂ ತಿಳಿದಿರುವ ಅರಬಿಯ ಪ್ರಖ್ಯಾತ ಸ್ತುತಿಗೀತೆಯಾದ 'ಅ ಮಅಲ್ಲಕಾತುಸ್ಸಬಅ್' ಅನ್ನು ಮುಅಲ್ಲಕಾತ್ ಎಂದು ಕರೆಯಲು ಕಾರಣವೇ ಅ ಕಅಬಾದ ಗೋಡೆಯಲ್ಲಿ ತೂಗು ಹಾಕಿರುವುದಾಗಿದೆ. (ತಾರೀಖುಲ್ ಅದಬುಲ್ ಅರಬಿ ಬದ್ರ್ ಯುದ್ಧದಲ್ಲಿ ಸೆರೆಹಿಡಿಯಲ್ಪಟ್ಟ 70 ಮಂದಿ ಕುರೈಶರ ಪೈಕಿ ಅನೇಕರ ವಿಮೋಚ ಮಾಡಿಸಬೇಕಾದರೆ ಒಬ್ಬೊಬ್ಬರು ಹತ್ತು ಮಕ್ಕಳಿಗೆ ಒಳ್ಳೆಯ ರೀತಿಯಲ್ಲಿ ಓದು ಬರ ಕಲಿಸಿಕೊಡಬೇಕಾಗಿತ್ತು. (ತಬ್‌ಕಾತ್ ಇಬ್ನು ಸಅದ್) ಇಂತಹ ಇನ್ನೂ ಅನೇಕ ಘಟನೆಗ ಮಕ್ಕಾದಲ್ಲಿ ಬರವಣಿಗೆಯ ಕ್ರಮವು ಗಣನೀಯವಾಗಿ ಚಾಲ್ತಿಯಲ್ಲಿತ್ತೆಂಬುದಕ್ಕೆ ಸ್ಪ ಪುರಾವೆಗಳಾಗಿವೆ. ಆದ್ದರಿಂದ ಆ ಕಾಲದ ಅರಬೀ ಸಾಹಿತ್ಯವನ್ನು ಅವಲೋಕಿಸಿದರೆ ಅದರ 'ಬರವಣಿಗೆ'ಯ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳ ಪ್ರಸ್ತಾಪ ಬಹಳಷ್ಟು ಸಿಗಬಹುದ ಸ್ವಯಂ ಪವಿತ್ರ ಕುರ್‌ಆನಿನಲ್ಲಿ ಕಲಮ್ (ಲೇಖನಿ), ಮಿದಾದ್(ಶಾಯಿ), ಕಿತಾಬ್(ಪುಸ್ತಕ

ತಾಬತ್ (ಬರವಣಿಗೆ), ಕಾತಿಬ್(ಬರೆಯುವವ), ಇಮ್ಲಾ (ಹೇಳಿ ಬರೆಯಿಸುವುದು), ಇಕ್‌ತಿಸಾಬ್ (ಬರೆದುಕೊಳ್ಳು), ಮಸ್ತೂರ (ಬರೆಯಲ್ಪಟ್ಟ), ಸಫರಃ (ಬರೆಯುವವರು), ಸಹೀಫ ಬರೆಯಲ್ಪಟ್ಟ ಪುಟ), ಲೌಹ್ (ತಖ್ತೆ), ರಕ್ಕ್ ಮತ್ತು ಕರ್ತಾಸ್ (ಕಾಗದ) ಇತ್ಯಾದಿ ಪದಗಳ ಇರುವಿಕೆಯೇ ಕುರ್‌ಆನ್ ಅವತರಣ ಕಾಲದಲ್ಲಿ ಅರಬರು ಓದು ಬರಹದ ಕಲೆಯನ್ನು ಚೆನ್ನಾಗಿ ತಿಳಿದಿದ್ದರು ಎಂಬುದಕ್ಕೆ ಸ್ಪಷ್ಟ ನಿದರ್ಶನವಾಗಿದೆ.

2) ಬರವಣಿಗೆಯ ಕಲೆಯನ್ನು ಅಲ್ಲಾಹನು ಪವಿತ್ರ ಕುರ್‌ಆನಿನಲ್ಲಿ ಒಂದು ಪ್ರಮುಖ ಸೌಭಾಗ್ಯ ಮತ್ತು ಅಸಾಮಾನ್ಯ ಕೊಡುಗೆಯೆಂದು ಸಾರಿರುವನು. ಅದನ್ನರಿಯ ಬೇಕಾದರೆ ಮೊದಲ ವಹ್ಯ್‌ಯನ್ನು ನೋಡಿದರೆ ಸಾಕು. ಅದರಲ್ಲಿ ಐದು ಚಿಕ್ಕ ಚಿಕ್ಕ ವಾಕ್ಯಗಳಿವೆ. ಅವುಗಳಲ್ಲಿ ಅಲ್ಲಾಹನು ತನ್ನ ಕೊಡುಗೆಗಳನ್ನು ಜ್ಞಾಪಿಸಿರುವನು. ಆ ಪೈಕಿ ಒಂದು ಲೇಖನಿಯ ಮೂಲಕ ಕಲಿಸಿದನು" ಎಂದಾಗಿದೆ.

3) ವ್ಯಾಪಾರೀ ಜೀವನದ ಪ್ರಮುಖ ವ್ಯವಹಾರಗಳ ಪೈಕಿ ಕೆಲವನ್ನು ಬರೆದಿಡ ಬೇಕೆಂದು ಒತ್ತಾಯಪೂರ್ವಕ ಹೇಳಿದೆ:

"ಓ ಸತ್ಯವಿಶ್ವಾಸಿಗಳೇ! ನೀವು ಅವಧಿಯನ್ನು ನಿಶ್ಚಯಿಸಿಕೊಂಡು ಪರಸ್ಪರ ಸಾಲದ ಕೊಡುಕೊಳ್ಳುವಿಕೆ ಕೇಪಾದೇವಿ ಮಾಡುವಾಗ ಅದನ್ನು ಬರೆದಿಟ್ಟುಕೊಳ್ಳಿರಿ. ಬರಹಗಾರನೊಬ್ಬನು ಉಭಯತ್ರರಲ್ಲಿ ಯಾರಿಗೂ ಅನ್ಯಾಯವಾಗದಂತೆ ಕರಾರು ಪತ್ರ ಬರೆಯಬೇಕು. ಅಲ್ಲಾಹನು ಯಾರಿಗೆ ಬರವಣಿಗೆಯ ಅರ್ಹತೆ ಪ್ರದಾನ ಮಾಡಿರುವನೋ ಅವನು ಬರೆಯಲು ನಿರಾಕರಿಸಬಾರದು. ಅವನು ಬರೆಯಬೇಕು. ಸಾಲಕ್ಕೆ ಬಾಧ್ಯಸ್ಥನಾದವನು (ಸಾಲ ಪಡೆಯುವಾತನು) ಒಕ್ಕಣೆಯನ್ನು ಬರೆಯಿಸಬೇಕು." (ಪವಿತ್ರ ಕುರ್‌ಆನ್ 2:282)

ಈ ಮೂರು ವಾಸ್ತವಿಕತೆಗಳ ಉಪಸ್ಥಿತಿಯಲ್ಲಿ ಪವಿತ್ರ ಕುರ್‌ಆನಿನ ನಿರಂತರ ಮತ್ತು ಪರಿಪೂರ್ಣ ಬರವಣಿಗೆಯು ಕಡ್ಡಾಯವೆಂದು ಪರಿಗಣಿಸಲೇಬೇಕಾಗಿದೆ. ಎಲ್ಲಾ ಸಹಾಬಿಗಳು ಓದು-ಬರವಣಿಗೆಯ ವಿದ್ಯೆಯಿಂದ ವಂಚಿತರಾಗಿಲ್ಲವೆಂದಾದರೆ; ಅಲ್ಲಾಹನು ಪ್ರಥಮ ದಿನದಿಂದಲೇ ಈ ಕಲೆಯನ್ನು ಒಂದು ದೊಡ್ಡ ಸೌಭಾಗ್ಯ ಮತ್ತು ಜ್ಞಾನ ಸಂಪಾದನೆಯ ಮಾಧ್ಯಮ ಎಂದು ಸಾರಿರುವಾಗ, ವ್ಯಾಪಾರಕ್ಕೆ ಸಂಬಂಧಿಸಿದ ವ್ಯವಹಾರಗಳನ್ನು ಬರೆದಿಡ ಬೇಕೆಂಬ ಆದೇಶ ನೀಡಿರುವಾಗ ಪ್ರವಾದಿ(ಸ) ಮತ್ತವರ ಅನುಯಾಯಿಗಳು ಕುರ್‌ಆನನ್ನು ಬರೆದಿಡುವ ಗೋಜಿಗೆ ಹೋಗಲಿಲ್ಲವೆನ್ನುವುದನ್ನು ಸಾಮಾನ್ಯ ಮನುಷ್ಯ ಬುದ್ಧಿ ಒಪ್ಪುತ್ತದೆಯೇ? ಅವರ ಬಳಿ ಈ ಕುರ್‌ಆನ್ ಅತ್ಯಂತ ಪ್ರಮುಖ ಮತ್ತು ಅಮೂಲ್ಯ ವಸ್ತುವಾಗಿತ್ತು. ಮಾನವಕುಲದ ಇಹ-ಪರ ವಿಜಯವು ಇದನ್ನೇ ಅವಲಂಬಿಸಿತ್ತು. ಯಾವುದಾದರೂ ವಾಣಿಯನ್ನು ಸುರಕ್ಷಿತವಾಗಿಡುವ ಅತ್ಯುತ್ತಮ ಮಾಧ್ಯಮ ಅದನ್ನು ಬರೆದಿಡುವುದಾಗಿದೆ ಎಂಬ ವಾಸ್ತವಿಕತೆಯನ್ನು ಅವರು ಚೆನ್ನಾಗಿ ತಿಳಿದಿದ್ದರು.

ತರ್ಕ ಮತ್ತು ಬುದ್ಧಿಯ ಈ ತೀರ್ಪು ಮುಂದೆ ಬಂದ ಬಳಿಕ ಇನ್ನು ಇತಿಹಾಸ ಬಾಯಿಯಿಂದ ಘಟನೆಗಳ ಸಾಕ್ಷ್ಯವನ್ನು ನೋಡೋಣ:

1] ಕುರ್‌ಆನ್ ಅವತೀರ್ಣವಾಗುತ್ತಾ ಹೋದಂತೆ ಪ್ರವಾದಿ(ಸ) ಅದನ್ನು ಬರೆಯಿಸುತ್ತ ಹೋಗುತ್ತಿದ್ದರು. ಈ ಉದ್ದೇಶಕ್ಕಾಗಿ ಬರಹಗಾರರು ನಿಯುಕ್ತರಾಗಿದ್ದರು. ಯಾವುದಾದರು ವಹ್ಯ್ ಬಂದಾಗ ಪ್ರವಾದಿ(ಸ) ಓರ್ವ ಬರಹಗಾರನನ್ನು ಕರೆದು ಅದನ್ನು ಬರೆದುಕೊಳ್ಳುವಂ ಹೇಳುತ್ತಿದ್ದರು. (ತಿರ್ಮಿದಿ-ಕಿತಾಬುತ್ತಫ್‌ಸೀರ್) ಪ್ರಧಾನ ಬರಹಗಾರರಾದ ಹ. ಝೈದ ಬಿನ್ ಸಾಬಿತ್(ರ) ಇನ್ನಷ್ಟು ವಿವರಗಳನ್ನು ನೀಡುತ್ತಾ ಹೇಳಿರುವರು: ನಾನು ಪ್ರವಾದಿ(ಸ ಅವರ ಆದೇಶದ ಮೇರೆಗೆ ಬರೆದಾದ ಮೇಲೆ ಪ್ರವಾದಿ(ಸ) ಅದನ್ನು ಓದಿ ಕೇಳುತ್ತಿದ್ದರು ಬರವಣಿಗೆಯಲ್ಲೇನಾದರೂ ತಪ್ಪಾಗಿದ್ದರೆ ಅದನ್ನು ಸರಿಪಡಿಸುತ್ತಿದ್ದರು.

(ಮಜ್‌ಮಉಝ್ಝವಾಇದ್ ಭಾಗ 1, ಪುಟ 60

2] ಪವಿತ್ರ ಕುರ್‌ಆನಿನಲ್ಲಿ ಕುರ್‌ಆನ್ ನಿರಂತರ ಬರೆಯಲ್ಪಡುತ್ತಿದೆಯೆಂದ (ಕುರೈಶ್ ಸತ್ಯನಿಷೇಧಿಗಳ ಮಾತು) ಉಲ್ಲೇಖಿಸಲ್ಪಟ್ಟಿದೆ: "ಇದೆಲ್ಲಾ ಹಳೇ ಕಾಲದವರ ಬರೆದಿಟ್ಟ ವಿಷಯಗಳಾಗಿವೆ. ಅದನ್ನೇ ಇವನು ಬರೆಯಿಸಿ ಕೊಳ್ಳುತ್ತಾನೆ ಮತ್ತು ಅದನ ಬೆಳಗು ಬೈಗುಗಳಲ್ಲಿ ಅವನಿಗೆ ಓದಿ ಹೇಳಲಾಗುತ್ತದೆ" ಎಂದೂ ಅವರು ಹೇಳುತ್ತಾರೆ.

(ಪವಿತ್ರ ಕುರ್‌ಆನ್, 25:5

3] ಪ್ರವಾದಿ(ಸ) ಸಹಾಬಿಗಳಿಗೆ ಈ ರೀತಿ ಆದೇಶಿಸಿದರು: ಕುರ್‌ಆನಿನ ಹೊರತ ನನ್ನಿಂದ ಆಲಿಸಿದ ಇನ್ನಾವುದನ್ನೂ ಬರೆದಿಡಬೇಡಿರಿ. (ದಾರಿಮಿ

4] ಹಿಜ್ರತ್‌ಗಿಂತ ಬಹಳ ಸಮಯ ಮುಂಚಿನ ಘಟನೆ. ಹಝ್ರತ್ ಉಮರ್(ರ ಆಗಿನ್ನೂ ಇಸ್ಲಾಮ್ ಸ್ವೀಕರಿಸಿರಲಿಲ್ಲ. ಅವರು ತಮ್ಮ ತಂಗಿಯ ಮನೆ ತಲುಪಿದರು. ಅಲ್ಲಿ ಅವರಿಗೆ ಮತ್ತು ಅವರ ಪತಿ ಸಈದ್ ಬಿನ್ ಝೈದ್‌ರಿಗೆ ಹ. ಖಬ್ಬಾಬ್(ರ) ತಾಹ ಅಧ್ಯಾಯವನ್ನು ಕಲಿಸುತ್ತಿದ್ದರು. ಅವರು ಬರುವ ಶಬ್ದ ಕೇಳಿ ಹ. ಖಬ್ಬಾಬ್ ಒಂದ ಬದಿಗೆ ಸರಿದರು ಮತ್ತು ಹ. ಖಬ್ಬಾಬ್ ಅವರಿಗೆ ಓದಿಸುತ್ತಿದ್ದ ಹಾಳೆಗಳನ್ನು ಹ ಉಮರ್‌ರ(ರ) ಸೋದರಿ ತಮ್ಮ ತೊಡೆಯ ಅಡಿಯಲ್ಲಿಟ್ಟರು. ಉಮರ್(ರ) ಅವರಲ್ಲಿ "ನನಗೆ ನೀವು ಓದುತ್ತಿದ್ದ ಗ್ರಂಥವನ್ನು ತೋರಿಸಿ" ಎಂದು ಹೇಳಿದಾಗ, ಅದು ಶುದ್ಧ ರಾದವರು ಮಾತ್ರ ಸ್ಪರ್ಶಿಸಬಹುದೆಂದು ಹೇಳಿದರು. ಇದನ್ನು ಕೇಳಿ ಹ. ಉಮರ್(ರ ಸ್ನಾನ ಮಾಡಿ ಬಂದರು. ಆಗ ಅವರು ಆ ಗ್ರಂಥವನ್ನು ಅವರ ಕೈಯಲ್ಲಿ ನೀಡಿದರು. ಹ ಉಮರ್(ರ) ಅದನ್ನು ಓದಿದರು. (ಸೀರತ್ ಇಬ್ನು ಹಿಶಾಮ್ ಭಾಗ-1, ಪುಟ 367)

5] ಪ್ರವಾದಿಯವರ(ಸ) ಸಂಗಾತಿಗಳು ಹೇಳುತ್ತಾರೆ: ನಾವು ಪ್ರವಾದಿವರ್ಯರ(ಸ) ಬ ಕುಳಿತು ಕುರ್‌ಆನ್ ಬರೆಯುತ್ತಿದ್ದೆವು. ಹ. ಅಬ್ದುಲ್ಲಾ ಬಿನ್ ಅಮ್ರ್(ರ) ಹೇಳುತ್ತಾರೆ:

ಕೇಳೆ ನಾವು ಪ್ರವಾದಿವರ್ಯರ(ಸ) ಸುತ್ತಮುತ್ತ ಕುಳಿತು ಕುರ್‌ಆನ್ ಬರೆಯುತ್ತಿದ್ದೆವು. ದಾರಿಮಿ) ಒಮ್ಮೆ ಹ. ಅಲೀಯವರು(ರ) ಒಂದು ಪ್ರಶ್ನೆಗೆ ಉತ್ತರವಾಗಿ ಹೀಗೆ ಸ್ಪಷ್ಟ ಪಡಿಸಿರುವರು: ಅಲ್ಲಾಹನ ಗ್ರಂಥದಲ್ಲಿ ಉಲ್ಲೇಖಿತವಾಗಿರುವುದರ ಹೊರತು ಬೇರೆ ಯಾವ ಬರೆದ ವಸ್ತುವೂ ನಮ್ಮ ಬಳಿ ಇಲ್ಲ. (ಬುಖಾರಿ)

ಹ. ಝೈದ್ ಬಿನ್ ಸಾಬಿತ್(ರ) ಈ ರೀತಿ ಹೇಳಿರುವರು: ನಾವು ಪ್ರವಾದಿವರ್ಯರ(ಸ) ಸನ್ನಿಧಿಯಲ್ಲಿ ಕುಳಿತು (ಚರ್ಮ ಇತ್ಯಾದಿಗಳ) ವಿಭಿನ್ನ ತುಂಡುಗಳಲ್ಲಿ (ಅವರ ಆದೇಶದ ಮೇರೆಗೆ) ಕುರ್‌ಆನ್ ಕ್ರೋಢೀಕರಿಸುತ್ತಿದ್ದೆವು.

(ಬುಖಾರಿ - ಫಝಾಇಲುಲ್ ಕುರ್‌ಆನ್)

ಈ ಘಟನೆಗಳು ಮತ್ತು ವಾಸ್ತವಿಕತೆಗಳು ಕುರ್‌ಆನ್ ಬರೆಯುವ ಎರಡು ವ್ಯವಸ್ಥೆಗಳಿದ್ದುವು ಎಂಬುದನ್ನು ಸ್ಪಷ್ಟಪಡಿಸುತ್ತದೆ. ಒಂದು ಅಧಿಕೃತ, ಮತ್ತೊಂದು ಸಾರ್ವಜನಿಕ. ಒಂದೆಡೆ ಪ್ರವಾದಿಯವರ(ಸ) ವೈಯಕ್ತಿಕ ಮೇಲ್ನೋಟದಲ್ಲಿ ಪೂರ್ಣ ವ್ಯವಸ್ಥೆಯೊಂದಿಗೆ ಕುರ್‌ಆನ್ ನಿರಂತರ ಬರೆಯಲ್ಪಡುತ್ತಿತ್ತು. ಇನ್ನೊಂದೆಡೆ ಜನ ಸಾಮಾನ್ಯರ ಪೈಕಿ ಬರೆಯ ಬಲ್ಲವರೆಲ್ಲರೂ ಅದನ್ನು ಬರೆದುಕೊಳ್ಳಬೇಕೆಂಬ ಆದೇಶವೂ ಇತ್ತು. ಈ ಆದೇಶವನ್ನು ಸಂಪೂರ್ಣವಾಗಿ ಪಾಲಿಸಲಾಗುತ್ತಿತ್ತು. ಮಕ್ಕಾದ ಅತ್ಯಂತ ಕಷ್ಟಕರ ಪರಿಸ್ಥಿತಿಯಲ್ಲೇ ಈ ರೀತಿ ಕುರ್‌ಆನನ್ನು ಬರೆದಿಡುವ ಕಾರ್ಯ ಜಾರಿಯಲ್ಲಿದ್ದಾಗ ಹ. ಉಮರ್‌ರ(ರ) ಘಟನೆಯಿಂದ ವ್ಯಕ್ತವಾದಂತೆ] ಮದೀನಾದಲ್ಲಿ ಅದು ಜಾರಿಯಲ್ಲಿತ್ತೆಂಬುದನ್ನು ವಿವರಿಸುವ ಅಗತ್ಯವೇ ಉಳಿದಿಲ್ಲ. ಮದೀನಾದಲ್ಲಿ ಮುಸ್ಲಿಮರು ಸಂಖ್ಯಾಬಲದ ದೃಷ್ಟಿಯಿಂದಲೂ ಮಾಧ್ಯಮಗಳ ದೃಷ್ಟಿಯಿಂದಲೂ ಬಹಳ ಪ್ರಗತಿ ಸಾಧಿಸಿದ್ದರು. ಪ್ರವಾದಿಯವರ(ಸ) ಸುತ್ತಮುತ್ತ ಕುಳಿತು ಕುರ್‌ಆನ್ ಬರೆಯುತ್ತಿದ್ದರೆಂಬ ಸಹಾಬಿಗಳ ಮಾತನ್ನು ನೀವು ಈಗಾಗಲೇ ಕೇಳಿದ್ದೀರಿ. ಈ ರೀತಿ ಪ್ರವಾದಿಯವರ(ಸ) ಜೀವನದಲ್ಲೇ ಅನೇಕ ಸಹಾಬಿಗಳು ಕುರ್‌ಆನನ್ನು ಪೂರ್ತಿ ಬರೆದಿದ್ದರು. ಹ. ಅಬೂದರ್ದಾ, ಹ. ಮುಆದ್ ಬಿನ್ ಜಬಲ್, ಹ. ಝೈದ್ ಬಿನ್ ಸಾಬಿತ್, ಹ. ಅಬೂ ಝೈದ್(ರ) ಮುಂತಾದವರ ಬಗ್ಗೆ ಹ. ಅನಸ್‌ರವರು(ರ) ಹೇಳುತ್ತಾರೆ: ಅವರು ಪ್ರವಾದಿಯವರ(ಸ) ಜೀವಮಾನದಲ್ಲೇ ಕುರ್‌ಆನ್ ಪೂರ್ಣವಾಗಿ ಬರೆದಿದ್ದರು. (ಬುಖಾರಿ-ಫಝಾಇಲುಲ್ ಕುರ್‌ಆನ್) ಇಂತಹ ಸಹಾಬಿಗಳ ಒಟ್ಟು ಸಂಖ್ಯೆ ಎಷ್ಟಿರಬಹುದು ಎಂಬುದನ್ನು ಈ ಘಟನೆಯಿಂದ ಅಂದಾಜಿಸಬಹುದು: ಪ್ರವಾದಿಯವರ(ಸ) ಕಾಲಾನಂತರ ನಡೆದ ಯಮಾಮ ಯುದ್ಧದಲ್ಲಿ ಎಪ್ಪತ್ತು ಹಾಫಿಝ್‌ಗಳು (ಕಂಠಪಾಠ ಮಾಡಿದವರು) ಮೃತರಾಗಿದ್ದರು.

(ಮರ್‌ಕಾತಃ ಹಾಷಿಯಃ ಬುಖಾರಿ - ಫಝಾಇಲುಲ್ ಕುರ್‌ಆನ್)

ಒಟ್ಟಿನಲ್ಲಿ ಪವಿತ್ರ ಕುರ್‌ಆನ್ ಪ್ರವಾದಿಯವರ(ಸ) ಜೀವನ ಕಾಲದಲ್ಲಿ ಸಂಪೂರ್ಣ ಬರೆಯಲಾಗಿತ್ತು ಮತ್ತು ಪ್ರವಾದಿಯವರ(ಸ) ನಿಧನ ಕಾಲಕ್ಕೆ ಅದರ ಹಲವು ಪ್ರತಿಗಳು

ಇದ್ದುವು ಎಂಬುದು ಸಂಶಯಾತೀತವಾಗಿ ತಿಳಿದುಬಂತು. ಯಾವ ಕಾಲದಲ್ಲಿಯೂ ಮುಸ್ಲಿಮ ಸಮಾಜವು ಲಿಖಿತ ಕುರ್‌ಆನ್‌ನಿಂದ ವಂಚಿತವಾಗಿರಲಿಲ್ಲ. ಪ್ರವಾದಿವರ್ಯರು(ಸ) ತಮ ಹಜ್ಜತುಲ್ ವಿದಾದ ಭಾಷಣದಲ್ಲಿ "ಜನರೇ! ಜ್ಞಾನ(ಕುರ್‌ಆನ್)ವು ಎತ್ತಲ್ಪಡುವ ಆ ಕಾ ಬರುವುದಕ್ಕೆ ಮುಂಚಿತವಾಗಿ ಅದನ್ನು ಗಳಿಸಿಕೊಳ್ಳಿರಿ" ಎಂದಾಗ ಓರ್ವ ಗ್ರಾಮೀಣನು ನಮ ಬಳಿ ಲಿಖಿತ ಕುರ್‌ಆನ್ ಇರುವಾಗ ಜ್ಞಾನ ಎತ್ತಲ್ಪಡುವುದು ಹೇಗೆ ಎಂದು ಪ್ರಶ್ನಿಸಿದನ **(ಮುಸ್ನದ್ ಅಹ್ಮದ್ ಭಾಗ- 5, ಪುಟ 266)**

ಪ್ರವಾದಿಯವರ(ಸ) ಜೀವನ ಕಾಲದಲ್ಲೇ ಕುರ್‌ಆನ್ ಬರೆಯಲ್ಪಟ್ಟು ಹಳ್ಳಿಗಳವರೆ ತಲುಪಿತ್ತು ಎಂಬುದಕ್ಕೆ ನಿದರ್ಶನವಿದು. ಕೊನೆಯದಾಗಿ ಇನ್ನೊಂದು ವಾಸ್ತವಿಕತೆಯನ ಅವಲೋಕಿಸಿರಿ: ಪವಿತ್ರ ಕುರ್‌ಆನ್ ತನ್ನನ್ನು ಕಿತಾಬ್ (ಗ್ರಂಥ) ಎಂದು ಅನೇಕ ಕ ಹೇಳಿದೆ. ಉದಾಃ **"ಇದು (ದೈವಿಕ) ಗ್ರಂಥ; ಸಂದೇಹಾತೀತವಿದು." (2:2)** ಇದೇ ರೀ ಸುಹುಫ ಎಂದೂ ಹೇಳಿದೆ. **"ಅಲ್ಲಾಹನ ವತಿಯಿಂದ, ನೇರವಾದ ಹಾಗೂ ಸರಿಯಾ ಬರಹಗಳುಳ್ಳ ಪಾವನ ಗ್ರಂಥಗಳನ್ನು ಓದಿ ಹೇಳುವ ಸಂದೇಶವಾಹಕನು ಬರುವವರೆಗೆ. (98:2-3)** ಅದು ತನ್ನ ಕುರಿತು ತನ್ನನ್ನು ಕೇವಲ ಶುದ್ಧರಾದವರೇ ಮುಟ್ಟುತ್ತಾರೆ ಎಂದಿ "ಪರಿಶುದ್ಧರಲ್ಲದೆ ಬೇರಾರೂ ಇದನ್ನು ಸ್ಪರ್ಶಿಸಲಾರರು." **(56:79)** ಇನ್ನೊಂದೆ "ಪಾವನವಾದ ಹೊತ್ತಗೆಗಳಲ್ಲಿ ಲಿಖಿತವಾಗಿದೆ ಮತ್ತು ಅವು ಮಾನ್ಯರಾದ ಶಿಷ್ಟಲಿಪಿಕಾರ ಕೈಗಳಲ್ಲಿರುತ್ತವೆ." **(ಪವಿತ್ರ ಕುರ್‌ಆನ್, 80:15-1**

ಈ ಹೇಳಿಕೆಗಳು ಸ್ವಯಂ ಪವಿತ್ರ ಕುರ್‌ಆನ್ ತನ್ನನ್ನು ಒಂದು ಲಿಖಿತ ಗ್ರಂ ರೂಪದ ಮಾರ್ಗದರ್ಶನವೆಂದು ಸಾರುತ್ತದೆ ಎಂಬುದನ್ನು ಸ್ಪಷ್ಟಪಡಿಸುತ್ತವೆ. ಅದ ಬಾಹ್ಯ ಅಸ್ತಿತ್ವದ ಜೊತೆಗೆ ಗ್ರಂಥದ ರೂಪದಲ್ಲಿರುವುದು ಕೂಡಾ ಕಡ್ಡಾಯವಾಗಿ ಪ್ರವಾದಿ(ಸ) ಮತ್ತು ಅವರ ಸಹಾಬಿಗಳು ಕುರ್‌ಆನ್ ಬರೆದಿಟ್ಟುದಕ್ಕೆ ಪ್ರೇರಣೆ ಕೇವ ಧರ್ಮಶ್ರದ್ಧೆಯಲ್ಲ, ಬದಲಾಗಿ ಸಂಪೂರ್ಣ ಕುರ್‌ಆನಿನ ಸ್ಥಾನಮಾನವು ಅವರಿಂದ ಕೆಲಸ ಮಾಡಿಸಿತು. ಅದನ್ನು ಲಿಖಿತ ರೂಪದಲ್ಲಿ ಕ್ರೋಡೀಕರಿಸದಿದ್ದರೆ ಅದರ ಸಂಪೂಣ ಅಸ್ತಿತ್ವ ಇರಲಾರದು.

ಪವಿತ್ರ ಕುರ್‌ಆನಿನ ಬರವಣಿಗೆಯ ಬಗ್ಗೆ ವಿವರಗಳು ನಿಮ್ಮ ಮುಂದೆ ಬಂದಿ ಅವುಗಳನ್ನು ನೋಡಿದ ಬಳಿಕ ಅದನ್ನು ಒಪ್ಪುವುದು ಮಾತ್ರವಲ್ಲ ದೃಢವಿಶ್ವಾ ತಾಳಬೇಕಾಗುತ್ತದೆ.

ಇನ್ನು ಅನಂತರದ ಕಾಲಗಳ ಪ್ರಶ್ನೆ. ಈ ಪ್ರಶ್ನೆಯೇ ಅನಾವಶ್ಯಕವಾದುದ ಖುಲಫಾಉರ್ರಾಶಿದೀನ್‌ರ ಕಾಲದಲ್ಲಿ ಕುರ್‌ಆನಿನ ಸಂರಕ್ಷಣೆ ಮತ್ತು ಪ್ರಸಾರಕ್ಕೆ ಕೈಗೊಳ್ಳಲಾ ಕ್ರಮವನ್ನು ನೀವು "ಕುರ್‌ಆನ್ ಕ್ರೋಡೀಕರಣ"ದ ಶೀರ್ಷಿಕೆಯಲ್ಲಿ ಓದಿರುವಿರಿ. ಅನಂತರ ಕಾಲವು ಇಸ್ಲಾಮ್ ಬಹಳ ಶೀಘ್ರಗತಿಯಲ್ಲಿ ಪ್ರಗತಿಯಾದ ಕಾಲವಾಗಿತ್ತು. ಅದರ ಅಧಿಕಾ ಮತ್ತು ಆದರ ಸಾಧನಾನುಕೂಲತೆಗಳು ದಿನದಿಂದ ದಿನಕ್ಕೆ ಪ್ರಗತಿಯಾಗುತ್ತಲೇ ಬಂತ

ಇಸ್ಲಾಮೀ ಆಡಳಿತದಡಿಯಲ್ಲಿ ಲಕ್ಷಗಟ್ಟಲೆ ಬರಹಗಾರರಿದ್ದರು ಮತ್ತು ಅವರ ಸಂಖ್ಯೆ ವೃದ್ಧಿಸುತ್ತಲೇ ಇತ್ತು. ಕೊನೆಯದಾಗಿ ಇಸ್ಲಾಮೀ ರಾಷ್ಟ್ರವು ಖಿಲಫಾಉರ್ರಾಶಿದೀನರ ಕಾಲದಲ್ಲೇ ಅರೇಬಿಯದಿಂದ ಹೊರಬಂದು ಇರಾಕ್, ಸಿರಿಯಾ ಮತ್ತು ಇರಾನ್‌ನಂತಹ ದೇಶಗಳವರೆಗೆ ವ್ಯಾಪಿಸಿತ್ತು. ಅವುಗಳ ಮೂಲಭೂತ ಕಾನೂನು ಅಥವಾ ಸಂವಿಧಾನವು ಕುರ್‌ಆನ್ ಆಗಿತ್ತು. ಅಲ್ಲಾಮಾ ಇಬ್ನು ಹಝ್ಮ್‌ರ ಅಂದಾಜು ಪ್ರಕಾರ ಹ. ಉಮರ್ ರವರ(ರ) ಕಾಲದಲ್ಲಿ ಮುಸ್ಲಿಮರ ಬಳಿ ಕುರ್‌ಆನಿನ ಒಂದು ಲಕ್ಷಕ್ಕಿಂತಲೂ ಹೆಚ್ಚು ಪ್ರತಿಗಳಿದ್ದುವು. (ಕಿತಾಬುಲ್ ಫಸ್ಲ್ ಭಾಗ-2, ಪುಟ 78) ಅದು ಇಹಪರ ವಿಜಯದ ಸೋಪಾನವಾಗಿರುವಾಗ ಒಂದು ಮುಸ್ಲಿಮ್ ಪ್ರದೇಶದಲ್ಲಿ ಅದರ ಕೆಲವು ಪ್ರತಿಗಳಾದರೂ ಇಲ್ಲದಿರುವುದು ಹೇಗೆ? ವಿಶೇಷವಾಗಿ ಆ ಮಹಾ ಸಾಮ್ರಾಜ್ಯದ ಅಸಂಖ್ಯಾತ ಆಡಳಿತಗಾರರ ಹಾಗೂ ನ್ಯಾಯಾಧೀಶರುಗಳ ಬಳಿ ಕುರ್‌ಆನ್ ಇದ್ದಿರಲೇಬೇಕು. ಅವರ ಹುದ್ದೆಯ ಕರ್ತವ್ಯಗಳನ್ನು ಪೂರೈಸಲು ಅದು ಅವರಿಗೆ ಅನಿವಾರ್ಯವಾಗಿತ್ತು. ನಮ್ಮ ಅಭಿಪ್ರಾಯದ ಪ್ರಕಾರ ಅವರಲ್ಲಿ ಪ್ರತಿಯೊಬ್ಬರಿಗೂ ಸರಕಾರದ ವತಿಯಿಂದ ಕುರ್‌ಆನ್ ಪ್ರತಿ ಲಭ್ಯವಾಗಿರ ಬೇಕು. ಖಿಲಫಾಉರ್ರಾಶಿದೀನ್ ತಮ್ಮ ರಾಜ್ಯಪಾಲರುಗಳಿಗೆ ಮತ್ತು ನ್ಯಾಯಾಧೀಶರು ಗಳಿಗೆ ಕಳುಹಿಸಿರುವ ಆದೇಶಗಳು ಲಿಖಿತ ರೂಪದ್ದಾಗಿತ್ತು ಎಂಬುದು ಒಂದು ಚಾರಿತ್ರಿಕ ವಾಸ್ತವಿಕತೆಯಾಗಿದೆ. ಸಂಪೂರ್ಣ ಸಮುದಾಯಕ್ಕೆ ಮಾರ್ಗದರ್ಶಕ ಮತ್ತು ರಾಷ್ಟ್ರಕ್ಕೆ ಮೂಲಭೂತ ಕಾನೂನು ಆಗಿರುವ ಒಂದು ಗ್ರಂಥದ ಬಗ್ಗೆ ಈ ರೀತಿಯ ಒಂದು ವ್ಯವಸ್ಥೆ ಅವರು ಮಾಡಿರಲಿಲ್ಲ ಎಂದು ನಂಬುವುದಾದರೂ ಹೇಗೆ?

ಈ ಎಲ್ಲ ಚರ್ಚೆಯಿಂದ ವ್ಯಕ್ತವಾಗುವುದೇನೆಂದರೆ ಪವಿತ್ರ ಕುರ್‌ಆನಿನ ಸಂರಕ್ಷಣೆಗೆ ಎರಡೂ ವಿಧಗಳಲ್ಲಿ ವ್ಯವಸ್ಥೆ ಮಾಡಲಾಗಿತ್ತು. ಅದನ್ನು ವ್ಯಾಪಕ ನೆಲೆಯಲ್ಲಿ ಕಂಠಪಾಠ ಗೊಳಿಸಲಾಯಿತು. ಮಾತ್ರವಲ್ಲ ಬರೆದು ಸುರಕ್ಷಿತಗೊಳಿಸುವ ವ್ಯವಸ್ಥೆಯನ್ನೂ ಮಾಡಲಾಯಿತು. ಪ್ರವಾದಿಯವರ(ಸ) ಕಾಲಾನಂತರವೂ ಈ ಎರಡು ವಿಧಾನಗಳು ಅಸ್ತಿತ್ವದಲ್ಲಿದ್ದುದು ಮಾತ್ರವಲ್ಲ ಪ್ರಗತಿ ಹೊಂದುತ್ತಲೂ ಸಾಗಿದುವು. ಈ ರೀತಿ ಕುರ್‌ಆನ್ ಅಲ್ಲಾಹನ ವತಿಯಿಂದ ಪ್ರವಾದಿಯವರ(ಸ) ಮೇಲೆ ಅವತೀರ್ಣವಾದ ರೂಪದಲ್ಲೇ ಪೂರ್ಣ ನಿರಂತರತೆಯೊಂದಿಗೆ ನಮ್ಮವರೆಗೆ ಮುಟ್ಟಿದೆ. ಸತ್ಯವನ್ನು ಒಪ್ಪಿಕೊಳ್ಳುವ ಮನಸ್ಸಿದ್ದವನು ಖಂಡಿತ ಇದನ್ನು ಒಪ್ಪಿಕೊಳ್ಳುವನು. ಲೋಕದ ಇನ್ನಾವ ಗ್ರಂಥವೂ ಇಷ್ಟು ತೃಪ್ತಿಕರವಾದ ರೀತಿಯಲ್ಲಿ ನಮಗೆ ತಲುಪಲಿಲ್ಲ. ಇದು ಎಲ್ಲ ಕಾಲಗಳಲ್ಲಿಯೂ ಸಹಸ್ರಾರು ಹೃದಯಗಳಲ್ಲಿ ಮತ್ತು ಅಸಂಖ್ಯಾತ ಗ್ರಂಥಗಳಲ್ಲಿ ಸುರಕ್ಷಿತವಾಗಿ ನಮ್ಮೆಡೆಗೆ ಬಂದಿದೆ. ಆದ್ದರಿಂದಲೇ ಇದರ ಅವಲೋಕನ ನಡೆಸಿದ ಮುಸ್ಲಿಮೇತರ ಸಂಶೋಧಕರು ಕೂಡಾ ಈ ವಾಸ್ತವಿಕತೆಯನ್ನು ಒಪ್ಪಿರುವರು. ಜರ್ಮನ್ ಸ್ಕಾಲರ್ ದಾನ್ ಹೇಮ್ ಹೀಗೆ ಹೇಳಿರುವರು: 'ನಾವು ಕುರ್‌ಆನನ್ನು ಮುಹಮ್ಮದರ ವಚನವೆಂದು ನಂಬುತ್ತೇವೆ. ಮುಸ್ಲಿಮರು ಅದನ್ನು ದೇವವಚನವೆಂದು ನಂಬುವಂತೆ.' ಇದು ಈ ವಾಸ್ತವಿಕತೆಯ ಒಂದು ಸ್ಪಷ್ಟ ಸಾಕ್ಷ್ಯವಾಗಿದೆ.

## ಕುರ್‌ಆನಿನ ಪುರಾವೆಗಳು

ಕುರ್‌ಆನ್ ಎಂದೆಂದಿಗೂ ಸುರಕ್ಷಿತವಾಗಿರುವ ಗ್ರಂಥವೆಂಬುದಕ್ಕೆ ಪುರಾವೆಯಾಗಿರು ಅದರದೇ ಹೇಳಿಕೆಗಳು ಈ ರೀತಿ ಇವೆ:

1) ಪ್ರವಾದಿ ಮುಹಮ್ಮದ್(ಸ) ಅವರನ್ನು ಸಂಬೋಧಿಸಿ ಹೀಗೆ ಹೇಳಲಾಗಿದೆ:

"ನಾವು ನಿಮಗೆ ಓದಿಸಿ ಬಿಡುವೆವು. ಆ ಬಳಿಕ ನೀವು ಮರೆತು ಬಿಡಲಾರಿರಿ."
(ಪವಿತ್ರ ಕುರ್‌ಆನ್, 87:(

ಈ ದೇವ ವಚನದ ಹಿನ್ನಲೆ ಏನೆಂದರೆ ಪ್ರವಾದಿಯವರಿಗೆ(ಸ) ದೇವ ಸಂದೇ ವಾಹಕತ್ವದ ಘನವಾದ ಹೊಣೆಗಾರಿಕೆಯ ಬಗ್ಗೆ ಸಹಜವಾಗಿಯೇ ಅತ್ಯಧಿಕ ಪ್ರಜ್ಞೆ ಇತ್ತು ಸದಾ ಅದೇ ಚಿಂತೆಯಲ್ಲಿ ಕಳವಳಪಡುತ್ತಿದ್ದರು. ಎಲ್ಲಿ ಈ ಸಂದೇಶದ ಯಾವುದಾದರ ಒಂದಂಶ ನನ್ನಿಂದ ಮರೆತು ಹೋಗುವುದೋ ಎಂದು ಭಯಪಡುತ್ತಿದ್ದರು. ಅದಂತ ಅಲ್ಲಾಹನ ವತಿಯಿಂದ ಅವರಿಗೆ ತಲುಪಿಸುವ ಸಲುವಾಗಿಯೇ ನನ್ನ ಮೇಲೆ ಅವತೀಣ ವಾಗುತ್ತಿದೆ. ಈ ಪ್ರಜ್ಞೆಯಿಂದಾಗಿಯೇ ಪ್ರವಾದಿ(ಸ) ದೇವವಾಣಿ ಅವತೀರ್ಣಗೊಳ್ಳುತ್ತಿದ್ದಾ ಅದನ್ನು ಕಂಠಪಾಠ ಮಾಡಿಕೊಳ್ಳಲು ಬಹಳ ಆತುರಪಡುತ್ತಿದ್ದರು. ಆಗ ಅಲ್ಲಾಹ ಪ್ರವಾದಿ ವರ್ಯರಿಗೆ(ಸ) ಸಾಂತ್ವನ ನೀಡುತ್ತಾ ಹೇಳಿದನು: ನೀವು ಕಳವಳಗೊಳ್ಳುವ ಮತ ಆತುರ ಪಡುವ ಅಗತ್ಯವಿಲ್ಲ. ಇದು ನಮ್ಮ ವಾಣಿ ಮತ್ತು ನಮ್ಮ ಶಿಕ್ಷಣವಾಗಿದೆ. ಇದನ ನಾವು ನಿಮಗೆ ತೃಪ್ತಿಕರವಾದ ರೀತಿಯಲ್ಲಿ ಮುಟ್ಟಿಸಿದಂತೆಯೇ ನಿಮಗೆ ನೆನಪು ಮಾಡಿಯ ಕೊಡುವೆವು. ಅದರ ಯಾವುದೇ ಪದವನ್ನೂ ನೀವು ಮರೆಯಲಾರಿರಿ.

ಇದೇ ಸಾಂತ್ವನವನ್ನು ಇನ್ನೊಂದು ಸಂದರ್ಭದಲ್ಲಿ ಬೇರೆ ರೀತಿಯಲ್ಲಿ ನೀಡಲಾಗಿ

"ಸಂದೇಶವಾಹಕರೇ, ಈ 'ದಿವ್ಯವಾಣಿ'ಯನ್ನು ಬೇಗ ಬೇಗನೆ ಕಂಠಪಾಠ ಮಾ ಕೊಳ್ಳಲಿಕ್ಕಾಗಿ ನಿಮ್ಮ ನಾಲಗೆಯನ್ನು ಚಲಿಸಬೇಡಿರಿ. ಇದನ್ನು ಕಂಠಪಾಠ ಮಾಡಿಸುವ ಮತ ಓದಿಸುವ ಹೊಣೆ ನಮ್ಮ ಮೇಲಿದೆ." (ಪವಿತ್ರ ಕುರ್‌ಆನ್, 75:16-1

ಪ್ರವಾದಿ(ಸ) ಅವರ ಸ್ಮೃತಿಪಟಲದಿಂದ ಕುರ್‌ಆನಿನ ಒಂದೇ ಒಂದು ಶ ಅಳಿಯಲಾರದೆಂಬುದಕ್ಕೆ ಇನ್ನೊಂದು ಸ್ಪಷ್ಟ ಪುರಾವೆ ಇದು. ಈ ಬಗ್ಗೆ ಅಲ್ಲಾಹ ವತಿಯಿಂದ ಕೇವಲ ಆಶ್ವಾಸನೆ ಮಾತ್ರವಲ್ಲ, ಅದರ ಹೊಣೆಯನ್ನೂ ಪೂರ್ಣವಾ ಅಲ್ಲಾಹನೇ ವಹಿಸಿರುವನು. ಅಲ್ಲಾಹನು ಒಂದು ವಿಷಯವನ್ನು ತನ್ನ ಹೊಣೆಗಾರಿಕೆ ಯೆಂ ವಹಿಸಿಕೊಂಡರೆ ಅದರ ತಾತ್ಪರ್ಯವೇನು ಎಂಬುದು ಅಲ್ಲಾಹನ ಮೇಲೆ ವಿಶ್ವಾ ವಿರಿಸುವವರಿಗೆ ಚೆನ್ನಾಗಿ ಗೊತ್ತು. ಅದರ ತಾತ್ಪರ್ಯವೇನೆಂದರೆ ಸೂರ್ಯನು ಒಂ ವೇಳೆ ಪಶ್ಚಿಮದಿಂದ ಉದಯಿಸಬಹುದಾದರೂ ಅಲ್ಲಾಹನು ತನ್ನ ಹೊಣೆಗಾರಿಕೆಯನ ನಿರ್ವಹಿಸದೆ ಇರಲಾರ. ಆದ್ದರಿಂದ "ಈ ಕುರ್‌ಆನನ್ನು ಕ್ರೋಢೀಕರಿಸುವುದು ಮ

ದನ್ನು ಕಲಿಸಿಕೊಡುವುದು ನಮ್ಮ ಹೊಣೆಯಾಗಿದೆ" ಎಂದು ಹೇಳಿರುವುದು ಕುರ್‌ಆನ್ ವಾದಿವರ್ಯರಿಗೆ(ಸ) ನೀಡಲಾದಂತೆಯೇ ಸುರಕ್ಷಿತವಾಗಿ ಉಳಿದಿದೆ ಎಂಬುದರ ಸ್ಪಷ್ಟ ರಾವೆಯಾಗಿದೆ.

2) ಅಲ್ಲಾಹನು ಪವಿತ್ರ ಕುರ್‌ಆನಿನ ಕುರಿತು ಈ ರೀತಿ ಹೇಳಿರುವನು:

**"ಖಂಡಿತ ಇದೊಂದು ಅಜೇಯ ಗ್ರಂಥ. ಮಿಥ್ಯವು ಇದರ ಮುಂಭಾಗದಿಂದಾಗಲೀ ಂಭಾಗದಿಂದಾಗಲೀ ನುಸುಳಲು ಸಾಧ್ಯವಿಲ್ಲ." (ಪವಿತ್ರ ಕುರ್‌ಆನ್, 41:41-42)**

ಅಝೀಝ್ ಎಂಬ ಪದದ ಅರ್ಥ ಅಜೇಯ ಎಂದಾಗಿದೆ. ಕುರ್‌ಆನ್ ಅಜೇಯ ಗಿರುವುದೆಂದರೆ ಅದರ ಅಸ್ತಿತ್ವಕ್ಕೆ ಎಂದೂ ಕೇಡಾಗದು. ಅದರ ಪಾವಿತ್ರ್ಯವನ್ನು ಾವುದೇ ವಸ್ತು ಕೆಡಿಸದು. ಅದರ ಸ್ವರೂಪ ಮತ್ತು ನೆಲೆಯಲ್ಲಿ ಯಾವುದೇ ಾರ್ಪಾಟಾಗದು. ಆದುದರಿಂದ ಈ 'ಅಜೇಯತೆ'ಯ ವಿವರಣೆ ನೀಡುತ್ತಾ ಮಿಥ್ಯವು ದರೊಳಗೆ ನುಸುಳುವ ಮಾರ್ಗ ಕಾಣದು ಎಂದು ಕುರ್‌ಆನ್ ಸ್ಪಷ್ಟಪಡಿಸಿದೆ. ಮಿಥ್ಯವು ವಗ್ರಂಥದಲ್ಲಿ ನುಸುಳುವುದೆಂದರೆ ಯಾವುದೇ ಮಾನವ ವಚನವು ಅದರೊಂದಿಗೆ ಸೇರಿ ಡುವುದು, ಅದರ ಪದ ಮತ್ತು ವಾಕ್ಯಗಳು ಸ್ಥಾನಪಲ್ಲಟವಾಗುವುದು ಅಥವಾ ಅದರ ಾವುದಾದರೂ ಭಾಗ ಕಳೆದು ಹೋಗುವುದಾಗಿದೆ. ಏಕೆಂದರೆ ಈ ಪೈಕಿ ಯಾವುದು ುಭವಿಸಿದರೂ ಗ್ರಂಥವು ತನ್ನ ಮೂಲರೂಪದಲ್ಲಿ ಉಳಿಯಲಾರದು. ಆಗ ಅದನ್ನು ರ್ಣ ಸತ್ಯವೆಂದು ಹೇಳಲಾಗದು. ಆದುದರಿಂದ ಪವಿತ್ರ ಕುರ್‌ಆನಿನಲ್ಲಿ ಮಿಥ್ಯವು ಸುಳದಿರುವುದೆಂದರೆ ಆ ಗ್ರಂಥದಲ್ಲಿ ಎಂದೆಂದೂ ಯಾವ ಬದಲಾವಣೆಯೂ ಆಗದು. ದರ ಪದಗಳು ಹಿಂದೆ ಮುಂದೆ ಆಗಲಾರವು ಮತ್ತು ಅದರ ನೆಲೆಯಲ್ಲಿ ಯಾವುದೇ ತಿಯ ಪರಿವರ್ತನೆ ಆಗಲಾರದು ಎಂದಾಗಿದೆ.

ಪವಿತ್ರ ಕುರ್‌ಆನಿನ ಬಗ್ಗೆ ಇದು ಸರ್ವಶಕ್ತನಾದ ಅಲ್ಲಾಹನ ವಾಗ್ದಾನವಾಗಿದೆ. ಷ್ಣೆಯ ತರದ ವಾಗ್ದಾನ. ಈ ವಾಗ್ದಾನ ಅಥವಾ ಫರಮಾನು ಮಾಡುವಾಗ ಕೇವಲ ವಾದಿವರ್ಯರನ್ನಾಗಲೀ ಅವರ ಕಾಲವನ್ನಾಗಲೀ ಮುಂದಿರಿಸಿರುವುದಲ್ಲ. ಅದನ್ನು ತ್ರಿಕ ನೆಲೆಯಲ್ಲಿ ಹೇಳಲಾಗಿದೆ. ಆದುದರಿಂದ ಅವನ ವಾಗ್ದಾನವು ಒಂದು ಸಾರ್ವತ್ರಿಕ ತ್ತು ಸಾರ್ವಕಾಲಿಕ ಘೋಷಣೆಯಾಗಿದೆ. ಪವಿತ್ರ ಕುರ್‌ಆನಿನಲ್ಲಿ ಯಾವುದೇ ಹಸ್ತಕ್ಷೇಪ ಲಾರದು. ಅದರ ಯಾವುದೇ ಭಾಗವು ಎಂದೂ ಕಳೆದು ಹೋಗದು. ಅದರ ಶಬ್ದಗಳು ದೆ ಮುಂದೆ ಆಗಲಾರದು ಎಂಬ ಘೋಷಣೆಯಾಗಿದೆ. ಈ ಹಿಂದೆ ವಿವರಿಸಿದ ಎರಡು ಕ್ಯಗಳಲ್ಲಿರುವ ವಾಗ್ದಾನ ಅಥವಾ ಫರಮಾನು ಕೇವಲ ಪ್ರವಾದಿವರ್ಯರ(ಸ) ವ್ಯಕ್ತಿತ್ವಕ್ಕೆ ಮಿತವಾಗಿದ್ದುವು.

3) ಇನ್ನೊಂದೆಡೆ ಹೀಗೆ ಹೇಳಲಾಗಿದೆ:

"ಈ 'ಉಪದೇಶ'ವನ್ನು ನಿಶ್ಚಯವಾಗಿಯೂ ನಾವು ಅವತೀರ್ಣಗೊಳಿಸಿರುತ್ತೇವೆ ಮತ್ತು ಸ್ವತಃ ನಾವೇ ಅದರ ರಕ್ಷಕರೂ ಆಗಿರುತ್ತೇವೆ." (ಪವಿತ್ರ ಕುರ್‌ಆನ್, 15:9

ಈ ದೈವಿಕ ಪದಗಳಿಗೆ ಯಾವುದೇ ವಿವರಣೆಯ ಅಗತ್ಯವಿಲ್ಲ. ಇದರಿಂದ ಸಮಸ್ಯೆಯ ಎಲ್ಲ ಮುಖಗಳೂ ಕನ್ನಡಿಯಂತೆ ಶುಭ್ರವಾಗುತ್ತವೆ. ಈ ಗ್ರಂಥವನ್ನು ಅವತೀರ್ಣ ಗೊಳಿಸಿದ ದೇವನು ಇದನ್ನು ಎಲ್ಲ ರೀತಿಯ ಪರಿವರ್ತನೆ ಮತ್ತು ಹಸ್ತಕ್ಷೇಪಗಳಿಂದ ಸಂರಕ್ಷಿಸುವನೆಂಬ ವಾಸ್ತವಿಕತೆ ಇದರಿಂದ ವ್ಯಕ್ತವಾಗುತ್ತದೆ. ಇದು ಅವನ ವಾಗ್ದಾನ ಮತ್ತು ತೀರ್ಮಾನವಾಗಿದೆ. ಈ ವಾಗ್ದಾನದ ಬಳಿಕ ಪವಿತ್ರ ಕುರ್‌ಆನ್ ಈ ಹಿಂದಿನ ಗ್ರಂಥಗಳಂತೆ ಆಗುವ ಪ್ರಮೇಯವೇ ಉಳಿಯುವುದಿಲ್ಲ. ಒಟ್ಟಿನಲ್ಲಿ ಈ ವಚನವು ಕುರ್‌ಆನಿನ ಸಂಪೂರ್ಣ ಸುರಕ್ಷಿತತೆಯ ಬಗ್ಗೆ ಅಂತಿಮ ಮಾತಾಗಿದೆ. ಅದು ಅದರ ಸುರಕ್ಷಿತತೆಯನ್ನು ಎಲ್ಲ ರೀತಿಯ ಚರ್ಚೆಯಿಂದ ಮುಕ್ತವಾಗಿಸುತ್ತದೆ.

4) ಕೊನೆಯದಾಗಿ ಒಂದು ಸಂಶೋಧನಾತ್ಮಕ ಪುರಾವೆಯನ್ನು ನೋಡಿರಿ. ಕುರ್‌ಆನ್ ತನ್ನ ಬಗ್ಗೆ ಹೇಳಿದ ವಿಶಿಷ್ಟ ನೆಲೆ ಮತ್ತು ಗುಣಗಳ ಬೇಡಿಕೆ ಏನು? ಯಾವ ಗ್ರಂಥ ದೇವನ ಅಂತಿಮ ಗ್ರಂಥವಾಗಿದೆಯೋ, ಯಾವ ಗ್ರಂಥವು ಹಿಂದಿನ ಎಲ್ಲ ಗ್ರಂಥಗಳನ್ನು ಅನೂರ್ಜಿತಗೊಳಿಸುತ್ತದೋ, ಯಾವ ಗ್ರಂಥದ ಅನುಸರಣೆಯಲ್ಲಿ ಇಡೀ ಮಾನವಕುಲದ ವಿಜಯ ಮತ್ತು ಮೋಕ್ಷವಿದೆಯೋ ಅದರ ಬಗ್ಗೆ ಅದು ಬದಲಾಗುವ, ಮರವೆಗೆ ಅಥವಾ ಮಾನವ ಹಸ್ತಕ್ಷೇಪಗಳಿಗೆ ಬಲಿಯಾಗುವ ಸಾಧ್ಯತೆಗಳಿವೆ ಎಂಬುದನ್ನು ಸಾಮಾನ್ಯ ಬುದ್ಧಿ ಒಪ್ಪುತ್ತದೆಯೇ? ಇಲ್ಲ, ಖಂಡಿತ ಇಲ್ಲ. ಏಕೆಂದರೆ ಅದು ಅದರ ನೆಲೆ, ಅಂತಸ್ತು ಮತ್ತು ಅವತರಣದ ಉದ್ದೇಶಗಳಿಗೆ ವ್ಯತಿರಿಕ್ತವಾಗಿದೆ. ಹಾಗೆ ಭಾವಿಸುವುದು ಮಾನವ ಕುಲದ ಸೃಷ್ಟಿಕರ್ತನ ಮೇಲೆ ಅಕ್ರಮ-ಅನ್ಯಾಯಗಳ ಅಪವಾದ ಹೊರಿಸಿದಂತಾಗುತ್ತದೆ. ಒಂದೆಡೆ ಆತನು ಈ ಗ್ರಂಥವನ್ನು ತನ್ನ ಏಕೈಕ ಮಾನ್ಯತೆ ಪಡೆದ ಮಾರ್ಗದರ್ಶಕ ಗ್ರಂಥವೆಂದು ಘೋಷಿಸಿ ಅದರ ಅನುಸರಣೆಯನ್ನು ತನ್ನ ಕರುಣೆ ಮತ್ತು ಮೋಕ್ಷದ ಪ್ರಾಪ್ತಿಯ ಶರತ್ತೆನ್ನುತ್ತಾನೆ. ಇನ್ನೊಂದೆಡೆ ಅವನು ತನ್ನ ದಾಸರನ್ನು ಆ ಮಾರ್ಗದರ್ಶಕ ಗ್ರಂಥವನ್ನು ಪಾಲಿಸದೆ ಇದ್ದುದಕ್ಕಾಗಿ ಶಿಕ್ಷಿಸುವನು, ಆದರೆ ಅದನ್ನು ಅವರಿಗಾಗಿ ಸುರಕ್ಷಿತವಾಗಿಡುವ ಯಾವ ವ್ಯವಸ್ಥೆಯನ್ನು ಮಾಡಿಲ್ಲ ಎಂದಾಗುತ್ತದೆ. ಇದು ಅವನ ಮೇಲೆ ಅಪವಾದವಲ್ಲದೆ ಮತ್ತೇನು?

ಪವಿತ್ರ ಕುರ್‌ಆನಿನ ಸುರಕ್ಷಿತತೆಯ ಬಗ್ಗೆ ಈ ಪುರಾವೆಯು ಅದರ ಯಾವುದೇ ವಚನವನ್ನು ಆಧರಿಸಿಲ್ಲವಾದರೂ ಅದರ ಅನೇಕ ವಚನಗಳಲ್ಲಿ ವಿವರಿಸಲ್ಪಟ್ಟ ವಿಶಿಷ್ಟ ಗುಣಗಳ ಸಹಜ ಬೇಡಿಕೆಯಾಗಿದೆ. ಆದುದರಿಂದ ಇದರ ಮಹತ್ವವನ್ನು ನಿರಾಕರಿಸಲು ಸಾಧ್ಯವಿಲ್ಲ.

# ವಿವರಣಾ ಶೈಲಿ

## ವರಣಾ ಶೈಲಿಯ ವಿಶೇಷತೆ

ಪವಿತ್ರ ಕುರ್‌ಆನ್ ಒಂದು ಅತ್ಯುನ್ನತ ಮತ್ತು ಪ್ರಬುದ್ಧ ಸಾಹಿತ್ಯವಾಗಿದೆ. ಮನುಷ್ಯ ಹಿತ್ಯದ ಪೂರ್ಣ ಭಂಡಾರದಲ್ಲಿ ಅದಕ್ಕೆ ಸರಿಸಾಟಿ ಇಲ್ಲ." ಅದರ ವಿವರಣಾ ಶೈಲಿಯು ದೃಶವಾಗಿದೆ. ಅಂತಹ ಶೈಲಿ ಬೇರಾವ ಗ್ರಂಥದಲ್ಲೂ ಖಂಡಿತ ಸಿಗಲಾರದು. ಒಬ್ಬನು ್‌ಆನಿನ ಉದ್ದೇಶ ಮತ್ತು ಔಚಿತ್ಯಗಳನ್ನು ತಿಳಿಯದೆ ಇದ್ದರೆ ಅದರ ಸಾಮಾನ್ಯ ರ್ಥವೂ ಸಂಪೂರ್ಣ ವ್ಯಕ್ತವಾಗದು. ಅದರ ಆಳಕ್ಕೆ ಇಳಿಯುವುದಂತೂ ಇನ್ನೂ ದೂರದ ತು. ಆದುದರಿಂದ ಪವಿತ್ರ ಕುರ್‌ಆನಿನ ಪರಿಚಯ ಪಡೆಯಬೇಕಾದರೆ ಅದರ ವಿಶಿಷ್ಟ ರಣಾ ಶೈಲಿಯನ್ನು ಮೂಲಭೂತವಾಗಿ ತಿಳಿದುಕೊಳ್ಳಲೇ ಬೇಕು.

ಒಂದು ನಿರ್ದಿಷ್ಟ ವಿಷಯದ ಮೇಲೆ ತಿಳುವಳಿಕೆ, ವಿಚಾರ ಮತ್ತು ಪುರಾವೆಗಳನ್ನು ಂತರ ಅನುಕ್ರಮವಾಗಿ ನೀಡುವುದು ಸಾಮಾನ್ಯ ಗ್ರಂಥಗಳ ವಿವರಣಾ ಶೈಲಿಯಾಗಿದೆ. ದಲು ಸ್ಪಷ್ಟವಾಗಿ ಕೇಂದ್ರೀಯ ವಿಷಯವನ್ನು ನಿರ್ಧರಿಸಲಾಗುತ್ತದೆ. ಆ ಬಳಿಕ ಅದರ ನ್ನ ಕೋನಗಳ ಮತ್ತು ಸಮಸ್ಯೆಗಳ ಪೈಕಿ ಒಂದೊಂದನ್ನು ಎತ್ತಿ ಅದರ ಮೇಲೆ ರವಾಗಿ ಚರ್ಚಿಸಲಾಗುತ್ತದೆ. ಒಂದು ಸಮಸ್ಯೆಯ ಬಗ್ಗೆ ಚರ್ಚೆಯು ಪೂರ್ಣವಾಗು ದಕ್ಕಿಂತ ಮುಂಚೆ ಇನ್ನೊಂದು ಸಮಸ್ಯೆಯ ಪ್ರಸ್ತಾಪವು ಬರುವುದಿಲ್ಲ. ಆದರೆ ಪವಿತ್ರ ್‌ಆನಿನ ವಿವರಣಾ ಶೈಲಿ ಹಾಗಲ್ಲ. ಅದರಲ್ಲಿ ಈ ರೀತಿಯ ವಿಷಯ ನಿರ್ಣಯ ಡುವ, ಶೀರ್ಷಿಕೆಗಳನ್ನು ವ್ಯಕ್ತಪಡಿಸುವ ಅಧ್ಯಾಯಗಳನ್ನು ವಿಷಯಾನಂತರ ವಿಂಗಡಿಸುವ ುವಿಲ್ಲ. ವಿಭಿನ್ನ ಸಮಸ್ಯೆಗಳ ಬಗ್ಗೆ ನಡೆಸುವ ಚರ್ಚೆಯಲ್ಲಿ ಯಾವುದೇ ಕ್ರಮ ಕಾಣ ುವುದಿಲ್ಲ. ವಸ್ತುತಃ ಇದರಲ್ಲಿ ಎಲ್ಲವೂ ಇದೆ. ಸಂಪೂರ್ಣ ಕುರ್‌ಆನಿನ ಒಂದು ದ್ರೀಯ ವಿಷಯವಿದೆ. ಪ್ರತಿಯೊಂದು ಅಧ್ಯಾಯಕ್ಕೆ ಒಂದು ಉಪ ಕೇಂದ್ರೀಯ ಯವಿದೆ. ಪ್ರತಿಯೊಂದು ವಿಷಯದ ಅನೇಕ ಸಮಸ್ಯೆ ಮತ್ತು ಮುಖಗಳಿವೆ. ಅವುಗಳ ್ಗಿ ಚರ್ಚೆ ಇದೆ ಮತ್ತು ಈ ಚರ್ಚೆಗಳಲ್ಲಿ ಪರಸ್ಪರ ಗಾಢ ಸಂಬಂಧವೂ ಇದೆ. ಆದರೆ ್ಯಕ್ಷದಲ್ಲಿ ಅವೆಲ್ಲವೂ ಮಿಶ್ರವಾಗಿರುವಂತೆ ಕಂಡು ಬರುತ್ತದೆ. ಮೂಲಭೂತ ವಿಶ್ವಾಸ, ಕ ಶಿಕ್ಷಣ, ಧರ್ಮಶಾಸ್ತ್ರ ವಿಧಿ, ಆಹ್ವಾನ ಮತ್ತು ಉಪದೇಶ, ಪ್ರೇರಣೆ ಮತ್ತು ಆಶ್ವಾಸನೆ,

ಆಕ್ಷೇಪ ಮತ್ತು ನಿಂದನೆ, ಎಚ್ಚರಿಕೆ ಮತ್ತು ಶಿಕ್ಷೆ, ಸುವಾರ್ತೆ ಮತ್ತು ಪುಣ್ಯ, ಬುದ್ಧಿ ಮತ ವಿವೇಕ, ಪ್ರಕೃತಿ, ಐತಿಹಾಸಿಕ ಸಾಕ್ಷ್ಯಗಳು ಮತ್ತು ವಿಶ್ವ ಸಂಕೇತಗಳಿಂದ ನಿದರ್ಶನಗ ಪದೇ ಪದೇ ಒಂದರ ಹಿಂದೆ ಒಂದು ಬರುತ್ತಲೇ ಇರುತ್ತದೆ. ಒಂದೇ ವಿಷಯವನ್ನು ವಿಭಿ ಕಡೆಗಳಲ್ಲಿ ವಿಭಿನ್ನ ರೀತಿಯಲ್ಲಿ ಪುನರಾವರ್ತಿಸಲಾಗಿದೆ. ಒಂದರ ನಂತರ ಇನ್ನೊಂದ ಇನ್ನೊಂದರ ನಂತರ ಮತ್ತೊಂದು ಒಮ್ಮೆಲೇ ಆರಂಭವಾಗುತ್ತದೆ. ಸಂಬೋಧನೆಯ ಆಗಾಗ ಬದಲಾಗುತ್ತಿರುತ್ತವೆ. ಸಂಬೋಧಿತನು ಆಗಾಗ ಪ್ರಥಮ ಪುರುಷನೂ ಮಧ್ಯ ಪುರುಷನೂ ಆಗುತ್ತಿರುತ್ತಾನೆ. ಸಂಬೋಧಕನೂ ಆಗಾಗ ಉತ್ತಮ ಪುರುಷ, ಮಧ್ಯಮ ಪುರು ಪ್ರಥಮ ಪುರುಷನಾಗಿ ಬದಲಾಗುತ್ತಿರುತ್ತಾನೆ. ಇದಲ್ಲದೆ ಚರ್ಚೆಯು ಕೂಡಾ ಸಾಮಾ ಶೈಲಿಗಿಂತ ಬಹಳ ಭಿನ್ನವಾಗಿದೆ. ವಿಶ್ವಾಸ ಶ್ರದ್ಧೆಯ ವಿವರಣೆಯು ತತ್ವಶಾಸ್ತ್ರದ ಶೈಲಿಯಲ್ಲಿ ನೈತಿಕತೆಯ ಬೋಧನೆ ಇದೆ. ಆದರೆ ನೀತಿ ಶಾಸ್ತ್ರದ ಶೈಲಿಯಲ್ಲಲ್ಲ. ವಾದಗಳಿವೆ, ಆದ ವಾದ-ಪ್ರತಿವಾದದ ಶೈಲಿಯಲ್ಲಲ್ಲ. ಸಂಸ್ಕೃತಿ, ರಾಜಕೀಯ, ಆರ್ಥಿಕ ಮತ್ತು ಸಾಮಾ ನಿರ್ದೇಶನಗಳಿವೆ. ಆದರೆ ಸಮಾಜ ಶಾಸ್ತ್ರದ ಶೈಲಿಯಲ್ಲಲ್ಲ. ಕಾನೂನು ಮತ್ತು ತತ್ವ ಪ್ರತಿಪಾದನೆ ಇದೆ. ಆದರೆ ಅದು ಕಾನೂನು ನಿರ್ಮಾತೃಗಳ ಶೈಲಿಯಿಂದ ತೀರಾ ಭಿನ್ನವಾಗಿ ಇತಿಹಾಸದ ಘಟನೆಗಳಿವೆ. ಆದರೆ ಅದು ಇತಿಹಾಸಗಾರರ ಶೈಲಿಯಿಂದ ತೀರಾ ಭಿನ್ನವಾಗಿ ಒಟ್ಟಿನಲ್ಲಿ ನಮ್ಮ ಬುದ್ಧಿ ಚರ್ಚೆಯ, ಸಂವಾದದ, ಶಿಕ್ಷಣ ಬೋಧನೆಗಳ, ಯಾವ ಗ್ರಂ ರಚನಾಕ್ರಮ, ಪಠ್ಯಕ್ರಮ ಮತ್ತು ಭಾಷಣ ಕ್ರಮವನ್ನು ಅರಿತಿದೆಯೋ ಅವುಗಳಿಗಿಂತ ಪವಿ ಕುರ್‌ಆನಿನ ವಿವರಣಾ ಶೈಲಿಯೇ ವಿಶಿಷ್ಟವಾಗಿದೆ. ಬಾಹ್ಯ ನೋಟಕ್ಕೆ ಇದೊಂದು ಕ್ರಮಬ ಮತ್ತು ಕ್ರೋಡೀಕೃತ ಗ್ರಂಥವೆಂದು ಭಾಸವಾಗುವುದೇ ಇಲ್ಲ. ಅದೊಂದು ಪರಸ್ ಸಂಬಂಧವಿಲ್ಲದ ವಾಕ್ಯಗಳ ಮತ್ತು ಚದುರಿದ ನುಡಿಗಳ ಸಮಾಹಾರವೆಂದು ಭಾಸವಾಗುತ್ತ ಆದರೆ ವಸ್ತುಸ್ಥಿತಿ ಇದಕ್ಕಿಂತ ತೀರಾ ಭಿನ್ನವಾಗಿದೆ. ಅದರೊಳಗೆ ಅತ್ಯುನ್ನತ ಮಟ್ಟದ ಪರಸ್ ಸಂಬಂಧ ಮತ್ತು ವ್ಯವಸ್ಥೆ ಇದೆ. ಆದರೆ ಈ ಕ್ರಮಬದ್ಧತೆ ಮತ್ತು ವ್ಯವಸ್ಥೆಯ ಕಂಡುಕೊಳ್ಳಲು ನಮ್ಮ ಭಾವನೆಯಲ್ಲಿರುವ ಗ್ರಂಥ ರಚನಾ ಶೈಲಿ ಮತ್ತು ಭಾಷ ಶೈಲಿಗಳನ್ನು ತೆಗೆದು ಬಿಡಬೇಕು. ಒಂದು ಹೊಸ ದೃಷ್ಟಿಕೋನದೊಂದಿಗೆ ಪವಿತ್ರ ಕುರ್‌ಆ ಅಧ್ಯಯನ ಮಾಡಬೇಕು. ಈ ಹೊಸ ದೃಷ್ಟಿಕೋನವನ್ನು ಕೃತಕವಾಗಿ ಕೈಗೊಳ್ಳುವಂತಿ ಪವಿತ್ರ ಕುರ್‌ಆನಿನ ವಿವರಣಾ ಶೈಲಿಯ ವಿಶೇಷತೆಗೆ ಸಹಜ ಕಾರಣಗಳನ್ನು ಮತ್ತು ಅ ಯುಕ್ತಿಯನ್ನು ಅರಿತರೆ ಅದು ತನ್ನಷ್ಟಕ್ಕೆ ಉಂಟಾಗುತ್ತದೆ.

## ಕಾರಣಗಳು

ಪವಿತ್ರ ಕುರ್‌ಆನಿನ ವಿವರಣಾ ಶೈಲಿ ಇತರ ಗ್ರಂಥಗಳಿಂದ ಭಿನ್ನವಾಗಲು ಮು ಕಾರಣಗಳು ಈ ಕೆಳಗಿನಂತಿವೆ:

1) ಪವಿತ್ರ ಕುರ್‌ಆನ್ ಪ್ರಬಂಧಗಳ ಸಮಾಹಾರವಾಗಿರದೆ ಭಾಷಣಗಳ ಸಂಕಲನ ಾಗಿದೆ. ಆದ್ದರಿಂದ ಅದರಲ್ಲಿ ಗ್ರಂಥದ ಶೈಲಿ ಇರಲು ಸಾಧ್ಯವೇ ಇಲ್ಲ. ಸಹಜವಾಗಿಯೇ ದರ ಶೈಲಿಯು ಭಾಷಣದ ಶೈಲಿಯೇ ಆಗಿರಬೇಕು. ಅದು ಹಾಗೆಯೇ ಇದೆ.

2) ಈ ಭಾಷಣಗಳು ಕೂಡಾ ಉಪದೇಶಕನ ಪ್ರವಚನದಂತೆ ಅಥವಾ ಉಪನ್ಯಾಸಕನ ಪನ್ಯಾಸದಂತೆ ಅಲ್ಲ. ಓರ್ವ ಆಹ್ವಾನಕಾರನ ಭಾಷಣದಂತಿದೆ. ಆತ ಮನುಷ್ಯರ ಮಧ್ಯೆ ಂತು ಅವರನ್ನು ತಪ್ಪು ದಾರಿಗಳಿಂದ ತಡೆಯುವ ಮತ್ತು ನೇರ ಮಾರ್ಗದತ್ತ ಕರೆತರುವ ಯತ್ನ ಮಾಡುತ್ತಿದ್ದಾನೆ. ಆದ್ದರಿಂದ ಅವರ ಭಾಷಣಗಳ ಶೈಲಿ, ಪ್ರವಚನ ಅಥವಾ ಠದ ಶೈಲಿಯಾಗಿರದೆ ಸಂಪೂರ್ಣ ಸಂದೇಶ ಪ್ರಚಾರದ ಶೈಲಿಯಾಗಿದೆ.

3) ಈ ಭಾಷಣಗಳ ಮೂಲಕ ಆ ಸಂದೇಶ ಪ್ರಚಾರವು 23 ವರ್ಷಗಳ ರ್ಘಾವಧಿಯಲ್ಲಿ ವಿಭಿನ್ನ ಪರಿಸ್ಥಿತಿ ಮತ್ತು ಘಟ್ಟಗಳನ್ನು ಹಾದು ಪರಿಪೂರ್ಣ ಗುತ್ತದೆ. ಆದ್ದರಿಂದ ಈ ಭಾಷಣಗಳು ಕೆಲವು ತಿಂಗಳುಗಳ ಸಾಮಾನ್ಯ ಅವಧಿಯಲ್ಲಿ ಂತರವಾಗಿ ಮಾಡಲ್ಪಟ್ಟಿಲ್ಲ. ಒಂದೇ ರೀತಿಯ ಪರಿಸ್ಥಿತಿಯಲ್ಲೂ ಮಾಡಲ್ಪಟ್ಟಿಲ್ಲ. ಂದೇ ತರದ ಜನರನ್ನು ಮುಂದಿರಿಸಿಯೂ ಮಾಡಲ್ಪಟ್ಟಿಲ್ಲ. ವಸ್ತುಸ್ಥಿತಿಯು ಇದಕ್ಕೆ ತೀರಾ ನ್ನವಾಗಿದೆ.

ಈ ಮೂರು ವಿಷಯಗಳ ಬೇಡಿಕೆ ಏನೆಂದು ಚೆನ್ನಾಗಿ ಯೋಚಿಸಿ. ಸಂದೇಶ ಚಾರದ ಭಾಷಣವು ಗ್ರಂಥ ರಚನೆಯ, ಉಪದೇಶ-ಪ್ರವಚನದ ಮತ್ತು ಪಾಠ ೋಧನೆಯ ಬೇಡಿಕೆಗಳಿಗಿಂತ ತೀರಾ ಭಿನ್ನವಾಗಿದೆ. ಓರ್ವ ಸಂದೇಶ ಪ್ರಚಾರಕನು ತನ್ನ ಷಣದಲ್ಲಿ ಓರ್ವ ಗ್ರಂಥಕರ್ತ ಅಥವಾ ಉಪನ್ಯಾಸಕನ ಶೈಲಿ ಅಳವಡಿಸಿದರೆ ಅವನ ಂತು ಅರೋಚಕ, ಪ್ರಭಾವಹೀನ ಮತ್ತು ಕಿವಿಗೆ ಕರ್ಕಶವಾಗಿ ಮಾರ್ಪಡುತ್ತದೆ. ಇದೇ ತಿ ಅವನೋರ್ವ ಉಪದೇಶಕನ ಶೈಲಿ ಅಳವಡಿಸಿದರೆ ತನ್ನ ಸಂದೇಶ ಪ್ರಚಾರದ ಂತಿಕಾರಿ ಧ್ಯೇಯವನ್ನು ಅವನೆಂದೂ ಸಾಧಿಸಲಾರ. ಗ್ರಂಥಕರ್ತನ ಮತ್ತು ಉಪನ್ಯಾಸಕನ ಣಿಯೂ ವೈಜ್ಞಾನಿಕ ಮತ್ತು ತಾರ್ಕಿಕವಾಗಿರುತ್ತದೆಂಬುದು ಖಚಿತ. ಆದರೆ ಗ್ರಂಥಕರ್ತ ತ್ತು ಉಪನ್ಯಾಸಕನ ಚರ್ಚೆಯು ಕೇವಲ ತಾತ್ವಿಕವಾಗಿರುತ್ತದೆ. ಭಾಷಣಕಾರರ ಭಾಷಣವು ೂಲಭೂತವಾಗಿ ಪ್ರಾಕೃತಿಕ ಮತ್ತು ಮನೋವೈಜ್ಞಾನಿಕವಾಗಿರುತ್ತದೆ. ವಿಶೇಷವಾಗಿ ಓರ್ವ ದೇಶ ಪ್ರಚಾರಕನ ಭಾಷಣವು ಈ ಗುಣವನ್ನು ಹೊಂದಿರುತ್ತದೆ. ಇಂತಹ ಭಾಷಣಕಾರರ ಸವು ಓರ್ವ ಗ್ರಂಥಕರ್ತನಂತೆ ತನ್ನ ವಿಚಾರಗಳನ್ನು ತಾರ್ಕಿಕವಾಗಿ ಉತ್ತಮ ರೀತಿಯಲ್ಲಿ ರೆದು ಬಿಡುವುದಲ್ಲ. ಓರ್ವ ಉಪನ್ಯಾಸಕರಂತೆ ವೈಜ್ಞಾನಿಕ ತತ್ವಗಳನ್ನು ಒಂದೇ ಬುದ್ಧಿ ಟ್ಟದ ವಿದ್ಯಾರ್ಥಿಗಳ ತಲೆಯಲ್ಲಿ ಕೂಲಂಕಶ ಪುರಾವೆಗಳೊಂದಿಗೆ ಇಳಿಸಿ ಬಿಡುವುದೂ ಲ್ಲ ಅಥವಾ ಓರ್ವ ಉಪದೇಶಕನು ಮನ ಕರಗಿಸುವಂತೆಯೂ ಅಲ್ಲ. ಇದಕ್ಕೆ ವ್ಯತಿರಿಕ್ತವಾಗಿ ವನ ಕಾರ್ಯವು ಇವೆಲ್ಲವುಗಳಿಗಿಂತ ಎಷ್ಟೋ ಉನ್ನತವೂ ಕಠಿಣವೂ ಆಗಿದೆ. ಒಂದೆಡೆ

ಅವನ ಮುಂದೆ ವಿಭಿನ್ನ ವಿಚಾರಗಳ ಮತ್ತು ವಿಭಿನ್ನ ಬುದ್ಧಿ ಸಾಮರ್ಥ್ಯದ ಜನರಿರುತ್ತಾ ನಗರವಾಸಿಗಳು-ಹಳ್ಳಿಗರು, ಶಿಕ್ಷಿತರು-ಅಶಿಕ್ಷಿತರು, ಉತ್ತಮ ಪ್ರಕೃತಿಯವರು- ವಕ್ರ ಬುದ್ಧಿಯವ ದಿವ್ಯವಾಣಿ ಮತ್ತು ಪ್ರವಾದಿತ್ವವನ್ನು ನಂಬುವವರು- ಅದನ್ನು ನಿರಾಕರಿಸುವವ ಏಕದೇವಾರಾಧಕರು ಮತ್ತು ಬಹುದೇವ ವಿಶ್ವಾಸಿಗಳೇ ಮುಂತಾದ ಎಲ್ಲ ರೀತಿಯ ಜನರನ ಆ ಸನ್ಮಾರ್ಗದತ್ತ ಕರೆಯಬೇಕಾಗುತ್ತದೆ. ಇನ್ನೊಂದೆಡೆ ಅವರ ಸಂದೇಶದ ಮೇ ವಿಶ್ವಾಸವಿಟ್ಟ ಜನರ ವೈಚಾರಿಕ ಮತ್ತು ವ್ಯಾವಹಾರಿಕ ತರಬೇತಿಯ ಜಾಣ್ಮೆಯ ಕರ್ತವ್ಯವ ನಿರ್ವಹಿಸುವ ಮತ್ತು ಅವರಿಗೆ ಧಾರ್ಮಿಕ ಆಜ್ಞೆ-ನಿರ್ದೇಶಗಳನ್ನು ಕಲಿಸುವ ಕಾರ್ಯವ ಅವರು ನೆರವೇರಿಸಬೇಕು. ಸನ್ಮಾರ್ಗದತ್ತ ಕರೆಯುವುದು ಎಂದರೆ ತನ್ನ ಮಾತನ್ನು ವೈಚಾ ಮತ್ತು ತಾರ್ಕಿಕವಾಗಿ ಜನರ ಮುಂದಿಡುವುದಲ್ಲ. ಅದನ್ನು ಅವರ ಮನಸ್ಸಿನಲ್ಲಿ ಇಳಿಸ ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನೂ ಮಾಡಬೇಕು. ಈ ಉದ್ದೇಶಕ್ಕಾಗಿ ಮೊದಲು ಅವರ ಬಹಳ ಕಾಲದಿಂದ ಬೇರೂರಿದ ಮಿಥ್ಯ ವಿಶ್ವಾಸಗಳನ್ನು ಕಿತ್ತೊಗೆಯಬೇಕು. ಕೆಟ್ಟ ಹಾಗ ಬಹಳ ಸೂಕ್ಷ್ಮವಾದ ಭಾವನೆಗಳ ಬಂಧನದಿಂದ ಅವರನ್ನು ಮುಕ್ತಗೊಳಿಸ ಬೇಕು. ಕಾರ್ಯಕ್ಕೆ ವಿಶಿಷ್ಟ ರೀತಿಯ ಮನ ಮಸ್ತಿಷ್ಕ ಮಾತ್ರವಲ್ಲ ವಿಶಿಷ್ಟ ರೀತಿಯ ನಾಲಗೆಯ ಬೇಕು. ಅಂತರಂಗದ ಕಳಕಳಿ ಮತ್ತು ತರ್ಕದಲ್ಲಿ ಪ್ರಾವೀಣ್ಯತೆ ಮಾತ್ರ ಇದ್ದರೆ ಸಾಲದ ಭಾಷಣದ ಚಾತುರ್ಯವೂ ಇರಬೇಕು. ಈ ಚಾತುರ್ಯ ಬರಬೇಕಾದರೆ ಅಭಿಸಂಬೋಧಿತ ವಿಚಾರಗಳು, ಒಲವುಗಳು ಮತ್ತು ಅವರ ಮನಶ್ಶಾಸ್ತ್ರವನ್ನು ನೋಡಬಲ್ಲ ದೃಷ್ಟಿ ಬೇಕ ಅವರ ಸ್ಥಿತಿಗತಿಗನುಸಾರ ತರ್ಕ, ಉಪದೇಶ, ಪ್ರೇರಣೆ, ಭಯ, ಆಶೆ, ಕೋಪ, ಅನುಕಂ ಮತ್ತು ದ್ವೇಷದ ಶೈಲಿ ಅಳವಡಿಸಲು ಶಕ್ತನಾಗಿರಬೇಕು. ಇದೇ ರೀತಿ ಸಂದೇಶದ ಮೇ ವಿಶ್ವಾಸವಿಟ್ಟವರ ಬೌದ್ಧಿಕ ಮತ್ತು ವ್ಯಾವಹಾರಿಕ ತರಬೇತಿ ಮಾಡುವುದು ಮತ್ತು ಅವರಿ ಆಜ್ಞಾನಿರ್ದೇಶಗಳನ್ನು ನೀಡುವುದರ ಅರ್ಥ ಅವರ ಕೈಯಲ್ಲಿ ಉಪದೇಶ ಮತ್ತು ಕಾನೂನು ಒಂದು ಸಂಗ್ರಹವನ್ನು ಕೊಟ್ಟು ಬಿಡುವುದಲ್ಲ. ಬದಲಾಗಿ ಪೂರ್ಣ ವಿವೇಕದೊಂದಿಗೆ ಅವ ಜೀವನವನ್ನು ಆ ಸಂದೇಶದ ಪ್ರಕಾರ ಕ್ರಮಬದ್ಧವಾಗಿ ಪರಿವರ್ತಿಸುವುದಾಗಿದೆ. ಈ ಉದ್ದೇ ಸಾಧಿಸಬೇಕಾದರೆ ಸಂದೇಶವಾಹಕನು ತಾತ್ವಿಕ ದೃಷ್ಟಿಕೋನಕ್ಕಿಂತ ಮುಂದುವರಿದು ಪರಿಸ್ಥಿತಿ ಬೇಡಿಕೆಗಳು, ಸಂದರ್ಭಕ್ಕೆ ತಕ್ಕ ಅಗತ್ಯಗಳು, ಜನರ ಬೌದ್ಧಿಕ ಮಟ್ಟ ಮತ್ತು ಮನಸ್ಸಿ ಒಲವುಗಳನ್ನು ಕೂಡಾ ಪೂರ್ಣವಾಗಿ ಪರಿಗಣಿಸಬೇಕು. ಅದಕ್ಕನುಸಾರವಾಗಿಯೇ ಅವರೊಂದಿ ಮಾತಾಡಬೇಕು.

ಪವಿತ್ರ ಕುರ್‌ಆನ್ ಸಂದೇಶ ಪ್ರಚಾರ ಭಾಷಣಗಳ ಸಮಾಹಾರವಾಗಿದೆ. ನೈ ಭಾಷಣಕಾರ ಅಲ್ಲಾಹನಾಗಿದ್ದಾನೆ. ಎಲ್ಲ ಮನುಷ್ಯರು ಅವನ ಸಂಬೋಧಿತರು. ದಿವ್ಯವಾ ತರುವ ದೇವಚರ (ಜಿಬ್ರೀಲ್) ಮತ್ತು ಹ. ಮುಹಮ್ಮದ್(ಸ) ಮಾಧ್ಯಮ ಮತ ವಕ್ತಾರರೆಂಬ ನೆಲೆಯಲ್ಲಿದ್ದಾರೆ. ಪವಿತ್ರ ಕುರ್‌ಆನ್ ಸರ್ವಲೋಕಗಳ ಅಧಿಪತಿಯು ತ ಭೂಮುಖದ ನಿವಾಸಿಗಳಿಗಾಗಿ ಮಾಡಿದ ಭಾಷಣಗಳಾಗಿವೆ. ಆದುದರಿಂದ ಅದರ ವಿವರ

ಲಿಯಲ್ಲಿ ಇದೀಗ ವಿವರಿಸಿದ ಎಲ್ಲ ಗುಣಗಳೂ ಕಡ್ಡಾಯವಾಗಿ ಇರಬೇಕು. ಸಹಜವಾಗಿಯೇ ದರಲ್ಲಿ ಸಂದರ್ಭಾನುಸಾರ ಕಾಠಿಣ್ಯವೂ ಇದೆ. ಮೃದುತ್ವವೂ ಇದೆ. ಬೆದರಿಕೆಗಳೂ ಇವೆ. ವಾರ್ತೆಗಳೂ ಇವೆ. ಪುರಾವೆಗಳೂ ಇವೆ. ಉಪದೇಶಗಳೂ ಇವೆ. ಪ್ರೇರಣೆಗಳೂ ಇವೆ. ಚೋದನೆಗಳೂ ಇವೆ. ಪ್ರೀತಿಯ ಮಾತುಗಳೂ ಇವೆ. ಕ್ರೋಧದ ನುಡಿಗಳೂ ಇವೆ. ಎಲ್ಲ ಮಾತುಗಳ ಸಂದರ್ಭಕ್ಕನುಸಾರ ಸಂಬೋಧನೆಯೂ ಬದಲಾಗುತ್ತಿರುತ್ತದೆ ದಾಃ ಇದೀಗ ಉಪಸ್ಥಿತಿ ಮತ್ತು ಸಂಬೋಧಿತರಾಗಿದ್ದವರು ಪರೋಕ್ಷವಾಗಿ ಬಿಡುತ್ತಾರೆ. ಾಷಣಗಾರ ಆತನ ನಿರ್ಲಕ್ಷ್ಯ ಮತ್ತು ಅಸಡ್ಡೆಯನ್ನು ಕಂಡು ಕೋಪ ಮತ್ತು ದ್ವೇಷದಿಂದ ವನಿಂದ ಮುಖ ತಿರುಗಿಸಿ ಬಿಟ್ಟು ಈಗ ಅವನನ್ನು ಮುಖ ನೋಡಿ ಮಾತನಾಡಿಸುವ ತಿಯಲ್ಲೂ ಇಲ್ಲದಂತೆ ಅಥವಾ ಸಂಬೋಧಕನು ತನ್ನನ್ನು ಕೂಡಾ ಹಲವೆಡೆ ಪರೋಕ್ಷವಾಗಿ ಾಡಿ ಜಿಬ್ರೀಲ್ ಅಥವಾ ಪ್ರವಾದಿಯನ್ನು ತನ್ನ ಸ್ಥಾನದಲ್ಲಿ ಸಂಬೋಧಕರಾಗಿ ಾಡಿರುವನು. ಎಷ್ಟೋ ಮಾತುಗಳನ್ನು ಪರೋಕ್ಷವಾಗಿ ಹೇಳುವುದರಲ್ಲೇ ಸ್ವಾರಸ್ಯವಿದೆ. ದೇ ರೀತಿ ಅನೇಕ ಕಡೆ ಸಂಬೋಧಿತನನ್ನು ಸಂಬೋಧಕನಾಗಿಯೂ ಸಂಬೋಧಕನನ್ನು ಂಬೋಧಿತನಾಗಿಯೂ ಮಾಡಲಾಗಿದೆ. ಇದು ತನ್ನ ಪ್ರಭುವನ್ನು ಈ ರೀತಿ ಪ್ರಾರ್ಥಿಸ ೇಕೆಂದು ಕಲಿಸಿರುವುದಾಗಿದೆ. ಸಂದೇಶ ಪ್ರಚಾರ ಭಾಷಣದ ಬೇಡಿಕೆ ಎಂಬಂತೆಯೇ ನೇಕ ಕಡೆಗಳಲ್ಲಿ ಪವಿತ್ರ ಕುರ್‌ಆನ್ ಒಂದು ವಿಷಯದ ನಡುವೆ ಇನ್ನೊಂದು ಷಯವನ್ನು ಪ್ರಸ್ತಾಪಿಸುತ್ತದೆ. ಈಗ ಏಕದೇವವಾದದ ಕುರಿತು ಮಾತನಾಡುತ್ತಿದ್ದು ಮ್ಮೆಲೇ ಪರಲೋಕ ಮತ್ತು ಕರ್ಮಫಲಗಳ ಪ್ರಸ್ತಾಪ ಬಂದು ಬಿಡುತ್ತದೆ. ಕುರ್‌ಆನ್ ತ್ತು ಪ್ರವಾದಿತ್ವದ ಪ್ರಾಮಾಣಿಕತೆಯ ಪುರಾವೆಗಳನ್ನು ನೀಡುತ್ತಿರುವಾಗ ಮಧ್ಯದಲ್ಲಿ ತ್ಯನಿಷೇಧಿಗಳ ಲೌಕಿಕ ಮೋಹದ ಕುರಿತು ಚರ್ಚೆ ಬರುತ್ತದೆ. ಅರಬ್ ಬಹುದೇವಾರಾಧಕರ ಂಟು ನೆಪಗಳ ಕುರಿತು ಮಾತನಾಡುತ್ತಿರುವಂತೆಯೇ ಗ್ರಂಥದವರ ಜಿಪುಣತೆ ಮತ್ತು ೀವ ಧಿಕ್ಕಾರದ ಕೃತ್ಯಗಳ ಪ್ರಸ್ತಾಪ ಬಂದು ಬಿಡುತ್ತದೆ. ಪವಿತ್ರ ಕುರ್‌ಆನನ್ನು ಒಂದು ಂಥವೆಂದು ಭಾವಿಸಿ ಓದತೊಡಗಿದರೆ ಈ ವಿವರಣಾ ಶೈಲಿ ಯಾವ ರೀತಿಯದ್ದು ಎಂದು ರ್ಥವಾಗದು. ಆದರೆ ಓರ್ವ ಸಂದೇಶ ಪ್ರಚಾರಕನ ನೆಲೆಯಲ್ಲಿ ನಿಂತು ನೋಡಿದರೆ ತ್ತು ನಿಮ್ಮ ಮುಂದೆ ಈ ವಚನಗಳ ಹಿನ್ನೆಲೆಯೂ ಇದ್ದರೆ ಪ್ರತಿಯೊಂದು ಮಾತು ನ್ನ ಸ್ಥಾನದಲ್ಲಿ ಅತ್ಯಂತ ಸೂಕ್ತವಾದುದೆಂದು ತಿಳಿದು ಬರುತ್ತದೆ.

## ಷಯಗಳ ಆವರ್ತನೆ

ಪವಿತ್ರ ಕುರ್‌ಆನಿನಲ್ಲಿ ವಿಷಯ ಮತ್ತು ವಿವರಣೆಗಳ ಆವರ್ತನೆ ಆಗಾಗ ಆಗುತ್ತಿರುತ್ತದೆ. ಷ್ಟೋ ಆಜ್ಞೆ, ನಿರ್ದೇಶ, ಎಚ್ಚರಿಕೆ, ಸುವಾರ್ತೆ, ಬೆದರಿಕೆ, ಉಪದೇಶ, ಪುರಾವೆ, ಸಾಕ್ಷ್ಯ, ತಿಹಾಸಿಕ ವಾಸ್ತವಿಕತೆಗಳು ಅಲ್ಲಲ್ಲಿ ಪ್ರಸ್ತಾಪಿಸಲ್ಪಟ್ಟಿವೆ. ಅದು ತನ್ನನ್ನು ಕುರಿತು ತಾನೇ ರೀತಿ ಹೇಳುತ್ತದೆ:

"ಎಲ್ಲ ಭಾಗಗಳೂ ಸಮಾನ ಸ್ವರೂಪವಾಗಿರುವಂತಹ ಗ್ರಂಥವಿದು. ಇದರಲ್ಲಿ ವಿಷಯಗಳು ಪುನರಾವರ್ತಿಸಲ್ಪಟ್ಟಿವೆ." (ಪವಿತ್ರ ಕುರ್‌ಆನ್, 39:23

ತೋರಿಕೆಗೆ ಇದೊಂದು ಉತ್ತಮ ಗುಣವಲ್ಲ. ಓರ್ವ ಹೊಸ ವಾಚಕನಿಗೆ ವಿಷಯಗಳ ಈ ಆವರ್ತನೆಯು ಬೇಸರ ತರಿಸುತ್ತದೆ. ಆದರೆ ಪವಿತ್ರ ಕುರ್‌ಆನಿನ ಅವತರಣ ಶೈ ಮತ್ತು ಅವತರಣದ ಉದ್ದೇಶ ಎರಡೂ ಈ ರೀತಿ ವಿಷಯಗಳು ಪುನರಾವರ್ತಿಸಲ್ಪ ಬೇಕೆಂದು ಬಯಸುತ್ತವೆ.

ಪವಿತ್ರ ಕುರ್‌ಆನ್ ಒಂದು ವ್ಯಾವಹಾರಿಕ ಮತ್ತು ಪ್ರಗತಿಪರ ಆಂದೋಲನ ಜೊತೆಗೆ ಅವತೀರ್ಣಗೊಳ್ಳುತ್ತಿತ್ತು. ಈ ಕುರಿತು ನಾವು ಹಿಂದಿನ ಪುಟಗಳಲ್ಲಿ ವಿವರವಾ ತಿಳಿದಿದ್ದೇವೆ. ಆಂದೋಲನವು ಒಂದು ನಿರ್ದಿಷ್ಟ ಸಮಯದಲ್ಲಿ ಯಾವ ಘಟ್ಟದಲ್ಲಿ ಮತ್ತು ಯಾವ ಅವಸ್ಥೆಯಲ್ಲಿದೆಯೋ ಆ ಘಟ್ಟ ಮತ್ತು ಅವಸ್ಥೆಯನ್ನು ಪರಿಗಣಿಸಿಯೆ ಆದೇಶಗಳು ಅವತೀರ್ಣವಾಗಬೇಕಾಗಿತ್ತು. ಮುಂದಿನ ಘಟ್ಟದ ಪ್ರಸ್ತಾಪವೇ ಅದರಲ್ಲಿ ಬರಬಾರದಿತ್ತು. ಅದೇ ಘಟ್ಟದ ಮಾತನ್ನು ಪುನರಾವರ್ತಿಸುತ್ತಿರುವ ಅಗತ್ಯವಿತ್ತು.

ಒಂದು ಆಂದೋಲನವು ತನ್ನ ಅನುಯಾಯಿಗಳ ಮನ ಮಸ್ತಿಷ್ಕಗಳಲ್ಲಿ ಬೇರೂ ಬೇಕಾದರೆ ಅದರ ಬುನಾದಿಗಳು ಪೂರ್ಣವಾಗಿ ಅವರಿಗೆ ಮನವರಿಕೆಯಾಗಬೇಕು. ಅದ ಅವರ ಮನಸ್ಸಿನ ಆಳಕ್ಕೆ ಇಳಿಯಬೇಕು. ಇಲ್ಲವಾದರೆ ಆಂದೋಲನವು ತನ್ನ ಗುರಿಯನ ಮುಟ್ಟುವುದಿಲ್ಲವೆಂಬುದು ಬುದ್ಧಿ ಮತ್ತು ಅನುಭವಸಿದ್ಧ ಮಾತು. ಆದ್ದರಿಂದ ಪ್ರಥಮ ದಿನದಿಂದ ಕೊನೆಯ ದಿನದ ತನಕ ಮೂಲಭೂತ ಬೋಧನೆಗಳನ್ನು ಆಗಾಗ ಬೇರೆ ಬೇ ರೂಪದಲ್ಲಿ ಮುಂದೆ ತರುತ್ತಿರಬೇಕಾದ ಅಗತ್ಯವಿತ್ತು. ಆಂದೋಲನದ ಎಲ್ಲ ಘಟ್ಟ ಗಳಲ್ಲಿಯೂ ಎಲ್ಲ ಪರಿಸ್ಥಿತಿಗಳಲ್ಲಿಯೂ ಅವುಗಳನ್ನು ಉಪದೇಶಿಸುವ ಅಗತ್ಯವಿತ್ತು ಆದ್ದರಿಂದ ಪವಿತ್ರ ಕುರ್‌ಆನಿನಲ್ಲಿ ಇತರ ವಿಷಯಗಳ ಆವರ್ತನೆ ಬಹಳ ಕಡಿಮೆ ಇದ ಆದರೆ ಏಕದೇವಾರಾಧನೆ, ಪರಲೋಕ ವಿಶ್ವಾಸ, ಕರ್ಮಫಲದ ಕಲ್ಪನೆ, ಪ್ರವಾದಿತ್ವ ದೇವಾನುಸರಣೆ, ದೇವಭಯ, ಧರ್ಮನಿಷ್ಠೆ, ಸಹನೆ ಮತ್ತು ಕೃತಜ್ಞತಾ ಭಾವನೆ, ದೇವ ಮೇಲೆ ಭರವಸೆ ಮತ್ತು ಆತನ ವಿಧೇಯತೆ, ನಮಾಝ್ ಮತ್ತು ದೇವ ಮಾರ್ಗದಲ್ಲಿ ವೆಚ್ಚ, ಬಂಧುಗಳ ಬಗ್ಗೆ ಕರುಣೆ ಇತ್ಯಾದಿ ವಿಷಯಗಳ ಪ್ರಸ್ತಾಪದಿಂದ ಪವಿತ್ರ ಕುರ್‌ಆನಿ ಒಂದು ಪುಟವೂ ಖಾಲಿ ಇಲ್ಲ. ಮನುಷ್ಯ ಶರೀರದಲ್ಲಿ ನರಗಳು ಹರಡಿರುವಂತೆ ಪವಿತ್ರ ಕುರ್‌ಆನಿನಲ್ಲಿ ಈ ವಿಷಯಗಳ ಉಪದೇಶ ಹರಡಿದೆ. ಏಕೆಂದರೆ ಇವು ಧರ್ಮ ಬುನಾದಿಗಳು. ಇವುಗಳು ಬಲಿಷ್ಠವಾದರೆ ಮಾತ್ರ ಧರ್ಮ ಬಲಿಷ್ಠವಾಗುವುದು.

ಆವರ್ತನೆ ಎಂಬ ಪದದಿಂದ ಒಂದೇ ಮಾತನ್ನು ಒಂದೇ ಅರ್ಥ ಮತ್ತು ಒಂದೆ ಪದಗಳಲ್ಲಿ ಅಲ್ಲಲ್ಲಿ ಆವರ್ತಿಸಲಾಗಿದೆ ಎಂಬ ಸಂಶಯ ಬರಬಾರದು. ಪವಿತ್ರ ಕುರ್‌ಆನಿನಲ್ಲಿ ಒಂದೇ ವಿಧಿ, ಒಂದೇ ಕಥೆ ಮತ್ತು ಒಂದೇ ಪುರಾವೆಯನ್ನು ಹತ್ತಾರು ಸಲ ಆವರ್ತಿಸಲಾಗಿದ್ದರು

್ರತಿಯೊಂದು ಕಡೆಯಲ್ಲಿ ವಿವರಣೆ ಮತ್ತು ಉಪದೇಶದ ಒಂದು ಹೊಸ ಕೋನವನ್ನು ಅದು ಮುಂದೆ ತಂದಿದೆ. ಉದಾ: ಒಂದೇ ಕತೆಯನ್ನು ಸಂಕ್ಷಿಪ್ತ ಮತ್ತು ವಿವರವಾದ ಬೇರೆ ಬೇರೆ ್ರಕಾರಗಳಲ್ಲಿ ಅದು ವಿವರಿಸುತ್ತದೆ. ಘಟನೆಗಳ ಜೋಡನೆ ಮತ್ತು ವಿವರಣೆಯಲ್ಲಿ ವಿವಿಧತೆ ಉಂಟು ಮಾಡುತ್ತದೆ. ಪದಗಳನ್ನು ಬದಲಾಯಿಸುತ್ತದೆ. ಕತೆಯ ವಿಭಿನ್ನ ಭಾಗಗಳ ಪೈಕಿ ಲವನ್ನು ಕೆಲವು ಕಡೆ ಬಿಟ್ಟು ಬಿಡುತ್ತದೆ. ಇದರಿಂದ ಒಂದೇ ಮಾತು ಪದೇ ಪದೇ ೇಳುವಂತೆ ಕುರ್‌ಆನಿನ ಆವರ್ತನಗಳನ್ನು ಕೇಳುವಾಗ ಬೇಸರ ಉಂಟಾಗುವುದಿಲ್ಲ ಮಾತ್ರವಲ್ಲ ೇವ ಯುಕ್ತಿಯ ಹಲವು ಹೊಸ ವಿಷಯಗಳು ಪ್ರತಿಸಲ ಮನನವಾಗುತ್ತವೆ. ಇದರಂತೆಯೇ ಧಿ, ಪುರಾವೆ, ಉಪದೇಶ ಮತ್ತಿತರ ವಿಷಯಗಳ ಆವರ್ತನೆಯೂ ಇದೆ. ಇಲ್ಲೆಲ್ಲಾ ಒಂದು ಷಯವನ್ನು ನೂರು ಬಣ್ಣಗಳಲ್ಲಿ ವರ್ಣಿಸಲಾಗಿದೆ. ಮಾತ್ರವಲ್ಲ ಅವುಗಳಲ್ಲಿ ನೂರಾರು ಯುಕ್ತಿಯ ಮಾತುಗಳೂ ಸೇರಿಕೊಂಡಿವೆ.

ಒಬ್ಬ ವ್ಯಕ್ತಿ ಕುರ್‌ಆನಿನಲ್ಲಿ ವಿಷಯಗಳ ಆವರ್ತನೆಯ ಈ ಯುಕ್ತಿಯನ್ನು ಂಡುಕೊಂಡರೆ ಆವರ್ತನೆಯ ಉದ್ದೇಶವೂ ಅವನಿಗೆ ಅರ್ಥವಾಗುತ್ತದೆ. ಅವನಿಗೆ ಅದರ ಗ್ಗೆ ಯಾವುದೇ ಆಕ್ಷೇಪ ಅಥವಾ ಬೇಸರ ಉಳಿಯಲಾರದು. ಮಾತ್ರವಲ್ಲ ಅದನ್ನವನು ರ್‌ಆನಿನ ಮಹಿಮೆ ಎಂದೂ ಸಂದೇಶ ಪ್ರಚಾರದ ಉದ್ದೇಶಕ್ಕೆ ಅನಿವಾರ್ಯವೆಂದೂ ರಿಗಣಿಸುವನು.

# ಕುರ್‌ಆನ್ ಮತ್ತು ಅದರ ಭಾಗಗಳು

## ಕುರ್‌ಆನಿನ ಹೆಸರು

ಕುರ್‌ಆನ್ ಎಂಬ ಪದ ಅರಬೀ ಭಾಷೆಯ ಕ್ರಿಯಾಧಾತುವಾಗಿದೆ. ಅದರ ಶಬ್ದಾರ್ಥ ಪದ ಮತ್ತು ವಾಕ್ಯಗಳನ್ನು ಅರ್ಥಪೂರ್ಣವಾಗಿ ಜೋಡಿಸಿ ಹೇಳುವುದು ಎಂದಾಗಿದೆ ಅದನ್ನೇ ಸಾಮಾನ್ಯ ಭಾಷೆಯಲ್ಲಿ ಓದುವುದು ಎನ್ನುತ್ತಾರೆ. ಅರಬೀ ಭಾಷೆಯ ಸಾಮಾನ್ಯ ನಿಯಮದ ಪ್ರಕಾರ ಓದಲ್ಪಡುವ ವಸ್ತುವನ್ನು ಕುರ್‌ಆನ್ ಎನ್ನಲಾಗುತ್ತದೆ. ಆದ್ದರಿಂದ ಓದಲ್ಪಡುವ ಎಲ್ಲ ಕಾಗದ ಅಥವಾ ಗ್ರಂಥವನ್ನು ಶಬ್ದಾರ್ಥ ಪ್ರಕಾರ ಕುರ್‌ಆನ್ ಎನ್ನಬಹುದಾಗಿದೆ. ಆದರೆ ವಾಸ್ತವದಲ್ಲಿ ಎಲ್ಲ ಗ್ರಂಥಗಳಿಗೆ ಕುರ್‌ಆನ್ ಎನ್ನಲಾಗುವುದಿಲ್ಲ. ಕೇವಲ ದೇವನಿಂದ ಅವತೀರ್ಣವಾದ ಗ್ರಂಥಗಳಿಗೆ ಮಾತ್ರ ಈ ಪದವನ್ನು ಬಳಸಲಾಗುತ್ತದೆ. ಈ ಪದವು ಈಗ ದೈವಿಕ ಗ್ರಂಥಗಳಿಗೆ ಸರ್ವನಾಮವಾಗಿದೆ. ಕುರ್‌ಆನ್ ಅಂದರೆ ಅಲ್ಲಾಹನ ವತಿಯಿಂದ ಅವತೀರ್ಣವಾದ ಗ್ರಂಥ.

ಕುರ್‌ಆನಿನಲ್ಲಿಯೂ ಅನೇಕ ಕಡೆ ಈ ಪದವು ಇದೇ ಅರ್ಥದಲ್ಲಿ ಬಳಸಲ್ಪಟ್ಟಿದೆ ಉದಾ:

"ಒಂದು ವೇಳೆ ಪರ್ವತಗಳನ್ನು ಚಲಿಸತಕ್ಕಂತಹ ಕುರ್‌ಆನ್ (ದೈವಿಕ ಗ್ರಂಥ) ಇದ್ದಿದ್ದರೆ." (ಪವಿತ್ರ ಕುರ್‌ಆನ್, 13:31)

ಇದು ಕುರ್‌ಆನ್ ಎಂಬ ಪದದ ಸಾಮಾನ್ಯ ಅರ್ಥವಾಯಿತು. ಇದರ ನಂತರ ಈ ಪದಕ್ಕೆ ಒಂದು ವಿಶಿಷ್ಟ ಅರ್ಥ ಬಂತು. ಅದೊಂದು ಪಾರಿಭಾಷಿಕದ ರೂಪ ತಾಳಿತು ಅದರ ತಾತ್ಪರ್ಯ ಹ. ಮುಹಮ್ಮದ್‌ರಿಗೆ(ಸ) ಅವತೀರ್ಣವಾದ ದೇವಗ್ರಂಥವೆಂದಾಯಿತು ಈ ರೀತಿ ಈ ಪದವು ಈಗ ಮೊದಲು 'ಅಲ್' ಎಂಬ ಶಬ್ದದ ಜೋಡನೆಯಿಂದ ಅದೇ ದೇವಗ್ರಂಥದ ವಿಶಿಷ್ಟ ಹೆಸರಾಯಿತು. ಅದು ದೇವಗ್ರಂಥಗಳ ಸರ್ವನಾಮವೆಂಬ ನೆಲೆಯಲ್ಲಿ ಬೇರೆ ದೈವಿಕ ಗ್ರಂಥಗಳಿಗೆ ಬಳಸಲ್ಪಟ್ಟರೂ ಅದು ಸಂದರ್ಭದಿಂದ ಸ್ಪಷ್ಟವಾಗುತ್ತದೆ.

ಪವಿತ್ರ ಕುರ್‌ಆನಿಗೆ "ಅಲ್ ಕುರ್‌ಆನ್" ಎಂದು ಅಲ್ಲಾಹನು ಹೆಸರಿಡಲು ಕಾರಣವಾದ ಯುಕ್ತಿಗಳು ಯಾವುದೆಂದು ಆತನೇ ಬಲ್ಲನು. ಆದರೆ ಅವು ಈ ಕೆಳಗಿನಂತೆ ಆಗಿರಲೂ ಸಾಧ್ಯವಿದೆ.

1) ಕುರ್ಆನ್ ಮನುಷ್ಯ ಜೀವನದ ಸಮಗ್ರ ಸಂವಿಧಾನ ಮತ್ತು ಶಾಶ್ವತ ಮಾರ್ಗದರ್ಶಿಯಾಗಿದೆ. ಆದ್ದರಿಂದ ಅದರೊಂದಿಗೆ ಅದರ ಅನುಯಾಯಿಗಳ ಸಂಬಂಧವೂ ಸಮಗ್ರ ಮತ್ತು ಖಾಯಂ ಆಗಿದೆ. ಅದು ಕಾಗದದ ಹಾಳೆಯಲ್ಲಿರುವುದಕ್ಕಿಂತ ಅವರ ಹೃದಯದಲ್ಲಿ ಅಂಕಿತವಾಗಿರಬೇಕಾದುದು ಮತ್ತು ನಾಲಗೆಗಳು ಅದರ ಪಠಣದಲ್ಲಿ ನಿರತವಾಗಿರಬೇಕಾದುದು ಈ ಸಂಬಂಧದ ಬೇಡಿಕೆಯಾಗಿದೆ. ಆದ್ದರಿಂದಲೇ ದೇವನು ಎಲ್ಲಾ ಕಾಲಗಳಲ್ಲಿಯೂ ಅದರ ಸಂರಕ್ಷಣೆಗಾಗಿ ಅದನ್ನು ಸಾವಿರಾರು ಹಾಫಿಝ್‌ಗಳ ಹೃದಯಗಳಲ್ಲಿ ಸುರಕ್ಷಿತವಾಗಿರಿಸಿದನು ಮತ್ತು ಲಕ್ಷಗಟ್ಟಲೆ ನಾಲಗೆಗಳಲ್ಲಿ ಅದನ್ನು ಹೊರಡಿಸಿದನು. ಆದ್ದರಿಂದಲೇ ಅದರ ಹೆಸರು ಕುರ್ಆನ್ ಎಂದಿಡಲಾಗಿದೆ. ಅರ್ಥಾತ್ ಓದಲ್ಪಡುವ ಮತ್ತು ಓದಲ್ಪಡುತ್ತಲಿರುವ ಗ್ರಂಥ.

2) ಕುರ್ಆನಿನ ಮೂಲಕ ಹ. ಆದಮ್(ಅ) ಅವರ ಕಾಲದಿಂದ ಆರಂಭಗೊಂಡ ಮಾರ್ಗದರ್ಶನದ ಪರಂಪರೆಯು ಮುಕ್ತಾಯಗೊಂಡಿತು. ಅದರಲ್ಲಿ ಈ ತನಕ ಅವತೀರ್ಣ ವಾದ ಎಲ್ಲಾ ಮಾರ್ಗದರ್ಶನ ಗ್ರಂಥಗಳ ಮೂಲ ಶಿಕ್ಷಣವನ್ನು ಶೇಖರಿಸಿ ಸುರಕ್ಷಿತಗೊಳಿಸ ಲಾಗಿದೆ. ಈ ಹಿಂದಿನ ದೈವಿಕ ಗ್ರಂಥಗಳ ನೈಜ ಶಿಕ್ಷಣವೇನೆಂಬುದನ್ನು ಅರಿಯಲು ಆ ಗ್ರಂಥಗಳನ್ನು ನೋಡದೆ ಕುರ್ಆನನ್ನು ನೋಡಿದರೆ ಅವುಗಳ ಮೂಲ ಶಿಕ್ಷಣ ತಿಳಿದು ಬರುತ್ತದೆ. ಈ ರೀತಿ ಕುರ್ಆನ್ ಒಂದು ಗ್ರಂಥವಾದರೂ ನಿಜವಾಗಿ ಅದು ದಿವ್ಯವಾಣಿಯ ಒಟ್ಟು ಪರಂಪರೆಯ ಮತ್ತು ಎಲ್ಲಾ ದೈವಿಕ ಗ್ರಂಥಗಳ ಕ್ರೋಡೀಕರಣವಾಗಿದೆ. ಆದ್ದರಿಂದಲೇ ಅದರ ಹೆಸರು ಕುರ್ಆನ್ ಎಂದಿರಿಸಲಾಗಿದೆ. ಅದರ ಮೂಲ ಶಬ್ದಾರ್ಥದಲ್ಲಿಯೇ ಕ್ರೋಡೀಕರಣದ ಈ ತಾತ್ಪರ್ಯವು ಸೇರಿಕೊಂಡಿದೆ.

ಪವಿತ್ರ ಕುರ್ಆನಿಗೆ ಇನ್ನೂ ಕೆಲವು ಹೆಸರುಗಳಿವೆ. ಅದು ತನಗಾಗಿ ಈ ಹೆಸರುಗಳನ್ನು ಅನೇಕ ಕಡೆ ಬಳಸಿಕೊಂಡಿದೆ. ಉದಾ: ಕಿತಾಬ್, ಫುರ್ಕಾನ್, ದಿಕ್ರ್, ದಿಕ್ರಾ, ನೂರ್, ಹುದಾ ಇತ್ಯಾದಿ. ಆದರೆ ಅದು ಕುರ್ಆನಿನಂತೆ ಅದರ ಅಂಕಿತನಾಮವಲ್ಲ. ಆದ್ದರಿಂದ ಈ ಪದಗಳ ಅರ್ಥವೇನು ಮತ್ತು ಕುರ್ಆನ್ ಈ ಹೆಸರುಗಳನ್ನು ಏಕೆ ಬಳಸಿದೆ ಎಂಬ ಚರ್ಚೆಯು ಇಲ್ಲಿ ಅಪ್ರಸ್ತುತ.

## ಸೂರಃ(ಅಧ್ಯಾಯ)

ಪವಿತ್ರ ಕುರ್ಆನ್ ಸಂಪೂರ್ಣ ಒಂದು ನಿರಂತರ ಗ್ರಂಥವಾಗಿರದೆ ಅದು 114 ಅಧ್ಯಾಯಗಳಲ್ಲಿ ವಿಭಜಿಸಲ್ಪಟ್ಟಿದೆ. ಅದನ್ನು ಅರಬಿಯಲ್ಲಿ ಸೂರಃ ಎನ್ನುತ್ತಾರೆ. ಅದನ್ನು ಒಂದು ಗ್ರಂಥದ ಅಧ್ಯಾಯಗಳಂತೆ ಪರಿಗಣಿಸಬಹುದು.

ಪ್ರತಿಯೊಂದು ಸೂರಃಕ್ಕೆ ಒಂದು ಮುಖ್ಯ ವಿಷಯವಿದೆ. ಅದು ಪೂರ್ಣ ಕುರ್ಆನಿನ ಕ್ರೋಡೀಕರಣ ಮತ್ತು ಒಟ್ಟು ಚರ್ಚಿತ ವಿಷಯಗಳ ಒಂದು ಭಾಗವಾಗಿದೆ ಅಥವಾ ಅದಕ್ಕೆ

ಸಂಬಂಧಪಟ್ಟ ವಿಷಯಗಳ ಪೈಕಿ ಯಾವುದಾದರೊಂದು ವಿಷಯದ ಮೇಲೆಯೇ ಸಂಪೂರ್ಣ ಅಧ್ಯಾಯ ಸಾಗುತ್ತದೆ. ಈ ಚರ್ಚೆಯು ತನ್ನ ಉದ್ದೇಶ ಮತ್ತು ವಿಷಯದ ದೃಷ್ಟಿಯಿಂದ ಪರಿಪೂರ್ಣವಾಗಿರುತ್ತದೆ. ಅದು ಬೇರೆ ಅಧ್ಯಾಯಗಳನ್ನು ಅವಲಂಬಿಸಿರುವುದಿಲ್ಲ. ಪ್ರತಿಯೊಂದು ಅಧ್ಯಾಯದ ಕೇಂದ್ರೀಯ ವಿಷಯಕ್ಕೆ ಅದರ ಹಿಂದಿನ ಮತ್ತು ನಂತರದ ಅಧ್ಯಾಯದ ವಿಷಯದೊಂದಿಗೆ ಒಂದು ಸಹಜ ಸಂಬಂಧವಿದೆ. ಆದರೆ ಈ ಎಲ್ಲ ವಿಷಯಗಳನ್ನು ಅರ್ಥ ಮಾಡಿಕೊಳ್ಳಲು ತೀವ್ರ ಪರಿಶ್ರಮ ಮತ್ತು ಗಾಢ ಅಧ್ಯಯನದ ಅಗತ್ಯವಿದೆ. ಏಕೆಂದರೆ ಅದರ ವಿವರಣೆಯು ಕುರ್‌ಆನಿನಲ್ಲಿ ಎಲ್ಲಿಯೂ ಇಲ್ಲ. ಅದನ್ನು ನಮ್ಮ ವಿಚಾರ ಮತ್ತು ಯೋಚನಾ ಶಕ್ತಿಗೆ ಬಿಟ್ಟು ಬಿಡಲಾಗಿದೆ.

ಸೂರಃ ಎಂಬ ಪದವು 'ಸುವರ್' ಎಂಬ ಅರಬೀ ಪದದಿಂದ ಹೊರಟಿದೆ. ಅದರರ್ಥ ನಗರದ ಕೋಟೆ. ಕುರ್‌ಆನ್ ತನ್ನ ಅಧ್ಯಾಯಗಳನ್ನು ಸೂರಃ ಎಂದು ಹೇಳಲು ಕಾರಣ ವೇನಿರಬಹುದು ಎಂಬುದು ಒಂದು ಸಹಜ ಜಿಜ್ಞಾಸೆ. ಆದರೆ ಈ ಬಗ್ಗೆ ಅಲ್ಲಾಹನ ವತಿಯಿಂದಾಗಲೀ ಆತನ ಪ್ರವಾದಿಯ ವತಿಯಿಂದಾಗಲೀ ಯಾವುದೇ ವಿವರಣೆ ಇಲ್ಲದಿರುವುದರಿಂದ ಅದರ ಕಾರಣವನ್ನು ಊಹೆಯಿಂದಲೇ ತಿಳಿದುಕೊಳ್ಳಬೇಕಷ್ಟೆ. ಯೋಚನೆ ಮಾಡಿದಾಗ ಅದಕ್ಕೆ ಎರಡು ಕಾರಣಗಳು ತಿಳಿದು ಬರುತ್ತವೆ.

ಒಂದನೆಯದು ಮೇಲೆ ವಿವರಿಸಲಾದಂತೆ ಕುರ್‌ಆನ್ ಬೇರೆ ಬೇರೆ ಅಧ್ಯಾಯಗಳ ವಿಶಿಷ್ಟ ನೆಲೆಯಾಗಿದೆ. ಕುರ್‌ಆನಿನ ಅಧ್ಯಾಯಗಳನ್ನು ಸೂರಃ ಎನ್ನುವ ಮೂಲಕ ಪಟ್ಟಣದ ಸುತ್ತು ಕೋಟೆ ಕಟ್ಟುವ ಮೂಲಕ ಇತರ ಪಟ್ಟಣಗಳಿಂದ ಮತ್ತು ದೇಶದ ಇತರ ಭಾಗಗಳಿಂದ ಪ್ರತ್ಯೇಕವಾದಂತೆ ಕುರ್‌ಆನಿನ ಪ್ರತಿಯೊಂದು ಅಧ್ಯಾಯವೂ ಪ್ರತ್ಯೇಕ ವಾಗಿದೆಯೆಂದರ್ಥ. ಪ್ರತಿಯೊಂದು ಸೂರಃಕ್ಕೆ ಒಂದು ಪ್ರತ್ಯೇಕ ಶೀರ್ಷಿಕೆ ಮತ್ತು ವಿಷಯವಿದ್ದು ಅದು ಇತರ ಸೂರಃಗಳಿಂದ ಭಿನ್ನವಾಗಿದೆ. ಪ್ರತಿಯೊಂದು ಸೂರಃಕ್ಕೆ ಪ್ರತ್ಯೇಕ ನೆಲೆ ಇಲ್ಲದಿರುತ್ತಿದ್ದರೆ ಕುರ್‌ಆನನ್ನು 114 ಸೂರಃಗಳಲ್ಲಿ ವಿಂಗಡಿಸುವ ಬದಲು ನಿರಂತರ ಒಂದೇ ವಿಷಯವಾಗಿ ಅದು ಮುಂದುವರಿಯುತ್ತಿತ್ತು.

ಎರಡನೆಯ ಕಾರಣ ಕುರ್‌ಆನಿನ ಸಂಪೂರ್ಣ ಸುರಕ್ಷಿತತೆಯಾಗಿದೆ. ಅರ್ಥಾತ್ ಕುರ್‌ಆನನ್ನು ಶಾಶ್ವತವಾಗಿ ಸುರಕ್ಷಿತವಾಗಿಡುವುದೆಂದು ಅಲ್ಲಾಹನು ತೀರ್ಮಾನ ಮಾಡಿದ್ದನು. ಆದ್ದರಿಂದಲೇ ಆತನು ಅದರ ಅಧ್ಯಾಯಗಳಿಗೆ ಸೂರಃ ಎಂದು ಹೆಸರಿಸಿದನು. ತನ್ಮೂಲಕ ತನ್ನ ಈ ನಿರ್ಧಾರದ ಘೋಷಣೆ ಒಂದು ವಿಶಿಷ್ಟ ರೂಪದಲ್ಲಿ ಮಾಡಿದನು. ಕುರ್‌ಆನಿನ ಪ್ರತಿಯೊಂದು ಅಧ್ಯಾಯವೂ ಅಲ್ಲಾಹನಿಂದ ಕೋಟೆ ಕಟ್ಟಲ್ಪಟ್ಟು ಸುರಕ್ಷಿತವಾದ ಪಟ್ಟಣ ದಂತಿದೆ. ಅದು ಎಲ್ಲ ರೀತಿಯ ಮಾನವ ಹಸ್ತಕ್ಷೇಪದಿಂದ ಸದಾ ಸುರಕ್ಷಿತವಿರುವುದು.

ಅಧ್ಯಾಯಗಳ ಹೆಸರನ್ನು ಅಲ್ಲಾಹನು ಅಥವಾ ಆತನ ಪ್ರವಾದಿ ಇರಿಸಿದ್ದಾರೆ. ಅನೇಕ ಅಧ್ಯಾಯಗಳಿಗೆ ಒಂದಕ್ಕಿಂತ ಹೆಚ್ಚು ಹೆಸರುಗಳಿವೆ. ಈ ಹೆಸರುಗಳಲ್ಲದೆ ಸಮುದಾಯದ

ಪರಿಷ್ಠ ವಿದ್ವಾಂಸರು ಅಧ್ಯಾಯದ ವಿಷಯಗಳನ್ನು ಸೂಚಿಸಲು ಇಟ್ಟ ಹೆಸರುಗಳೂ ಇವೆ. ಆದರೆ ಇವುಗಳು ನೈಜ ಹೆಸರುಗಳ ಸ್ಥಾನವನ್ನು ಹೊಂದಿಲ್ಲ. ಪ್ರವಾದಿವರ್ಯರಿಂದ(ಸ) ಬರದಿಯಾದವುಗಳೇ ನಿಜವಾದ ಹೆಸರುಗಳು. ಸಾಮಾನ್ಯವಾಗಿ ಕುರ್‌ಆನ್ ಪ್ರತಿಗಳಲ್ಲಿ ಪ್ರತಿಯೊಂದು ಅಧ್ಯಾಯದಲ್ಲಿ ಇರುವ ಹೆಸರುಗಳಿವು.

ಅಧ್ಯಾಯಗಳ ಹೆಸರು ಒಂದೇ ಶೈಲಿಯಲ್ಲಿ ಇಡಲ್ಪಟ್ಟಿಲ್ಲ. ಬೇರೆ ಬೇರೆ ಅಧ್ಯಾಯಗಳ ಹೆಸರು ವಿಭಿನ್ನ ಶೈಲಿಯಲ್ಲಿ ಇಡಲ್ಪಟ್ಟಿವೆ. ಅನೇಕ ಅಧ್ಯಾಯಗಳ ಪ್ರಾರಂಭದ ಪದವನ್ನೇ ಅದರ ಹೆಸರೆಂದು ಸಾರಲಾಗಿದೆ. ಉದಾಹರಣೆಗೆ ಸೂರಃ ತಾಹಾ, ಯಾಸೀನ್, ಕಾಫ್ ಇತ್ಯಾದಿ. ಅನೇಕ ಸೂರಃಗಳಿಗೆ ಅವುಗಳ ಯಾವುದಾದರೂ ವಿಶಿಷ್ಟ ಪದವನ್ನು ಹೆಸರಾಗಿ ಇರಿಸಲಾಗಿದೆ. ಉದಾಹರಣೆಗೆ ಸೂರಃ ಅಲ್ ಬಕರಃ, ಅಝ್ಝುಕ್ರುಫ್, ಅನ್ನಮ್ಲ್ ಇತ್ಯಾದಿ. ಕೆಲವು ಅಧ್ಯಾಯಗಳಿಗೆ ಅದರ ಯಾವುದಾದರೂ ಮುಖ್ಯ ವಿಷಯವನ್ನೇ ಹೆಸರಾಗಿ ಇರಿಸಲಾಗಿದೆ. ಉದಾಹರಣೆಗೆ ಸೂರಃ ಆಲಿ ಇಮ್ರಾನ್, ಸೂರಃ ಅನ್ನೂರ್ ಇತ್ಯಾದಿ. ಇನ್ನು ಕೆಲವು ಅಧ್ಯಾಯಗಳ ಹೆಸರು ಅವುಗಳ ಮುಖ್ಯ ವಿಷಯವನ್ನೇ ಹೆಸರಾಗಿ ಇರಿಸಲಾಗಿದೆ. ಉದಾಹರಣೆಗೆ ಸೂರಃ ಬರಾಅತ್, ಸೂರಃ ಇಖ್ಲಾಸ್ ಇತ್ಯಾದಿ. ಹೆಸರಿಡುವ ಈ ಬೇರೆ ಬೇರೆ ಕ್ರಮಗಳನ್ನು ಅರಬೀ ರೀತಿಯ ಪ್ರಕಾರವೇ ಅಳವಡಿಸಲಾಗಿದೆ.

ಅಧ್ಯಾಯಗಳ ಗಾತ್ರದಲ್ಲಿ ಬಹಳ ಅಂತರವಿದೆ. ಒಂದು ಅಧ್ಯಾಯವು ಕುರ್‌ಆನಿನ ಹನ್ನೆರಡನೆಯ ಒಂದು ಅಥವಾ ಹದಿಮೂರನೆಯ ಒಂದು ಭಾಗದಷ್ಟು ದೊಡ್ಡದಿದೆ. ಕೆಲವು ಅಧ್ಯಾಯಗಳು ಕೇವಲ ಎರಡು ಮೂರು ಸಂಕ್ಷಿಪ್ತ ಸೂಕ್ತಗಳು ಮತ್ತು 14 ಅಥವಾ 15 ಪದಗಳನ್ನು ಮಾತ್ರ ಒಳಗೊಂಡಿದೆ. ಆದರೆ ಸಣ್ಣ ಅಧ್ಯಾಯಗಳ ಗಾತ್ರದಂತೆ ಅದರ ಮಹತ್ವವೇನೂ ಸಣ್ಣದಾಗುವುದಿಲ್ಲ. ದೊಡ್ಡ ಅಧ್ಯಾಯಗಳಲ್ಲಿ ವಿವರವಾಗಿ ಪ್ರತಿಪಾದಿಸಲ್ಪಟ್ಟ ವಿಷಯಗಳು ಸಣ್ಣ ಅಧ್ಯಾಯಗಳಲ್ಲಿ ದೇವ ಮಹಿಮೆಯಿಂದ ಅತ್ಯಂತ ಸಂಕ್ಷಿಪ್ತವಾಗಿ ಪ್ರತಿಪಾದಿಸಲ್ಪಟ್ಟಿವೆ. ಈ ಅಧ್ಯಾಯಗಳು ನಿಜವಾಗಿ ಅನುಭವಾಮೃತದಂತಿದೆ. ಅನೇಕ ಧಾರ್ಮಿಕ ಬೇಡಿಕೆಗಳಂತೆ ಒಂದು ಗಣ್ಯ ಸಂಖ್ಯೆಯ ಚಿಕ್ಕ ಚಿಕ್ಕ ಅಧ್ಯಾಯಗಳೂ ಕುರ್‌ಆನಿನಲ್ಲಿ ಇರಬೇಕಾದುದು ಅಗತ್ಯವಾಗಿತ್ತು.

ಇದಕ್ಕೆ ಅತಿದೊಡ್ಡ ಕಾರಣ ಧರ್ಮದ ಮೂಲ ಬೋಧನೆಗಳನ್ನು ಮತ್ತು ಮೂಲಭೂತ ವಿಚಾರಗಳನ್ನು ಸದಾ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿಸುವುದಾಗಿತ್ತು. ಇದು ಅತಿದೊಡ್ಡ ಧಾರ್ಮಿಕ ಅವಶ್ಯಕತೆಯಾಗಿದೆ. ದೀರ್ಘ ಅಧ್ಯಾಯಗಳಲ್ಲಿ ಈ ಬೋಧನೆಗಳು ಪೂರ್ಣ ವಿವರಗಳೊಂದಿಗೆ ಇವೆ; ಅಗತ್ಯ ಪುರಾವೆಗಳೊಂದಿಗೆ ಇವೆ. ಆದ್ದರಿಂದ ಅವುಗಳನ್ನು ನೆನಪಿಡುವವನು ಆ ಶಿಕ್ಷಣ ಮತ್ತು ವಿಚಾರಗಳನ್ನು ತನ್ನ ಸ್ಮೃತಿಪಟಲದಲ್ಲಿ ಸದಾ ಉಳಿಸುವನು. ಆದರೆ ವಾಸ್ತವದಲ್ಲಿ ಈ ದೀರ್ಘ ಅಧ್ಯಾಯಗಳನ್ನು ನೆನಪಿಡಬಲ್ಲವರು ಕೇವಲ ಕೆಲವೇ ಮಂದಿ ಇದ್ದಾರೆ. ಆದ್ದರಿಂದ ಸಾಮಾನ್ಯ ಮುಸ್ಲಿಮರ ಮಟ್ಟಿಗೆ ಸಣ್ಣ ಸಣ್ಣ

ಅಧ್ಯಾಯಗಳನ್ನು ಅವತೀರ್ಣಗೊಳಿಸುವುದು ಅನಿವಾರ್ಯವಾಗಿತ್ತು. ಅವುಗಳಲ್ಲಿ ಧರ್ಮಾ ಮೂಲ ಮಾರ್ಗದರ್ಶನವನ್ನು ವಿವರಿಸಿರಬೇಕಾಗಿತ್ತು. ಇಸ್ಲಾಮೀ ಸಮಾಜದ ಪ್ರತಿಯೊಬ್ಬ ವ್ಯಕ್ತಿಗೂ ಅವುಗಳನ್ನು ನೆನಪಿಡಬಹುದಾಗಿತ್ತು. ಅವುಗಳನ್ನು ನಮಾಝ್‌ನಲ್ಲಿ ಅವರು ಆಗಾ ಓದುತ್ತಿರಬೇಕಾಗುತ್ತದೆ. ಆದ್ದರಿಂದ ಅವುಗಳನ್ನು ಮರೆತು ಬಿಡುವ ಅವಕಾಶ ಬಹಳ ಕಡಿಮೆ ಇರುತ್ತದೆ. ದೊಡ್ಡ ದೊಡ್ಡ ಅಧ್ಯಾಯಗಳನ್ನು ನೆನಪಿಡುವವರು ಕೂಡಾ ಸಂಕ್ಷಿಪ್ತವಾ ಧರ್ಮಾದೇಶಗಳನ್ನು ಮನನ ಮಾಡುವ ಸಲುವಾಗಿ ಸಣ್ಣ ಸಣ್ಣ ಅಧ್ಯಾಯಗಳನ್ನೇ ಅವಲಂಬಿಸಬೇಕಾಗುತ್ತದೆ.

ಎರಡನೆಯ ಮುಖ್ಯ ಕಾರಣ ಪ್ರವಾದಿತ್ವದ ಆರಂಭ ಕಾಲದಲ್ಲಿ ಜನರಿಗೆ ಕುರ್‌ಆನಿ ಸಂದೇಶವನ್ನು ಸಂಕ್ಷಿಪ್ತವಾಗಿ ತಿಳಿಸುವುದಾಗಿತ್ತು. ಏಕೆಂದರೆ ಆ ಸಮಯದಲ್ಲಿ ಸಹಜವಾಗಿಯೇ ದೀರ್ಘ ಅಧ್ಯಾಯಗಳನ್ನು ಕೇಳಲು ಜನರಿಗೆ ಆಸಕ್ತಿ ಇರಲಿಲ್ಲ. ಆ ಸಂದರ್ಭಕ್ಕೆ ಸಾರವತ್ತಾದ ಹಾಗೂ ಸಂಕ್ಷಿಪ್ತವಾದ ಅಧ್ಯಾಯಗಳೇ ಹೆಚ್ಚು ಸೂಕ್ತವಾಗಿತ್ತು. ಕ್ರಮೇಣ ಅವರಲ್ಲಿ ಆಸಕ್ತಿ ಹೆಚ್ಚಿದಂತೆ ದೊಡ್ಡ ದೊಡ್ಡ ಅಧ್ಯಾಯಗಳನ್ನು ಅವರ ಮುಂದಿಡ ಬಹುದಾಗಿತ್ತು. ಆದ್ದರಿಂದಲೇ ಪವಿತ್ರ ಕುರ್‌ಆನಿನ ಹೆಚ್ಚಿನ ಸಣ್ಣ ಅಧ್ಯಾಯಗಳು ಆರಂಭ ಕಾಲದಲ್ಲಿ ಅವತೀರ್ಣಗೊಂಡವುಗಳಾಗಿವೆ.

## ಆಯತ್(ಸೂಕ್ತಗಳು)

ಅಧ್ಯಾಯದ ಸಣ್ಣ ಸಣ್ಣ ಭಾಗಗಳನ್ನು ಆಯತ್ ಎಂಬ ನೆಲೆಯಲ್ಲಿ ಅಲ್ಲಾಹನ ವತಿಯಿಂದಲೇ ವಿಂಗಡಿಸಲಾಗಿದೆ. ಅಧ್ಯಾಯಗಳಂತೆ ಆಯತ್‌ಗಳ ಗಾತ್ರದಲ್ಲಿಯೂ ಸಾಕಷ್ಟು ಅಂತರವಿದೆ. ಕೆಲವು ಆಯತ್‌ಗಳು ಒಂದೆರಡು ಪದಗಳನ್ನು ಹೊಂದಿದ್ದರೆ, ಕೆಲವು ಎಂಟು ಹತ್ತು, ಇನ್ನು ಕೆಲವು ಹದಿನೈದು ಇಪ್ಪತ್ತು ಮತ್ತೆ ಕೆಲವು ಅವುಗಳಿಗಿಂತಲೂ ಹೆಚ್ಚು ಪದಗಳನ್ನು ಒಳಗೊಂಡಿದೆ. ಒಂದು ಆಯತ್ ಒಂದು ಪೂರ್ಣ ವಾಕ್ಯವಾಗಿರ ಬೇಕಾಗಿಯೂ ಇಲ್ಲ. ಅಂತಹ ಅನೇಕ ಆಯತ್‌ಗಳು ಇವೆ. ಆದರೆ ಅನೇಕ ಕಡೆ ಹಲವು ಆಯತ್‌ಗಳು ಸೇರಿ ಒಂದು ವಾಕ್ಯವಾಗುವುದೂ ಇದೆ. ಅಂತೆಯೇ ಅನೇಕ ಆಯತ್‌ಗಳಲ್ಲಿ ಒಂದಕ್ಕಿಂತ ಹೆಚ್ಚು ವಾಕ್ಯಗಳಿವೆ. ಆಯತ್‌ಗಳ ಗಾತ್ರವನ್ನು ನಿರ್ಣಯಿಸುವಾಗ ವಾಕ್ಯಗಳ ಪೂರ್ಣತೆಗಿಂತಲೂ ಪ್ರಾಸಕ್ಕೆ ಹೆಚ್ಚು ಒತ್ತು ಕೊಟ್ಟಿರುವುದರಿಂದ ಹೀಗಾಗಿದೆ. ಇದಕ್ಕೆ ಎರಡು ಕಾರಣಗಳಿವೆ. ಒಂದನೆಯದಾಗಿ ವಾಕ್ಯಗಳು ಪ್ರಾಸಬದ್ಧವಾಗಿರುವುದು ಅರಬೀ ಸಾಹಿತ್ಯದ ಶ್ರೇಷ್ಠತೆಯೆಂದು ಪರಿಗಣಿಸಲ್ಪಡುತ್ತಿತ್ತು. ಅರಬರು ಈ ಬಗ್ಗೆ ಹೆಚ್ಚು ಆಸಕ್ತಿ ಉಳ್ಳವರಾಗಿದ್ದರು. ಎರಡನೆಯದಾಗಿ ಪವಿತ್ರ ಕುರ್‌ಆನನ್ನು ಕಂಠಪಾಠ ಮಾಡುವಲ್ಲಿ ಇದು ಬಹಳ ಸಹಕಾರಿಯಾಗಿರುತ್ತಿತ್ತು. ಕವಿತೆಗಳಂತೆ ಪ್ರಾಸಬದ್ಧ ವಾಕ್ಯಗಳನ್ನು ಮಾನವ ಮನಸ್ಸು ಸುಲಭದಲ್ಲಿ ನೆನಪಿಡಬಲ್ಲುದು. ಇದು ಓದುಬರಹ ಬಲ್ಲವರೆಲ್ಲರ ಅನುಭವ. ಕುರ್‌ಆನಿನ ಸುರಕ್ಷಿತತೆ ಮತ್ತು ಅದರ ಅನುಯಾಯಿಗಳ ಅನುಕೂಲತೆಗೆ ಅದನ್ನು ಅತ್ಯಧಿಕ ನೆನಪಿಡುವ ಸಲುವಾಗಿ ಪ್ರಾಸಬದ್ಧವಾಗಿರಿಸುವುದು ಅನಿವಾರ್ಯವಾಗಿತ್ತು.

ಆಯತ್ ಎಂಬ ಪದದ ಶಬ್ದಾರ್ಥ ಸಂಕೇತ ಎಂದಾಗಿದೆ. ಯಾವುದಾದರೂ ರಹಸ್ಯ ಾಸ್ತವಿಕತೆಯೆಡೆಗೆ ಮಾರ್ಗದರ್ಶನ ಮಾಡುವ ಪ್ರತ್ಯಕ್ಷ ವಸ್ತುವನ್ನು ಅರಬಿ ಭಾಷೆಯಲ್ಲಿ ಯತ್ ಎನ್ನುತ್ತಾರೆ. ಆಯತ್‌ನ ಈ ಮೂಲಭೂತ ತಾತ್ಪರ್ಯವನ್ನು ಮುಂದಿರಿಸಿ ಲೋಚಿಸಿದಾಗ ಕುರ್‌ಆನಿನ ವಚನಗಳನ್ನು ಆಯತ್ ಎನ್ನಲು ಕಾರಣವೇನೆಂಬುದು ನದಟ್ಟಾಗುತ್ತದೆ. ಉದಾಹರಣೆಗೆ: ಕುರ್‌ಆನಿನ ವಚನಗಳು ಒಂದು ಅದ್ಭುತ ವಾಣಿಯ ಾಗಗಳೆಂಬ ನೆಲೆಯಲ್ಲಿ ದೇವವಾಣಿಯೆಂಬುದರ ಸಂಕೇತವಾಗಿದೆ. ಆದ್ದರಿಂದ ಅದಕ್ಕೆ ಯತ್ ಎಂದು ಹೆಸರಿಸಲಾಗಿದೆ.

ಕುರ್‌ಆನಿನ ವಚನಗಳು ಸ್ವಯಂ ಮಾರ್ಗದರ್ಶಿಯಾಗಿವೆ. ಏಕೆಂದರೆ ಅವುಗಳ ಮೂಲಕ ಅಲ್ಲಾಹನ ಗುಣಗಳ, ಅವನ ಆಜ್ಞೆಗಳ ಜ್ಞಾನ ಲಭಿಸುತ್ತದೆ. ಆದ್ದರಿಂದ ವುಗಳನ್ನು ಆಯತ್ ಎನ್ನಲಾಗಿದೆ.

ಕುರ್‌ಆನಿನ ಶಿಕ್ಷಣಗಳ ಬುನಾದಿ ಆಜ್ಞೆ ಮತ್ತು ಶ್ರದ್ಧೆಯ ಮೇಲಿರದೆ ವಿಚಾರ ಮತ್ತು ಜ್ಞಾಸೆಯ ಮೇಲಿದೆ. ಅದರ ವಚನಗಳು ತರ್ಕಬದ್ಧ ಚರ್ಚೆಗಳಾಗಿವೆ. ಕುರ್‌ಆನ್ ಕೇವಲ ಜ್ಞೆ ಮತ್ತು ನಿರ್ದೇಶಗಳ ಹೆಸರಲ್ಲ. ಅದು ತರ್ಕಬದ್ಧ ಚರ್ಚೆಯ ಹೆಸರೂ ಆಗಿದೆ. ದ್ದರಿಂದ ಅದರ ವಚನಗಳಿಗೆ ಆಯತ್ ಎನ್ನಲಾಗಿದೆ.

ಕುರ್‌ಆನ್ ಅವತೀರ್ಣಗೊಂಡ ಕಾಲದ ಪ್ರಕಾರ ಅದರ ಆಯತ್‌ಗಳು ಎರಡು ಧಗಳಿವೆ. ಮಕ್ಕಾದಲ್ಲಿ ಅವತೀರ್ಣಗೊಂಡದ್ದು ಮತ್ತು ಮದೀನಾದಲ್ಲಿ ಅವತೀರ್ಣ ೊಂಡದ್ದು. ಹಿಜ್ರತ್‌ಗಿಂತ ಮೊದಲು ಅವತೀರ್ಣಗೊಂಡ ಆಯತ್‌ಗಳನ್ನು ಮಕ್ಕಾದಲ್ಲಿ ವತೀರ್ಣಗೊಂಡ ಆಯತ್‌ಗಳೆಂದೂ ಹಿಜ್ರತ್‌ನ ಬಳಿಕ ಅವತೀರ್ಣಗೊಂಡ ಆಯತ್ ಳನ್ನು ಮದೀನಾದಲ್ಲಿ ಅವತೀರ್ಣಗೊಂಡ ಆಯತ್‌ಗಳೆಂದೂ ಹೇಳಲಾಗುತ್ತದೆ.

## ಂಡಗಳು ಮತ್ತು ರುಕೂಅ್‌ಗಳು

ಪೂರ್ಣ ಕುರ್‌ಆನನ್ನು ಮೂವತ್ತು ಸಮಪಾಲುಗಳಾಗಿಯೂ ಆ ಪಾಲುಗಳನ್ನು ನ್ನಷ್ಟು ಸಣ್ಣ ಸಣ್ಣ ಭಾಗಗಳಾಗಿಯೂ ವಿಂಗಡಿಸಲಾಗಿದೆ. ಮೊದಲನೆಯ ಪಾಲು ಳನ್ನು ಜುಝ್ಉ ಅಥವಾ ಕಾಂಡಗಳೆಂದೂ ನಂತರದ ಭಾಗಗಳನ್ನು ರುಕೂಅ್ ಅಥವಾ ರಾಗಳೆಂದೂ ಕರೆಯಲಾಗುತ್ತದೆ. ಈ ಭಾಗಗಳು ಪ್ರವಾದಿವರ್ಯರ(ಸ) ಅಥವಾ ಲಫಾವುರ್ರಾಶಿದೀನ್‌ಗಳ ಕಾಲದಲ್ಲಿ ಅಸ್ತಿತ್ವದಲ್ಲಿರಲಿಲ್ಲ. ಇವು ಆ ಬಳಿಕ ಉಂಟಾದವುಗಳು. ಂಡಗಳ ವಿಂಗಡನೆಯು ಹಜ್ಜಾಜ್ ಬಿನ್ ಯೂಸುಫ್‌ರ ಕಾಲದಲ್ಲಾಯಿತು. ರುಕೂಅ್‌ಗಳ ಂಗಡನೆ ಅನಂತರದ ಕಾಲದಲ್ಲಾಯಿತು. ಆದ್ದರಿಂದ ಈ ವಿಂಗಡನೆಗಳಿಗೆ ಯಾವುದೇ ರ್ಮಿಕ ಮಹತ್ವವಿಲ್ಲ. ಆದ್ದರಿಂದಲೇ ಕಾಂಡ ಮತ್ತು ರುಕೂಅ್‌ಗಳ ವಿಂಗಡನೆಯನ್ನು ರ್‌ಆನಿನ ಮಧ್ಯೆ ಬರೆಯಲಾಗುವುದಿಲ್ಲ, ಬದಲಾಗಿ ಅದರ ಮಾರ್ಜಿನ್‌ನಲ್ಲಿ ಬರೆಯ ಾಗುತ್ತದೆ. ಇದು ಅದು ದೇವದತ್ತವೆಂಬ ತಪ್ಪಾಭಿಪ್ರಾಯ ಮೂಡದಿರಲಿಕ್ಕಾಗಿದೆ.

ಈ ವಿಂಗಡನೆಗಳ ಧಾರ್ಮಿಕ ಔಚಿತ್ಯವೇನೆಂದರೆ ಅವುಗಳ ಮೂಲಕ ಸಾಮಾನ್ಯ ಜನರಿಗೆ ಕುರ್‌ಆನ್ ಓದಲು ಮತ್ತು ನೆನಪಿಡಲು ಅನುಕೂಲವಾಗುತ್ತದೆ. ಅದನ್ನು ಮುಂದೆ ವಿವರವಾಗಿ ತಿಳಿಸಲಾಗಿದೆ.

ಕಾಂಡಗಳ ವಿಂಗಡನೆಯನ್ನು ತಿಂಗಳ ದಿನಗಳನ್ನು ಮುಂದಿರಿಸಿ ಮಾಡಲಾಗಿದೆ. ಓರ್ವ ಸತ್ಯವಿಶ್ವಾಸಿಗೆ ಧರ್ಮದೊಂದಿಗೆ ತನ್ನ ಸಂಬಂಧವನ್ನು ಜೀವಂತ ಮತ್ತು ಸಕ್ರಿಯ ವಾಗಿರಿಸಲು ಕುರ್‌ಆನನ್ನು ಪೂರ್ಣವಾಗಿ ಓದುತ್ತಿರುವ ಅಗತ್ಯವಿದೆ. ಈ ಓದುವಿಕೆ ಸಾಮಾನ್ಯ ಜನರಿಗೆ ಒಂದು ಭಾಗವನ್ನು ಗೊತ್ತುಪಡಿಸಬೇಕಾದುದು ಅಗತ್ಯವಾಗಿತ್ತು ಅವರು ಪ್ರತಿದಿನ ಎಷ್ಟಂಶ ಕುರ್‌ಆನನ್ನು ಓದುತ್ತಿರಬೇಕೆಂಬುದು ಒಂದು ಪ್ರಶ್ನೆಯಾಗಿತ್ತು ಕಾಂಡಗಳನ್ನು ವಿಂಗಡಿಸಿದವರು ಈ ಪ್ರಶ್ನೆಗೆ ಕಂಡುಕೊಂಡ ಉತ್ತರವೆಂದರೆ ಪ್ರತಿದಿ ಒಂದು ಕಾಂಡವನ್ನು ಓದುತ್ತಿರಬೇಕೆಂಬುದಾಗಿದೆ. ಅದಕ್ಕಾಗಿ ಅವರು ಕುರ್‌ಆನನ್ನು ಮೂವತ್ ಸಮಪಾಲುಗಳಾಗಿ ವಿಂಗಡಿಸಿದರು. ಪೂರ್ಣ ಕುರ್‌ಆನನ್ನು ಒಂದು ತಿಂಗಳಲ್ಲಿ ಓದಿ ಎಂಬ ಆದೇಶವಿರುವ ಹದೀಸ್‌ಗಳಿಂದ ಅವರು ಇದಕ್ಕೆ ಮಾರ್ಗದರ್ಶನ ಪಡೆದಿರಬೇಕು

ಈ ಹದೀಸ್‌ಗಳ ಪ್ರಕಾರ ಪವಿತ್ರ ಕುರ್‌ಆನನ್ನು ಒಂದು ತಿಂಗಳಲ್ಲಿ ಓ ಮುಗಿಸುವುದು ಪ್ರವಾದಿವರ್ಯರಿಗೆ(ಸ) ಪ್ರಿಯವಾಗಿತ್ತು. ಅದನ್ನೇ ಅವರು ತಮ ಅನುಯಾಯಿಗಳಿಗೆ ಬೋಧಿಸಿದರು. ಕುರ್‌ಆನಿನ ಕಾಂಡಗಳ ವಿಂಗಡನೆಯೂ ಪ್ರವಾದಿಯವರ(ಸ ಆ ಇಚ್ಛೆಗೆ ಅನುಗುಣವಾಗಿ ಮಾಡಿದ್ದಾಗಿದೆ.

ಈ ವಿಂಗಡನೆಯು ಕೇವಲ ಗಾತ್ರಕ್ಕೆ ಅನುಗುಣವಾಗಿ ವಿಂಗಡನೆಯಾಗಿದೆ. ಆದ್ದರಿಂ ಇದಕ್ಕೆ ಇತರ ಕಾರಣಗಳನ್ನು ಹುಡುಕುವುದು ಅನಗತ್ಯ.

ರುಕೂಅ್‌ಗಳ ವಿಂಗಡನೆಯಲ್ಲೂ ಇಂತಹದೇ ಔಚಿತ್ಯವನ್ನು ಪರಿಗಣಿಸಲಾಗಿತ್ತು ಓದುವುದನ್ನು ನಿಲ್ಲಿಸುವಾಗ ಯಾವುದೇ ರೀತಿಯ ಅನೌಚಿತ್ಯ ಅಥವಾ ಕೊರತೆ ಇಲ್ಲದಂ ನಿಲ್ಲಿಸುವ ಸ್ಥಳವನ್ನು ಗೊತ್ತುಪಡಿಸುವುದೇ ಇದರ ಉದ್ದೇಶ. ಕುರ್‌ಆನಿನ ತಾತ್ಪರ್ಯ ವನ್ನರಿಯದವರು ಸ್ವಯಂ ಈ ರೀತಿ ಮಾಡಲು ಶಕ್ತರಲ್ಲದಿರುವುದರಿಂದ ಈ ರುಕೂಅ್ ಗಳನ್ನು ಗೊತ್ತುಪಡಿಸಲಾಗಿದೆ. ಆಯತ್‌ಗಳ ಅರ್ಥವೇ ಗೊತ್ತಿಲ್ಲದವರಿಗೆ ಎಲ್ಲಿ ನಿಲ್ಲಿಸುವುದ ಉಚಿತ ಮತ್ತು ಎಲ್ಲಿ ಅನುಚಿತವೆಂದು ತಿಳಿಯುವುದಾದರೂ ಹೇಗೆ? ಅವರು ಮಾತ ಅಪೂರ್ಣವಾದಲ್ಲೂ ಓದುವಿಕೆಯನ್ನು ನಿಲ್ಲಿಸಿ ಬಿಡಬಹುದು. ಇದು ಬಹಳ ಅನುಚಿ ಮತ್ತು ಅಸಂಗತ ಕೃತ್ಯವಾಗುತ್ತಿತ್ತು. ಇದರಿಂದ ಜನರನ್ನು ತಡೆಯಲಿಕ್ಕಾಗಿಯೆ ರುಕೂಅ್‌ಗಳನ್ನು ನಿರ್ಣಯಿಸಲಾಗಿದೆ.

ರುಕೂಅ್‌ಗಳ ಈ ನಿರ್ಣಯದ ಕುರಿತು ಇನ್ನೊಂದು ವಿಷಯ ಕೂಡ ಗಮನಾರ್ಹವಾಗಿದೆ. ಓದುವಿಕೆಯನ್ನು ಯಾವುದೇ ಅನೌಚಿತ್ಯವಿಲ್ಲದಂತೆ ನಿಲ್ಲಿಸಬಹುದಾ

ಳಗಳನ್ನೆಲ್ಲಾ ರುಕೂಅ್ ಎಂದು ಪರಿಗಣಿಸಲಾಗಿಲ್ಲ. ಅದಕ್ಕೆ ಸಾಮಾನ್ಯವಾಗಿ ಒಂದು
ಾತ್ರವನ್ನು ಪರಿಗಣಿಸಲಾಗಿದೆ. ಒಂದು ಕಾಂಡದಲ್ಲಿ ಸಾಮಾನ್ಯವಾಗಿ 15-20 ರುಕೂಅ್
ಳನ್ನು ಇರಿಸಲಾಗಿದೆ. ಒಂದು ರುಕೂಅ್‌ನಲ್ಲಿ ಸಾಮಾನ್ಯ ಗಾತ್ರದಲ್ಲಿ 8-10 ಆಯತ್‌ಗಳನ್ನು
ರಿಸಲಾಗಿದೆ. ಸಣ್ಣ ಆಯತ್‌ಗಳನ್ನು ಗಾತ್ರಾನುಸಾರ ಹೆಚ್ಚು ಮತ್ತು ದೊಡ್ಡ ಆಯತ್
ಳನ್ನು ಕಡಿಮೆ ಇರಿಸಲಾಗಿದೆ. ರುಕೂಅ್‌ಗಳಲ್ಲಿ ಆಯತ್‌ಗಳ ಈ ಸಂಖ್ಯೆಯನ್ನು,
ಮಾಝುನ್ನು ದೃಷ್ಟಿಯಲ್ಲಿರಿಸಿಕೊಂಡು ನಿರ್ಧರಿಸಲಾಗಿದೆ. ನಮಾಝ್‌ನಲ್ಲಿ ಪ್ರತಿಯೊಬ್ಬನಿಗೂ
ರ್‌ಆನಿನ ಸ್ವಲ್ಪ ಭಾಗವನ್ನು ಓದಲೇ ಬೇಕಾಗುತ್ತದೆ. ಒಂದು ರಕಅತ್‌ನಲ್ಲಿ ಸಾಮಾನ್ಯವಾಗಿ
ದಲು ಸಾಧ್ಯವಿರುವ ಭಾಗವನ್ನೇ ಒಂದು ರುಕೂಅ್ ಎಂದು ಪರಿಗಣಿಸಲಾಗಿದೆ.
ದ್ದರಿಂದಲೇ ಹೆಚ್ಚಿನಂಶ ಇದಕ್ಕೆ ರುಕೂಅ್ ಎಂದು ಹೆಸರಿಸಿರುವುದಾಗಿದೆ. ಏಕೆಂದರೆ
ಮಾಝ್‌ನಲ್ಲಿ ಕುರ್‌ಆನ್ ಪಠನದ ಬಳಿಕವೇ ರುಕೂಅ್ ಮಾಡಲಾಗುತ್ತದೆ. ಇಷ್ಟು
ರ್‌ಆನ್ ಓದಿದ ಬಳಿಕ ಬೇಕಾದರೆ ರುಕೂಅ್ ಮಾಡಬಹುದೆಂಬುದರ ಕಡೆಗೆ ಈ
ಸರು ಸೂಚನೆ ನೀಡುತ್ತದೆ.

# ಮುಖ್ಯ ಪಾರಿಭಾಷಿಕಗಳ

ಎಲ್ಲ ಧಾರ್ಮಿಕ ಗ್ರಂಥಗಳ ಹಾಗೆ ಪವಿತ್ರ ಕುರ್‌ಆನಿಗೆ ಕೂಡಾ ತನ್ನದೇ ಆದ ಒಂದ ವಿಶಿಷ್ಟ ಭಾಷೆ ಮತ್ತು ಕೆಲವು ವಿಶಿಷ್ಟ ಪಾರಿಭಾಷಿಕಗಳಿವೆ. ಅದರ ಬೋಧನೆ ಗಳನ್ನು ಮತ್ತು ಸಂದೇಶವನ್ನು ತಿಳಿಯುವಲ್ಲಿ ಇವುಗಳಿಗೆ ಬಹಳ ಪ್ರಾಮುಖ್ಯತೆ ಇದೆ. ಮೊದಲು ಈ ಪಾರಿಭಾಷಿಕಗಳ ಅರ್ಥವನ್ನು ತಿಳಿದುಕೊಳ್ಳದಿದ್ದರೆ ಯಾವನೂ ಕುರ್‌ಆನಿನ ಜ್ಞಾನವನ್ನು ಗಳಿಸಲಾರನು. ಆದ್ದರಿಂದ ಪವಿತ್ರ ಕುರ್‌ಆನಿನ ಪರಿಚಯ ಹೊಂದುವುದಕ್ಕೂ ಅದರ ಮುಖ್ಯ ಪಾರಿಭಾಷಿಕಗಳ ತಕ್ಕ ಮಟ್ಟಿನ ವಿವರಣೆ ಅಗತ್ಯವಾಗಿದೆ.

## ಅಲ್ಲಾಹ್

ಅಲ್ಲಾಹ್ ಎಂಬುದು ಪವಿತ್ರ ಕುರ್‌ಆನಿನ ಅತ್ಯಂತ ಪ್ರಮುಖ ಮತ್ತು ಮೂಲಭೂತ ಪಾರಿಭಾಷಿಕ ಪದವಾಗಿದೆ. ಆದ್ದರಿಂದ ಮೊದಲು ಅದರ ಅರ್ಥವನ್ನೇ ತಿಳಿಯಬೇಕಾಗಿದೆ

ಅಲ್ಲಾಹ್ ಎಂಬ ಪದವು ಅಲ್ ಇಲಾಹ್‌ನ ಪರಿಷ್ಕೃತ ರೂಪವಾಗಿದೆ. ಅಲ ಇಲಾಹ್‌ನಲ್ಲಿ ನೈಜ ಪದವು ಕೇವಲ ಇಲಾಹ್ ಆಗಿದೆ. ಅದರ ಮೊದಲು ಇರುವ 'ಅಲ' ಎಂಬುದು ಸರ್ವನಾಮವನ್ನು ಅಂಕಿತನಾಮ ಮಾಡಲಿಕ್ಕಾಗಿ ಅರಬಿಯಲ್ಲಿ ಬಳಸುವ ಶಬ್ದವಾಗಿದೆ. ಇದು ಇಂಗ್ಲಿಷ್ ಭಾಷೆಯ The ಎಂಬ ಪದದ ಸಮಾನಾರ್ಥವನ್ನು ಹೊಂದಿದೆ. ಆದ್ದರಿಂದ ಅಲ್ ಇಲಾಹ್ ಎಂದರೆ ವಿಶಿಷ್ಟ ಮತ್ತು ಪ್ರತ್ಯೇಕ ಇಲಾಹ ಎಂದಾಗುತ್ತದೆ. ಇಲಾಹ್ ಎಂದರೆ ಆರಾಧ್ಯ ಎಂದರ್ಥ. ಈ ಶಬ್ದವು ಅಲಿಫ್, ಲಾಮ್ ಹ ಎಂಬ ಮೂರು ಅಕ್ಷರಗಳ ಮೂಲದಿಂದ ಉಂಟಾಗಿದೆ. ಅದರಿಂದ ಉಂಟಾಗು ವಿಭಿನ್ನ ಕ್ರಿಯಾಧಾತುಗಳ ಅರ್ಥವು ಈ ರೀತಿ ಇದೆ: 1) ಆಶ್ಚರ್ಯಚಕಿತನಾಗು 2) ಯಾರದ ಆಶ್ರಯ ಹೊಂದಿ ಅಥವಾ ಅವನ ಸಂಬಂಧ ಬೆಳೆಸಿ ಶಾಂತಿ ನೆಮ್ಮದಿ ಪಡೆಯುವುದು 3) ಆಸಕ್ತಿಯೊಂದಿಗೆ ಯಾರ ಕಡೆಗಾದರೂ ವಾಲುವುದು. 4) ಮರೆಯಾಗಿರುವುದು 5) ಉನ್ನತವಾಗಿರುವುದು. 6) ಆರಾಧನೆ ಮಾಡುವುದು. ಈ ವಿಭಿನ್ನ ಅರ್ಥಗಳಲ್ಲಿ ಪರಸ್ಪ ವೈರುಧ್ಯ ಅಥವಾ ಅಸಮಂಜಸತೆ ಇಲ್ಲ. ಅವುಗಳಲ್ಲಿ ಗಾಢ ನೈಸರ್ಗಿಕ ಸಂಬಂಧವಿದ ಚಿಂತನೆಯ ಬಳಿಕ ಅದು ಸ್ಪಷ್ಟವಾಗುತ್ತದೆ. 'ಇಲಾಹ್' ಎಂಬ ಪದವನ್ನು ಅರಬಿ ಆರಾಧ್ಯನಿಗೆ ಬಳಸಿದಾಗ ಅದರಲ್ಲಿ ಈ ಎಲ್ಲ ಅರ್ಥಗಳ ಪ್ರಾತಿನಿಧ್ಯ ಇತ್ತು. ಅವರ ಬ

ಾಹ್ ಎಂಬುದು ಮಾನವಾತೀತ ಗುಣಗಳಿರುವ ಅಸ್ತಿತ್ವವಾಗಿತ್ತು. ಈ ಗುಣಗಳನ್ನು ೊಂದಿದ ಶಕ್ತಿಯನ್ನು ಅವರು 'ಇಲಾಹ್' ಎನ್ನುತ್ತಿದ್ದರು. ಆ ಶಕ್ತಿಯ ವಾಸ್ತವಿಕತೆ ಮತ್ತು ಹಾನತೆಯನ್ನು ಅರಿಯುವುದಕ್ಕೆ ಮನುಷ್ಯ ಬುದ್ಧಿ ಅಪರ್ಯಾಪ್ತವಾಗಿದೆ. ಅದರ ವ್ಯಕ್ತಿತ್ವ ತ್ತು ಗುಣಗಳ ಬಗ್ಗೆ ಆಲೋಚಿಸಿದಷ್ಟು ಮನುಷ್ಯನು ದಂಗಾಗುವುದಲ್ಲದೆ ಮತ್ತೇನೂ ್ಕದು. ಅದು ಇತರರ ಆಶ್ರಯದಾತ, ಪ್ರೀತಿಯ ಕೇಂದ್ರ, ಇಷ್ಟಾರ್ಥ ಸಿದ್ಧಿ, ಪ್ರತಾಪಶಾಲಿ ಗೂ ಪಂಚೇಂದ್ರಿಯಗಳಿಗೆ ನಿಲುಕದ ವ್ಯಕ್ತಿತ್ವವಾಗಿರಬೇಕು. ಈ ಎಲ್ಲ ಗುಣಗಳನ್ನು ೊಂದಿರುವ ಕಾರಣ ಅದು ಆರಾಧನಾರ್ಹವಾಗಿರಬೇಕು. ಅದರ ಕ್ರೋಧವನ್ನು ುಪಡುವಂತಿರಬೇಕು. ಆದರೆ ಇದು ಸಮಗ್ರ 'ಇಲಾಹ್'ನ ತಾತ್ಪರ್ಯವಾಗಿದೆ. ಅರಬರ ಆರಾಧ್ಯರು ಒಂದೆರಡು ಇದ್ದುದಲ್ಲ. ಅಸಂಖ್ಯಾತ ಆರಾಧ್ಯರನ್ನು ಅವರು ಜಿಸುತ್ತಿದ್ದರು. ಒಂದಕ್ಕಿಂತ ಅಧಿಕ ಆರಾಧ್ಯರನ್ನು ಇಟ್ಟು ಕೊಂಡಾಗ ಅವುಗಳೆಲ್ಲವನ್ನೂ ಎಲ್ಲ ಗುಣಗಳನ್ನು ಹೊಂದಿದವುಗಳೆಂದು ಪರಿಗಣಿಸಲು ಸಾಧ್ಯವಿರಲಿಲ್ಲ. ಆದುದರಿಂದ ರರು 'ಇಲಾಹ್' ಎಂಬ ಪದವನ್ನು ಹೇಳುವಾಗಲೆಲ್ಲಾ ಅವುಗಳ ಅರ್ಥ ಾನವಾಗಿರುತ್ತಿರಲಿಲ್ಲ. ಕೆಲವೊಮ್ಮೆ ಅವರು ಈ ಸಮಗ್ರ ಅರ್ಥದಲ್ಲೂ ತಮ್ಮ ಾಧ್ಯರನ್ನು ಕುರಿತು ಹೇಳುತ್ತಿದ್ದರಾದರೂ ಅನೇಕ ಸಲ ಅವರು ಆ ಪೈಕಿ ಕೆಲವು ಾಗಳನ್ನು ಹೊಂದಿದ ಆರಾಧ್ಯರಿಗೂ ಈ ಪದವನ್ನು ಬಳಸುತ್ತಿದ್ದರು. ಆದ್ದರಿಂದ ಬರ ಬಳಿ ಇಲಾಹ್ ಎಂದರೆ ಮೇಲೆ ಪ್ರಸ್ತಾಪಿಸಿದ ಕೆಲವು ಅಥವಾ ಎಲ್ಲ ಗುಣಗಳನ್ನು ೊಂದಿದ ಶಕ್ತಿಯಾಗಿತ್ತು. ಆದ್ದರಿಂದಲೇ ಅದು ಆರಾಧನೆಗೆ ಅರ್ಹವೆಂದು ಪರಿಗಣಿಸ ತುತ್ತಿತ್ತು. ಈ ಎಲ್ಲ ಗುಣಗಳೂ ಇರುವಂತಹದ್ದು ಸಮಗ್ರ 'ಇಲಾಹ್' ಎಂದು ಗಣಿಸಲ್ಪಡುತ್ತಿತ್ತು. ಇತರವು ಕೆಳಸ್ತರದ 'ಇಲಾಹ್' ಆಗಿದ್ದುವು.

'ಇಲಾಹ್' ಪದದ ಈ ಅರ್ಥವನ್ನು ಮುಂದಿರಿಸಿಕೊಂಡು ನೋಡಿದಾಗ ಲ್ಲೋಟಕ್ಕೆ ಅಲ್ಲಾಹ್(ಅರ್ಥಾತ್ ಅಲ್ ಇಲಾಹ್)ನ ಅರ್ಥವೂ ಒಂದು ಪ್ರತ್ಯೇಕ ತ್ತು ವಿಶಿಷ್ಟ ಶಕ್ತಿಯೆಂದಾಗುತ್ತದೆ. ಆ ವಿಶೇಷ ಶಕ್ತಿಯು ಮೇಲ್ಕಾಣಿಸಿದ ಎಲ್ಲ ಗುಣ ನ್ನು ಅಥವಾ ಅವುಗಳ ಪೈಕಿ ಕೆಲವು ಗುಣಗಳನ್ನು ಹೊಂದಿದೆ ಎಂದಾಗುತ್ತದೆ. ಆದರೆ ಸ್ತವಿಕತೆ ಅದಲ್ಲ. ಅರಬರ ಬಳಿ 'ಅಲ್ಲಾಹ್' ಎಂಬ ಪದದ ಅರ್ಥ ಕೇವಲ ಇದುವೇ ರಲಿಲ್ಲ. ಅವರು 'ಅಲ್ಲಾಹ್' ಎಂಬ ಪದವನ್ನು ಈ ಎಲ್ಲ ಗುಣಗಳ ಸಮಾಹಾರವಾದ ಶಾನ್ ಶಕ್ತಿಗೆ ಹೇಳುತ್ತಿದ್ದರು. ಅದು ಅದರ ಹೊರತು ಸೃಷ್ಟಿಸುವಿಕೆ, ಪರಿಪಾಲಿಸುವಿಕೆ, ದಾತತ್ವ ಮತ್ತು ಆಜ್ಞಾಧಿಕಾರ ಮುಂತಾದ ಸಂಪೂರ್ಣ ಗುಣಗಳನ್ನು ಹೊಂದಿತ್ತು. ರ ಇತರ ಆರಾಧ್ಯರಿಗೆ ಈ ಎಲ್ಲ ಗುಣಗಳಿವೆ ಎಂದು ಅವರು ಭಾವಿಸುತ್ತಿರಲಿಲ್ಲ. ಗಳಲ್ಲಿರುವ ಯಾವ ಗುಣವೂ ಅಲ್ಲಾಹನ ಗುಣಗಳಷ್ಟು ಸಮಗ್ರವೆಂದು ಅವರು ಗಣಿಸಿರಲಿಲ್ಲ. (ಅಲ್ಲಾಹನ ಮತ್ತು ಅವರ ಇತರ ಆರಾಧ್ಯರ ಬಗ್ಗೆ ಅವರ ವಿಶ್ವಾಸ-

ಶ್ರದ್ಧೆಗಳ ಸಮಗ್ರ ವಿವರಣೆ ಪವಿತ್ರ ಕುರ್‌ಆನಿನಲ್ಲಿಯೂ ಇದೆ ಹಾಗೂ ಪುರಾತನ ಅರ ಸಾಹಿತ್ಯದಲ್ಲೂ ಇದೆ.)

ಈ ರೀತಿ ಅರಬರ ಅಗಣಿತ 'ಇಲಾಹ್'ಗಳಲ್ಲಿ ಕೇವಲ ಅಲ್ಲಾಹನು ಮಾತ್ರ ಅ ಇಲಾಹ್ ಆಗಲು ಕಾರಣವೇನೆಂಬುದು ಸ್ಪಷ್ಟವಾಗುತ್ತದೆ. ಅವರ ಎಲ್ಲ ಆರಾಧ್ಯರಿಗ ಬಳಸಲ್ಪಡಬಹುದಾಗಿದ್ದ ಈ ಗುಣನಾಮವು ಆ ಒಂದು ವಿಶಿಷ್ಟ ಅಸ್ತಿತ್ವಕ್ಕೆ ಮಾ ಮೀಸಲಾದುದು ಹೇಗೆ? ಎಲ್ಲ ಗುಣಗಳ ಸಮಗ್ರ ಕಲ್ಪನೆಯೂ ಆ ಒಂದು ವಿಶಿ ಶಕ್ತಿಯಲ್ಲಿದೆಯೆಂದೂ ಇತರ ಯಾವುದೂ ಯಾವುದೇ ಗುಣದ ಸಮಗ್ರ ಕಲ್ಪ ನಿಲುಕದ್ದೂ ಆಗಿರುವಾಗ ಸಹಜವಾಗಿಯೇ 'ಇಲಾಹ್' ಎಂಬ ಪದದ ಬಳಕೆಗೆ ಪ್ರಪ್ರಥ ಯೋಗ್ಯವಾದ ಶಕ್ತಿಯು ಅದುವೇ ಆಗಿರಬೇಕಾಗಿತ್ತು. ಆ ಪದವನ್ನು ಕೇಳಿದಾಗ ಅ ಮನಸ್ಸು ಮೊದಲು ಆ ಶಕ್ತಿಯೆಡೆಗೇ ತಿರುಗುತ್ತಿತ್ತು. ಮಾತ್ರವಲ್ಲ ಅವರು ತಮ್ಮ ಇ ಆರಾಧ್ಯರಿಗೆ ಭಿನ್ನ ಭಿನ್ನ ಹೆಸರುಗಳನ್ನು ಇಟ್ಟಿದ್ದರು. ಅವುಗಳಿಂದ ಆ ಆರಾಧ್ಯ ಕರೆಯಲ್ಪಡುತ್ತಿದ್ದರು. ಆದರೆ ಆ ಮಹಾಶಕ್ತಿಗೆ ಇತರ ಯಾವುದೇ ಹೆಸರನ್ನೂ ಇಟ್ಟಿರಲೀ 'ಇಲಾಹ್' ಎಂಬ ಪದಕ್ಕೆ 'ಅಲ್' ಸೇರಿಸಿ ಅದನ್ನು ವಿಶಿಷ್ಟಗೊಳಿಸಿ ಕರೆಯುತ್ತಿದ್ದರು. ರೀತಿ ಅದರ ಆರಾಧ್ಯತೆಯ ವಿಶಿಷ್ಟ, ಅಪ್ರತಿಮ ಹಾಗೂ ಉನ್ನತ ಮಟ್ಟದ ಪ್ರದರ್ಶ ವಾಗುತ್ತಿತ್ತು. ಇಲಾಹ್ ಆಗುವ ಹಕ್ಕು ಅತ್ಯಧಿಕ ಮತ್ತು ವಾಸ್ತವಿಕ ಹಕ್ಕು. ಅತು ಗ್ರಂಥಕ್ಕೆ 'ಅಲ್ ಕಿತಾಬ್', ಅಪ್ರತಿಮ ಶಿಕ್ಷಕರಿಗೆ 'ಅಲ್ ಮುಅಲ್ಲಿಮ್' ಇದ್ದಂತೆ ಅದ ಮಾತ್ರ ಇದೆ. ಹೆಸರಿಡುವ ಈ ಪದ್ಧತಿಯು ಅರಬರಲ್ಲಿ ಜನಜನಿತವಾಗಿತ್ತು. ಆ ಪ್ರಕಾರ ಅವರು ತಮ್ಮ ಅತ್ಯಂತ ಪ್ರಮುಖ ಆರಾಧ್ಯನಿಗೆ ಅಲ್ ಇಲಾಹ್ ಎಂದು ಹೆಸರಿಸಿದ್ದ ತಮ್ಮ ಭಾಷೆಯ ರೂಢಿಯಂತೆ 'ಇಲಾಹ್'ನ 'ಅಲಿಫ್' ಅನ್ನು ತೊರೆದು ಸುಲಭವ ಉಚ್ಚರಿಸುವ ಸಲುವಾಗಿ ಆಗಿತ್ತು. ಈ ರೀತಿ 'ಅಲ್ ಇಲಾಹ್' ಅಲ್ಲಾಹ್ ಎಂದಾಯಿ

ಇದು ಅರಬರ ಬಳಿ 'ಇಲಾಹ್' ಮತ್ತು 'ಅಲ್ಲಾಹ್' ಎಂಬ ಪಾರಿಭಾಷಿಕ ತಾತ್ಪರ್ಯವಾಗಿತ್ತು. ಕುರ್‌ಆನ್ ಅವತೀರ್ಣವಾದಾಗ ಅದರ ಪ್ರಥಮ ಸಂಬೋಧಿತ ಅರಬರೇ ಆಗಿದ್ದರು. ಆದ್ದರಿಂದಲೇ ಅದರ ಭಾಷೆ ಅರಬಿ ಆಯಿತು. ಅದಕ್ಕೆ ಹೇಳಲಿಕ್ಕಿರು ಮಾತುಗಳನ್ನೆಲ್ಲಾ ಅದು ಅರಬಿಯ ಪದಗಳಲ್ಲಿ ಮತ್ತು ಪಾರಿಭಾಷಿಕಗಳಲ್ಲಿ ಹೇಳಿ ಅದರಿಂದಾಗಿ ಅದು ಅರಬರ ರೂಢಿಯಂತೆ ವಿಶ್ವದ ಸೃಷ್ಟಿಕರ್ತನೂ ಪರಿಪಾಲಕ ಆದವನಿಗೆ ಸಹಜವಾಗಿಯೇ ಅಲ್ಲಾಹ್ ಎಂಬ ಪದವನ್ನು ಬಳಸಿತು. ಅದೇ ರಿ 'ಇಲಾಹ್' ಎಂಬ ಪದವನ್ನು ಅದು ಬಳಸಿತು. ಆದರೆ ಅವೆರಡನ್ನೂ ಅದು ಅರಬರ ರೂಢಿಯಲ್ಲಿದ್ದ ಸೀಮಿತ ಅರ್ಥದಲ್ಲಿ ಬಳಸಲಿಲ್ಲ. ಪ್ರಮುಖ ಸುಧಾರಣೆ ಮ ಮೂಲಭೂತ ಮಾರ್ಪಾಟು ಮಾಡಿ ಆ ಪಾರಿಭಾಷಿಕಗಳನ್ನು ಬಳಸಿತು. ದೇವತ್ವ ಮ ಪರಿಪಾಲಕತ್ವದ ಎಲ್ಲ ಗುಣಗಳನ್ನೂ ಅದು ಅಲ್ಲಾಹನಿಗೆ ಮೀಸಲಾಗಿರಿಸಿತು. ಇ

ಾವುದೇ ಶಕ್ತಿಯಲ್ಲಿ-ಅದೆಷ್ಟೇ ದೊಡ್ಡದಾಗಿರಲಿ- ದೇವತ್ವದ ಯಾವುದೇ ಒಂದು ಗುಣವೂ ್ಲ ಎಂದು ಅದು ಸಾರಿ ಹೇಳಿತು. 'ಇಲಾಹ್' ಎಂದರೂ 'ಅಲ್ ಇಲಾಹ್' ಎಂದರೂ ಲ್ಲಾಹ್' ಎಂದರೂ ಒಂದೇ ಅಸ್ತಿತ್ವದ ಹೆಸರುಗಳಾಗಿವೆ. ಅದಕ್ಕೆ ಮಾತ್ರ ಈ ಪದಗಳನ್ನು ಸಸಬಹುದು ಮತ್ತು ಬಳಸಬೇಕು. ಇತರ ಯಾವ ಆರಾಧ್ಯ ವಸ್ತುವೂ ಈ ಪದಗಳಿಂದ ಯಲ್ಪಡಲು ಅರ್ಹವಲ್ಲ. 'ಇಲಾಹ್'ನ ಪದವನ್ನು ಅದು ಅನೇಕ ಸಲ ಅರಬರು ಕಲ್ಪಿಸಿದ್ದ ಾಧ್ಯರ ಕುರಿತೂ ಬಳಸಿದೆ ಎಂಬುದು ಸಂಶಯಾತೀತ. ಅದು ಕೇವಲ ಅವರ ಶ್ರದ್ಧೆಯನ್ನು ದ್ಧರಿಸಿದ್ದು ಮಾತ್ರವಾಗಿತ್ತು. ತನ್ನ ಶ್ರದ್ಧೆಯ ಅಥವಾ ವಿಶ್ವಾಸದ ಪ್ರಕಟನೆಯ ಪದಲ್ಲಾಗಿರಲಿಲ್ಲ.

ಎರಡನೆಯದಾಗಿ ಅದು ಅವರ ಮಿಥ್ಯ ಆರಾಧಕರ ಬಗ್ಗೆ ಅವರು ಹೇಳುತ್ತಿದ್ದ ಗಳನ್ನು- ಅವರ ದೃಷ್ಟಿಯಲ್ಲಿ ಅದು ಸಮಗ್ರವಾಗಿದ್ದರೂ ಅದು ಅಪೂರ್ಣವೆಂದು ಈ ರೀತಿ ಹೇಳಿತು: "ನಿಮ್ಮ ಸೀಮಿತ ಬುದ್ಧಿ ಶಕ್ತಿಗೆ ಯಾವ ಉನ್ನತ ಗುಣಗಳನ್ನು ವು ಆರೋಪಿಸುತ್ತೀರೋ ಅವು ಅಷ್ಟೇ ಅಪೂರ್ಣವಾಗಿದೆ. ಸಮಗ್ರ ಗುಣದ ಬಗ್ಗೆ ನಿಮ್ಮ ನೆಯೇ ಸೀಮಿತವೂ ಅಪರ್ಯಾಪ್ತವೂ ಆಗಿದೆ." ಅಲ್ಲಾಹನ ಗುಣಗಳು ಇವು ಮತ್ತು ನ ಸ್ಥಾನಮಾನ ಇದಾಗಿದೆ ಎಂದು ಘೋಷಿಸಿತು.

ಕುರ್‌ಆನಿನ ಪ್ರಕಾರ ಅಲ್ಲಾಹನಿಗೆ ಅನೇಕ ಗುಣಗಳಿವೆ. ಆ ಪೈಕಿ ಅತ್ಯಂತ ಹತ್ವಪೂರ್ಣವಾದ ಗುಣಗಳು ಈ ರೀತಿ ಇವೆ:

1) ಅವನು ಮಾತ್ರ ಅನಾದಿ ಮತ್ತು ಅನಂತನು. "ಅಲ್ಲಾಹನ ಹೊರತು ಆರಾಧ್ಯರಿಲ್ಲ. ನು ಅಮರನೂ ವಿಶ್ವವನ್ನು ನಿಯಂತ್ರಿಸುವವನೂ ಆಗಿರುತ್ತಾನೆ." (ಸೂರಃ ಬಕರಃ) ನ ಹೊರತು ಇತರ ಎಲ್ಲವೂ ನಾಶ ಹೊಂದುವಂತಹದ್ದಾಗಿವೆ.' (ಸೂರಃ ಕಸಸ್)

2) ಅವನು ನಿರಾಕಾರನು. ಅವನ ಅಸ್ತಿತ್ವವು ಆಕಾರಗಳಿಗೆ ಅತೀತವಾದುದು. ಣ್ಣುಗಳು ಅವನನ್ನು ಕಾಣಲಾರವು.' (ಅಲ್ ಅನ್‌ಆಮ್) 'ಅವನಿಗೆ ಸರಿಸಾಟಿಯಾದ ವಸ್ತು ವುದೂ ಇಲ್ಲ.' (ಅಶ್ಶುಅರಾ)

3) ಅವನು ಯಾವುದೇ ಶರೀರವನ್ನು ಹೊಂದಿರುವುದಿಲ್ಲ. ಅಂತೆಯೇ ಯಾರ ಖಾಂತರವೂ ಅವತಾರ ತಾಳುವುದಿಲ್ಲ. ಇನ್ನಾವುದೇ ವಸ್ತುವಿನಲ್ಲಿ ಲೀನವಾಗುವುದೂ ್ಲ. "ಮಸೀಹ್ ಇಬ್ನು ಮರ್ಯಮ್ (ಏಸುಕ್ರಿಸ್ತ) ಅಲ್ಲಾಹನಾಗಿದ್ದಾನೆ ಎಂದು ಳಿದವರು ಸತ್ಯನಿಷೇಧ ಕೈಗೊಂಡರು." (ಅಲ್ ಮಾಇದಃ)

4) ಆತ ಎಲ್ಲ ವಸ್ತುಗಳ ಸೃಷ್ಟಿಕರ್ತ. ಸಂಪೂರ್ಣ ವಿಶ್ವವು ಆತನ ಸೃಷ್ಟಿಯಾಗಿದೆ. ವನು ಎಲ್ಲವನ್ನೂ ಸೃಷ್ಟಿಸಿದನು." (ಅಲ್ ಅನ್‌ಆಮ್)

5) ಅವನು ಯಾರ ತಂದೆಯೂ ಅಲ್ಲ. ಯಾರ ಪುತ್ರನೂ ಅಲ್ಲ. "ಅವನಿಗಾ ಸಂತಾನವಿಲ್ಲ. ಅವನು ಯಾರ ಸಂತಾನವೂ ಅಲ್ಲ." (ಅಲ್ ಇಖ್‌ಲಾಸ

6) ಸಂಪೂರ್ಣ ವಿಶ್ವದ ಆಧಿಪತ್ಯವು ಅವನ ಹಸ್ತದಲ್ಲಿದೆ. (ಯಾಸೀನ

7) ಭೂಮಿ ಆಕಾಶಗಳ ಸಂಪೂರ್ಣ-ನಿಯಂತ್ರಣವು ಆತನ ಕೈಯಲ್ಲಿದೆ. (ಅಸ್ಸಜ್‌ದ

8) ಅವನೇ ಎಲ್ಲರ ಅನ್ನದಾತ ಮತ್ತು ಪರಿಪಾಲಕನಾಗಿದ್ದಾನೆ. (ಅಸ್ಸಾಫ್ಫಾತ

9) ಅವನೇ ಜೀವನ ಮರಣಗಳನ್ನು ಉಂಟು ಮಾಡಿರುವನು. "ಅವನೇ ಜೀವ ಮತ್ತು ಮರಣವನ್ನು ಕೊಡುವನು." (ಅಲ್ ಮುಲ್ಕ್) "ನಿಶ್ಚಯವಾಗಿಯೂ ಅವ ಸಾಯಿಸುತ್ತಾನೆ ಮತ್ತು ಬದುಕಿಸುತ್ತಾನೆ." (ಅನ್ನಜ್

10) ಎಲ್ಲರ ಆಶ್ರಯದಾತನಾಗಿದ್ದಾನೆ. ಅವನು ಶಾಂತಿ ಸ್ವರೂಪಿ ಮ ಆಶ್ರಯದಾತನಾಗಿದ್ದಾನೆ. (ಅಲ್ ಹಶ್

11) ಪ್ರತ್ಯಕ್ಷ, ಪರೋಕ್ಷ, ಗತ ಮತ್ತು ಪ್ರಸಕ್ತ ಎಲ್ಲ ಘಟನೆಗಳ ಬಗ್ಗೆ ಎಲ್ಲವನ ಬಲ್ಲವನು. "ಅವನು ಎಲ್ಲ ವಸ್ತುಗಳ ಬಗ್ಗೆ ಸರ್ವಜ್ಞನಾಗಿದ್ದಾನೆ." (ಅಲ್ ಬಕರಃ) "ಆತ ಪ್ರತ್ಯಕ್ಷಾಪ್ರತ್ಯಕ್ಷಗಳ ಜ್ಞಾನಿ." (ಅಲ್ ಹಶ್

12) ಎಲ್ಲವನ್ನೂ ಆಲಿಸುವವನು "ಆತನು ಸರ್ವಶ್ರುತನೂ ಸರ್ವಜ್ಞನೂ ಆಗಿರುತ್ತಾ (ಅಲ್ ಅನ್‌ಆಮ

13) ಎಲ್ಲದಕ್ಕೂ ಶಕ್ತಿಯುಳ್ಳವನು. "ಖಂಡಿತ ಅಲ್ಲಾಹನು ಸರ್ವಶಕ್ತನಾಗಿರುವನ (ಅಲ್ ಬಕ

14) ಅಜೇಯನು, ಪ್ರಭಾವಶಾಲಿ ಮತ್ತು ಅತ್ಯಂತ ಮಹಾನನು. (ಅಲ್ ಹಶ ಅವನ ಅಧಿಕಾರಕ್ಕೆ ಪಂಥಾಹ್ವಾನ ನೀಡುವವರಾರೂ ಇಲ್ಲ.

15) ಆತನು ಯುಕ್ತಿಜ್ಞನಾಗಿದ್ದಾನೆ. ಅವನ ಯಾವ ಕಾರ್ಯವೂ ಜಾಣ್ಮೆ ಅಥ ಉದ್ದೇಶ ರಹಿತವಾಗಿಲ್ಲ ಮತ್ತು ಅವನು ಯುಕ್ತಿಜ್ಞನೂ ವಿವರಪೂರ್ಣನೂ ಆಗಿರುತ್ತಾ (ಸಬ

16) ಮಹಾ ಕರುಣಾಮಯಿಯಾಗಿದ್ದಾನೆ. "ಪರಮ ದಯಾಮಯನೂ ಕರುಣಾಳುವ (ಅಲ್ ಫಾತಿಹಾ) ಪ್ರೀತಿ ಮತ್ತು ಔದಾರ್ಯ ಆತನ ವಿಶೇಷತೆಯಾಗಿದೆ. "ಅಲ್ಲಾಹನು ತ ದಾಸರ ಬಗ್ಗೆ ಔದಾರ್ಯ ಉಳ್ಳವನಾಗಿದ್ದಾನೆ." (ಅಲ್ ಬಕರಃ) ಅವನ ಅನುಗ್ರಹ ಮ

ರುಣೆ ಕಣ ಕಣವನ್ನೂ ಆಚ್ಛಾದಿಸಿದೆ. "ನನ್ನ ಕರುಣೆಯು ಎಲ್ಲ ವಸ್ತುಗಳಲ್ಲೂ ಆವರಿಸಿದೆ." ಅಲ್ ಅಲ್‌ರಾಫ್)

17) ಅವನು ನ್ಯಾಯಪೂರ್ಣನು. ಅಲ್ಲಾಹನು ಜನರ ನಡುವೆ ಪೂರ್ಣ ನ್ಯಾಯ ಾಲಿಸುತ್ತಾನೆ. "ಸತ್ಯವಿಶ್ವಾಸವಿಟ್ಟು ಸತ್ಕರ್ಮ ಕೈಗೊಂಡವರಿಗೆ ನ್ಯಾಯಪೂರ್ಣವಾಗಿ ಪ್ರತಿಫಲ ೀಡುವ ಸಲುವಾಗಿ." (ಸೂರಃ ಯೂನುಸ್) ಆತನು ಯಾರ ಮೇಲೂ ಕಿಂಚಿತ್ತೂ ಕ್ರಮವೆಸಗುವುದಿಲ್ಲ. "ನಾನು ದಾಸರ ಮೇಲೆ ಅಕ್ರಮವೆಸಗುವವನಲ್ಲ." (ಸೂರಃ ಕಾಫ್) ವನ ಆಜ್ಞೆಗಳೆಲ್ಲಾ ಪೂರ್ಣ ನ್ಯಾಯಸಮ್ಮತವಾಗಿವೆ. "ನಿನ್ನ ಪ್ರಭುವಿನ ಆಜ್ಞೆ ಪೂರ್ಣ ತ್ಯ ಮತ್ತು ನ್ಯಾಯಸಮ್ಮತವಾಗಿದೆ." (ಅಲ್ ಅನ್‌ಆಮ್)

18) ಅವಿಧೇಯರು ಮತ್ತು ವಿದ್ರೋಹಿಗಳಿಂದ ಆತನು ಪ್ರತೀಕಾರ ಪಡೆಯುವನು ುತ್ತು "ಅಲ್ಲಾಹನು ಅಜೇಯನೂ ಪ್ರತೀಕಾರ ಪಡೆಯಲು ಶಕ್ತಿಯುಳ್ಳವನೂ ಆಗಿದ್ದಾನೆ." (ಆಲಿ ಇಮ್ರಾನ್)

19) ಕ್ಷಮೆ ಯಾಚಿಸುವವರಿಗೆ ಕ್ಷಮೆ ನೀಡುವವನಾಗಿದ್ದಾನೆ. "ಮತ್ತು ಅವನು ್ಷಮಾಶೀಲನೂ ದಯಾಳುವೂ ಆಗಿದ್ದಾನೆ." (ಅಲ್ ಬುರೂಜ್) "ಅವನು ಅತ್ಯಧಿಕ ಶ್ಚಾತ್ತಾಪ ಸ್ವೀಕರಿಸುವವನಾಗಿದ್ದಾನೆ." (ಅನ್ನಸ್ರ್)

20) ಸತ್ಕರ್ಮಗಳನ್ನು ಅತ್ಯಧಿಕ ಮಾನ್ಯ ಮಾಡುವವನು "ಮತ್ತು ಅಲ್ಲಾಹನು ಮಹಾ ್ರತಜ್ಞನಾಗಿದ್ದಾನೆ." (ಅತ್ತಗಾಬುನ್)

21) ಅವನು ಬಯಸಿದ್ದೆಲ್ಲಾ ಆಗಿಯೇ ತೀರುತ್ತದೆ. "ಬಯಸಿದ್ದೆಲ್ಲವನ್ನೂ ಮಾಡಬಲ್ಲವನು." (ಅಲ್ ಬುರೂಜ್)

22) ಅವನು ವಕ್ತಾರನಾಗಿದ್ದಾನೆ ಮತ್ತು ಸಂಭಾಷಣೆ ಮಾಡುತ್ತಾನೆ. "ಅವರ ಪ್ರವಾದಿಗಳ) ಪೈಕಿ ಕೆಲವರ ಜೊತೆ ಅವನು ಸಂಭಾಷಿಸಿದ್ದಾನೆ." (ಅಲ್ ಬಕರಃ)

23) ಇಚ್ಛಿಸಿದ್ದೆಲ್ಲವನ್ನೂ ಮಾಡುತ್ತಾನೆ. "ಈ ರೀತಿ ಅಲ್ಲಾಹನು ತಾನು ಇಚ್ಛಿಸಿದ್ದೆಲ್ಲವನ್ನೂ ಮಾಡುತ್ತಾನೆ." (ಆಲಿ ಇಮ್ರಾನ್) ಅವನು ಇಚ್ಛಿಸಿದ್ದು ಮಾತ್ರ ಾರ್ಯರೂಪಕ್ಕೆ ಬರುತ್ತದೆ. ಅವನ ಬಯಕೆಯಿಲ್ಲದೆ ಯಾರೂ ಏನೂ ಸ್ವಯಂ ಯಸುವಂತೆಯೂ ಇಲ್ಲ. "ಅಲ್ಲಾಹನೇ ಇಚ್ಛಿಸಿದ್ದನ್ನು ಹೊರತು ನೀವು ಏನನ್ನೂ ಇಚ್ಛಿಸಲಾರಿರಿ." (ಅದ್ದಹ್ರ್)

24) ಆತನು ನಿರಪೇಕ್ಷನು. ಎಲ್ಲ ವಸ್ತುಗಳಿಂದಲೂ ನಿರಪೇಕ್ಷನು. ಅವನಿಗೆ ಯಾವುದೇ ವಸ್ತುವಿನ ಬಯಕೆ ಇಲ್ಲ. "ಮತ್ತು ಅಲ್ಲಾಹನು ತೀರಾ ನಿರಪೇಕ್ಷನಾಗಿದ್ದಾನೆ." ಅಲ್ ಫಾತಿರ್)

25) ಅವನು ಸ್ವಯಂ ಸ್ತುತ್ಯಾರ್ಹನು ಅತ್ಯುತ್ತಮ ಗುಣಗಳುಳ್ಳವನು. "ಖಂಡಿ: ವಾಗಿಯೂ ನೀನು ಸ್ವಯಂ ಸ್ತುತ್ಯಾರ್ಹನೂ ಸನ್ಮಾನ್ಯನೂ ಆಗಿರುತ್ತಿ." (ಹೂದ್

26) ಆತನು ಎಲ್ಲ ನ್ಯೂನತೆಗಳಿಂದಲೂ ಪವಿತ್ರನು ಮತ್ತು ಎಲ್ಲ ಅತ್ಯುತ್ತಮ ಗುಣಗಳನ್ನು ಹೊಂದಿದವನಾಗಿದ್ದಾನೆ. ದೇವನ ಸ್ಥಾನಮಾನಕ್ಕೆ ನಿಲುಕದ ಯಾವ ವಿಷಯವು ಅವನಲ್ಲಿಲ್ಲ. "ಸಾರ್ವಭೌಮನೂ ಅತ್ಯಂತ ಗುಣವಂತನೂ ಶಾಂತಿ ಸ್ವರೂಪಿಯು ಆಗಿದ್ದಾನೆ." (ಅಲ್ ಹಶ್ರ್

27) ಅವನು ಎಲ್ಲ ರೀತಿಯಿಂದಲೂ ಅಸದೃಶನಾಗಿದ್ದಾನೆ. ಅವನನ್ನು ಯಾ: ವಸ್ತುವಿಗೂ ಹೋಲಿಸುವಂತಿಲ್ಲ. "ಅವನಂತಿರುವ ವಸ್ತು ಯಾವುದೂ ಇಲ್ಲ." (ಅಶ್ಶುಅರಾ ಭೂಮಿ ಆಕಾಶಗಳ ಯಾವ ವಸ್ತುವನ್ನೂ ಆತನ ಅನುರೂಪವೆಂದು ಭಾವಿಸುವಂತಿಲ್ಲ "ಭೂಮಿ ಆಕಾಶಗಳಲ್ಲಿ ಅವನ ಗುಣವು ಸರ್ವಶ್ರೇಷ್ಠವಾಗಿದೆ." (ಅರ್ರೂಮ್

28) ಆರಾಧನೆಗೆ ಅರ್ಹನಾದವನು ಕೇವಲ ಆತನೇ ಆಗಿದ್ದಾನೆ. "ಆತನ ಹೊರತ ಅನ್ಯ ಆರಾಧ್ಯರಿಲ್ಲ." (ಅಲ್ ಬಕರಃ) ಸಂಪೂರ್ಣ ವಿಶ್ವದಲ್ಲಿ ಆತನ ಮೇಲ್ಮೆಯೆ ಮೆರೆದಾಡುತ್ತಿದೆ. ಭೂಮಿ ಆಕಾಶಗಳಲ್ಲಿ ಆತನಿಗೇ ಮೇಲ್ಮೆ ಇದೆ. ಈ ಆರಾಧ್ಯತೆ ಮತ್ತು ಮಹಾನತೆಯ ಲವಲೇಶವನ್ನಾದರೂ ಯಾರೂ ಹೊಂದಿಲ್ಲ. ಎಲ್ಲರೂ ಆತನೆದುರು ತೀರ ಅಸಮರ್ಥರೂ ಅವಲಂಬಿಗಳೂ ಆಜ್ಞಾನುಸಾರಿಗಳೂ ಆಗಿದ್ದಾರೆ. ಎಲ್ಲರೂ ಆತ: ದಾಸರಾಗಿದ್ದಾರೆ. "ಭೂಮಿ ಆಕಾಶಗಳಲ್ಲಿರುವುದೆಲ್ಲವೂ ಆತನವೇ ಆಗಿವೆ. ಎಲ್ಲವು ಅವನಿಗೇ ಶರಣಾಗಿವೆ." (ಅರ್ರೂಮ್) ಆತನು ತನ್ನ ಗುಲಾಮರೂ ದಾಸರೂ ಆದವ: ಪೈಕಿ ಯಾರಿಗೂ ತನ್ನ ಸಂಪ್ರೀತಿ ಮತ್ತು ಸಾಮೀಪ್ಯ ನೀಡಿ ತನ್ನ ಆಜ್ಞಾಧಿಕಾರದಲ್ಲಿ ಭಾಗೀದಾರರಾಗಿ ಮಾಡಿಲ್ಲ. "ಅವನು ತನ್ನ ಆಜ್ಞಾಧಿಕಾರದಲ್ಲಿ ಯಾವೊಬ್ಬನನ್ನೂ ಭಾಗೀದಾರರಾಗಿ ಮಾಡುವುದಿಲ್ಲ." (ಅಲ್ ಕಹ್‌ಫ್

ಅಲ್ಲಾಹನ ಅಸ್ತಿತ್ವ ಮತ್ತು ಗುಣಗಳ ಬಗ್ಗೆ ಈ ವಿವರಣೆಗಳ ಬಳಿಕ ಈ ವಿಷಯಕೆ ಸಂಬಂಧಿಸಿ ಇನ್ನೂ ಕೆಲವು ವಿಷಯಗಳಿವೆ. ಅವುಗಳನ್ನು ತಿಳಿದುಕೊಳ್ಳುವುದು ಅಗತ್ಯ

1. ಮೊದಲನೆಯದಾಗಿ ಅಲ್ಲಾಹನ ಅಸ್ತಿತ್ವದ (ಸತ್ತೆಯ) ವಾಸ್ತವಿಕತೆಯನ್ನು ತಲುಪುವುದು ಮನುಷ್ಯ ಚಿಂತನೆಗೆ ಮೀರಿದ ವಿಷಯ. ಆದ್ದರಿಂದ ಅವನ ಗುಣಗಳಿಂದಲೆ ಅವನನ್ನು ಅರಿಯಬಹುದಾಗಿದೆ. ಆತನ ಗುಣಗಳ ಪ್ರದರ್ಶನವು ಈ ವಿಶ್ವದಾದ್ಯಂತ ವ್ಯಾಪಿಸಿದೆ. ಇಲ್ಲಿರುವ ಪ್ರತಿಯೊಂದು ವಸ್ತು ಕೂಡಾ ಅವನ ಯಾವುದಾದರೊಂದು ಗುಣದ ಪ್ರದರ್ಶನವಾಗಿದೆ. ಆದ್ದರಿಂದಲೇ ಪ್ರವಾದಿ ಮುಹಮ್ಮದ್(ಸ) ಈ ರೀತಿ ಆದೇಶಿಸಿರುವರು

"ಅಲ್ಲಾಹನ ಸೃಷ್ಟಿಗಳ ಬಗ್ಗೆ ಚಿಂತನೆ ನಡೆಸಿರಿ. ಆದರೆ ಆತನ ಅಸ್ತಿತ್ವದ ಬಗ್ಗೆ ಚಿಂತನೆ ನಡೆಸಬೇಡಿರಿ." (ರೂಹುಲ್ ಮಆನೀ ಭಾಗ-27, ಪುಟ 68

ಅಲ್ಲಾಹನ ಅಸ್ತಿತ್ವವು ಮನುಷ್ಯ ಬುದ್ಧಿಗೆ ಅತೀತವಾಗಿರುವುದು ಒಂದು ಸ್ಪಷ್ಟ ಾಸ್ತವಿಕತೆಯಾಗಿದೆ. ಮನುಷ್ಯನ ಚಿಂತನ ಸಾಮರ್ಥ್ಯ ಮತ್ತು ಅದರ ಸೀಮೆಗಳನ್ನು ಲ್ಲವನು ಈ ವಿಷಯದ ಬಗ್ಗೆ ಅಜ್ಞನಾಗಿರುವುದು ಅಸಾಧ್ಯ. ಅಲ್ಲಾಹನ ಅಸ್ತಿತ್ವವು ಹಳ ಉನ್ನತವಾದುದು. ಸಾಮಾನ್ಯ ಸೃಷ್ಟಿಗಳ ಬಗ್ಗೆಯೂ ನಮ್ಮ ತಿಳುವಳಿಕೆಯು ಅವುಗಳ ುಣಗಳಿಗೆ ಮಾತ್ರ ಸೀಮಿತವಾಗಿವೆ. ಅವುಗಳ ಅಸ್ತಿತ್ವವು ಹೆಚ್ಚಿನಂಶ ನಮಗೊಂದು ರಹಸ್ಯ ಾಗಿಯೇ ಉಳಿದಿರುತ್ತದೆ. ಹಾಗಿರುವಾಗ ಎಲ್ಲ ರೀತಿಯಿಂದಲೂ ಅತುಲ್ಯವಾದ, ಸರಿಸಾಟಿ ಇಲ್ಲದ, ಸೃಷ್ಟಿಕರ್ತನಾದ (ಆತನ ಹೊರತು ಉಳಿದೆಲ್ಲವೂ ಸೃಷ್ಟಿಯಾಗಿವೆ), ಸ್ವಂತ ಸ್ತಿತ್ವ ಹೊಂದಿದ (ಆತನ ಹೊರತು ಉಳಿದೆಲ್ಲವೂ ಆತನು ನೀಡಲ್ಪಟ್ಟ ಅಸ್ತಿತ್ವದಿಂದ ಸ್ತಿತ್ವಕ್ಕೆ ಬಂದಿವೆ), ಎಲ್ಲ ಗುಣಗಳು ಪರಾಕಾಷ್ಠೆಯಲ್ಲಿರುವ, ಅನಾದಿ ಮತ್ತು ಅನಂತ ಾದ (ಸಂಪೂರ್ಣ ವಿಶ್ವದಲ್ಲಿರುವ ಯಾವುದೇ ಒಂದು ವಸ್ತುವಿನಲ್ಲಿಯೂ ಯಾವುದೇ ಂದು ಗುಣದ ಪರಾಕಾಷ್ಠೆಯಿಲ್ಲ), ಒಟ್ಟಿನಲ್ಲಿ ಮನುಷ್ಯ ಬುದ್ಧಿ ಮತ್ತು ಚಿಂತನೆಗೆ ನಿಲುಕುವ ಸ್ತು ಆತನ ಗುಣಗಳು ಮಾತ್ರವಾಗಿದ್ದು ಆತನ ಅಸ್ತಿತ್ವದ ವಾಸ್ತವಿಕತೆಯನ್ನು ಅರಿಯುವುದು ನುಷ್ಯ ಬುದ್ಧಿಗೆ ಸಾಧ್ಯವಾಗದ ವಿಷಯ. ಆದ್ದರಿಂದಲೇ ಪವಿತ್ರ ಕುರ್‌ಆನ್ ತನ್ನ ರ್ಚೆಯನ್ನು ಆತನ ಗುಣಗಳ ಕುರಿತೇ ಪ್ರತಿಪಾದಿಸುವುದಕ್ಕೆ ಸೀಮಿತಗೊಳಿಸಿದೆ.

ದೇವನ ಅಸ್ತಿತ್ವ ಮತ್ತು ಗುಣಗಳ ಬಗ್ಗೆ ಇನ್ನೂ ಕೆಲವು ಪ್ರಶ್ನೆಗಳನ್ನು ಎತ್ತಬಹುದಾಗಿದೆ. ಂದಾ: ಆತನ ಗುಣಗಳು ಅಸ್ತಿತ್ವದಲ್ಲೇ ಸೇರಿವೆಯೇ ಅಥವಾ ಅವುಗಳಿಗೆ ಪ್ರತ್ಯೇಕ ಸ್ತಿತ್ವವಿದೆಯೇ? ಒಂದು ವೇಳೆ ಬೇರೆಯೇ ಅಸ್ತಿತ್ವವಿದ್ದರೆ ದೇವನ ಅಸ್ತಿತ್ವದೊಂದಿಗೆ ವುಗಳಿಗಿರುವ ಸಂಬಂಧವೇನು? ಅವು ಆತನ ಅಸ್ತಿತ್ವದೊಳಗೆ ಕಾಣಸಿಗುವ ಬಗೆ ಹೇಗೆ? ದರೆ ಇವೆಲ್ಲಾ ಕೇವಲ ತತ್ವಶಾಸ್ತ್ರ ಸಂಬಂಧವಾದ ಪ್ರಶ್ನೆಗಳು ಮಾತ್ರ. ಅದು ಮನುಷ್ಯನ ೂಲ ಪ್ರಕೃತಿಯ ಪರಿಣಾಮವಾಗಿ ಉಂಟಾಗಿರದೆ ಆತನ ಬುದ್ಧಿ-ಚಿಂತನೆಗಳು ತನ್ನನ್ನು ನು ಅರಿಯದ ಕಾರಣ ಹುಟ್ಟಿಕೊಂಡ ಚರ್ಚೆಗಳಾಗಿವೆ. ಪವಿತ್ರ ಕುರ್‌ಆನ್ ಈ ರೀತಿಯ ್ರಶ್ನೆಗಳಿಗೆ ಉತ್ತರಿಸಲಿಲ್ಲ. ಮಾತ್ರವಲ್ಲ ಅವುಗಳ ಪ್ರಸ್ತಾಪವನ್ನೂ ಅನುಚಿತವೆಂದು ರಿಗಣಿಸಿದೆ. ಈ ಬಗ್ಗೆ ಅದೇನಾದರೂ ಪ್ರಸ್ತಾಪಿಸಿದ್ದರೆ ಅದು ಮನುಷ್ಯನಿಗೆ ಅವನ ಬುದ್ಧಿ ಂತನೆಗಳ ಅಪರ್ಯಾಪ್ತತೆಯನ್ನು ತಿಳಿಯಪಡಿಸುವ ಮತ್ತು ಅದರ ಸೀಮೆಯನ್ನು ಜ್ಞಾಪಿಸಿ ಡುವ ವಿಷಯಗಳನ್ನು ಮಾತ್ರ. ಒಮ್ಮೆ ಕೆಲವರು 'ವಹೀ' (ದಿವ್ಯವಾಣಿಯ ಅವತರಣ) ಂದರೇನೆಂದು ಪ್ರಶ್ನಿಸಿದಾಗ 'ವಹೀ'ಯ ವಾಸ್ತವಿಕತೆಯು ನಿಮ್ಮ ಜ್ಞಾನೇಂದ್ರಿಯಗಳಿಗೆ ಲುಕುವ ವಿಷಯವಲ್ಲವೆಂದೂ ಆದ್ದರಿಂದ ಆ ಬಗ್ಗೆ ನಿಮಗೆ ತಿಳಿಸುವ ವಿಷಯವೇನೂ ಲ್ಲವೆಂದೂ ನಿಮ್ಮ ಚಿಂತನೆ ಮತ್ತು ಗ್ರಹಣ ಶಕ್ತಿಯು ಅಪರ್ಯಾಪ್ತವಾಗಿದ್ದು ನಿಮ್ಮ ುಂದೆ 'ವಹೀ'ಯ ವಾಸ್ತವಿಕತೆಯನ್ನು ಅನಾವರಣಗೈದರೆ ಅದರಿಂದ ಒಂದು ಮಗುವಿನ ುಂದೆ ಕ್ಲಿಷ್ಟಕರವಾದ ತತ್ವಶಾಸ್ತ್ರದ ಸಮಸ್ಯೆಯ ಬಗ್ಗೆ ಒಂದು ಉಪನ್ಯಾಸ ನೀಡಿದಷ್ಟೂ ್ರಯೋಜನ ಆಗಲಾರದೆಂದೂ ಕುರ್‌ಆನ್ ಸಾರಿ ಹೇಳಿತು.

ಇದಲ್ಲದೆ ಇಂತಹ ಪ್ರಶ್ನೆಗಳನ್ನು ಪ್ರಸ್ತಾಪಿಸದೆ ಮತ್ತು ಅವುಗಳಿಗೆ ಉತ್ತರವ ನೀಡದೆ ಇರುವುದಕ್ಕೆ ಇನ್ನೊಂದು ಕಾರಣವೂ ಇದೆ. ಅದೇನೆಂದರೆ ಕುರ್‌ಆನ್ ಯಾ ಉದ್ದೇಶಕ್ಕಾಗಿ ಅವತೀರ್ಣಗೊಂಡಿದೆಯೋ ಆ ಉದ್ದೇಶದೊಂದಿಗೆ ಈ ಪ್ರಶ್ನೆಗಳಿಗೆ ಯಾ ಸಂಬಂಧವೂ ಇಲ್ಲ. ಎಲ್ಲ ದೇವಗ್ರಂಥಗಳಂತೆ ಪವಿತ್ರ ಕುರ್‌ಆನಿನ ಅವತೀರ್ಣ ಉದ್ದೇಶವೂ ಕೇವಲ ಸನ್ಮಾರ್ಗ ದರ್ಶನವಾಗಿದೆ. ಜನರ ನೈತಿಕ ಸುಧಾರಣೆಯಾಗಿ ಅವರ ಆತ್ಮಸಂಸ್ಕರಣೆಯಾಗಿದೆ, ಅವರಿಗೆ ಒಳಿತು ಮತ್ತು ಸತ್ಯನಿಷ್ಠೆಯ ಉಪದೇ ವಾಗಿದೆ, ಅವರ ನೈಜ ಒಡೆಯನಿಗೆ ಪ್ರಿಯವಾದ ಮತ್ತು ಆತನಿಂದ ಅಂಗೀಕರಿಸಲ್ಪ ಜೀವನ ವ್ಯವಸ್ಥೆಯನ್ನು ಕಲಿಸುವುದಾಗಿದೆ. ಆ ಜೀವನ ಕ್ರಮವನ್ನು ಅಳವಡಿಸಿಕೊಂಡ ಮಾತ್ರ ಮನುಷ್ಯನು ತನ್ನ ಜೀವನದ ಉದ್ದೇಶವನ್ನು ಪೂರೈಸಬಲ್ಲನು ಮತ್ತು ತ ಅಂತಿಮ ಪರಿಣಾಮವನ್ನು ಜಯಪ್ರದಗೊಳಿಸಬಲ್ಲನು. ಈ ಉದ್ದೇಶ ಸಾಧನೆಗೆ ನ ಸೃಷ್ಟಿಕರ್ತ ಮತ್ತು ಒಡೆಯನು ಒಬ್ಬನಿದ್ದಾನೆ. ಅವನಿಗೆ ಈ ಎಲ್ಲ ಗುಣಗಳಿವೆ, ನ ಮಟ್ಟಿಗೆ ಆತನ ಗುಣಗಳ ಅನಿವಾರ್ಯ ಬೇಡಿಕೆಗಳಿವು ಎಂದು ಮಾತ್ರ ತಿಳಿದುಕೊಂಡ ಸಾಕಾಗುತ್ತದೆ. ಆದರೆ ಅವನೊಂದು ವೇಳೆ ಇಷ್ಟಕ್ಕೇ ತೃಪ್ತಿಪಡದೆ ಅನಗತ್ಯ ವಿವರಣೆಗಳನ ಹುಡುಕತೊಡಗಿದರೆ, ದೇವಾಸ್ತಿತ್ವದ ವಾಸ್ತವಿಕತೆಯನ್ನು ತಿಳಿಯ ಬಯಸಿದರೆ, ಆತ ಅಸ್ತಿತ್ವ ಮತ್ತು ಗುಣಗಳ ಸಂಬಂಧದ ಸ್ವರೂಪವನ್ನು ಅರಿಯ ಬಯಸಿದರೆ, ಅವ ತನ್ನ ಸಂಶೋಧನಾ ಚಾಪಲ್ಯವನ್ನು ಎಷ್ಟೇ ತರ್ಕಬದ್ಧ ಮತ್ತು ವೈಜ್ಞಾನಿಕವೆಂ ಪರಿಗಣಿಸಿದರೂ ಯಾವುದೇ ದೇವಗ್ರಂಥವು ಆತನಿಗೆ ಪ್ರೋತ್ಸಾಹ ನೀಡಲಾರದು. ಅ ತನ್ನ ಅವತೀರ್ಣದ ಉದ್ದೇಶಕ್ಕೆ ಅನಗತ್ಯವಾದ ಮತ್ತು ನಿಷ್ಪ್ರಯೋಜಕವಾದ ಚರ್ಚೆಯೆಂ ಸಾರಿ ಅವನನ್ನು ಆ ವ್ಯರ್ಥ ಶ್ರಮವನ್ನು ಬಿಟ್ಟು ಬಿಡುವಂತೆ ಎಚ್ಚರಿಸುತ್ತದೆ.

2. ಈ ಮಹತ್ವಪೂರ್ಣ ಸಮಸ್ಯೆಯ ಬಗ್ಗೆ ನೆನಪಿಡಬೇಕಾದ ಎರಡನೆ ವಿಷಯವೇನೆಂದರೆ, ದೇವನ ಅತ್ಯುತ್ತಮ ಗುಣಗಳ ವಿವಿಧತೆಯ ಕೆಲವು ಧರ್ಮಗ ಅನುಯಾಯಿಗಳು ಭಾವಿಸುವಂತೆ ಆತನ ಅಸ್ತಿತ್ವದ ವಿವಿಧತೆಯ ಪ್ರತೀಕವಲ್ಲ. ಈ ಗು ಮತ್ತು ಶಕ್ತಿಗಳೆಲ್ಲವೂ ಒಬ್ಬನೇ 'ಅಲ್ಲಾಹ'ನಲ್ಲಿ ಕೇಂದ್ರೀಕೃತವಾಗಿವೆ. ಕುರ್‌ಆನ್ ಈ ಸ್ಪ ವಾಸ್ತವಿಕತೆಯನ್ನು ಈ ರೀತಿ ಸೂರ್ಯ ಬೆಳಕಿನಂತೆ ಬಹಿರಂಗಗೊಳಿಸಿದೆ:

"ಅಲ್ಲಾಹ್ ಎಂದು ಕರೆಯಿರಿ ಅಥವಾ ಪರಮ ದಯಾಮಯ ಎಂದು ಕರೆಯಿ ಯಾವ ಹೆಸರಿಂದ ಕರೆದರೂ ಅವನಿಗೆ ಎಲ್ಲವೂ ಒಳ್ಳೆಯ ನಾಮಗಳೇ ಇವೆ."

(ಪವಿತ್ರ ಕುರ್‌ಆನ್, 17:11

ಅರ್ಥಾತ್ ನೀವು ಪೂಜೆಗೆ ಅರ್ಹವಾದ ಯಾವ ಯಾವ ಗುಣ ಮತ್ತು ಶಕ್ತಿಗ ಕಲ್ಪನೆ ಮಾಡಿದರೂ ಅದರ ತಾತ್ಪರ್ಯ ಸದಾ ಒಂದೇ ಅಸ್ತಿತ್ವವಾಗಿರುವುದು. ಅದ

ಹೆಸರೇ 'ಅಲ್ಲಾಹ್'. ಆತನ ದಯೆ ಮತ್ತು ಕರುಣೆಯ ಗುಣಗಳನ್ನು ಮನಸ್ಸಿನಲ್ಲಿಟ್ಟು ನೀವು ರಹ್ಮಾನ್' ಎಂದು ಕರೆದರೆ ಅದು ಬೇರೆ ಯಾವುದೇ ಅಸ್ತಿತ್ವವಾಗಿ, ಇನ್ನು ಕೆಲವು ವಿಷಯಗಳನ್ನೂ ಗುಣಗಳನ್ನೂ ಮುಂದಿಟ್ಟುಕೊಂಡು 'ಅಲ್ಲಾಹ್' ಎಂದು ಕರೆದರೆ ಅದು ಬೇರೆ ಯಾವುದೋ ಅಸ್ತಿತ್ವವಾಗಿ ಬಿಡುವುದಿಲ್ಲ.

ನಮ್ಮ ಕಣ್ಣ ಮುಂದೆ ಇರುವ ಈ ಜಗತ್ತಿನಲ್ಲಿ ಪರಸ್ಪರ ವಿರುದ್ಧ ಘಟನೆಗಳು ಮತ್ತು ಆಕಸ್ಮಿಕಗಳು ಸಂಭವಿಸುತ್ತಿರುತ್ತವೆ ಎಂಬುದು ಸಂಶಯಾತೀತ. ಇಲ್ಲಿ ದಯೆ ಕರುಣೆಯ ಮಳೆಗರೆಯುತ್ತಿದ್ದರೆ, ಕೋಪ-ತಾಪಗಳ ಭೂಕಂಪಗಳೂ ಆಗುತ್ತಿರುತ್ತವೆ. ಇಲ್ಲಿ ಸುಖ ಸೌಭಾಗ್ಯಗಳು ಲಭಿಸುತ್ತಿದ್ದರೆ ಸಂಕಷ್ಟಗಳೂ ಬಿರುಗಾಳಿಯೂ ಏಳುತ್ತಿರುತ್ತವೆ. ಇಲ್ಲಿ ಆರೋಗ್ಯ ಮತ್ತು ಜೀವನವೂ ಇದ್ದರೆ ರೋಗ ಮತ್ತು ಮರಣವೂ ಇದೆ; ಇಲ್ಲಿ ಶಾಂತಿ-ಸಮಾಧಾನಗಳೂ ಇವೆ; ಗಲಭೆ-ಗೊಂದಲಗಳೂ ಇವೆ; ಆದರೆ ಈ ಪರಸ್ಪರ ವಿಭಿನ್ನ ಮತ್ತು ವಿರುದ್ಧ ಘಟನೆಗಳ ಮೂಲವೂ ಬೇರೆ ಎಂಬುದು ಇದರ ಅರ್ಥ ಖಂಡಿತ ಅಲ್ಲ. ಅಂತೆಯೇ ವಿಭಿನ್ನ ಶಕ್ತಿಗಳ ಒಡೆತನವು ಬೇರೆ ಬೇರೆ ಅಸ್ತಿತ್ವಗಳಿಗಿಲ್ಲ. ವಾಸ್ತವದಲ್ಲಿ ಈ ಎಲ್ಲ ಘಟನೆ ಮತ್ತು ಆಕಸ್ಮಿಕಗಳ ಮೂಲವೂ ಕೇವಲ ಒಬ್ಬ 'ಅಲ್ಲಾಹ'ನಾಗಿದ್ದಾನೆ. ಇಲ್ಲಿ ಅಸ್ತಿತ್ವದಲ್ಲಿರುವುದೆಲ್ಲವೂ ಆತನ ಆಜ್ಞೆಯಿಂದಲೇ ಅಸ್ತಿತ್ವಕ್ಕೆ ಬಂದಿವೆ. ಆ ಘಟನೆಗಳ ಹಿಂದಿರುವ ಶಕ್ತಿಗಳು ಕೂಡಾ ಆ ಏಕ ಅಸ್ತಿತ್ವದ ವಿಭಿನ್ನ ಗುಣಗಳಾಗಿವೆ. ಅವೆಲ್ಲವೂ ಆತನಲ್ಲೇ ಕೇಂದ್ರೀಕೃತವಾಗಿವೆ. ಯಾವ ಶಕ್ತಿಗೂ ತನ್ನದೇ ಆದ ಬೇರೆ ಅಸ್ತಿತ್ವವಿಲ್ಲ. ಯಾವುದೇ ಇತರ ಅಸ್ತಿತ್ವವೂ ದೇವ ಗುಣಗಳನ್ನು ಹೊಂದಿಲ್ಲ.

3. ಮೂರನೆಯದಾಗಿ ಅಲ್ಲಾಹನ ಅಸ್ತಿತ್ವದಲ್ಲಿರುವ ಗುಣಗಳೆಲ್ಲವೂ ಅತ್ಯುತ್ತಮ ಗುಣಗಳಾಗಿವೆ. ಅವು ಎಲ್ಲ ಕೊರತೆ-ನ್ಯೂನತೆಗಳಿಂದ ಪಾವನವಾಗಿವೆ. ಆ ಪೈಕಿ ಯಾವುದನ್ನೂ ಕೆಡುಕಿನ ಗುಣಗಳೆನ್ನುವಂತಿಲ್ಲ. ಆದ್ದರಿಂದಲೇ ಪವಿತ್ರ ಕುರ್‌ಆನ್ ಎಲ್ಲ ಕೊರತೆ-ನ್ಯೂನತೆಗಳಿಂದ ಪಾವನನಾಗಿರುವನು ಎಂಬುದನ್ನು 'ಅಲ್ಲಾಹ'ನ ಒಂದು ವೈಶಿಷ್ಟ್ಯವಾಗಿ ಎತ್ತಿ ತೋರಿಸಿದೆ:

"ಅವನೇ ಅಲ್ಲಾಹ್ ಅವನ ಹೊರತು ಬೇರಾವ ಆರಾಧ್ಯನೂ ಇಲ್ಲ. ಅವನು ಸಾಮ್ರಾಟನು, ಪರಮ ಪಾವನನು, ಸಾದ್ಯಂತ ಮಂಗಲಮಯನು."

(ಪವಿತ್ರ ಕುರ್‌ಆನ್, 59:23)

ಮತ್ತು ಈ ರೀತಿ ಅಲ್ಲಾಹನ ಗುಣಗಳ ಬಗ್ಗೆ ಸ್ಪಷ್ಟೀಕರಣ ನೀಡಿದೆ:

"ಅವನಿಗೆ ಎಲ್ಲವೂ ಒಳ್ಳೆಯ ನಾಮಗಳೇ ಇವೆ." (ಪವಿತ್ರ ಕುರ್‌ಆನ್, 17:110)

ಈ ಬಗ್ಗೆ ಜಗತ್ತಿನಲ್ಲಿ ನಿರಂತರ ಸಂಭವಿಸುವ ಅಪ್ರಿಯ ಘಟನೆಗಳು ಮತ್ತು ಕಹಿ ಆಕಸ್ಮಿಕಗಳಿಂದ ಯಾವುದೇ ರೀತಿಯ ಗೊಂದಲಕ್ಕೀಡಾಗಬಾರದು. ಯಾಕೆಂದರೆ ಈ

ಘಟನೆಗಳು ತಮ್ಮ ತಾತ್ಕಾಲಿಕ ಪರಿಣಾಮದ ದೃಷ್ಟಿಯಿಂದ ಅತ್ಯಂತ ಸೀಮಿತ ಅರ್ಥ ಗಳಲ್ಲಿ ಅಪ್ರಿಯವಾಗಿದೆ. ಅವುಗಳ ಅಂತಿಮ ಮತ್ತು ವಾಸ್ತವಿಕ ಪರಿಣಾಮಗಳು ಒಟ್ಟು ಹಿತಾಸಕ್ತಿಗಳ ದೃಷ್ಟಿಯಿಂದ ಹಾಗೂ ವಿಶಾಲ ಅರ್ಥಗಳಲ್ಲಿ ಅವು ಖಂಡಿತ ಅಪ್ರಿಯ ಘಟನೆಗಳಲ್ಲ. ಬದಲಾಗಿ ವೈದ್ಯನು ರೋಗಿಯ ರೋಗ ನಿವಾರಣೆಗಾಗಿ ಶಸ್ತ್ರಕ್ರಿಯೆ ಮಾಡುವಂತೆ ಅಥವಾ ಕಹಿ ಮದ್ದುಗಳನ್ನು ನೀಡುವಂತೆ ಆಗಿದೆ. ತೋಟಗಾರನು ತೋಟದ ಗಿಡ-ಬಳ್ಳಿಗಳನ್ನು ಕತ್ತರಿಸುವಂತೆ ಆಗಿದೆ. ಕೊಲೆಗಡುಕರು ಮತ್ತು ವಿದ್ರೋಹಿಗಳಿಗೆ ನ್ಯಾಯಾಲಯವು ವಿಧಿಸುವ ನೇಣುಗಂಬದ ಶಿಕ್ಷೆಯಂತಾಗಿದೆ. ಇವು ಬಾಹ್ಯ ನೋಟಕ್ಕೆ ಅಪ್ರಿಯ ಘಟನೆಗಳಾಗಿದ್ದರೂ ವಾಸ್ತವದಲ್ಲಿ ಅಪ್ರಿಯ ಘಟನೆಗಳಲ್ಲ. ಆದುದರಿಂದ ಈ ಲೋಕದಲ್ಲಿ ಸಾಂಕ್ರಾಮಿಕ ರೋಗಗಳು ಹರಡುತ್ತಿದ್ದರೆ, ಬರಗಾಲ ಬೀಳುತ್ತಿದ್ದರೆ, ಮಹಾಪೂರಗಳು ಬರುತ್ತಿದ್ದರೆ, ದುಷ್ಕರ್ಮಿಗಳು ಮತ್ತು ಕಿಡಿಗೇಡಿಗಳಿಗೆ ಸಂಪತ್ತು ಮತ್ತು ಗೌರವ ಸಲ್ಲುತ್ತಿದ್ದರೆ ಹಾಗೂ ಸತ್ಕರ್ಮಿಗಳ ಮೇಲೆ ವಿಪತ್ತುಗಳು ಎರಗುತ್ತಿದ್ದರೆ ಇದರ ಅರ್ಥ ಈ ಲೋಕದ ಸೃಷ್ಟಿಕರ್ತನಾದ ದೇವನು ಅಶ್ರದ್ಧನೆಂದೂ, ಸಂಹಾರಪ್ರಿಯನೆಂದೂ, ಕರುಣೆ ಇಲ್ಲದವನೆಂದೂ ಅಕ್ರಮಿಯೆಂದೂ ರಕ್ತ ಪಿಪಾಸುವೆಂದೂ, ನಿರರ್ಥಕ ಕಾರ್ಯ ವೆಸಗುವವನೆಂದೂ, ಮೋಜಿಗಾಗಿ ಇತರರನ್ನು ಸಂಕಷ್ಟಕ್ಕೀಡು ಮಾಡುವವನೆಂದೂ, ಗುಣ-ದೋಷಗಳನ್ನು ಅರಿಯದವನೆಂದೂ (ಶಾಂತಂ ಪಾಪಂ) ಅಲ್ಲ. ಏಕೆಂದರೆ ಈ ರೀತಿ ಘಟನೆಗಳಲ್ಲಿ ಮೇಲ್ನೋಟಕ್ಕೆ ಇರುವ ಕ್ಷೋಭೆಯ ಹಿಂದೆ ಒಂದು ಮಹಾನ್ ಸುಧಾರಣೆ ಇದೆ. ಬಾಹ್ಯ ಸಂಹಾರವು ನೈಜ ನಿರ್ಮಾಣದ ನಾಂದಿಯಾಗುತ್ತದೆ. ಕ್ಷೋಭೆ ಮತ್ತು ಸಂಹಾರದ ಕಾರ್ಯದಲ್ಲಿ ಸಹಜವಾಗಿಯೇ ಸದ್ದು ಗದ್ದಲಗಳಿರುವುದರಿಂದ ನಾವು ಅದರತ್ತ ಬಹಳ ಬೇಗ ಗಮನ ಹರಿಸುತ್ತೇವೆ ಮತ್ತು ಬಹಳ ಹೊತ್ತಿನ ತನಕ ಎವೆಯಿಕ್ಕದೆ ನೋಡುತ್ತಿರುತ್ತೇವೆ. ಇದಕ್ಕೆದುರಾಗಿ ಸುಧಾರಣೆ ಮತ್ತು ನಿರ್ಮಾಣದ ಕಾರ್ಯದಲ್ಲಿ ಸಹಜವಾಗಿಯೇ ಶಾಂತಿ ಮತ್ತು ಮೌನವಿರುವುದರಿಂದ ಆ ಕಡೆಗೆ ದೃಷ್ಟಿಯೇ ಹರಿಯು ವುದಿಲ್ಲ. ಒಂದು ಮನೆಯು ನಿರ್ಮಾಣವಾಗುತ್ತಿರುವಾಗ ಯಾವ ಸದ್ದು-ಗದ್ದಲವೂ ಇರುವುದಿಲ್ಲ. ಆದರೆ ಅದು ಕೆಡವಿ ಬೀಳುವಾಗ ಅದರ ಸ್ಫೋಟಕ್ಕೆ ಊರಿಗೆ ಊರೇ ಬೆಚ್ಚಿ ಬೀಳುತ್ತದೆ. ಇನ್ನೊಂದೆಡೆ ಮನುಷ್ಯ ಪ್ರಕೃತಿಯೂ ಪ್ರಿಯಕರ ವಿಷಯಗಳಿಗಿಂತ ಅಪ್ರಿಯ ವಿಷಯಗಳಿಂದ ಹೆಚ್ಚು ಪ್ರಭಾವಿತವಾಗುತ್ತದೆ. ಸುಖಕ್ಕಿಂತ ದುಃಖದಿಂದ ಹೆಚ್ಚು ಪ್ರಭಾವಿತವಾಗುತ್ತದೆ. ಹತ್ತು ವಿಷಯಗಳು ಸಂತೋಷ ಉಂಟು ಮಾಡುವಂತಹದಿದ್ದು ಕೇವಲ ಒಂದು ದುಃಖದ ವಿಷಯವಿದ್ದರೆ ಆ ಒಂದು ಮಾತೇ ಅವನ ಮನಸ್ಸನ್ನು ಆವರಿಸುತ್ತದೆ ಮತ್ತು ಅವನು ಆ ಹತ್ತು ವಿಷಯಗಳನ್ನು ಮರೆತೇ ಬಿಡುತ್ತಾನೆ. ಈ ಎರಡು ವಾಸ್ತವಿಕತೆಗಳ ಸಹಜ ಪರಿಣಾಮವಾಗಿ ದೂರದೃಷ್ಟಿಯಿಲ್ಲದ ಮನುಷ್ಯನು ವಿಶ್ವದ ಘಟನಾವಳಿಗಳ ನೈಜ ನೆಲೆಯನ್ನು ಅರಿಯುವುದಿಲ್ಲ. ಬಾಹ್ಯ ಗಲಭೆ-ಗೊಂದಲ ಮತ್ತು ಸಂಹಾರ ಕಾರ್ಯವನ್ನಷ್ಟೆ ಅವನು ಕಾಣುತ್ತಾನೆ. ಆದರೆ ಅದರ ಹಿಂದಿರುವ ಸುಧಾರಣಾತ್ಮಕ

ಉದ್ದೇಶಗಳು ಮತ್ತು ಉನ್ನತ ಜಾಣ್ಮೆಯ ಕಡೆಗೆ ಅವನ ದೃಷ್ಟಿ ಹರಿಯುವುದಿಲ್ಲ. ಅನ್ಯಥಾ ಈ ಘಟನಾವಳಿಗಳ ಹಿಂದಿರುವ ಸುಧಾರಣೆ ಮತ್ತು ನಿರ್ಮಾಣಾತ್ಮಕ ವಿಷಯಗಳನ್ನು ದರ್ಶಿಸದಿರಲಾರ. ಆದ್ದರಿಂದ ಈ ಘಟನೆಗಳ ಹಿಂದೆ ಇರುವ ಅಲ್ಲಾಹನ ಗುಣವೂ ಸೌಂದರ್ಯಪೂರ್ಣ ಮತ್ತು ಒಳ್ಳೆಯ ಗುಣವೇ ಆಗಿದೆ.

4. ನಾಲ್ಕನೆಯದಾಗಿ ಈ ವಿಭಿನ್ನ ಗುಣಗಳ ಕ್ರಿಯೆ ಮತ್ತು ಪರಿಣಾಮಗಳಲ್ಲಿ ಪೂರ್ಣ ಸಾಮರಸ್ಯವಿದೆ. ಆ ಪೈಕಿ ಯಾವ ಗುಣವೂ ಇತರ ಗುಣಗಳ ಬೇಡಿಕೆಗಳನ್ನು ಅಲ್ಲಗಳೆಯುವ ರೂಪದಲ್ಲಿ ಕಾರ್ಯವೆಸಗುವುದಿಲ್ಲ. ಬದಲಾಗಿ ಪ್ರತಿಯೊಂದು ಗುಣಕ್ಕೆ ತನ್ನದೇ ಆದ ಕಾರ್ಯಕ್ಷೇತ್ರವಿದೆ. ಅದು ಒಂದು ಸಂತುಲಿತ ಸೀಮೆಯ ಒಳಗೇ ಇರುತ್ತದೆ. ಅತಿರೇಕವಾಗುವ ಮತ್ತು ತೂಕ ತಪ್ಪುವ ಚಿಹ್ನೆ ಗೋಚರಿಸುತ್ತಲೇ ನಿಂತು ಬಿಡುತ್ತದೆ. ಉದಾಹರಣೆಗೆ ಅಲ್ಲಾಹನ ಒಂದು ಗುಣ 'ದಯೆ'ಯಾಗಿದೆ. ಆದರೆ ಆತನು ಪರಮ ದಯಾಮಯನೂ ಕರುಣಾನಿಧಿಯೂ ಆಗಿರುವುದರಿಂದ ಸತ್ಕರ್ಮಿಗಳೂ ದುಷ್ಕರ್ಮಿಗಳೂ ಆತನ ಕ್ಷಮೆಗೆ ಏಕಪ್ರಕಾರ ಪಾತ್ರರಾಗುವರೆಂದೂ ಆತನು ತನ್ನ ಧಿಕ್ಕಾರಿಗಳಿಗೆ ಶಿಕ್ಷೆ ನೀಡಲಾರನೆಂದೂ ಇದರರ್ಥವಲ್ಲ. ಒಂದು ವೇಳೆ ಹಾಗಾದರೆ ಆತನನ್ನು ಆದಿಲ್ (ನ್ಯಾಯ ನಿಷ್ಠ), ಹಕೀಮ್ (ಯುಕ್ತಿಜ್ಞ) ಮತ್ತು ಶಕೂರ್ (ಗುಣಗ್ರಾಹಿ) ಎಂದು ಹೇಳಲು ಸಾಧ್ಯವಿಲ್ಲ. ಇದೇ ರೀತಿ ಆತನ ಗುಣವು "ಮುತ್‌ಲಕುಲ್ ಮಶೀಯತ್" ಆಗಿದೆ. ಅರ್ಥಾತ್ ಅವನು ತಾನು ಬಯಸಿದ್ದನ್ನು ಮಾಡುತ್ತಾನೆ. ಅವನು ಬಯಸಿದ್ದು ಮಾತ್ರ ಸಂಭವಿಸುತ್ತದೆ. ಆದರೆ ಇದರರ್ಥ ಮನುಷ್ಯನಿಗೆ ಇಚ್ಛಾಸ್ವಾತಂತ್ರ್ಯ ಮತ್ತು ಕರ್ಮ ಸ್ವಾತಂತ್ರ್ಯ ಇಲ್ಲವೆಂದು ಖಂಡಿತ ಅಲ್ಲ. ಅಲ್ಲಾಹನು ತಾನು ಬಯಸಿದಾಗ ತಾನು ಬಯಸಿದವನಿಗೆ ಯಾವುದೇ ಕಾರಣವಿಲ್ಲದೆ ಅದೂ ಯಾವುದೇ ಅರ್ಹತೆಯನ್ನು ಪರಿಗಣಿಸದೆ ಸನ್ಮಾರ್ಗದರ್ಶನ ಮಾಡುತ್ತಾನೆಂದೂ, ಸಜ್ಜನನಾಗಿ ಮಾಡುತ್ತಾನೆಂದೂ ತಾನು ಬಯಸಿದವನನ್ನು ದುರ್ಮಾರ್ಗ-ದುಷ್ಕರ್ಮಗಳ ಪಾತಾಳಕ್ಕೆ ನೂಕಿ ಬಿಡುವನೆಂದೂ ಹಾಗೆಯೇ ತಾನು ಬಯಸಿದವನನ್ನು ಸ್ವರ್ಗಕ್ಕೆ ಕಳುಹಿಸಿ, ತಾನು ಬಯಸಿದವನನ್ನು ಇಹಲೋಕದಲ್ಲಿ ಅವರ ಗುಣ-ದೋಷಗಳನ್ನು ಪರಿಗಣಿಸದೆ ನರಕಕ್ಕೆ ತಳ್ಳಿ ಬಿಡುವನೆಂದೂ ಖಂಡಿತ ಅಲ್ಲ. ಏಕೆಂದರೆ ಹೀಗಾದರೆ ಅವನು ಯುಕ್ತಿವಂತ, ನ್ಯಾಯನಿಷ್ಠ ಮತ್ತು ಸತ್ಯಕ್ಕೆ ಮಾನ್ಯತೆ ನೀಡುವವನೆಂದು ಹೇಳುವುದರಲ್ಲಿ ಯಾವ ಅರ್ಥವೂ ಇರಲಾರದು. ಆದುದರಿಂದಲೇ ಈ ವಾಸ್ತವಿಕತೆಯನ್ನು ಮನದಟ್ಟು ಮಾಡಲು ಪವಿತ್ರ ಕುರ್‌ಆನ್, "ಅಲ್ಲಾಹನು ತಾನಿಚ್ಛಿಸುವವನಿಗೆ ಕ್ಷಮಾದಾನ ಮಾಡುವನು" ಎಂದು ಹೇಳಿದ ಬಳಿಕ "ಅಲ್ಲಾಹನು ಸಕಲವನ್ನೂ ಬಲ್ಲವನೂ ಧೀಮಂತನೂ ಆಗಿರುತ್ತಾನೆ." **(9:15)** ಎಂದು ಸಾರಿ ಹೇಳುವುದು ಅಗತ್ಯವೆಂದು ಪರಿಗಣಿಸಿತು. ಅಲ್ಲಾಹನ ಇಚ್ಛೆಯು ಅಂಧವಾಗಿ ತೀರ್ಮಾನಗಳನ್ನು ಕೈಗೊಳ್ಳುತ್ತದೆಯೆಂದು ತಿಳಿದುಕೊಳ್ಳಬಾರದೆಂಬುದೇ ಇದರ ಉದ್ದೇಶ. ಅವನು ಮಾಡುವ ತೀರ್ಮಾನಗಳೆಲ್ಲವೂ ಪೂರ್ಣ ಜ್ಞಾನ,

ಪೂರ್ಣ ಸತ್ಯ ಮತ್ತು ಪೂರ್ಣ ನ್ಯಾಯದೊಂದಿಗೆ ಆಗಿರುತ್ತವೆ. ಅದರಲ್ಲಿ ಯುಕ್ತಿ ಮತ್ತು ಜಾಣ್ಮೆಯ ಯಾವ ಬೇಡಿಕೆಯನ್ನೂ ಕಡೆಗಣಿಸಲಾಗುವುದಿಲ್ಲ.

5. ಐದನೆಯದಾಗಿ ದೇವನ ಗುಣಗಳನ್ನು ವಿವರಿಸಲು ಪವಿತ್ರ ಕುರ್‌ಆನ್ ಬಳಸಿರುವ ಪದಗಳಲ್ಲಿ ಹೆಚ್ಚಿನವು ಮನುಷ್ಯರಿಗೆ ಬಳಸಲ್ಪಡುವ ಪದಗಳೇ ಆಗಿವೆ. ಉದಾ: ಅಲೀಮ್ (ಸರ್ವಜ್ಞ), ಖಬೀರ್ (ಬೋಧಪೂರ್ಣ), ಸಮೀಅ್ (ಸರ್ವಶ್ರುತ), ಬಶೀರ್ (ಸರ್ವವೀಕ್ಷಕ) ಅಝೀಝ್ (ಅಜೇಯ), ಶಕೂರ್ (ಗುಣಗ್ರಾಹಿ), ರಊಫ್ (ಉದಾರಿ), ರಹೀಮ್ (ಕರುಣಾನಿಧಿ), ಹಕೀಮ್ (ಯುಕ್ತಿವಂತ), ಆದಿಲ್ (ನ್ಯಾಯನಿಷ್ಠ), ಮುತಕಲ್ಲಿಮ್(ವಕ್ತಾರ ಸಂಭಾಷಣೆ ಮಾಡುವವ) ಇತ್ಯಾದಿ. ಆದರೆ ಇದು ಕೇವಲ ಪದಗಳ ಸಮಾನತೆ ಮಾತ್ರವಾಗಿದ್ದು ವಾಸ್ತವಿಕತೆಯ ಸಮಾನತೆ ಅಲ್ಲ. ಅರ್ಥಾತ್ ಈ ಪದಗಳು ಮನುಷ್ಯನಿಗೆ ಬಳಸಲ್ಪಡುವಾಗ ಅವುಗಳ ವಾಸ್ತವಿಕತೆ ಮತ್ತು ಅರ್ಥ ಬೇರೆಯೇ ಆಗಿರುತ್ತದೆ ಮತ್ತು ಅಲ್ಲಾಹನಿಗೆ ಬಳಸಲ್ಪಡುವಾಗ ಬೇರೆಯೇ ಆಗಿರುತ್ತದೆ. ಮೊದಲನೆಯ ರೂಪದಲ್ಲಿ ಅವುಗಳ ತಾತ್ಪರ್ಯವು ಬಹಳ ಸೀಮಿತ ಮತ್ತು ತುಚ್ಛವಾಗಿರುತ್ತದೆ. ಎರಡನೆಯ ರೂಪದಲ್ಲಿ ಅತ್ಯಂತ ನಿಸ್ಸೀಮ ಮತ್ತು ಉತ್ಕೃಷ್ಟವಾಗಿರುತ್ತದೆ. ಉದಾಹರಣೆಗೆ ಇಲ್ಮ್ (ಜ್ಞಾನ) ಎಂಬ ಗುಣವನ್ನೇ ತೆಗೆದುಕೊಳ್ಳಿ. ಅಲ್ಲಾಹನೂ ಅಲೀಮ್ (ಜ್ಞಾನಿ) ಆಗಿದ್ದಾನೆ ಮನುಷ್ಯನೂ ಜ್ಞಾನಿಯಾಗಿದ್ದಾನೆ. ಆದರೆ ಅಲ್ಲಾಹನು 'ಅಲೀಮ್' ಆಗಿರುವುದರ ತಾತ್ಪರ್ಯ ಈ ರೀತಿ ಇದೆ: 1) ಎಲ್ಲ ಕಾಲಗಳ, ಎಲ್ಲ ಸ್ಥಳಗಳ ಮತ್ತು ಎಲ್ಲ ವ್ಯವಹಾರಗಳ ಬಗ್ಗೆ ಎಲ್ಲ ವಿಷಯಗಳನ್ನೂ ಆತನು ತಿಳಿದಿರುವನು. 2) ಅವನ ಈ ತಿಳುವಳಿಕೆಯು ಎಂದೂ ತಪ್ಪಾಗುವುದಿಲ್ಲ ಮತ್ತು ವಸ್ತುಸ್ಥಿತಿಗೆ ವಿರುದ್ಧವಾಗುವುದಿಲ್ಲ. 3) ಈ ಜ್ಞಾನವು ಅವನ ಸ್ವಂತ ಗುಣವಾಗಿದೆ. ಅದು ಯಾರಿಂದಲೂ ನೀಡಲ್ಪಟ್ಟ ಅಥವಾ ಎಲ್ಲಿಂದಲೂ ಗಳಿಸಿದ ಗುಣವಲ್ಲ. 4) ಅದು ಅನಾದಿ ಮತ್ತು ಅನಂತ ಗುಣವಾಗಿದೆ. ಆಕಸ್ಮಿಕ ಮತ್ತು ನಶ್ವರವಲ್ಲ. ಇದಕ್ಕೆ ವಿರುದ್ಧವಾಗಿ ಮನುಷ್ಯನು 'ಅಲೀಮ್' ಆಗಿರುವುದರ ತಾತ್ಪರ್ಯವಿಷ್ಟೆ 1) ಆತನು ಅತ್ಯಂತ ಸೀಮಿತ ಅರ್ಥದಲ್ಲಿ ಕೆಲವೇ ವಿಷಯಗಳನ್ನು ತಿಳಿದಿರುವನು ಭವಿಷ್ಯದ ಬಗೆಗಂತೂ ಅವನ ತಿಳುವಳಿಕೆ ಶೂನ್ಯಕ್ಕೆ ಸಮವಾಗಿದೆ. ಭೂತಕಾಲದ ಬಗ್ಗೆಯೂ ಅವನ ತಿಳುವಳಿಕೆಯು ಹೆಚ್ಚು ಹಿಂದೆ ಹೋಗಲಾರದು. ಮಾತ್ರವಲ್ಲ ವರ್ತಮಾನದ ಬಗ್ಗೆಯೂ ಅವನ ಜ್ಞಾನವು ಪರಿಪೂರ್ಣವಾಗಿರುವುದಿಲ್ಲ. 2) ಆತನ ತಿಳುವಳಿಕೆಯಲ್ಲಿರುವ ವಿಷಯಗಳು ಕೂಡಾ ಸರಿಯೂ ವಸ್ತುಸ್ಥಿತಿಗೆ ಅನುರೂಪವೂ ಆಗಿರಬೇಕೆಂದೇನಿಲ್ಲ. 3) ಅವನ ಈ ಗುಣವು ಸ್ವಂತದ್ದಾಗಿರದೆ ಅಲ್ಲಾಹನು ದಯಪಾಲಿಸಿದ್ದಾಗಿದೆ. ಅದು ಪ್ರತಿಯೊಬ್ಬನಿಗೂ ಅಲ್ಲಾಹನು ನೀಡಿದಷ್ಟೇ ಲಭಿಸುತ್ತದೆ. 4) ಅವನು ಹುಟ್ಟಿದವನೂ ಸಾಯುವವನೂ ಆಗಿರುವಂತೆಯೇ ಅವನ ಈ ಗುಣವು ಆಕಸ್ಮಿಕವೂ ನಶ್ವರವೂ ಆಗಿದೆ. ಒಟ್ಟಿನಲ್ಲಿ ಎಲ್ಲ

ಮುದ್ರಗಳಿಗೂ ಮಳೆಯ ಒಂದು ಹನಿಗೂ ಇರುವುದಕ್ಕಿಂತ ಅಧಿಕ ವ್ಯತ್ಯಾಸ ಅಲ್ಲಾಹನು ಜ್ಞಾನಿಯಾಗಿರುವುದಕ್ಕೂ ಮನುಷ್ಯನು ಜ್ಞಾನಿಯಾಗಿರುವುದಕ್ಕೂ ಇದೆ. ಇದುವೇ ಎಲ್ಲ ಗುಣಗಳ ಅವಸ್ಥೆಯಾಗಿದೆ.

ವಸ್ತುಸ್ಥಿತಿಯಲ್ಲಿ ಇಷ್ಟು ದೊಡ್ಡ ಅಂತರವಿರುವಾಗ ಪವಿತ್ರ ಕುರ್‌ಆನ್ ಅಲ್ಲಾಹನ ಗುಣಗಳನ್ನು ಪ್ರಕಟಿಸಲು ಇಂತಹ ಪದಗಳನ್ನು ಬಳಸಿದ್ದಾದರೂ ಏಕೆ ಎಂಬ ಆಕ್ಷೇಪವು ಒಂದು ಆಕ್ಷೇಪವೇ ಅಲ್ಲ. ಏಕೆಂದರೆ ಅದರ ಹೊರತು ಇನ್ನೇನು ತಾನೇ ಮಾಡಬೇಕಿತ್ತು? ಪವಿತ್ರ ಕುರ್‌ಆನ್ ಮಾನವರಾದ ನಮ್ಮೆಲ್ಲರ ಸನ್ಮಾರ್ಗದರ್ಶನಕ್ಕಾಗಿ ಅವತರಣಗೊಂಡಿದೆ ಎಂಬುದು ಒಂದು ಅಂಗೀಕೃತ ವಿಷಯ. ಪರೋಕ್ಷದ ವಾಸ್ತವಿಕತೆಗಳನ್ನು (ಅಲ್ಲಾಹನ ಈ ಗುಣಗಳು ಅವುಗಳ ಒಂದು ಪ್ರಮುಖ ಭಾಗವಾಗಿರುತ್ತಾ) ನಮಗೆ ತಿಳಿಸದೆ ಈ ಉದ್ದೇಶವು ಪೂರ್ತಿಯಾಗಲಾರದೆಂಬುದೂ ಅಷ್ಟೇ ಅಂಗೀಕೃತ ಸತ್ಯ. ಏಕೆಂದರೆ ಈ ವಾಸ್ತವಿಕತೆಗಳೇ ಧರ್ಮ ಮತ್ತು ಸನ್ಮಾರ್ಗದರ್ಶನದ ನೈಜ ಬುನಾದಿಗಳಾಗಿವೆ. ಈ ವಾಸ್ತವಿಕತೆಗಳ ಜ್ಞಾನ ನಮಗೆ ನೀಡುವುದಾದರೂ ಹೇಗೆ ಎಂಬುದೇ ಈಗ ನಮ್ಮ ಮುಂದಿರುವ ಪ್ರಶ್ನೆ. ಅವುಗಳನ್ನು ನಮ್ಮ (ಮನುಷ್ಯರ) ಭಾಷೆಯಲ್ಲಿ ಮತ್ತು ನಮ್ಮ ಪದಗಳ ಮೂಲಕವೇ ತಿಳಿಸಬೇಕಿತ್ತಲ್ಲವೇ? ಹೌದು. ಅದರ ಹೊರತು ಬೇರೆ ಮಾರ್ಗವೇ ಇರಲಿಲ್ಲ. ಆದ್ದರಿಂದ ಇತರ ಪರೋಕ್ಷ ವಿಷಯಗಳಂತೆ ದೇವ ಗುಣಗಳನ್ನು ತಿಳಿಸಲು ಮತ್ತು ಅವುಗಳ ಶಿಕ್ಷಣ ನೀಡಲು ಕೂಡಾ ನಮಗೆ ಚಿರಪರಿಚಿತವಾಗಿರುವ ಪದಗಳನ್ನೇ ಬಳಸಲಾಯಿತು. ಈ ರೀತಿಯ ಸಮಾನ ಪದಗಳನ್ನು ಬಳಸುವುದರಿಂದ ಅಲ್ಪಮತಿಗಳಾದ ಜನರು ದೇವಗುಣಗಳನ್ನು ಮನುಷ್ಯ ಗುಣಗಳಂತೆ ಭಾವಿಸುವ ಸಾಧ್ಯತೆ ಮಾತ್ರ ಇನ್ನೂ ಉಳಿದಿರುತ್ತದೆ. ಇದನ್ನು ನಿವಾರಿಸಲು ಪವಿತ್ರ ಕುರ್‌ಆನಿನಲ್ಲಿ ತಾತ್ವಿಕವಾಗಿಯೂ ವಿಸ್ತಾರವಾಗಿಯೂ ವ್ಯವಸ್ಥೆ ಮಾಡಲಾಗಿದೆ. ತಾತ್ವಿಕವಾಗಿ ಈ ರೀತಿ ಹೇಳಲಾಗಿದೆ:

"ಯಾವ ವಸ್ತುವೂ ಅಲ್ಲಾಹನಿಗೆ ಹೋಲುವಂತಿಲ್ಲ." (ಅಶ್ಶೂರಾ)

"ಭೂಮಿ ಆಕಾಶಗಳಲ್ಲೆಲ್ಲಾ ಅವನ ಮಹಿಮೆಯೇ ಅತ್ಯುನ್ನತವಾಗಿದೆ." (ಅರ್ರೂಮ್)

ಸವಿಸ್ತಾರವಾಗಿ ಅಲ್ಲಾಹನ ವಿಭಿನ್ನ ಗುಣಗಳನ್ನು ವಿವರಿಸುವ ಕಡೆಗಳಲ್ಲಿ ಯಾವುದೇ ತಪ್ಪು ತಿಳುವಳಿಕೆಗೆ ಎಡೆಯಿಲ್ಲದ ರೀತಿಯಲ್ಲಿ ಸ್ಪಷ್ಟೀಕರಣಗಳನ್ನು ನೀಡಲಾಗಿದೆ. ಉದಾಹರಣೆಗೆ ಜ್ಞಾನವೆಂಬ ಗುಣವನ್ನೇ ತೆಗೆದುಕೊಳ್ಳೋಣ. ಪವಿತ್ರ ಕುರ್‌ಆನ್ ಅಲ್ಲಾಹನನ್ನು 'ಅಲೀಮ್' ಎಂದು ಹೇಳಿರುವ ಕಡೆಗಳಲ್ಲೆಲ್ಲಾ ಈ 'ಜ್ಞಾನ'ದ ಸ್ಪಷ್ಟೀಕರಣವನ್ನು ಈ ರೀತಿ ನೀಡಲಾಗಿದೆ:

"ಅವನು ಎಲ್ಲ ವಿಷಯಗಳನ್ನೂ ಬಲ್ಲವನಾಗಿದ್ದಾನೆ." (ಅಲ್ ಬಕರಃ)

"ಅವನು ಹೃದಯಗಳ ರಹಸ್ಯವನ್ನೂ ಬಲ್ಲವನಾಗಿದ್ದಾನೆ." (ಆಲಿ ಇಮ್ರಾನ್

"ಅವನು ಪ್ರತ್ಯಕ್ಷ ಮತ್ತು ಪರೋಕ್ಷವಾದ ವಿಷಯಗಳನ್ನು ತಿಳಿದವನಾಗಿದ್ದಾನೆ."
(ಅಲ್ ಹಶ್ರ್

"ಆತನು ಸಂಪೂರ್ಣ ವಿಶ್ವದ ರಹಸ್ಯವಾದ ವಾಸ್ತವಿಕತೆಗಳನ್ನು ಚೆನ್ನಾಗಿ ಅರಿತಿರುವನು.
(ಅಲ್ ಹುಜುರಾತ್

ಇದೇ ರೀತಿ ಇತರ ಗುಣಗಳ ಬಗ್ಗೆಯೂ ಅಗತ್ಯವಿರುವ ಸ್ಪಷ್ಟೀಕರಣವನ ನೀಡಲಾಗಿದೆ.

6. ಪವಿತ್ರ ಕುರ್‌ಆನಿನಲ್ಲಿ ಅಲ್ಲಾಹನ ಅಸ್ತಿತ್ವ ಮತ್ತು ಗುಣಗಳನ್ನು ಸಾಮಾ ಮನುಷ್ಯ ಬುದ್ಧಿಯನ್ನು ಮುಂದಿರಿಸಿಕೊಂಡು ಪರಿಚಯಿಸಲಾಗಿದೆಯೇ ವಿನಾ ಯಾವುದ ವಿಶಿಷ್ಟ ವರ್ಗದ ಬುದ್ಧಿಯನ್ನು ಮುಂದಿರಿಸಿಕೊಂಡು ಪರಿಚಯಿಸಲಾಗಿಲ್ಲ. ಸಾಮಾ ಮನುಷ್ಯ ಬುದ್ಧಿಗೆ ನಿಲುಕದ ಎಲ್ಲ ರೀತಿಯ ಕೂದಲು ಸೀಳುವಿಕೆಗಳಿಂದ ಪವಿ ಕುರ್‌ಆನ್ ಸಂಪೂರ್ಣ ಮುಕ್ತವಾಗಿದೆ. ಬೇರೆ ಮಾತಿನಲ್ಲಿ ಹೇಳಬೇಕಾದರೆ ಅದು ಈ ವಿಷಯದಲ್ಲಿ ಸಾಮಾನ್ಯ ಜನರು ಮತ್ತು ವರಿಷ್ಠರು ಎಂಬ ಭೇದವನ್ನೇ ಮಾಡಲಿಲ್ಲ ವರಿಷ್ಠರಿಗೆ ಒಂದು ರೀತಿಯ ವಿವರಣೆ ಮತ್ತು ಸಾಮಾನ್ಯ ಜನರಿಗೆ ಇನ್ನೊಂದು ರೀತಿಯ ವಿವರಣೆಯು ಪವಿತ್ರ ಕುರ್‌ಆನಿನಲ್ಲಿ ಸಿಗುವುದಿಲ್ಲ. ವರಿಷ್ಠರಿಗೆ ತತ್ವಜ್ಞಾನದ ಸಿದ್ಧಾಂತಗ ದರ್ಶನ ಮತ್ತು ಸಾಮಾನ್ಯ ಜನರಿಗೆ ಪಂಚೇದ್ರಿಯಗಳಿಗೆ ನಿಲುಕುವ ಉದಾಹರಣೆಗ ಮೂಲಕ ಬೋಧನೆ ಎಂಬ ತಾರತಮ್ಯ ಪವಿತ್ರ ಕುರ್‌ಆನಿನಲ್ಲಿ ಎಲ್ಲೂ ಕಾಣಸಿಗುವುದಿಲ್ಲ ಅದು ಎಲ್ಲ ಮನುಷ್ಯರ ಮುಂದೆ ಅಲ್ಲಾಹನ ಅಸ್ತಿತ್ವ ಮತ್ತು ಗುಣಗಳ ಒಂದೇ ತರ ಪರಿಚಯವನ್ನು ಇರಿಸುತ್ತದೆ. ಅದು ಯಾವ ಮಹದುದ್ದೇಶಕ್ಕಾಗಿ ಹಾಗೆ ಮಾಡಿ ಎಂಬುದು ದೈವಿಕ ಗ್ರಂಥಗಳು ಯಾವ ಉದ್ದೇಶಕ್ಕಾಗಿ ಅವತೀರ್ಣಗೊಳ್ಳುತ್ತವೆ? ಪವಿ ಕುರ್‌ಆನ್ ಮನುಷ್ಯ ಜೀವನದಲ್ಲಿ ಯಾವ ರೀತಿಯ ಕ್ರಾಂತಿ ಉಂಟು ಮಾಡಲಿಕ್ಕಾ ಅವತೀರ್ಣಗೊಂಡಿದೆ ಎಂಬುದನ್ನು ಅರಿತವನಿಗೆ ಅಜ್ಞಾತವಲ್ಲ.

ಪವಿತ್ರ ಕುರ್‌ಆನ್ ತನ್ನ ಅತ್ಯಂತ ಮಹತ್ವದ ಮತ್ತು ಮೂಲಭೂತ ಪಾರಿಭಾಷಿಕವಾ 'ಅಲ್ಲಾಹ್' ಎಂಬ ಪದವನ್ನು ಬಳಸುವಾಗ ಅದರ ತಾತ್ಪರ್ಯವೇನಾಗಿರುತ್ತದೆಂಬುದ ಮೇಲಿನ ಚರ್ಚೆಯಿಂದ ವ್ಯಕ್ತವಾಯಿತು. ಬೇರೆ ಧರ್ಮ ಅಥವಾ ಧಾರ್ಮಿಕ ಪಾರಿಭಾಷಿ ಈ ತಾತ್ಪರ್ಯವನ್ನು ಸರಿಯಾಗಿ ಪ್ರತಿನಿಧಿಸಬಲ್ಲುದೋ ಇಲ್ಲವೋ ಎಂಬುದು ನಮ ತಿಳಿದಿಲ್ಲ. ಒಂದು ವೇಳೆ ಇದ್ದರೆ 'ಅಲ್ಲಾಹ್' ಎಂಬ ಪದವನ್ನು ಆ ಪದದ ಮೂ ಅನುವಾದಿಸಬಹುದು. ಇಲ್ಲವಾದರೆ ಹಾಗೆ ಮಾಡುವುದು ಸರಿಯಲ್ಲ.

## ಬಿ ಮತ್ತು ರಸೂಲ್

'ನಬಿ' ಮತ್ತು 'ರಸೂಲ್' ಎಂಬುದು ಕುರ್‌ಆನಿನ ದ್ವಿತೀಯ ಅತ್ಯಂತ ಪ್ರಮುಖ ಾರಿಭಾಷಿಕ. ಅಲ್ಲಾಹನ ವತಿಯಿಂದ ಮಾರ್ಗದರ್ಶನವು ಅವತೀರ್ಣವಾಗುವ ವ್ಯಕ್ತಿಯನ್ನು ಬಿ' ಮತ್ತು 'ರಸೂಲ್' ಎನ್ನಲಾಗುತ್ತದೆ. ಆ ಮಾರ್ಗದರ್ಶನವು ಅವರಿಗೆ ಸ್ವಯಂ ದರಂತೆ ಕಾರ್ಯವೆಸಗುವ ಮತ್ತು ಅಲ್ಲಾಹನ ಇತರ ದಾಸರಿಗೆ ಅದನ್ನು ತಲುಪಿಸುವ ಲುವಾಗಿ ಅವತೀರ್ಣವಾಗುತ್ತದೆ.

'ನಬಿ' ಅರಬಿ ಭಾಷೆಯಲ್ಲಿ 'ಎತ್ತರದ ಭೂಮಿ'ಗೆ ಮತ್ತು 'ಮಾರ್ಗದ ಸಂಕೇತ'ಕ್ಕೆ ೇಳುತ್ತಾರೆ. 'ರಸೂಲ್' ಎಂಬ ಪದದ ಅರ್ಥವು 'ಕಳುಹಿಸಲ್ಪಟ್ಟ' ಎಂದಾಗಿದೆ. ಅದು ಂದೇಶವೂ ಆಗಿರಬಹುದು. ಸಂದೇಶವಾಹಕರೂ ಆಗಬಹುದು. ಆದುದರಿಂದ ಅಲ್ಲಾಹನ ಾರ್ಗದರ್ಶನ ಅವತೀರ್ಣವಾಗುವ ವ್ಯಕ್ತಿಯನ್ನು ಮಾನವರಲ್ಲಿ ಅವರ ಉನ್ನತ ಸ್ಥಾನದ ರಣ ಹಾಗೂ ಅವರ ಪಾಲಿಗೆ ಯಶಸ್ಸು ಮತ್ತು ಮೋಕ್ಷದ ಸನ್ಮಾರ್ಗವನ್ನು ತೋರಿಸುವ ಂಕೇತವಾದ ಕಾರಣ 'ನಬಿ' ಎನ್ನಲಾಗಿದೆ. ಲೋಕದ ಅಧಿಪತಿಯ ಕಡೆಯಿಂದ ಅವನ ್ರಜೆಗಳಿಗೆ ಸಂದೇಶವಾಹಕ ಮತ್ತು ಅವರಿಗೆ ಆತನ ಆಜ್ಞೆಗಳನ್ನು ತಲುಪಿಸುವ ್ರವಾದಿಯಾಗಿರುವುದರಿಂದ ಅವರನ್ನು 'ರಸೂಲ್' ಎನ್ನಲಾಗಿದೆ.

ನಬಿ ಮತ್ತು ರಸೂಲ್‌ರ ವ್ಯಕ್ತಿತ್ವದ ಬಗ್ಗೆ ಪವಿತ್ರ ಕುರ್‌ಆನ್ ಈ ಕೆಳಗಿನ ಸ್ಪಷ್ಟೀಕರಣಗಳನ್ನು ನೀಡಿದೆ:

1) ಅವರು ಮನುಷ್ಯರು. ಕೇವಲ ಮನುಷ್ಯರಾಗಿರುತ್ತಾರೆ. ನಮ್ಮ ನಿಮ್ಮಂತಹ ಾನವರು. ಆದುದರಿಂದ ಯಾವುದೇ ಅಪವಾದವಿಲ್ಲದೆ ಎಲ್ಲ ಪ್ರವಾದಿಗಳೂ ತಮ್ಮ ಗ್ಗೆ

"ನಿಜಕ್ಕೂ ನಾವು ನಿಮ್ಮಂತಹ ಮನುಷ್ಯರೇ ವಿನಾ ಇನ್ನೇನೂ ಅಲ್ಲ." (14:11) ಂದು ಸ್ಪಷ್ಟ ಶಬ್ದಗಳಲ್ಲಿ ಘೋಷಿಸುತ್ತಿದ್ದರು.

ಮನುಷ್ಯರ ಪೈಕಿ ಕೇವಲ ಪುರುಷರನ್ನೇ ಪ್ರವಾದಿಯಾಗಿ ಮಾಡಲಾಗುತ್ತಿತ್ತು. ್ರೀಯರ ಪೈಕಿ ಯಾರನ್ನೂ ಎಂದೂ ಈ ಕೆಲಸಕ್ಕೆ ಆರಿಸಲಾಗಲಿಲ್ಲ.

"ಓ ಪೈಗಂಬರರೇ, ನಿಮಗಿಂತ ಮುಂಚೆ ನಾವು ಕಳುಹಿಸಿದ್ದ ಪ್ರವಾದಿಗಳೆಲ್ಲರೂ ುರುಷರೇ ಆಗಿದ್ದರು." (12:109)

ಪ್ರವಾದಿಗಳು ಮನುಷ್ಯರಾಗಿದ್ದುದರಿಂದ ಇತರ ಮನುಷ್ಯರಂತೆ ಅವರಿಗೂ ಭೌತಿಕ ಅವಶ್ಯಕತೆಗಳಿದ್ದುವು. ಅದನ್ನೂ ಈ ರೀತಿ ಸ್ಪಷ್ಟಪಡಿಸಲಾಗಿದೆ:

"ಪೈಗಂಬರರೇ, ನಿಮಗಿಂತ ಮುಂಚೆ ನಾವು ರವಾನಿಸಿದ್ದ ಸಂದೇಶವಾಹಕರೆಲ್ಲರು ಆಹಾರ ಸೇವಿಸುವವರು ಮತ್ತು ಪೇಟೆಗಳಲ್ಲಿ ಸಂಚರಿಸುವವರೇ ಆಗಿದ್ದರು."

(ಪವಿತ್ರ ಕುರ್‌ಆನ್, 25:20

"ನಾವು ಅವರಿಗೆ ಪತ್ನಿಯರನ್ನೂ ಮಕ್ಕಳನ್ನೂ ನೀಡಿದ್ದೆವು."

(ಪವಿತ್ರ ಕುರ್‌ಆನ್,13:38

ಈ ಎಲ್ಲಾ ಸ್ಪಷ್ಟೀಕರಣಗಳ ಬಳಿಕ ಪ್ರವಾದಿಗಳು ಮನುಷ್ಯರಾಗಿದ್ದರೆಂಬುದು ಸೂರ್ಯನ ಬೆಳಕಿನಷ್ಟು ಸ್ಪಷ್ಟವಾಗುತ್ತದೆ. ಆದರೆ ಈ ವಿಷಯದ ಪ್ರಾಮುಖ್ಯತೆಯನ್ನು ಪರಿಗಣಿಸಿ ಅದರ ಬಗ್ಗೆ ಯಾವುದೇ ತಪ್ಪು ವಿಚಾರಧಾರೆಗೆ ಅವಕಾಶವಿಲ್ಲದಂತೆ "ಪ್ರವಾದಿಗಳು ದೇವಚರರಾಗಿರುವುದಿಲ್ಲ"ವೆಂದು ಕೂಡಾ ವ್ಯಕ್ತಗೊಳಿಸಲಾಗಿದೆ.

"ಭೂಮಿಯ ಮೇಲೆ ದೇವಚರರು ಇಷ್ಟಾನುಸಾರ ನಡೆದಾಡುತ್ತಿದ್ದರೆ ನಾವು ಖಂಡಿತವಾಗಿಯೂ ಆಕಾಶದಿಂದ ಒಬ್ಬ ದೇವಚರನನ್ನೇ ಅವರಿಗೆ ಸಂದೇಶವಾಹಕನನ್ನಾಗಿ ಮಾಡಿ ಕಳುಹಿಸುತ್ತಿದ್ದೆವೆಂದು ಅವರೊಡನೆ ಹೇಳಿರಿ."

(ಪವಿತ್ರ ಕುರ್‌ಆನ್, 17:95

ಅಲ್ಲಾಹನು ಅವತಾರ ತಾಳುವುದಿಲ್ಲ. ಮನುಷ್ಯ ರೂಪ ತಾಳಿ ಲೋಕಕ್ಕೆ ಬರುವುದೂ ಇಲ್ಲ. ಆದುದರಿಂದ ಕ್ರೈಸ್ತರ ಒಂದು ತಂಡವು "ಅಲ್ಲಾಹನೇ ಮಸೀಹ್ ಬಿನ್ ಮರ್ಯಮ್ ಆಗಿದ್ದಾನೆ" ಎಂದಾಗ ಪವಿತ್ರ ಕುರ್‌ಆನ್ ಅದನ್ನು ಕುಫ್ರ್ (ಸತ್ಯನಿಷೇಧ) ಎಂದು ಸಾರಿತು.

"ಮರ್ಯಮರ ಪುತ್ರ 'ಮಸೀಹ'ರನ್ನೇ ದೇವನೆನ್ನುವವರು ಖಂಡಿತವಾಗಿಯೂ 'ಸತ್ಯನಿಷೇಧ' ಮಾಡಿದರು." (ಪವಿತ್ರ ಕುರ್‌ಆನ್, 5:17

2) ಅವರು ನಬಿ ಮತ್ತು ರಸೂಲ್ ಆಗಿದ್ದರು. ನಬಿ ಮತ್ತು ರಸೂಲ್ ಆಗುವುದು ಒಂದು ಹುದ್ದೆಯಾಗಿದೆ. ಅದಕ್ಕೆ ಅಲ್ಲಾಹನ ವತಿಯಿಂದ ವಿಶಿಷ್ಟ ವ್ಯಕ್ತಿಗಳನ್ನು ಆರಿಸಿ ನೇಮಿಸಲಾಗುತ್ತದೆ.

"ಅಲ್ಲಾಹನು(ತನ್ನ ಆದೇಶಗಳನ್ನು ರವಾನಿಸಲಿಕ್ಕಾಗಿ) ದೇವಚರರಿಂದಲೂ ಮನುಷ್ಯರಿಂದಲೂ ಸಂದೇಶವಾಹಕರನ್ನು ಆಯ್ದು ಕೊಳ್ಳುತ್ತಾನೆ. ಅವನು ಸರ್ವಶ್ರುತನೂ ಸರ್ವವೀಕ್ಷಕನೂ ಆಗಿರುತ್ತಾನೆ." (ಪವಿತ್ರ ಕುರ್‌ಆನ್, 22:75)

ಈ ವಿಷಯದಲ್ಲಿ ಹಾಗೆ ಆಯ್ಕೆಯಾಗುವ ಮತ್ತು ನೇಮಕಗೊಳ್ಳುವ ವ್ಯಕ್ತಿಗಳ ಇಚ್ಛೆಗೆ ಯಾವ ಪಾತ್ರವೂ ಇರುವುದಿಲ್ಲ. ಅವರ ಪ್ರಯತ್ನಕ್ಕೂ ಯಾವ ಪಾತ್ರವೂ

ಇರುವುದಿಲ್ಲ. ಮನುಷ್ಯನ ಸ್ವಂತ ನಿರ್ಧಾರ ಮತ್ತು ಇಚ್ಛೆ ಹಾಗೂ ಪ್ರಯತ್ನ ಪರಿಶ್ರಮ ಗಳಿಂದ ಇದು ಲಭಿಸುವುದಿಲ್ಲ. ತನ್ನ ಪ್ರವಾದಿಯಾಗಿ ಯಾರನ್ನು ನೇಮಿಸಬೇಕೆಂಬುದನ್ನು ಅಲ್ಲಾಹನೇ ನಿರ್ಧರಿಸುತ್ತಾನೆ.

"ತನ್ನ ಸಂದೇಶವಾಹಕತ್ವದ ಕಾರ್ಯವನ್ನು ಯಾರಿಂದ ಹೇಗೆ ಮಾಡಿಸಬೇಕೆಂಬುದನ್ನು ಅಲ್ಲಾಹನು ಬಹಳ ಚೆನ್ನಾಗಿ ಬಲ್ಲನು." (ಪವಿತ್ರ ಕುರ್‌ಆನ್, 6:124)

ಧ್ಯಾನ, ಚಿಂತನೆ, ತಪಶ್ಚರ್ಯೆಗಳ ಮೂಲಕ ಮನುಷ್ಯನು ಆಧ್ಯಾತ್ಮಿಕವಾಗಿ ಬಹಳ ಉನ್ನತಿಗೆ ಏರಬಹುದು. ತನ್ನಲ್ಲಿ ದೇವಚರರ ಗುಣಗಳ ಛಾಯೆಯನ್ನು ಸೃಷ್ಟಿಸಿಕೊಳ್ಳ ಬಹುದು. ಆದರೆ ಈ ಪರಿಶ್ರಮಗಳ ಬಲದಿಂದ ಅವನು ಪ್ರವಾದಿಯ ಪದವಿಗೆ ಏರುವುದು ಸಾಧ್ಯವಿಲ್ಲ. ತನ್ನ ಈ ಕಠಿಣ ಸಂಯಮಗಳ ಮೂಲಕ ಯಾವನೂ ಪ್ರವಾದಿ ಪೀಠವನ್ನು ಅಲಂಕರಿಸಲಾರ. ಏಕೆಂದರೆ ಈಗಾಗಲೇ ಹೇಳಿದಂತೆ ಪ್ರವಾದಿತ್ವ ಒಂದು ಹುದ್ದೆ ಮತ್ತು ಕರ್ತವ್ಯವಾಗಿದೆ. ಯಾವುದೇ ಹುದ್ದೆ ಸ್ವಪ್ರಯತ್ನದಿಂದ ಸಿಗುವುದಿಲ್ಲ. ಅದು ಆಧಿಪತ್ಯವನ್ನು ಹೊಂದಿದ ಆಡಳಿತಗಾರನ ಫರ್ಮಾನು ಮತ್ತು ನೇಮಕದಿಂದಲೇ ಲಭಿಸುತ್ತದೆ. ಆದುದರಿಂದ ದೇವನ ವತಿಯಿಂದ ನೀಡಲ್ಪಡುವ ಅತಿದೊಡ್ಡ ಹುದ್ದೆಯಾದ ಪ್ರವಾದಿತ್ವವು ವಿಶ್ವ ಮತ್ತು ಮನುಷ್ಯನ ನೈಜ ಅಧಿಪತಿಯ ನೇಮಕಾತಿಯ ಆಜ್ಞೆಯ ಮೇರೆಗೇ ಲಭಿಸುತ್ತದೆ.

3) ಪ್ರವಾದಿಯು ನೀಡುವ ಮಾರ್ಗದರ್ಶನ, ಧರ್ಮ ಮತ್ತು ಧರ್ಮಶಾಸ್ತ್ರವೆಂಬ ನೆಲೆಯಲ್ಲಿ ಯಾವುದೇ ವಿಷಯದ ಬಗ್ಗೆ ನೀಡುವ ಆದೇಶವು, ಸ್ವಂತವಾಗಿ ಆತನ ವತಿಯಿಂದ ಆಗಿರದೆ ಅಲ್ಲಾಹನ ವತಿಯಿಂದಲೇ ಆಗಿರುತ್ತದೆ. ಆದುದರಿಂದಲೇ ಎಲ್ಲಾ ಪ್ರವಾದಿಗಳೂ "ನಾನು ನಿಮಗೆ ನನ್ನ ಪ್ರಭುವಿನ ಆಜ್ಞೆಗಳನ್ನು ಕೇಳಿಸುತ್ತಿರುವೆನು ಮತ್ತು ಅವನ ಸಂದೇಶವನ್ನೇ ತಲುಪಿಸುತ್ತಿರುವೆನು" ಎಂದರು.

"ನಿಮಗೆ ನನ್ನ ಪ್ರಭುವಿನ ಸಂದೇಶಗಳನ್ನು ತಲುಪಿಸುತ್ತೇನೆ."

(ಪವಿತ್ರ ಕುರ್‌ಆನ್, 7:62)

ಪ್ರವಾದಿಯ ಎಲ್ಲಾ ಮಾತುಗಳೂ ಅಲ್ಲಾಹನ ವತಿಯಿಂದಲೇ ಆಗಿರುವುದರಿಂದ ಅವರ ಅನುಸರಣೆಯು ಅಲ್ಲಾಹನ ಅನುಸರಣೆಯಾಗಿದ್ದು ಅವರಿಗೆ ತೋರಿಸುವ ಅವಿಧೇಯತೆಯು ನಿಜವಾಗಿ ಅಲ್ಲಾಹನ ಅವಿಧೇಯತೆಯಾಗಿದೆ. ಪವಿತ್ರ ಕುರ್‌ಆನಿನಲ್ಲಿ ಇದನ್ನು ಕೂಡಾ ಸ್ಪಷ್ಟವಾಗಿ ಹೇಳಲಾಗಿದೆ.

"ಸಂದೇಶವಾಹಕನನ್ನು ಅನುಸರಿಸಿದವನು ವಾಸ್ತವದಲ್ಲಿ ಅಲ್ಲಾಹನನ್ನು ಅನುಸರಿಸಿದನು." (ಪವಿತ್ರ ಕುರ್‌ಆನ್, 4:80)

ಇನ್ನೊಂದೆಡೆ ಈ ರೀತಿ ಹೇಳಲಾಗಿದೆ:

"ನಾವು ಪ್ರತಿಯೊಬ್ಬ ಸಂದೇಶವಾಹಕನನ್ನೂ ಅಲ್ಲಾಹನ ಆಜ್ಞೆ ಪ್ರಕಾರ ಅನುಸರಿ ಲ್ಪಡಲಿಕ್ಕಾಗಿಯೇ ಕಳುಹಿಸಿರುತ್ತೇವೆ."

(ಪವಿತ್ರ ಕುರ್‌ಆನ್, 4:6

ವಾಸ್ತವಿಕತೆಯೂ ಇದೇ ಆಗಿದೆ ಎಂಬುದನ್ನು ಸ್ವಯಂ ರಸೂಲ್ (ಸಂದೇಶ ವಾಹ ಎಂಬ ಪದವೂ ತಿಳಿಸುತ್ತದೆ. ಏಕೆಂದರೆ ಅಲ್ಲಾಹನ ರಸೂಲ್ ಎಂದರೆ 'ಅಲ್ಲಾಹನಿಂ ಕಳುಹಿಸಲ್ಪಟ್ಟವರು' ಎಂದಾಗುತ್ತದೆ. ಅರ್ಥಾತ್ ಸಂದೇಶವಾಹಕರು ಹೇಳುವುದಾವುದ ತಮ್ಮ ವತಿಯಿಂದ ಆಗಿರದೆ ತಮ್ಮನ್ನು ಕಳುಹಿಸಿದವನ ಕಡೆಯಿಂದಾಗಿರುತ್ತದೆ. ಆದುದರಿಂ ಅವರ ಅನುಸರಣೆ ಅಥವಾ ಅವಿಧೇಯತೆಯು ಕೂಡಾ ಅವರ ವೈಯಕ್ತಿಕ ಅನುಸರ ಅಥವಾ ಅವಿಧೇಯತೆಯಾಗಿರದೆ ಸರ್ವಲೋಕ ಪರಿಪಾಲಕನಾದ ಅಲ್ಲಾಹನ ಅನುಸರ ಮತ್ತು ಅವನ ಅವಿಧೇಯತೆಯಾಗಿರುವುದು.

ಈ ವಿವರಣೆಗಳಿಂದ 'ರಸೂಲ್' ಎಂಬ ಕುರ್‌ಆನಿನ ಪಾರಿಭಾಷಿಕದ ತಾತ್ಪರ್ಯ ನಿರ್ದಿಷ್ಟಗೊಳ್ಳುತ್ತದೆ. ಅದು ದೇವಭಕ್ತಿ ಮತ್ತು ಧಾರ್ಮಿಕ ಮೇಲ್ಮೆ ಮತ್ತು ಪಾವಿತ್ರ್ಯ ಕುರಿತಾಗಿರುವ ಬೇರೆ ಹಲವು ಪದಗಳು ಮತ್ತು ಪಾರಿಭಾಷಿಕಗಳಿಂದ ಮೂಲಭೂತವಾ ಭಿನ್ನವಾಗಿದೆ ಎಂಬುದು ನಿಮಗೆ ವ್ಯಕ್ತವಾಗಿರಬಹುದು.

ಮಹಾತ್ಮ, ವಲೀ, ಪೀರ್, ಫಕೀರ್, ಸಾಧು, ಸಂತ, ಗುರು, ಋಷಿ, ಮ ಮತ್ತಿತರ ಇಂತಹುದೇ ಪದಗಳ ಪೈಕಿ ಯಾವ ಪದವೂ ಈ ಅರ್ಥವನ್ನು ಹೊಂದೀ ಆದುದರಿಂದ ಪವಿತ್ರ ಕುರ್‌ಆನಿನ ಈ ಪಾರಿಭಾಷಿಕವು ತನ್ನ ವಾಸ್ತವಿಕತೆ ಮ ಸ್ಥಾನಮಾನದ ದೃಷ್ಟಿಯಿಂದ ಏಕೈಕ ಪಾರಿಭಾಷಿಕವಾಗಿದೆ. ಅದರ ಕಲ್ಪನೆ ಮತ್ತು ತಾತ್ಪರ್ಯ ವಿವರಣೆಗೆ ಅದನ್ನು ಮಾತ್ರ ಬಳಸಬಹುದಾಗಿದೆ. ಬೇರೆ ಪದದಿಂದ ಅದರ ತರ್ಜು ಮಾಡುವುದಾದರೆ ಆ ಪದವು ಆ ತಾತ್ಪರ್ಯದ ಕಲ್ಪನೆಯನ್ನು ಪೂರ್ಣವಾ ಬಹಿರಂಗಪಡಿಸುವಂತಹದ್ದಾಗಿರಬೇಕು. ಜನರು ಅದನ್ನು ಕೇಳಿ ಅದೇ ತಾತ್ಪರ್ಯವ ಗ್ರಹಿಸುವಂತಾಗಿರಬೇಕು. ಪರ್ಶಿಯನ್ ಭಾಷೆಯ 'ಪೈಗಂಬರ' ಎಂಬ ಪದವು ಇಂತಹ ಒಂದು ಪದವಾಗಿದೆ. ಕನ್ನಡದಲ್ಲೂ ಅದನ್ನು ಅದೇ ಅರ್ಥದಲ್ಲಿ ಬಳಸಲಾಗುತ್ತದೆ.

ಕೊನೆಯಲ್ಲಿ 'ನಬಿ' ಮತ್ತು 'ರಸೂಲ್'ಗಿರುವ ಒಂದು ವ್ಯತ್ಯಾಸವನ್ನು ತಿಳಿದುಕೊ ಬೇಕಾಗಿದೆ. ಈ ಎರಡೂ ಪದಗಳ ಬಳಕೆಯಲ್ಲಿ ಆ ವ್ಯತ್ಯಾಸವು ಕಂಡು ಬರುತ್ತದೆ. ಪವಿ ಕುರ್‌ಆನ್ ಈ ಎರಡೂ ಪದಗಳು ಈಗ ನಿಮ್ಮ ಮುಂದೆ ವಿವರಿಸಲಾದ ತಾತ್ಪರ್ಯವ

ಹೊಂದಿವೆ ಎಂದು ಸಾರುತ್ತದೆ. ಆದರೆ 'ನಬಿ' ಎಂಬ ಪದವು ಈ ಪಾರಿಭಾಷಿಕ ಮತ್ತು ಾತ್ಪರ್ಯಕ್ಕೆ ಸೀಮಿತವಾದ ಪದವಾಗಿರುವಾಗ 'ರಸೂಲ್' ಎಂಬ ಪದವು ಈ ರೀತಿ ೀಮಿತವಾಗಿಲ್ಲ. 'ನಬಿ' ಎಂಬ ಪದವನ್ನು ಕುರ್‌ಆನ್ ಬಳಸಿದ ಕಡೆಗಳಲ್ಲೆಲ್ಲಾ ಅದನ್ನು ಅಲ್ಲಾಹನ ವತಿಯಿಂದ 'ವಹೀ' (ದಿವ್ಯವಾಣಿ) ಅವತೀರ್ಣವಾಗುವ ವ್ಯಕ್ತಿಗೆ ಮಾತ್ರ ಬಳಸಿದೆ. ಆದರೆ 'ರಸೂಲ್' ಎಂಬ ಪದವು 'ನಬೀ' ಎಂಬ ಪದದ ಸಮಾನಾರ್ಥವುಳ್ಳ ಪಾರಿಭಾಷಿಕವಾಗಿರುವುದರ ಜೊತೆಗೆ ಅನೇಕ ಕಡೆಗಳಲ್ಲಿ ಅದರ ಶಬ್ದಾರ್ಥದಲ್ಲಿಯೂ ಅದನ್ನು ಬಳಸಲಾಗಿದೆ. ಅರ್ಥಾತ್ ಅದನ್ನು ನಬಿಗಳಿಗೂ ಬಳಸಲಾಗಿದೆ. ನಬಿಗಳಲ್ಲ ದವರಿಗೂ ಬಳಸಲಾಗಿದೆ. ಅನೇಕ ಕಡೆಗಳಲ್ಲಿ ದೇವಚರರನ್ನೂ 'ಅಲ್ಲಾಹನ ರಸೂಲ್' ಎಂದು ಹೇಳಲಾಗಿದೆ. ಏಕೆಂದರೆ ಅವರು ಕೂಡಾ ಅಲ್ಲಾಹನ ವತಿಯಿಂದ ವಿಭಿನ್ನ ಕರ್ತವ್ಯಗಳಿಗಾಗಿ ನೇಮಕಗೊಂಡವರು ಮತ್ತು ಕಳುಹಿಸಲ್ಪಟ್ಟವರು. ಹಾಗಾದರೆ 'ರಸೂಲ್' ಎಂಬ ಪದವು ಪವಿತ್ರ ಕುರ್‌ಆನಿನಲ್ಲಿ ಎಲ್ಲಿ 'ನಬಿ'ಗೆ ಸಮಾನಾರ್ಥವುಳ್ಳ ಪಾರಿಭಾಷಿಕ ಎಂದು ಪರಿಗಣಿಸಲಾಗಿದೆ ಮತ್ತು ಎಲ್ಲಿ ಅದರ ಶಬ್ದಾರ್ಥದಲ್ಲಿ ಬಳಸಲಾಗಿದೆ ಎಂದು ತಿಳಿಯುವುದು ಹೇಗೆ? ಈ ಕುರಿತು ಬುದ್ಧಿಶಕ್ತಿಯೇ ನಿಮ್ಮ ಮಾರ್ಗದರ್ಶನ ಮಾಡುತ್ತವೆ. ಈ ವ್ಯತ್ಯಾಸ ಎಲ್ಲಾ ಕಡೆಯೂ ಸ್ಪಷ್ಟವಾಗಿ ಇರುವುದನ್ನು ನೀವು ಕಾಣುವಿರಿ.

### ವಹೀ

ಪವಿತ್ರ ಕುರ್‌ಆನಿನ ಮೂರನೆಯ ಮುಖ್ಯ ಪಾರಿಭಾಷಿಕ 'ವಹೀ' ಆಗಿದೆ. ಅಲ್ಲಾಹನ ವತಿಯಿಂದ ಪ್ರವಾದಿಯ ಮೇಲೆ ಅವತೀರ್ಣಗೊಳ್ಳುವ ಮಾರ್ಗದರ್ಶನವನ್ನು 'ವಹೀ' ಎನ್ನಲಾಗಿದೆ.

'ವಹೀ'ಯ ಮೂಲ ಶಬ್ದಾರ್ಥವು ಕೈ, ಕಣ್ಣು, ಶಬ್ದ, ಮಾತು, ಲೇಖನ ಇತ್ಯಾದಿ ಗಳಿಂದ ಮಾಡುವ ಸೂಚನೆಯಾಗಿದೆ. ಸೂಚನೆಯು ಯಾರಿಗಾದರೂ ಯಾವುದೇ ವಿಷಯದ ಬಗ್ಗೆ ತಿಳುವಳಿಕೆ ನೀಡುವ ಸಲುವಾಗಿ ಮಾಡಲಾಗುತ್ತದೆ. ಇನ್ನೊಂದೆಡೆ ಅದರಲ್ಲಿ ರಹಸ್ಯದ ಅರ್ಥವೂ ಸೇರಿಕೊಂಡಿದೆ. ಆದುದರಿಂದ ಆ ಪದದ ಅರ್ಥವು ರಹಸ್ಯ ಸೂಚನೆ, ಗುಪ್ತ ಉಪದೇಶ, ಮನದಲ್ಲಿ ಯಾವುದಾದರೂ ಮಾತು ಹಾಕುವುದು ಎಂದಾಯಿತು. ಈ ಪದದ ಮೂಲವು 'ಈಹಾ' ಆಗಿದೆ. ಇದರಿಂದ ಆಗುವ ಕ್ರಿಯಾಪದಗಳು ಈ ಎಲ್ಲಾ ಅರ್ಥ ಗಳಲ್ಲಿಯೂ ಬಳಸಲ್ಪಡುತ್ತವೆ, ಯಾವುದೇ ವೈಶಿಷ್ಟ್ಯವಿಲ್ಲದೆ ಈ ಎಲ್ಲಾ ವಿಷಯಗಳಿಗೂ ಬಳಸಲ್ಪಡುತ್ತವೆ. ಆದುದರಿಂದ ಪವಿತ್ರ ಕುರ್‌ಆನಿನಲ್ಲಿ ಈ ಕ್ರಿಯಾಪದಗಳು ಅಲ್ಲಾಹ್, ಮನುಷ್ಯ, ಶೈತಾನ್ ಎಲ್ಲರಿಗೂ ಬಳಸಲ್ಪಟ್ಟಿವೆ. ಆದರೆ ಈ ಕ್ರಿಯಾಪದಗಳ ಹೊರತು 'ವಹೀ' ಎಂಬ ಪದವೇ ಬಳಸಲ್ಪಟ್ಟಾಗ ಅರ್ಥ ಮತ್ತು ಉಪಯೋಗದ ಈ ವೈಶಾಲ್ಯವು

ಉಳಿಯುವುದಿಲ್ಲ. ಅದರರ್ಥ ವಿಶೇಷವಾಗಿ ಪ್ರವಾದಿಗಳ ಮೇಲೆ ಅಲ್ಲಾಹನ ವತಿಯಿಂ ಅವತೀರ್ಣವಾಗುವ ಮಾರ್ಗದರ್ಶನದ ಮಾತಾಗಿದೆ. ಅದು ಸಾಮಾನ್ಯ ಮನುಷ್ಯನ ಇಂದ್ರಿಯಗ ನಿಲುಕದ ರೂಪದಲ್ಲಿ ಲಭಿಸುತ್ತದೆ. 'ವಹೀ' ಎಂಬ ಪದವು ಪವಿತ್ರ ಕುರ್‌ಆನಿನ ಒಂ ವಿಶಿಷ್ಟ ಪಾರಿಭಾಷಿಕವಾಗಿದೆ. ಅದನ್ನು ಎಲ್ಲ ಕಡೆಯೂ ಆ ಪಾರಿಭಾಷಿಕದ ರೂಪದ ಬಳಸಲಾಗಿದೆ. 'ಈಹಾ' ಮತ್ತು ಅದರಿಂದ ಉಂಟಾಗುವ ಕ್ರಿಯಾಪದಗಳು ಪಾರಿಭಾಷಿ ರೂಪದಲ್ಲಿಲ್ಲ. ಬದಲಾಗಿ ಸಾಮಾನ್ಯ ಶಬ್ದಾರ್ಥದಲ್ಲೇ ಅದನ್ನು ಬಳಸಲಾಗಿದೆ. ವಹೀ ಕೇವ ಅಲ್ಲಾಹನ ವತಿಯಿಂದ ಆಗಿರುತ್ತದೆ. ಅದು ಕೇವಲ ಆತನ ಪ್ರವಾದಿಗಳಿಗಾಗಿರುತ್ತದೆ. 'ಈ ಅಲ್ಲಾಹನ ವತಿಯಿಂದಲೂ ಅಲ್ಲಾಹೇತರರ ವತಿಯಿಂದಲೂ ಆಗಿರುತ್ತದೆ ಮತ್ತು ಎ ಮನುಷ್ಯರಿಗೂ ಆಗಿರುತ್ತದೆ.

ಪ್ರವಾದಿಗಳ ಮೇಲೆ ಅವತೀರ್ಣವಾಗುವ ಮಾರ್ಗದರ್ಶನವನ್ನು, ಅದರ ಅವತೀರ್ಣ ಇತರ ಮನುಷ್ಯರ ದೃಷ್ಟಿಯಿಂದ ಗುಪ್ತವಾಗಿರುವ ಕಾರಣ 'ವಹೀ' ಎನ್ನಲಾಗಿದೆ.

'ವಹೀ' ಎಂಬುದು ಕೇವಲ ಅರ್ಥದ ಹೆಸರಲ್ಲ. ಅದರಲ್ಲಿ ಅರ್ಥ, ಪದಗಳು ಮ ಪದಗಳ ಜೋಡಣೆ ಎಲ್ಲವೂ ಸೇರಿಕೊಂಡಿದೆ. ಬೇರೆ ಮಾತುಗಳಲ್ಲಿ ಹೇಳುವುದಾದ ಅಲ್ಲಾಹನ ವತಿಯಿಂದ ಪ್ರವಾದಿಗಳ ಮೇಲೆ ಅವತೀರ್ಣಗೊಳ್ಳುವ ಮಾರ್ಗದರ್ಶನದ ಅಡಗಿರುವ ಅರ್ಥವು ಅಲ್ಲಾಹನ ವತಿಯಿಂದ ಆಗಿರುವಂತೆಯೇ ಅದರ ಪದಗಳೂ ಅ ವತಿಯಿಂದಲೇ ಆಗಿರುತ್ತವೆ. ಪದಗಳ ಜೋಡಣೆಯಿಂದಾಗುವ ವಚನಗಳು ಕೂಡಾ ಆ ವತಿಯಿಂದಲೇ ಆಗಿರುತ್ತದೆ. ಆದುದರಿಂದ ಈ 'ವಹೀ'ಯನ್ನು 'ಕಲಾಮುಲ್ಲಾಹ್' (ಅಲ್ಲಾ ವಾಣಿ) ಎಂದೂ ಹೇಳಲಾಗಿದೆ.

ಈ 'ವಹೀ' (ಪವಿತ್ರ ಕುರ್‌ಆನ್) ಪ್ರವಾದಿ ಮುಹಮ್ಮದ್‌ರ(ಸ) ಬಳಿಗೆ ತಲುಪುವುದ 'ನುಝೂಲ್' (ಅವತೀರ್ಣಗೊಳ್ಳು) ಅಥವಾ 'ಇನ್‌ಝಾಲ್' ಮತ್ತು 'ತನ್‌ಝೀ (ಅವತರಿಸು ಅಥವಾ ಅವತರಿಸಲ್ಪಡು) ಎಂದು ಹೇಳಲಾಗಿದೆ. ನುಝೂಲ್ ಎಂದರೇ ಮತ್ತು ಈ 'ಅವತೀರ್ಣಗೊಳ್ಳು' ಅಥವಾ 'ಅವತರಿಸಲ್ಪಡು' ಎಂಬ ಕ್ರಿಯೆಯು ಯಾ ರೀತಿ ಸಂಭವಿಸುತ್ತಿತ್ತು? ಈ ಕುರಿತು ಪವಿತ್ರ ಕುರ್‌ಆನ್ ಮತ್ತು ಪ್ರಾಮಾಣಿಕ ಹದೀಸ್‌ಗಳ ಸಿಗುವ ವಿವರಣೆಯ ಸಾರಾಂಶವು ಈ ರೀತಿ ಇದೆ:

(ಅ) ಅಲ್ಲಾಹನ ಓರ್ವ ಪ್ರಮುಖ ದೇವಚರ ಜಿಬ್ರೀಲ್(ಅ) ಆತನ ಈ ವಾಣಿಯ ಹ. ಮುಹಮ್ಮದ್‌ರ(ಸ) ಹೃದಯದಲ್ಲಿ ಇಳಿಸುತ್ತಿದ್ದರು.

"ನೀವು (ದೇವವತಿಯಿಂದ ದೇವ ಸೃಷ್ಟಿಗಳಿಗೆ) ಎಚ್ಚರಿಕೆ ನೀಡುವವರಲ್ಲಿ ಸೇರಲಿಕ್ಕಾ ಪ್ರಾಮಾಣಿಕ ಆತ್ಮವು ಇದರ ಜೊತೆ ನಿಮ್ಮ ಹೃದಯಕ್ಕೆ ಇಳಿದಿದೆ."

(ಪವಿತ್ರ ಕುರ್‌ಆನ್, 26:193-19

"ಅಲ್ಲಾಹನ ಅಪ್ಪಣೆಯಿಂದಲೇ ಈ ಕುರ್‌ಆನನ್ನು ನಿಮ್ಮ ಹೃದಯದಲ್ಲಿ ಳಿಸುತ್ತಾನೆಂಬುದು ತಿಳಿದಿರಲಿ." (ಪವಿತ್ರ ಕುರ್‌ಆನ್, 2:97)

ಒಟ್ಟಿನಲ್ಲಿ ಈ ದೇವಚರರೇ ಕುರ್‌ಆನನ್ನು ಪ್ರವಾದಿವರ್ಯರಿಗೆ(ಸ) ತಲುಪಿಸುವ ಾಧ್ಯಮವಾಗಿದ್ದರು. ಅಲ್ಲಾಹನು ಯಾವಾಗ ಎಷ್ಟು ವಚನಗಳನ್ನು ಅವತೀರ್ಣಗೊಳಿಸ ಯಸಿದನೋ ಅವುಗಳನ್ನು ಹ. ಜಿಬ್ರೀಲ್‌ರ(ಅ) ಮುಖಾಂತರ ಪ್ರವಾದಿವರ್ಯರ(ಸ) ಬಳಿ ಸಹಿಸುತ್ತಿದ್ದನು. ಅವರು ಪೂರ್ಣ ಪ್ರಾಮಾಣಿಕವಾಗಿ ಮತ್ತು ಹೊಣೆಗಾರಿಕೆಯೊಂದಿಗೆ ವಚನಗಳನ್ನು ಪ್ರವಾದಿವರ್ಯರ(ಸ) ಹೃದಯದಲ್ಲಿ ಇಳಿಸುತ್ತಿದ್ದರು. ಈ ವಿಷಯದಲ್ಲಿ ವರ ಪಾತ್ರವು ಕೇವಲ ಒಂದು ಮಾಧ್ಯಮ ಮತ್ತು ವಿಧೇಯ ಸೇವಕರದ್ದಾಗಿತ್ತು. ಅದರಲ್ಲಿ ವರ ಇಚ್ಛೆ ಅಥವಾ ಅಭಿಪ್ರಾಯಕ್ಕೆ ಯಾವದೇ ಹಸ್ತಕ್ಷೇಪವಿರಲಿಲ್ಲ. ದೇವಾಜ್ಞೆಯ ಉರತು ಅವರೆಂದೂ ಬರುತ್ತಿರಲಿಲ್ಲ. ಎರಡನೆಯ ಸೂಕ್ತದ "ಆತನ ಆಜ್ಞೆಯ ಮೇರೆಗೆ" ಂಬ ಪದಗಳು ಅದನ್ನು ಸ್ಪಷ್ಟಗೊಳಿಸುತ್ತವೆ. ಇನ್ನೊಂದು ಸೂಕ್ತದಲ್ಲಿ ಅವರ ಮಾತಿನಲ್ಲೇ ವಿಷಯವನ್ನು ಸ್ಪಷ್ಟಪಡಿಸಲಾಗಿದೆ. "(ಓ ಪೈಗಂಬರರೇ) ನಾವು ನಿಮ್ಮ ಪ್ರಭುವಿನ ಪ್ಪಣೆ ಇಲ್ಲದೆ ಇಳಿದು ಬರುವುದಿಲ್ಲ." (ಪವಿತ್ರ ಕುರ್‌ಆನ್, 19:64)

ಅಂತೆಯೇ ಅವರು ಈ 'ವಹೀ' ಮತ್ತು ದೇವವಾಣಿಯಲ್ಲಿ ಯಾವುದೇ ಹೆಚ್ಚು ಕಡಿಮೆ ಥವಾ ಯಾವುದೇ ರೀತಿಯ ಬದಲಾವಣೆ ಆಗಲು ಬಿಡುವುದಿಲ್ಲ. ಅವರನ್ನು "ಅರ್ರೂಹುಲ್ ಮೀನ್" (ಪ್ರಾಮಾಣಿಕ ದೇವಚರ) ಎಂದು ಹೇಳುವ ಮೂಲಕ ಅದನ್ನು ಸ್ಪಷ್ಟಪಡಿಸಲಾಗಿದೆ.

ಪವಿತ್ರ ಕುರ್‌ಆನಿನಲ್ಲಿ ಕೆಲವು ಕಡೆ ಜಿಬ್ರೀಲರು(ಅ) ಕುರ್‌ಆನನ್ನು ಪ್ರವಾದಿಯ ದಯದಲ್ಲಿ ಇಳಿಸಿದರು ಎಂಬುದನ್ನು ಹೀಗೆ ಹೇಳಲಾಗಿದೆ:

"ಇದು ಅವರಿಗೆ ಅವತೀರ್ಣಗೊಳ್ಳುವಂತಹ ಒಂದು 'ದಿವ್ಯವಾಣಿ' ಆಗಿದೆ. ಅವರಿಗೆ ಹಾಶಕ್ತಿಶಾಲಿಯಾದವನು ಕಲಿಸಿರುತ್ತಾನೆ." (ಪವಿತ್ರ ಕುರ್‌ಆನ್, 53:4-5)

"ಹೃದಯದಲ್ಲಿ ಇಳಿಸುವುದರ ತಾತ್ಪರ್ಯವು ಸಾಮಾನ್ಯ ತರದ್ದಾಗಿರಲಿಲ್ಲ. ಅದರರ್ಥ ಸುವುದು' ಅರ್ಥಾತ್ ಸರಿಯಾಗಿ ಶಿಕ್ಷಣ ನೀಡುವುದ್ದಾಗಿತ್ತು. ಆ ಬಳಿಕ ಈ 'ವಹೀ'ಯು ರ ನೈಜ ರೂಪದಲ್ಲಿ, ಯಥಾರೂಪದಲ್ಲಿ ಪ್ರವಾದಿವರ್ಯರಿಗೆ(ಸ) ಕಂಠಪಾಠವಾಗಿ ತ್ತಿತ್ತು.

(ಅ) ಪ್ರವಾದಿವರ್ಯರ(ಸ) ಮೇಲೆ 'ವಹೀ' ಅವತೀರ್ಣಗೊಳ್ಳುವಾಗ ಅವರು(ಸ) ಧಿಕ ತಲ್ಲೀನರಾಗಿ ಬಿಡುತ್ತಿದ್ದರು. ಅವರು(ಸ) ತಮ್ಮ ಪರಿಸರದಿಂದ ಸಂಪೂರ್ಣ

ಕಡಿದು ಹೋಗುತ್ತಿದ್ದರು. ಮುಖವು ಕೆಂಪೇರುತ್ತಿತ್ತು. ಅವರ(ಸ) ಅಂಗಾಂಗಗಳ ಮೇಲೆ ಭಾ ಭಾರ ಬಿದ್ದಿರುವಂತೆ ಮತ್ತು ಅವರು ದಣಿದು ಹೋದಂತೆ ಭಾಸವಾಗುತ್ತಿತ್ತು. ಚಳಿಗಾಲದಲ್ಲಿಯ ಅವರ ಹಣೆಯಲ್ಲಿ ಬೆವರ ಹನಿಗಳು ಗೋಚರಿಸುತ್ತಿದ್ದುವು.

(ಬುಖಾರಿ-ಬಾಬು ಕೈಫ ಕಾನಲ್ ವಹಿ

ಒಮ್ಮೆ ಓರ್ವ ಸಹಾಬಿ ಹ. ಹಾರಿಸ್ ಬಿನ್ ಹಿಶಾಮ್(ರ) "ತಮ್ಮ ಮೇಲೆ ವ ಯಾವ ರೀತಿ ಅವತೀರ್ಣಗೊಳ್ಳುತ್ತದೆ?" ಎಂದು ವಿಚಾರಿಸಿದರು. ಆಗ ಪ್ರವಾದಿ( "ಕೆಲವೊಮ್ಮೆ ನನ್ನ ಕಿವಿಗಳಲ್ಲಿ ಗಂಟೆ ಬಾರಿಸುತ್ತಿರುವಂತೆ ಅನುಭವವಾಗುತ್ತದೆ. ವ ಅವತೀರ್ಣದ ಈ ರೂಪವು ನನ್ನ ಮಟ್ಟಿಗೆ ಬಹಳ ಕಠಿಣವಾಗಿರುತ್ತದೆ. ಆ ಬ ದೇವಚರರು ದಿವ್ಯವಾಣಿಯನ್ನು ನನಗೆ ತಲುಪಿಸಿ ಹೋಗಿ ಬಿಡುತ್ತಾರೆ. ಆಗ ನನಗ ಪೂರ್ತಿಯಾಗಿ ಕಂಠಪಾಠವಾಗಿರುತ್ತದೆ. ಕೆಲವೊಮ್ಮೆ ದೇವಚರರು ಮನುಷ್ಯ ರೂಪ ತ ನನ್ನ ಮುಂದೆ ಪ್ರತ್ಯಕ್ಷರಾಗುತ್ತಾರೆ ಮತ್ತು ನನಗೆ ಕೇಳಿಸಲಿಕ್ಕಿರುವುದನ್ನೆಲ್ಲಾ ಓ ಹೇಳುತ್ತಾರೆ. ನಾನಾಗ ಅವರು ಓದಿದುದನ್ನು ಕಂಠಪಾಠ ಮಾಡಿಕೊಳ್ಳುತ್ತೇನೆ."

ದೇವಚರರು ಎರಡು ರೂಪದಲ್ಲಿ ಬರುತ್ತಿದ್ದರೆಂದು ಇದರಿಂದ ತಿಳಿದುಬಂ ಒಂದು ಮನುಷ್ಯ ರೂಪದಲ್ಲಿ, ಇನ್ನೊಂದು ತನ್ನ ನೈಜರೂಪದಲ್ಲಿ. ಈ ಎರಡನೇ ರೂಪದಲ್ಲಿ ಪ್ರವಾದಿವರ್ಯರು(ಸ) 'ನನ್ನ ಮಟ್ಟಿಗೆ ಬಹಳ ಕಠಿಣ'ವೆಂದು ಹೇಳಿರುವ ಇದರಿಂದ ಮೊದಲನೆಯ ರೂಪದಲ್ಲಿಯೂ ಕಾಠಿಣ್ಯವಿದೆ ಎಂದು ತಿಳಿದುಬರುತ್ತ ಒಟ್ಟಿನಲ್ಲಿ ದೇವಚರರಿಂದ ದಿವ್ಯವಾಣಿಯನ್ನು ಪಡೆಯುವುದು ಒಂದು ಅಸಾಮಾ ಕ್ರಿಯೆಯಾಗಿತ್ತು. ಅದನ್ನು ಕಲಿಸುವ ಮತ್ತು ಕಲಿಯುವ ಸಾಮಾನ್ಯ ಕ್ರಿಯೆಯೆಂದು ಖಂ ಭಾವಿಸಬಾರದು. ದೇವಚರರಿಂದ ವಹೀಯನ್ನು ಪಡೆಯುವ ಸಲುವಾಗಿ ಪ್ರವಾದಿವರ್ಯರು( ಬಾಹ್ಯ ಇಂದ್ರಿಯಗಳನ್ನು ಬಳಸದೆ ತಮ್ಮ ಅಂತಃಶಕ್ತಿಯನ್ನು ಕ್ರೋಡೀಕರಿಸಿಕೊಳ್ಳುತ್ತಿ ರೆಂದೂ ಒಂದು ಬೇರೆಯೇ ಲೋಕಕ್ಕೆ ವರ್ಗಾವಣೆ ಹೊಂದುತ್ತಿದ್ದರೆಂದೂ ತನ್ಮೂ ದೇವವಾಣಿಯನ್ನು ತಮ್ಮ ಹೃದಯದಲ್ಲಿ ಇಳಿಸಿಕೊಳ್ಳಲು ಶಕ್ತರಾಗುತ್ತಿದ್ದರೆಂದೂ ತಿಳಿ ಬರುತ್ತದೆ. ಈ ತಲ್ಲೀನತೆಯ ಅವಸ್ಥೆ, ಮುಖದ ಕೆಂಪೇರುವಿಕೆ, ಹಣೆಯ ಮೇಲೆ ಬೆ ಹನಿಗಳ ಗೋಚರಿಸುವಿಕೆ ಮತ್ತು ಕಿವಿಗಳಲ್ಲಿ ಗಂಟೆಯ ನಾದದ ಸ್ವರಗಳು ಇ ಪರಿಣಾಮವೇ ಆಗಿತ್ತು. ನಮ್ಮ ಮುಂದೆ ಈ 'ವಹೀ'ಯ ಅವತೀರ್ಣದ ಬಗ್ಗೆ ಇರ ವಿವರಣೆಯು ಕೇವಲ ಇಷ್ಟೇ. ಇಂತಹ ಪರಿಸ್ಥಿತಿಯಲ್ಲಿ ದೇವಚರರು ಅಲ್ಲಾಹನ ವಹೀಯ ಪ್ರವಾದಿವರ್ಯರಿಗೆ(ಸ) ವರ್ಗಾಯಿಸುತ್ತಿದ್ದರು. ಈ ಸ್ಥಿತಿಯು ಸಂಪೂರ್ಣ ಎಚ್ಚರಿಕೆ ಸ್ಥಿತಿಯಾಗಿದ್ದರೂ ಬಾಹ್ಯ ಲೋಕದಿಂದ ಸಂಬಂಧ ಕಡಿದುಕೊಳ್ಳುವಂತಹದ್ದಾಗಿ ನಾವು ಸ್ವಪ್ನದಲ್ಲಿ ಈ ಲೋಕದಿಂದ ಸಂಬಂಧ ಕಡಿದುಕೊಳ್ಳುವಂತೆಯೇ ಎಂದು ಇದ ಭಾವಿಸಬಹುದಾಗಿದೆ.

ಇದು ವಹೀ ಅವತೀರ್ಣದ ಬಗ್ಗೆ ನಮಗೆ ತಿಳಿಸಲಾದ ಮತ್ತು ನಮ್ಮ ತಿಳುವಳಿಕೆಗೆ ಬರಬಲ್ಲ ವಿಷಯಗಳಾಗಿವೆ.

ಇನ್ನು ಉಳಿದಿರುವುದು ಇನ್ನಷ್ಟು ಚರ್ಚೆ ಮತ್ತು ಸಂಶೋಧನೆಯ ವಿಷಯ. ಅರ್ಥಾತ್ ವಹೀಯ ಅವತೀರ್ಣವೆಂದರೇನು? ಬೇರೆ ಮಾತುಗಳಲ್ಲಿ ವಹೀಯ ವಾಸ್ತವಿಕತೆ ಏನು ಎಂಬ ಪ್ರಶ್ನೆ. ಸಾಮಾನ್ಯ ಮನುಷ್ಯ ವಹೀಯ ವಾಸ್ತವಿಕತೆಯನ್ನು ಅರಿಯಬಲ್ಲನೇ? ಕುರ್‌ಆನ್ ಇಲ್ಲ ಎಂದೇ ಉತ್ತರಿಸುತ್ತದೆ. ಈ ವಹೀ ಅವತೀರ್ಣವಾಗುತ್ತಿದ್ದ ಕಾಲದಲ್ಲಿ ಅದರ ಬಗ್ಗೆ ಕುತರ್ಕ ಮಾಡುವ ವಿರೋಧಿಗಳು ಈ ಪ್ರಶ್ನೆಯನ್ನು ಎತ್ತಿದ್ದರು. 'ವಹೀ' ಎಂದರೇನು? ಅದಕ್ಕುತ್ತರವಾಗಿ ಅಲ್ಲಾಹನು ತನ್ನ ಪ್ರವಾದಿಗೆ ಈ ರೀತಿ ಆದೇಶಿಸಿದನು: "ಈ 'ರೂಹ್' ನನ್ನ ಪ್ರಭುವಿನ ಅಪ್ಪಣೆಯಿಂದ ಬರುತ್ತದೆ. ಆದರೆ ನೀವು ಜ್ಞಾನದ ಅಲ್ಪಾಂಶವನ್ನು ಮಾತ್ರ ಪಡೆದಿರುತ್ತೀರಿ." (ಪವಿತ್ರ ಕುರ್‌ಆನ್, **17:85)**

ಅರ್ಥಾತ್ ಮನುಷ್ಯನು ಹುಟ್ಟುವಾಗ ಪಡೆದಿರುವ ತಿಳಿಯುವ ಮತ್ತು ಚಿಂತಿಸುವ ಪ್ರಕೃತಿದತ್ತ ಸಾಮರ್ಥ್ಯಗಳು 'ವಹೀ'ಯ ವಾಸ್ತವಿಕತೆಯನ್ನು ಅರಿಯಲು ಪರ್ಯಾಪ್ತವಲ್ಲ. ವೈಚಾರಿಕವಾಗಿ ನೋಡಿದರೆ ಇದೊಂದು ಅತ್ಯಂತ ಸಮಂಜಸ ಉತ್ತರವಾಗಿತ್ತು. ಏಕೆಂದರೆ ಪ್ರವಾದಿತ್ವವು ಮನುಷ್ಯನಿಗೇ ನೀಡಲ್ಪಡುತ್ತದಾದರೂ ಅದು ಸಾಮಾನ್ಯ ಮನುಷ್ಯ ಸಾಮರ್ಥ್ಯಗಳಿಗಿಂತ ಮಿಗಿಲಾದ ಒಂದು ಸಾಮರ್ಥ್ಯವಾಗಿದೆ. ಅದರ ವಾಸ್ತವಿಕತೆಯನ್ನು ಪ್ರವಾದಿತ್ವದ ಸೌಭಾಗ್ಯವನ್ನು ಪಡೆದ ವ್ಯಕ್ತಿ ಮಾತ್ರ ಅರಿಯಬಲ್ಲನು. ಒಂದು ಮಗು ಪ್ರೌಢಾವಸ್ಥೆಯ ಅನುಭವಗಳನ್ನೂ ಒಬ್ಬ ಮುಗ್ಧ ಅನಕ್ಷರಸ್ಥನು ವೈಜ್ಞಾನಿಕ ಸತ್ಯಗಳನ್ನೂ ತಿಳಿಯಲಾರನೆಂದಾದರೆ ಪ್ರವಾದಿತ್ವದ ವಿಶಿಷ್ಟ ವಿಷಯಗಳನ್ನು ಪ್ರವಾದಿ ಅಲ್ಲದವರು ಹೇಗೆ ತಿಳಿಯಬಲ್ಲರು? ಮಗುವಿನಲ್ಲಿ ಪ್ರೌಢಾವಸ್ಥೆಯ ಅನುಭವಗಳು ಮತ್ತು ಅನಕ್ಷರಸ್ಥನಲ್ಲಿ ವೈಜ್ಞಾನಿಕ ಸತ್ಯಗಳನ್ನು ಅರಿಯುವ ಸಾಮರ್ಥ್ಯವು ಕಾರ್ಯರೂಪದಲ್ಲಿ ಇಲ್ಲದಿದ್ದರೂ ಮೂಲಭೂತವಾಗಿಯೂ ನೈಸರ್ಗಿಕವಾಗಿಯೂ ಇದ್ದೇ ಇರುತ್ತದೆ. ಆದರೆ ಪ್ರವಾದಿತ್ವವನ್ನು ತಿಳಿಯುವ ಸಾಮರ್ಥ್ಯವು ಮೂಲಭೂತವಾಗಿಯೂ ನೈಸರ್ಗಿಕವಾಗಿಯೂ ಇರುವುದಿಲ್ಲ. ಒಂದು ವಸ್ತುವಿನ ವಾಸ್ತವಿಕತೆ ಮತ್ತು ನೈಜ ನೆಲೆಯನ್ನು ಸರಿಯಾಗಿ ತಿಳಿದುಕೊಳ್ಳುವುದು ಮತ್ತು ಅದರ ಬಗ್ಗೆ ಒಂದು ಅಸ್ಪಷ್ಟ ಭಾವನೆಯನ್ನು ಹೊಂದುವುದು ಬೇರೆ ಬೇರೆ ವಿಷಯಗಳಾಗಿವೆ. ಮೊದಲನೆಯ ವಿಷಯವು ನಮ್ಮ ಮಟ್ಟಿಗೆ ಅಸಾಧ್ಯವೆಂದಾದರೆ ಎರಡನೆಯ ವಿಷಯವೂ ಅಸಾಧ್ಯವೇ ಆಗಬೇಕೆಂದಿಲ್ಲ. ಬದಲಾಗಿ ವಾಸ್ತವಿಕತೆಯು ಹೆಚ್ಚಿನ ವೇಳೆ ಇದಕ್ಕೆ ತದ್ವಿರುದ್ಧವಾಗಿರುತ್ತದೆ. ಎಷ್ಟೋ ವಸ್ತುಗಳ ವಾಸ್ತವಿಕತೆಯನ್ನು ತಿಳಿಯಲು ಸಾಧ್ಯವಿಲ್ಲ. ಆದರೆ ಉದಾಹರಣೆಗಳ ಮೂಲಕ ಮತ್ತು ಅದರ ಸುತ್ತಮುತ್ತಲಿರುವ ವಿಭಿನ್ನ ವಿವರಗಳ ಸಹಾಯದಿಂದ ನಮ್ಮ ಭಾವನೆಯ ಕಣ್ಣುಗಳು ಅವುಗಳ ಒಂದು ದರ್ಶನವನ್ನು

ಪಡೆದೇ ತೀರುತ್ತವೆ. 'ವಹೀ' ಮತ್ತು ಅದರ ಅವತೀರ್ಣವೂ ಇದೇ ರೀತಿಯದ್ದಾಗಿದೆ 'ವಹೀ'ಯ ನೈಜ ನೆಲೆ ಮತ್ತು ವಾಸ್ತವಿಕತೆ ಏನೆಂಬುದು ನಮಗೆ ತಿಳಿದಿಲ್ಲ. ಆದರೆ ನಮ್ಮ ತಿಳುವಳಿಕೆ ಮತ್ತು ಅನುಭವಗಳಲ್ಲಿರುವ ಕೆಲವು ವಸ್ತುಗಳ ಆಧಾರದಲ್ಲಿ ಅದರ ಒಂದ ದರ್ಶನವನ್ನು ಖಂಡಿತ ಪಡೆಯಬಹುದಾಗಿದೆ. ಆ ವಸ್ತುಗಳಲ್ಲಿ ಅತ್ಯಂತ ಪ್ರಮುಖ ಮತ್ತು ಸ್ಪಷ್ಟ ವಸ್ತು ಸತ್ಯವಾಗುವ ಕನಸುಗಳಾಗಿವೆ ಈ ಕನಸುಗಳ ಸ್ಥಿತಿ ಏನೆಂದರೆ ಮುಂ ಸಂಭವಿಸಲಿರುವ ಒಂದು ಘಟನೆಯು ನಿದ್ರೆಯಲ್ಲಿರುವ ವ್ಯಕ್ತಿಗೆ ಗುಪ್ತವಾಗಿ ಈ ಸಂಭವಿಸುತ್ತಿರುವಂತೆ ಕಾಣುತ್ತದೆ. ಈ ರೀತಿ ಅವನಿಗೆ ನಾಳೆ ಸಂಭವಿಸಲಿರುವ ಒಂದ ಘಟನೆಯ ಸೂಚನೆ ಒಂದು ವಿಶಿಷ್ಟ ಶೈಲಿಯಲ್ಲಿ ಇಂದೇ ಸಿಕ್ಕಿ ಬಿಡುತ್ತದೆ. ಮುಂ ಸಂಭವಿಸಲಿರುವ ಒಂದು ಘಟನೆಯು ಮನುಷ್ಯ ಮಸ್ತಿಷ್ಕಕ್ಕೆ, ಅದು ತನ್ನ ಪರಿಸರದಿಂ ಪೂರ್ಣ ನಿರ್ಲಿಪ್ತ ಮತ್ತು ಅದರ ಬಗ್ಗೆ ಪೂರ್ಣ ಅಜ್ಞವಾಗಿರುವ ಸ್ಥಿತಿಯಲ್ಲಿ ಮೊದಲೆ ಹೇಗೆ ತಿಳಿದು ಬಿಡುತ್ತದೆ. ಎಲ್ಲಿಂದ, ಯಾವ ರೀತಿಯಲ್ಲಿ ಅದರ ಸೂಚನೆ ಆತನಿ ಸಿಗುತ್ತದೆ? ಈ ವಿಶ್ವದ ಹಿಂದೆ ಒಂದು ಅಗೋಚರ ಶಕ್ತಿಯ ಮತ್ತು ಕೆಲವು ಉನ್ನ ವಾಸ್ತವಿಕತೆಗಳ ಅಸ್ತಿತ್ವವನ್ನು ನಿರಾಕರಿಸುವವರು ಈ ಬಗ್ಗೆ ಏನೆಲ್ಲಾ ಹೇಳುತ್ತಿದ್ದಾರೆ. ಆದ ದೇವನ ಮೇಲೆ ಮತ್ತು ಅವನ ಔನ್ನತ್ಯದ ಬಗ್ಗೆ ದೃಢವಿಶ್ವಾಸವಿರುವವರು ಇದನ್ನೊಂದ ದೈವಿಕ ಅನುಗ್ರಹವೆಂದಲ್ಲದೆ ಬೇರೇನೂ ಭಾವಿಸಲಾರರು. ಇಂತಹ ಅನುಗ್ರಹಗಳನ್ ಆತನು ತನ್ನ ದಾಸರ ಮೇಲೆ ಮಾಡುತ್ತಿರುತ್ತಾನೆ. ಪರೋಕ್ಷದ ಜ್ಞಾನಿ ಮತ್ತು ಎಲ್ ಘಟನಾವಳಿಗಳ ಕಾರಣಕರ್ತನಾದ ಅಲ್ಲಾಹನು ಅವರಿಗೆ ನಿದ್ರೆಯ ಸ್ಥಿತಿಯಲ್ಲಿ ಒಂದ ವಿಶಿಷ್ಟ ಬಗೆಯಲ್ಲಿ ಮುಂದೆ ಬರಲಿರುವ ಘಟನೆಯನ್ನು ತಿಳಿಸಿ ಬಿಡುತ್ತಾನೆ. ಸ್ವಪ್ನ ಮೂಲಕ ಪರೋಕ್ಷ ಜ್ಞಾನದ ಕೆಲವು ವಿಷಯಗಳು ಈ ರೀತಿ ತಿಳಿದು ಬರುವುದ ಮನುಷ್ಯನಿಗೆ ಆಗಾಗ ಆಗುತ್ತಿರುವ ಒಂದು ಅನುಭವವಾಗಿದೆ. ಈ ಅನುಭವ ಉಪಸ್ಥಿತಿಯಲ್ಲಿ 'ವಹೀ' ಅವತೀರ್ಣವಾಗುವ ಮತ್ತು ಅಲ್ಲಾಹನ ವತಿಯಿಂದ ಆತನ ಕೆಲ ವಿಶಿಷ್ಟ ದಾಸರಿಗೆ ಮಾರ್ಗದರ್ಶನ ಲಭಿಸುವ ವಿಷಯವು ಒಂದು ವೇಳೆ ಅರ್ಥವಾಗ ವಿಷಯವಾದರೂ ಊಹಿಸಲಾಗದ ವಿಷಯ ಖಂಡಿತ ಅಲ್ಲ. ಆದರೆ ಒಬ್ಬ ಸಾಮಾ ಮನುಷ್ಯನು ತನ್ನ ಮಸ್ತಿಷ್ಕಕ್ಕೆ ನಿದ್ರೆಯ ಅಮಲಿನಲ್ಲಿ ಇಂತಹ ವಿಷಯ ಹೇಗೆ ಹೊಳೆಯಿತ ಹಾಗೂ ಆ ಸ್ವಪ್ನದ ವಾಸ್ತವಿಕತೆ ಏನು ಎಂಬುದನ್ನು ತಿಳಿಯಲು ಸಾಧ್ಯವಿಲ್ಲದಿರುವಾ ಆತ 'ವಹೀ' ಮತ್ತು ಅದರ ಅವತೀರ್ಣದ ವಾಸ್ತವಿಕತೆಯನ್ನು ಹೇಗೆ ತಿಳಿಯಬಲ್ಲನು

"ಮುಸ್ಲಿಮನ ಸತ್ಯ ಸ್ವಪ್ನವು ಪ್ರವಾದಿತ್ವದ ನಲ್ವತ್ತನೇ ಒಂದಂಶ" ಎಂದ ಪ್ರವಾದಿ(ಸ) ಹೇಳಿರುವರು. (ತಿರ್ಮಿದಿ-ಬಾಬುರ್ರುಅ್‌ಯಾ) ಸ್ವಯಂ ಹ. ಮುಹಮ್ಮದ್‌ರಿಗೆ(ಸ ಪ್ರವಾದಿತ್ವ ದೊರೆಯುವುದಕ್ಕಿಂತ ಮುಂಚಿನ ಆರು ತಿಂಗಳುಗಳು ಸತ್ಯ ಸ್ವಪ್ನಗಳ ಕಾ ವಾಗಿತ್ತು. ಆ ಕಾಲಾವಧಿಯಲ್ಲಿ ಅವರು ಸತ್ಯ ಸ್ವಪ್ನಗಳನ್ನು ಅನೇಕ ಸಲ ಕಂಡಿದ್ದರು

ಪ್ನದಲ್ಲಿ ಕಂಡದ್ದೇ ಆ ಬಳಿಕ ಸಂಭವಿಸುತ್ತಿದ್ದುದನ್ನು ಅವರು ನೋಡಿದ್ದರು. ಈ ಾವಧಿಯು ಅವರ ಸಾಮಾನ್ಯ ಮಾನವತೆಯ ಸ್ಥಿತಿ ಮತ್ತು ಪ್ರವಾದಿತ್ವ ಸ್ಥಿತಿಯ ಧ್ಯಾವಧಿಯಾಗಿತ್ತು. ಈ ಸ್ವಪ್ನಗಳು ಒಂದು ರೀತಿಯಲ್ಲಿ ಪ್ರವಾದಿತ್ವದ ಪೀಠಿಕೆ ಾಗಿದ್ದುವು. ಸತ್ಯ ಕನಸುಗಳ ಅಸ್ತಿತ್ವವು ವಹೀ ಮತ್ತು ಅದರ ಅವತೀರ್ಣದ ಒಂದು ಸ್ಪಷ್ಟ ಕಲ್ಪನೆಯನ್ನು ಖಂಡಿತ ನೀಡಬಲ್ಲುದು. ಏಕೆಂದರೆ ಅವುಗಳಿಗೆ ಪ್ರವಾದಿತ್ವ ತ್ತು ವಹೀಯೊಂದಿಗೆ ಒಂದು ರೀತಿಯ ಸಂಬಂಧವಿದೆ ಎಂಬುದು ಮೇಲಿನ ರಣೆಗಳಿಂದ ತಿಳಿದು ಬರುತ್ತದೆ. ಈ ಕಾರಣದಿಂದಲೇ ಸತ್ಯ ಮತ್ತು ಉತ್ತಮವಾದ ಸುಗಳನ್ನು ಕೇವಲ ಪ್ರವಾದಿಗಳಿಗೆ ಸೀಮಿತಗೊಳಿಸಲಾಗಿಲ್ಲ. ಅದು ಇತರ ನುಷ್ಯರಿಗೂ ಸಾರ್ವತ್ರಿಕವಾಗಿದೆ. ವಹೀಯ ಪರಂಪರೆಯು ಕೊನೆಗೊಂಡ ಬಳಿಕವೂ ಸತ್ಯ ತ್ತು ಉತ್ತಮವಾದ ಸ್ವಪ್ನಗಳ ದ್ವಾರವನ್ನು ನಿರ್ಣಾಯಕ ದಿನದ ತನಕವೂ ತೆರೆದಿಡಲಾಗಿದೆ. ಷ್ಯಪಕ್ಷ 'ವಹೀ'ಯ ಅವತೀರ್ಣದ ಸ್ಥಿತಿಯ ಒಂದು ಮೂಲ ಕಲ್ಪನೆ, ಒಂದು ದೂರದ ಾಹರಣೆ ಮತ್ತು ಮಾರ್ಗದರ್ಶನ ಶಾಶ್ವತವಾಗಿ ಉಳಿಯಬೇಕೆಂಬುದೇ ಇದರ ದ್ದೇಶವಾಗಿದೆ.

## ಲಾಇಕಃ (ಮಲಕ್‌ಗಳು)

ಪವಿತ್ರ ಕುರ್‌ಆನಿನಲ್ಲಿ 'ಮಲಾಇಕಃ' (ದೇವಚರರು) ಎಂಬ ಒಂದು ವಿಶಿಷ್ಟ ಬಗೆಯ ಸ್ಟಿಯ ಕುರಿತು ಅನೇಕ ಕಡೆ ಉಲ್ಲೇಖಿಸಲಾಗಿದೆ. ವಿಭಿನ್ನ ಕಾರಣಗಳಿಗಾಗಿ ಈ ಪದವು ತ್ರ ಕುರ್‌ಆನಿನ ಪ್ರಮುಖ ಪಾರಿಭಾಷಿಕಗಳಲ್ಲಿ ಒಂದಾಗಿದೆ. ವಿಶೇಷವಾಗಿ ಅವರ ಪೈಕಿ ವರು ಪ್ರವಾದಿಗಳಿಗೆ ಅಲ್ಲಾಹನ ವತಿಯಿಂದ 'ವಹೀ' ತಲುಪಿಸುವ ಮಾಧ್ಯಮ ಗಿರುವವರು ಎಂಬ ಕಾರಣಕ್ಕಾಗಿ. ಮಾತ್ರವಲ್ಲ 'ಮಲಾಇಕಃ'ರ ಮಹಿಮೆ, ಶ್ರೇಷ್ಠತೆಗಳು ಮಾನ್ಯವಾಗಿ ಜನರ ಮಟ್ಟಿಗೆ ಒಂದು ದೊಡ್ಡ ಪರೀಕ್ಷೆಯಾಗಿ ಪರಿಣಮಿಸಿದೆ. ಅವರ ವಾದರದಲ್ಲಿ ಅತಿರೇಕವೆಸಗುವ ಮೂಲಕ ಮನುಷ್ಯರು ದೇವ ಸಹಭಾಗಿತ್ವ, ಸತ್ಯನಿಷೇಧ ತ್ತು ವಿಗ್ರಹಾರಾಧನೆಯಂತಹ ಮಾರಕ ಪಥಭ್ರಷ್ಟತೆಗಳಲ್ಲಿ ಸಿಲುಕುತ್ತಿರುವರು. ಕೆಲವೆಡೆ ರನ್ನು ದೇವ ಸಂತಾನವೆಂದೂ ಪರಿಗಣಿಸಲಾಗಿದೆ. (ಶಾಂತಂ ಪಾಪಂ) ಕೆಲವೆಡೆ ಅವರನ್ನು ವನ ವಿಭಿನ್ನ ಗುಣಗಳ ಹೆಸರೆಂದು ಪರಿಗಣಿಸಲಾಗಿದೆ. ಈ ರೀತಿ ದೇವ-ದೇವತೆಗಳ ನೆಯು ಅಸ್ತಿತ್ವಕ್ಕೆ ಬಂತು. ಆದುದರಿಂದ ಅವರ ಬಗ್ಗೆ ಕುರ್‌ಆನ್ ನಿರ್ದಿಷ್ಟ ಪಡಿಸಿದ ನೆಯನ್ನು ಸ್ಪಷ್ಟವಾಗಿ ತಿಳಿಯುವುದು ಅಗತ್ಯ.

ಜನಸಾಮಾನ್ಯರ ಮಟ್ಟಿಗೆ ದೇವಚರರು ಅಗೋಚರರಾಗಿದ್ದಾರೆ ಮಾತ್ರವಲ್ಲ ನಮ್ಮ ದ್ರಿಯಗಳಿಗೆ ನಿಲುಕದವರಾಗಿದ್ದಾರೆ. ಆದುದರಿಂದ 'ವಹೀ'ಯಂತೆ ಅವರ ವಾಸ್ತವಿಕತೆ ನ್ನು ತಿಳಿಯುವುದು ಕೂಡಾ ಅಸಾಧ್ಯವಾಗಿದೆ. ಧರ್ಮದ ಧ್ಯೇಯೋದ್ದೇಶಗಳಿಗೆ ಅದರ

ಅಗತ್ಯವೂ ಇಲ್ಲ. ಧಾರ್ಮಿಕವಾಗಿ ನಮಗೆ ಅದರ ನೆಲೆ ಮತ್ತು ಗುಣಗಳ ಬಗ್ಗೆ ಸರಿಯ ಜ್ಞಾನ ದೊರೆತರೆ ಸಾಕು. ಈ ಜ್ಞಾನವನ್ನೇ ನಮಗೆ ಕೊಡಲಾಗಿದೆ. ಪವಿತ್ರ ಕುರ್‌ಆ ಹೇಳಿಕೆಗಳು ಮತ್ತು ಪ್ರವಾದಿ ಮುಹಮ್ಮದ್‌ರವರ(ಸ) ವಿವರಣೆಗಳ ಬೆಳಕಿನಲ್ಲಿ ದೇವಚ ನೆಲೆ ಮತ್ತು ಅವರ ಗುಣಗಳು ಹೀಗಿವೆ:

1) ದೇವಚರರು ಅಲ್ಲಾಹನ ಗೌರವಾನ್ವಿತ, ಉನ್ನತ ಮತ್ತು ನಿಕಟ ಸೃಷ್ಟಿಗಳಾಗಿದ್ದಾ

"ಅವರಂತು (ದೇವಚರರಂತು) ಸನ್ಮಾನಿತ ದಾಸರಾಗಿರುತ್ತಾರೆ."

(ಪವಿತ್ರ ಕುರ್‌ಆನ್, 21:2

2) ಅವರು ಸದಾ ಅಲ್ಲಾಹನ ಆಜ್ಞೆಗಳನ್ನೂ ಅಭೀಷ್ಟಗಳನ್ನೂ ಪೂರ್ತಿಯ ಪಾಲಿಸುತ್ತಾರೆ. ಅವರಲ್ಲಿ ದೇವಾಜ್ಞೆಗೆ ವಿರುದ್ಧ ವರ್ತಿಸುವ ಶಕ್ತಿಯೇ ಇಲ್ಲವೆಂ ಕುರ್‌ಆನ್ ಹೇಳುವುದಿಲ್ಲವಾದರೂ ಅವರು ಎಂದೂ ಕಾರ್ಯತಃ ಆಜ್ಞೋಲ್ಲಂಘ ಮಾಡುವುದಿಲ್ಲ. ಸಂಪೂರ್ಣ ವಿಧೇಯತೆಯೇ ಅವರ ವೈಶಿಷ್ಟ್ಯವಾಗಿದೆ ಎಂ ವಾಸ್ತವಿಕತೆಯನ್ನು ಕುರ್‌ಆನ್ ಪದೇ ಪದೇ ಸ್ಪಷ್ಟಪಡಿಸಿದೆ.

"ಅವನ ಅಪ್ಪಣೆಯಂತೆ ಕಾರ್ಯವೆಸಗುತ್ತಾರೆ." (ಪವಿತ್ರ ಕುರ್‌ಆನ್, 21:2

ಅಲ್ಲಾಹನ ಸ್ತುತಿ-ಸ್ತೋತ್ರ ಮತ್ತು ಮಹಿಮೆಯನ್ನು ಜಪಿಸುವುದರಲ್ಲೇ ಸ ನಿರತರಾಗಿರುತ್ತಾರೆ.

"ನಾವಂತೂ ನಿನ್ನ ಗುಣಗಾನ ಮಾಡುತ್ತಿರುವುದರೊಂದಿಗೆ ನಿನ್ನನ್ನು ಸ್ತುತಿಸುತ್ತೇ ನಿನ್ನ ಪರಿಶುದ್ಧತೆಯನ್ನು ಕೊಂಡಾಡುತ್ತಲೂ ಇದ್ದೇವೆ." (ಪವಿತ್ರ ಕುರ್‌ಆನ್, 2:3

ದೇವಭಯವು ಅವರನ್ನು ಸದಾ ಆವರಿಸಿರುತ್ತದೆ.

"ಅವರು ಅವನ ಭಯದಿಂದ ಭೀತರಾಗಿರುತ್ತಾರೆ." (ಪವಿತ್ರ ಕುರ್‌ಆನ್, 21:2

3) ಅವರಿಗೆ ಅಸಾಮಾನ್ಯ ಮತ್ತು ಮಿತಿಯಿಲ್ಲದ ಶಕ್ತಿ-ಸಾಮರ್ಥ್ಯಗಳು ನೀಡಲ್ಪಟ್ಟಿ ಅವರ ಸಂಖ್ಯೆಯು ಎಣಿಕೆಗೆ ಮೀರಿದ್ದು, ಮಾತ್ರವಲ್ಲ ಊಹೆಗೂ ನಿಲುಕದ್ದಾಗಿದೆ.

4) ವಿಶ್ವದಲ್ಲಿ ಅವರ ನೆಲೆಯು ಸರಕಾರೀ ಕಾರ್ಯಕರ್ತನಂತಿದೆ. ದೇವನ ಆದೆ ನಿರ್ದೇಶಗಳಂತೆ ಅವರು ಈ ವಿಶ್ವವೆಂಬ ಕಾರ್ಖಾನೆಯ ವ್ಯವಸ್ಥೆ ನಡೆಸುತ್ತಾರೆ. ನವ ಈ ಲೋಕದಿಂದ ಹಿಡಿದು ವಿಶ್ವದ ಕೊನೆಯ ಮೇರೆಯ ತನಕ ಜಾರಿಯಾಗುವ ಆದೆ ನಿರ್ದೇಶಗಳೆಲ್ಲಾ ಈ ದೇವಚರರ ಮುಖಾಂತರವೇ ಆಗುತ್ತವೆ. ಅದರಲ್ಲಿ ಅವರ ಇ ಅಥವಾ ಅಭಿಪ್ರಾಯಕ್ಕೆ ಯಾವುದೇ ಪಾತ್ರವಿರುವುದಿಲ್ಲ. ಅವರಿಗೆ ಅವರ ಒಡೆಯ

ಯಿಂದ ಯಾವ ಆಜ್ಞೆ ಲಭಿಸುತ್ತದೋ ಅದನ್ನೇ ಅವರು ಪಾಲಿಸುತ್ತಾರೆ. ಅದೇ ರೀತಿ ವರಿಗೆ ಅಸಾಮಾನ್ಯ ಮತ್ತು ಅಗಣಿತ ಶಕ್ತಿಗಳು ಸಿಕ್ಕಿವೆ ಎಂಬುದರ ತಾತ್ಪರ್ಯವು ಅವರಿಗೆ ಂಸಲಾದ ಕರ್ತವ್ಯಗಳನ್ನು ಸಮರ್ಥವಾಗಿ ಪೂರೈಸಲು ಅವರಿಗೆ ಸಂಪೂರ್ಣ ಶಕ್ತಿ ಯಪಾಲಿಸಲಾಗಿದೆ ಎಂಬುದಾಗಿದೆ.

5) ಪದವಿಯ ಆಧಾರದಲ್ಲಿ ಅವರಲ್ಲಿ ಅನೇಕ ವರ್ಗಗಳಿವೆ. ಅದರ ಜ್ಞಾನವು ಅಲ್ಲಾಹನ ಹೊರತು ಬೇರೆ ಯಾರಿಗೂ ಇಲ್ಲ. ಆದರೆ ಮೂಲಭೂತವಾಗಿ ಅವರಲ್ಲಿ ಎರಡು ವರ್ಗಗಳಿವೆ. ಮಾನ್ಯರ ವರ್ಗ ಮತ್ತು ವರಿಷ್ಠರ ವರ್ಗ. ವರಿಷ್ಠರ ವರ್ಗದ ದೇವಚರರನ್ನು ಪವಿತ್ರ ್‌ಆನ್ 'ರೂಹ್' ಎಂಬ ಒಂದು ವಿಶೇಷ ಹೆಸರಿನಿಂದ ಕರೆದಿದೆ. ಅವರು ಸಾಮಾನ್ಯ ವಚರರಿಗಿಂತ ಉನ್ನತ ಸ್ಥಾನಮಾನ ಹೊಂದಿದವರಾಗಿದ್ದಾರೆ. ದೇವನಿಗೆ ಅಧಿಕ ಟರಾಗಿದ್ದಾರೆ. ದೇವಾಜ್ಞೆಗಳು ಮೊದಲು ಅವರಿಗೇ ನೀಡಲ್ಪಡುತ್ತವೆ. ಅವರು ಅದನ್ನು ಮ್ಮ ವಿಭಾಗಕ್ಕೆ ಸೇರಿದ ಕೆಳದರ್ಜೆಯ 'ಮಲಾಇಕಃ'ಗಳಿಗೆ ತಲುಪಿಸುತ್ತಾರೆ. ಈ ವರಿಷ್ಠರ ರ್ಗದ ಪ್ರಧಾನರ ಹೆಸರು ಜಿಬ್ರೀಲ್ ಎಂದಾಗಿದೆ. ಈ ದೇವಚರರೇ ಪ್ರವಾದಿಗಳಿಗೆ ಲ್ಲಾಹನ 'ವಹೀ'ಯನ್ನು ತಲುಪಿಸುವ ಮಹತ್ವದ ಹೊಣೆಯನ್ನು ನಿರ್ವಹಿಸುತ್ತಾರೆಂಬುದು ರಣೀಯ. ಅವರೇ ಹ. ಮುಹಮ್ಮದ್‌ರವರ(ಸ) ಹೃದಯದಲ್ಲಿ ಕುರ್‌ಆನ್ ಇಳಿಸಿದ್ದರು.

## ಸ್ಲಾಮ್

ಪವಿತ್ರ ಕುರ್‌ಆನ್ ಯಾವ ಧರ್ಮದ ಆಹ್ವಾನ ನೀಡುತ್ತದೋ ಅದನ್ನು ಕುರ್‌ಆನಿನಲ್ಲಿ ಸ್ಲಾಮ್' ಎಂದು ಕರೆಯಲಾಗಿದೆ. 'ಇಸ್ಲಾಮ್' ಎಂಬ ಪದದ ಅರ್ಥ ವಿಧೇಯತೆಯೊಂದಿಗೆ ಬಾಗು ಮತ್ತು ತನ್ನನ್ನು ತಾನು ಅರ್ಪಿಸು ಎಂದಾಗಿದೆ. ಆದರೆ ಈ ಪದವು ಕೇವಲ ಿಂಟಿನ ಅರ್ಥದ ಹೊರತು ಒಂದು ಧಾರ್ಮಿಕ ಕಲ್ಪನೆಯನ್ನೂ ಹೊಂದಿದೆ. ಆದುದರಿಂದ ದರ ಅರ್ಥ ಅಲ್ಲಾಹನ ಮುಂದೆ ಶಿರಬಾಗು ಮತ್ತು ತನ್ನನ್ನು ಆತನ ವಶ ್ಪಿಸುವುದೆಂದಾಗಿದೆ. ಪವಿತ್ರ ಕುರ್‌ಆನ್ ಪ್ರಸ್ತುತಪಡಿಸಿದ ಧರ್ಮವನ್ನು ಇಸ್ಲಾಮ್ ಎಂದು ಯದು ಆ ಪದವು ಧರ್ಮದ ವಾಸ್ತವಿಕತೆ ಮತ್ತು ಧ್ಯೇಯದ ಅತ್ಯುತ್ತಮ ಪ್ರತೀಕವಾದುದರಿಂದ. ಂದರೆ ಇಸ್ಲಾಮ್ ಧರ್ಮದ ಆಗಮನದ ಉದ್ದೇಶವು ಅಲ್ಲಾಹನ ದಾಸರು ಪೂರ್ಣ ತೃಪ್ತಿಯೊಂದಿಗೆ ಪವಿತ್ರ ಕುರ್‌ಆನಿನ ಮುಖಾಂತರ ಅಲ್ಲಾಹನು ನೀಡಿದ ಆಜ್ಞೆಗಳಿಗೆ ೇಯರಾಗಬೇಕೆಂದಾಗಿದೆ.

ಈ ಧರ್ಮ ಮಾತ್ರವಲ್ಲ ಅಲ್ಲಾಹನ ವತಿಯಿಂದ ಬಂದ ಎಲ್ಲ ಧರ್ಮಗಳ ಉದ್ದೇಶ ತ್ತು ವಾಸ್ತವಿಕತೆಯೂ ಇದುವೇ ಆಗಿತ್ತು. ಎಲ್ಲ ದೈವಿಕ ಧರ್ಮಗಳ ಆಗಮನದ ಉದ್ದೇಶವು ರು ತಮ್ಮ ಜೀವನವನ್ನು ಅದರಂತೆ ರೂಪಿಸಬೇಕೆಂಬುದಾಗಿದೆ. ಆ ಮೂಲಕ ತಮ್ಮ ಒಡೆಯನ ವಿಧೇಯ ದಾಸರಾಗಬೇಕೆಂಬುದಾಗಿದೆ. ಆದುದರಿಂದ ವಾಸ್ತವಿಕ ನೆಲೆಯಲ್ಲಿ

ಅವುಗಳಲ್ಲಿ ಪ್ರತಿಯೊಂದು ಧರ್ಮವೂ 'ಇಸ್ಲಾಮ್' ಆಗಿತ್ತು. ಪವಿತ್ರ ಕುರ್‌ಆನ್ ಕು ಈ ವಾಸ್ತವಿಕತೆಯನ್ನು ಪದೇ ಪದೇ ವಿವರಿಸಿದೆ. ತಿರುಳು ಮತ್ತು ಧ್ಯೇಯದ ದೃಷ್ಟಿಯ ಎಲ್ಲಾ ಧರ್ಮಗಳೂ ಒಂದೇ ಆಗಿದ್ದುವು. ಪ್ರವಾದಿಗಳಿಗೆ ಅವತೀರ್ಣವಾದ ಗ್ರಂಥಗಳೆಲ್ಲ ವಸ್ತುತಃ ಇಸ್ಲಾಮ್(ಅಲ್ಲಾಹನ ಸಂಪೂರ್ಣ ವಿಧೇಯತೆ)ನ ಕರೆಯನ್ನೇ ನೀಡಿದ್ದು ಆದುದರಿಂದ ಮೂಲರೂಪದಲ್ಲಿ ಕೇವಲ ಕುರ್‌ಆನಿನ ಅನುಯಾಯಿ ಗಳ ಮಾತ್ರ ಸಂಪೂರ್ಣ ಮಾನವಕುಲದ ಧರ್ಮವು ಸದಾ 'ಇಸ್ಲಾಮ್' ಮಾತ್ರವಾಗಿತ್ತು. ಮಾನವಕು ಮಾತ್ರ ಇದು ಸೀಮಿತವಲ್ಲ. ಸಮಗ್ರ ವಿಶ್ವದ ಧರ್ಮವೂ ಇಸ್ಲಾಮ್ ಆಗಿದೆ ಎಂದು ಪ ಕುರ್‌ಆನ್ ಸ್ಪಷ್ಟಪಡಿಸಿದೆ. (ನೋಡಿರಿ: ಪವಿತ್ರ ಕುರ್‌ಆನ್, 3:83) ಅದು ಹೇಗೆಂ ಅಣುವಿನಿಂದ ಹಿಡಿದು ಸೂರ್ಯನವರೆಗೆ ಈ ಜಗತ್ತಿನಲ್ಲಿರುವ ಪ್ರತಿಯೊಂದು ವಸ್ತು ಅವ ಸೃಷ್ಟಿಕರ್ತನಾದ ಅಲ್ಲಾಹನು ಅವುಗಳಿಗೆ ನಿಶ್ಚಯಿಸಿದ ಕಾನೂನನ್ನೇ ಅನುಸರಿಸುತ್ತವೆ. ದೈವಿಕ ಗ್ರಂಥಗಳು ತಮ್ಮ ಉದ್ದೇಶ ಮತ್ತು ಮೂಲರೂಪದ ದೃಷ್ಟಿಯಿಂದ 'ಇಸ್ಲಾ ಆಗಿದ್ದರೂ ಪವಿತ್ರ ಕುರ್‌ಆನ್ ಅದು ಪ್ರಸ್ತುತ ಪಡಿಸಿದ ಧರ್ಮಕ್ಕೆ ಮಾತ್ರ ಇಸ್ಲಾಮ್ ಎಂ ನಾಮಕರಣ ಮಾಡಿದೆ. ಈ ವೈಶಿಷ್ಟ್ಯ ಮತ್ತು ಮೇಲ್ಮೆಯ ಕಾರಣ ಕುರ್‌ಆನ್ ಮತ್ತು ಅ ಪ್ರಸ್ತುತಪಡಿಸಿದ ಧರ್ಮಕ್ಕೆ ಇತರ ದೈವಿಕ ಗ್ರಂಥ ಮತ್ತು ಧರ್ಮಗಳಿಗಿಂತ ಒಂದು ವಿ ಮತ್ತು ಉನ್ನತ ಸ್ಥಾನವಿದೆ. ಅದರ ಕೂಲಂಕಶ ವಿವರಣೆಯು "ಪವಿತ್ರ ಕುರ್‌ಆ ವೈಶಿಷ್ಟ್ಯಗಳು" ಎಂಬ ಅಧ್ಯಾಯದಲ್ಲಿ ಬಂದಿದೆ. ಈ ಧರ್ಮದ ವಿಶಿಷ್ಟ ಮತ್ತು ಉ ಸ್ಥಾನದ ಕಾರಣದಿಂದಲೇ 'ಇಸ್ಲಾಮ್' ಎಂಬ ಪದವು ಅದರ ವಾಸ್ತವಿಕತೆ ಮತ್ತು ಧ್ಯೇಯ ಪ್ರತೀಕ ಮಾತ್ರವಲ್ಲ, ಅದರ ಹೆಸರು ಮತ್ತು ಸಂಕೇತವೂ ಆಗಿದೆ. ಇತರ ಧರ್ಮಗಳ ಮ 'ಇಸ್ಲಾಮ್' ಅವುಗಳ ವಾಸ್ತವಿಕತೆ ಮತ್ತು ಧ್ಯೇಯಗಳ ಪ್ರತೀಕ ಮಾತ್ರವಾಗಿದೆ. ವಾಸ್ತವ ಎಲ್ಲಾ ದೈವಿಕ ಗ್ರಂಥಗಳೂ ಕುರ್‌ಆನ್ ಆಗಿವೆಯಾದರೂ ಹೆಸರು ಮತ್ತು ಸಂಕೇತವೆ ನೆಲೆಯಲ್ಲಿ ಆ ಪದವು ಕೇವಲ ಪ್ರವಾದಿ ಮುಹಮ್ಮದ್‌ರಿಗೆ(ಸ) ಅವತೀರ್ಣವಾದ ಗ್ರಂ ಬಳಸಲ್ಪಡುತ್ತದೆ. ಅದೇ ರೀತಿ ವಾಸ್ತವದಲ್ಲಿ ಎಲ್ಲಾ ದೈವಿಕ ಧರ್ಮಗಳೂ 'ಇಸ್ಲಾ ಆಗಿವೆಯಾದರೂ ಹೆಸರು ಮತ್ತು ಸಂಕೇತವೆಂಬ ರೂಪದಲ್ಲಿ ಆ ಪದವು ಕುರ್‌ ಪ್ರಸ್ತುತಪಡಿಸುವ ಧರ್ಮಕ್ಕೆ ಮಾತ್ರ ಬಳಸಲ್ಪಡುತ್ತದೆ.

ಕುರ್‌ಆನ್ ಪ್ರಸ್ತುತಪಡಿಸುವ ಧರ್ಮದ ವೈಶಿಷ್ಟ್ಯವೇನೆಂದರೆ ಅದು ಯಾವುದೇ ವ ಅಥವಾ ವಂಶದ ಹೆಸರಲ್ಲ. ಬದಲಾಗಿ ಅದರ ವಾಸ್ತವಿಕತೆ ಮತ್ತು ಧ್ಯೇಯದ ಹೆಸರಾ ಇದರಿಂದಾಗಿ ಒಬ್ಬನು ಅದರ ಹೆಸರು ಕೇಳಿಯೇ ಆ ಧರ್ಮವೇನು ಮತ್ತು ಅದು ಯಾವ ಕಡೆಗೆ ಆಹ್ವಾನಿಸುತ್ತದೆ ಎಂಬುದನ್ನು ಅಂದಾಜಿಸಬಹುದಾಗಿದೆ. ಜಗತ್ತಿನ ಇತರ ಧರ್ಮ ಹೆಸರು ಈ ರೀತಿ ಇಲ್ಲ. ಅವು ಧ್ಯೇಯ ಮತ್ತು ವಾಸ್ತವಿಕತೆಗಳ ಬದಲು ವ್ಯಕ್ತಿ ಮ ಜನಾಂಗಗಳ ಮೇಲೆ ಹೆಸರಿಸಲ್ಪಟ್ಟಿವೆ. ಕ್ರೈಸ್ತ ಧರ್ಮದ ಹೆಸರು ಕ್ರೈಸ್ತ ಧರ್ಮವೆಂದಾದು

ಇದನ್ನು ಏಸುಕ್ರಿಸ್ತರು(ಅ) ಪ್ರಸ್ತುತಪಡಿಸಿದುದರಿಂದ. ಬೌದ್ಧ ಧರ್ಮವು ಬೌದ್ಧ ಧರ್ಮವಾದುದು ಅದರ ಸ್ಥಾಪಕ ಗೌತಮಬುದ್ಧನಾದುದರಿಂದ, ಝೊರಾಷ್ಟ್ರಿಯನ್ ಧರ್ಮವು ಅದರ ನಾಯಕ ಝೊರಾಷ್ಟರನ ಹೆಸರಿಂದಲೇ ಆಗಿದೆ. ಬನೀ ಇಸ್ರಾಈಲರಲ್ಲಿ ಯಹೂದಾ ಎಂಬ ಗೋತ್ರವು ಮಹತ್ವ ಮತ್ತು ಪ್ರಾಮುಖ್ಯತೆ ಪಡೆದುದರಿಂದ ಅದರ ಹೆಸರೇ ಇಡೀ ಜನಾಂಗಕ್ಕೆ ಬಿದ್ದು ಅವರು ಯಹೂದಿಗಳಾದರು. ತರುವಾಯ ಮೂಸಾರ(ಅ) ಶರೀಅತ್ (ಧರ್ಮಶಾಸ್ತ್ರ) ಕೂಡಾ ಅದೇ ಹೆಸರಲ್ಲಿ ಕರೆಯಲ್ಪಟ್ಟಿತು. ಆದರೆ ಕುರ್‌ಆನ್ ತನ್ನ ಆಹ್ವಾನ ಮತ್ತು ತನ್ನ ಧರ್ಮವನ್ನು ಪ. ಮುಹಮ್ಮದ್‌ರ(ಸ) ವ್ಯಕ್ತಿತ್ವ ಅಥವಾ ಅವರ ಜನಾಂಗದ ಕಡೆಗೆ ಅನ್ವಯಿಸಿ ಮುಹಮ್ಮದೀಯ ಧರ್ಮ' 'ಅರಬೀ ಧರ್ಮ' ಅಥವಾ 'ಹಾಶಿಮೀ ಧರ್ಮ'ವೆಂದು ಹೆಸರಿಸಲಿಲ್ಲ. ಬದಲಾಗಿ 'ಇಸ್ಲಾಮ್' ಎಂದು ಹೆಸರಿಸಿತು. ಅದು ಆ ಧರ್ಮದ ಮೂಲ ರೂಪ, ಅದರ ಜಾಗತಿಕ ನೆಲೆ ಮತ್ತು ಔನ್ನತ್ಯದ ಬೇಡಿಕೆಯೂ ಆಗಿತ್ತು.

## ಮೂಮಿನ್ ಮತ್ತು ಮುಸ್ಲಿಮ್

'ಮೂಮಿನ್' ಮತ್ತು 'ಮುಸ್ಲಿಮ್' ಎಂಬ ಪದಗಳು ಕುರ್‌ಆನಿನ ಪ್ರಮುಖ ಪಾರಿಭಾಷಿಕಗಳ ಪೈಕಿ ಎರಡು ಪಾರಿಭಾಷಿಕಗಳಾಗಿವೆ. ಅವೆರಡೂ ಒಂದೇ ಸಮಗ್ರ ವಾಸ್ತವಿಕತೆಯ ಎರಡು ಮುಖಗಳಾಗಿವೆ. ಒಂದನೆಯದು ಜ್ಞಾನಕ್ಕೆ ಸಂಬಂಧಿಸಿದ್ದರೆ ಎರಡನೆಯದು ಕರ್ಮಕ್ಕೆ ಸಂಬಂಧಿಸಿದೆ. ಬಾಹ್ಯ ನೋಟಕ್ಕೆ ಎರಡು ಬೇರೆ ಬೇರೆ ಪಾರಿಭಾಷಿಕಗಳಾಗಿದ್ದರೂ ವಾಸ್ತವದಲ್ಲಿ ಅವು ಒಂದೇ ಆಗಿವೆ. ಮುಂದಿನ ವಿವರಣೆ ಗಳಿಂದ ಇದು ಸ್ಪಷ್ಟವಾಗುವುದು.

'ಮೂಮಿನ್' ಎಂದು ಹೇಳಿರುವುದು ಪವಿತ್ರ ಕುರ್‌ಆನನ್ನು ಸರಿಯಾಗಿ ಮತ್ತು ಉದ್ದಿಷ್ಟರೂಪದಲ್ಲಿ ಅಲ್ಲಾಹನ ಗ್ರಂಥವೆಂದು ಅಂಗೀಕರಿಸುವವನನ್ನು. ಅರ್ಥಾತ್ ಕುರ್‌ಆನ್ ಯಾವ ವಿಶ್ವಾಸಗಳನ್ನು ಅಥವಾ ಮೂಲಭೂತ ವಾಸ್ತವಿಕತೆಗಳನ್ನು ತನ್ನ ಸಂದೇಶದ ಬುನಾದಿಯೆಂದು ಸಾರುತ್ತದೋ ಅವು ಸತ್ಯವೆಂದು ಪ್ರಾಮಾಣಿಕವಾಗಿ ನಂಬ ಬೇಕು ಮತ್ತು ನಾಲಗೆಯಿಂದ ಅದರ ದೃಢೀಕರಣ ಮತ್ತು ಘೋಷಣೆಯನ್ನೂ ಮಾಡಬೇಕು. ಈ ವಿಶ್ವಾಸಗಳು ಅಥವಾ ಮೂಲಭೂತ ವಾಸ್ತವಿಕತೆಗಳು ಐದಾಗಿವೆ. ಪವಿತ್ರ ಕುರ್‌ಆನಿನಲ್ಲಿ ಈ ಕೆಳಗಿನ ವಚನದಲ್ಲಿ ಅದನ್ನು ಕ್ರೋಡೀಕರಿಸಿ ಪ್ರಸ್ತಾಪಿಸಲಾಗಿದೆ:

"ನಿಜವಾಗಿ ಒಬ್ಬನು ಅಲ್ಲಾಹನನ್ನೂ ನಿರ್ಣಾಯಕ ದಿನವನ್ನೂ ದೇವಚರರನ್ನೂ ಅಲ್ಲಾಹನು ಅವತೀರ್ಣಗೊಳಿಸಿದ ಗ್ರಂಥವನ್ನೂ ಅವನ ಸಂದೇಶವಾಹಕರನ್ನೂ ಹೃತ್ಪೂರ್ವಕ ಒಪ್ಪಿಕೊಳ್ಳುವುದೂ" (ಪವಿತ್ರ ಕುರ್‌ಆನ್, 2:177)

ಅಲ್ಲಾಹನನ್ನು ನಂಬುವುದರ ತಾತ್ಪರ್ಯವೇನೆಂದರೆ ಅವನನ್ನು ಮಾತ್ರ ಆರಾಧ್ಯನೆಂದು ಒಪ್ಪುವುದಾಗಿದೆ. ಎಲ್ಲಾ ಉನ್ನತ ಗುಣಗಳು ಮತ್ತು ದೈವಿಕ ಗುಣಗಳು ಅವನಿಗೆ ಮಾತ್ರ

ಮೀಸಲು ಎಂದು ನಂಬುವುದಾಗಿದೆ. ಈ ಗುಣಗಳ ಸಹಜ ಬೇಡಿಕೆಗಳನ್ನು ಕೂಡಾ ಸಂಪೂರ್ಣವಾಗಿ ಅವನಿಗೇ ಮೀಸಲೆಂದು ನಂಬಬೇಕು. ಅರ್ಥಾತ್ ಈ ಗುಣಗಳ ಅನಿವಾರ್ಯ ಬೇಡಿಕೆಗಳಾದ ಅಧಿಕಾರ ಮತ್ತು ಹಕ್ಕುಗಳು ಕೂಡಾ ಅಲ್ಲಾಹನಿಗೆ ಸಲ್ಲತಕ್ಕವುಗಳೆಂದು ನಂಬಬೇಕು. ಉದಾ: ಜನರಿಗೆ ಆಜ್ಞೆ ನೀಡುವ ಮತ್ತು ಅವರಿಗಾಗಿ ಕಾನೂನು ರಚಿಸುವ ನೈಜ ಅಧಿಕಾರ, ಅವರ ಬಗ್ಗೆ ತೀರ್ಮಾನ ನೀಡುವ ಅಧಿಕಾರ, ಅವರ ಪ್ರಾರ್ಥನೆಗಳನ್ನು ಆಲಿಸುವ ಮತ್ತು ಪೂರೈಸುವ ಅಧಿಕಾರ, ಅವರನ್ನು ಕ್ಷಮಿಸುವ ಅಥವಾ ಶಿಕ್ಷಿಸುವ ಅಧಿಕಾರ, ಅವರಿಗೆ ಲಾಭ-ನಷ್ಟ, ಸುಖ-ಕಷ್ಟ, ಆರೋಗ್ಯ-ರೋಗ, ಜೀವನ ಮರಣ ನೀಡುವ ಅಧಿಕಾರ, ತನ್ನ ನಿಶ್ಶರ್ತ ಅನುಸರಣೆ ಮಾಡಿಸುವ ಹಕ್ಕು, ತನ್ನ ಅಭೀಷ್ಟಗಳನ್ನು ಪಾಲಿಸುವಂತೆ ಮಾಡುವ ಹಕ್ಕು, ತನ್ನ ಉಪಾಸನೆ ಮಾಡಿಸುವ ಹಕ್ಕು ಇತ್ಯಾದಿ (ಅಲ್ಲಾಹನನ್ನು ಹೀಗೆ ನಂಬುವುದು ಕುರ್‌ಆನಿನ ಸಂದೇಶ ಮತ್ತು ಇಸ್ಲಾಮಿನ ನೈಜ ಬುನಾದಿಯಾಗಿದೆ. ಅದನ್ನೇ 'ತೌಹೀದ್' ಅಥವಾ ಏಕದೇವ ವಿಶ್ವಾಸವೆನ್ನಲಾಗುತ್ತದೆ

ನಿರ್ಣಾಯಕ ದಿನವನ್ನು ನಂಬುವುದರ ಅರ್ಥ ಈ ವಿಶ್ವವು ಕೊನೆಗೊಂಡು, ಅದರ ವ್ಯವಸ್ಥೆಯು ಸಂಪೂರ್ಣ ನುಚ್ಚುನೂರಾಗಿ, ಈ ಭೂಮಿಯ ಮೇಲೆ ಒಂದೇ ಒಂದ ಜೀವವೂ ಬಾಕಿ ಉಳಿಯದಂತಹ ಒಂದು ದಿನ ಬರಲಿಕ್ಕಿದೆ ಎಂದು ದೃಢವಿಶ್ವಾಸ ತಾಳುವುದಾಗಿದೆ. ಆ ಬಳಿಕ ಜಗತ್ತಿನ ಪ್ರಥಮ ಮಾನವನಿಂದ ಹಿಡಿದು ಕೊನೆಯ ಮಾನವನ ತನಕ ಎಲ್ಲರೂ ಮತ್ತೊಮ್ಮೆ ಜೀವಂತರಾಗಿ ಅಲ್ಲಾಹನ ಸನ್ನಿಧಿಯಲ್ಲಿ ಹಾಜರುಪಡಿಸಲ್ಪಡುವರು. ಅಲ್ಲಿ ಅವರ ಲೌಕಿಕ ಕರ್ಮಗಳ ಸಂಪೂರ್ಣ ದಸ್ತಾವೇಜು ಅವರ ಮುಂದಿಡಲಾಗುವುದು. ಒಬ್ಬೊಬ್ಬ ಮನುಷ್ಯನ ಲೆಕ್ಕಾಚಾರ ಪ್ರತ್ಯೇಕವಾಗಿ ಪಡೆಯಲಾಗುವುದು. ಒಳಿತಿಗೆ ಸತ್ಫಲ ಹಾಗೂ ಕೆಡುಕಿಗೆ ಶಿಕ್ಷೆ ನೀಡಲಾಗುವುದು. ಅರ್ಥಾತ್ ಯಾವ ವ್ಯಕ್ತಿಯ ಕರ್ಮಪತ್ರವು ಸತ್ಯವಿಶ್ವಾಸ, ಸತ್ಕರ್ಮ ಮತ್ತು ಅನುಸರಣೆ ಮತ್ತು ದಾಸ್ಯದ ಕರ್ಮಪತ್ರವಾಗಿರುವುದೋ ಅಂಥವನಿಗೆ ಅಲ್ಲಾಹನು ಅತ್ಯುತ್ತಮ ಅನುಗ್ರಹಗಳಿಂದ ಕೂಡಿದ ಇನ್ನೊಂದು ಜೀವನ ದಯಪಾಲಿಸುವನು. ಅದು ಶಾಶ್ವತ ಜೀವನವಾಗಿರುವುದು ಯಾವ ವ್ಯಕ್ತಿಯ ಕರ್ಮಪತ್ರ ಸತ್ಯವಿಶ್ವಾಸದ ಬದಲು ದೇವಸಹಭಾಗಿತ್ವ, ಸತ್ಯ ನಿಷೇಧ ಹಾಗೂ ಸತ್ಕರ್ಮಗಳ ಬದಲು ದುಷ್ಕರ್ಮ, ಅನುಸರಣೆ ಮತ್ತು ದಾಸ್ಯದ ಬದಲು ನೈಜ ಒಡೆಯನ ವಿರುದ್ಧ ದಂಗೆಯ ಕರ್ಮಪತ್ರವಾಗಿರುವುದೋ ಅವನಿಗೆ ಯಾತನೆಗಳಿಂದ ಕೂಡಿದ ಜೀವನವನ್ನು ನೀಡಲಾಗುವುದು. ಈ ಜೀವನವೂ ಶಾಶ್ವತವಾಗಿರುವುದು. (ಇದು ಕುರ್‌ಆನಿನ ಸಂದೇಶ ಮತ್ತು ಇಸ್ಲಾಮಿನ ಎರಡನೇ ಮುಖ್ಯ ಬುನಾದಿಯಾಗಿದೆ. ಇದನ್ನು 'ಆಖಿರತ್' ಅಥವಾ ಪರಲೋಕ ವಿಶ್ವಾಸವೆನ್ನಲಾಗುತ್ತದೆ.)

ದೇವಚರರನ್ನು ನಂಬುವುದರ ತಾತ್ಪರ್ಯವೇನೆಂದರೆ ಅವರ ಅಸ್ತಿತ್ವವನ್ನು ಸತ್ಯವೆಂದು

ಂಬುವುದು. 'ಮಲಾಇಕಃ' ಎಂಬ ಶಿರೋನಾಮೆಯಲ್ಲಿ ಈ ಹಿಂದೆ ವಿವರಿಸಿದ ಅವರ ಎಲ್ಲ ಣಗಳನ್ನೂ ಒಪ್ಪುವುದಾಗಿದೆ.

ದೈವಿಕ ಗ್ರಂಥಗಳನ್ನು ನಂಬುವುದರ ತಾತ್ಪರ್ಯವೇನೆಂದರೆ ಅಲ್ಲಾಹನ ವತಿಯಿಂದ ಾನವಕುಲದ ಮಾರ್ಗದರ್ಶನಕ್ಕಾಗಿ ಅವತೀರ್ಣವಾದ ಎಲ್ಲ ಗ್ರಂಥಗಳನ್ನೂ ನಂಬುವು ಗಿದೆ. ಆ ಪೈಕಿ ಯಾವ ಗ್ರಂಥಗಳ ಬಗ್ಗೆ ಕುರ್‌ಆನಿನಲ್ಲಿ ಸ್ಪಷ್ಟ ಪುರಾವೆಗಳಿವೆಯೋ ವುಗಳನ್ನು ಆ ಹೆಸರಲ್ಲೇ ದೇವ ಗ್ರಂಥಗಳೆಂದು ನಂಬಬೇಕು. ಯಾವ ಗ್ರಂಥಗಳ ಬಗ್ಗೆ ಪುರಾವೆ ಇಲ್ಲವೋ ಅವುಗಳ ಬಗ್ಗೆ ತಾತ್ವಿಕವಾಗಿ ಅವುಗಳೆಲ್ಲಾ ದೇವನ ಗ್ರಂಥಗಳೆಂದು ಂಬಬೇಕು.

ದೈವಿಕ ಗ್ರಂಥಗಳನ್ನು ನಂಬುವುದರ ಒಂದು ಅಗತ್ಯ ಬೇಡಿಕೆ ಏನೆಂದರೆ ಈಗ ಸ್ತಿತ್ವದಲ್ಲಿರುವ ಮತ್ತು ಕುರ್‌ಆನ್ ಹೆಸರಿಸಿರುವ ಗ್ರಂಥಗಳಿಗೆ ಕುರ್‌ಆನಿನಲ್ಲಿ ಅವುಗಳಿಗೆ ಡಲಾಗಿರುವ ಸ್ಥಾನಮಾನವನ್ನೇ ನೀಡಬೇಕು. ಕಾರ್ಯರೂಪದಲ್ಲಿ ಇದರ ತಾತ್ಪರ್ಯ ನೆಂದರೆ ಪವಿತ್ರ ಕುರ್‌ಆನನ್ನು ಕೊನೆಯ ಗ್ರಂಥವೆಂದು ಪರಿಗಣಿಸಬೇಕು. ಅದು ತನ್ನ ಂದಿನ ಎಲ್ಲ ಗ್ರಂಥಗಳನ್ನೂ ಅಸಿಂಧುಗೊಳಿಸುವಂತಹ ಕೊನೆಯ ಗ್ರಂಥವೆಂದೂ ಅದರ ುಸರಣೆಯಲ್ಲೇ ಎಲ್ಲ ಜನರ ಮೋಕ್ಷವು ಅಡಗಿದೆ ಎಂದೂ ನಂಬಬೇಕು.

ಪ್ರವಾದಿಗಳ ಮೇಲೆ ವಿಶ್ವಾಸವಿಡುವುದರ ತಾತ್ಪರ್ಯವೇನೆಂದರೆ ಅಲ್ಲಾಹನು ಿಯಿಂದ ಅಂತ್ಯದ ವರೆಗೆ ಎಷ್ಟು ಪ್ರವಾದಿಗಳನ್ನು ನಿಯೋಗಿಸಿರುವನೋ, ಅವರೆಲ್ಲರನ್ನೂ ಾವುದೇ ತಾರತಮ್ಯವಿಲ್ಲದೆ ನಂಬುವುದು. ಆ ಪೈಕಿ ಯಾರನ್ನು ಪವಿತ್ರ ಕುರ್‌ಆನ್ ಸರೆತ್ತಿ ಪ್ರಸ್ತಾಪಿಸಿದೆಯೋ ಅವರ ಮೇಲೆ ಆ ಹೆಸರುಗಳ ಜೊತೆಯೇ ವಿಶ್ವಾಸವಿಡಬೇಕು ತ್ತು ಇತರರ ಬಗ್ಗೆ ಅವರು ದೇವ ಪ್ರವಾದಿಗಳಾಗಿದ್ದರೆಂಬುದನ್ನು ತಾತ್ವಿಕವಾಗಿ ಂಬಬೇಕು.

ಹ. ಮುಹಮ್ಮದ್‌ರನ್ನು(ಸ) ಅಲ್ಲಾಹನ ಕೊನೆಯ ಪ್ರವಾದಿಯೆಂದು ನಂಬುವುದು ವಿಶ್ವಾಸದ ಒಂದು ಅಗತ್ಯ ಬೇಡಿಕೆಯಾಗಿದೆ. ಸಂಪೂರ್ಣ ಮಾನವಕುಲಕ್ಕೆ ಅವರ ುಸರಣೆಯು ಕಡ್ಡಾಯವಾಗಿದೆ ಎಂದೂ ವಿಶ್ವಾಸವಿರಿಸಬೇಕು. ಹ. ಮುಹಮ್ಮದ್‌ರ(ಸ) ಮಕದ ಬಳಿಕ ಲೋಕಾವಸಾನದವರೆಗಿನ ಕಾಲವು ಅವರ ಪ್ರವಾದಿತ್ವದ ಕಾಲವಾಗಿದೆ. ಂದಿನ ಎಲ್ಲ ಪ್ರವಾದಿಗಳ ಪ್ರವಾದಿತ್ವ ಕಾಲವು ದೇವಾಜ್ಞೆಯ ಮೇರೆಗೆ ಕೊನೆಗೊಂಡಿದೆ. ಗ ಇನ್ನಾರ ಅನುಸರಣೆಯೂ ಅಲ್ಲಾಹನ ಬಳಿ ಸ್ವೀಕಾರಾರ್ಹವಾಗದು.

'ಮುಸ್ಲಿಮ್' ಎಂದರೆ 'ಮೂಮಿನ್' ಆಗಿರುವುದರ ಪ್ರಾಯೋಗಿಕ ಬೇಡಿಕೆಗಳನ್ನು ೈಸಲು ಪ್ರಯತ್ನಿಸುವವನು. ಆತನು ಕುರ್‌ಆನ್ ಮತ್ತು ಇಸ್ಲಾಮಿನ ಅನುಯಾಯಿ, ವಾಜ್ಞೆಯ ಮುಂದೆ ಆತ್ಮ ಸಮರ್ಪಣೆ ಮಾಡುವವನು. ಈ ಪದದ ಅರ್ಥವೇ 'ಇಸ್ಲಾಮ್

ಧರ್ಮದವನು'. ಅರ್ಥಾತ್ ಅಲ್ಲಾಹನ ಆಜ್ಞಾನುವರ್ತಿ ಮತ್ತು ವಿಧೇಯ ಎಂದಾಗಿ ಕುರ್‌ಆನಿನ ಆಜ್ಞೆಗಳನ್ನೂ ಮಾರ್ಗದರ್ಶನಗಳನ್ನೂ ಕಾರ್ಯರೂಪದಲ್ಲಿ ಪಾಲಿಸದಿದ್ದರೆ ಅ ಮೇಲೆ ವಿಶ್ವಾಸವಿಡುವುದು ಮತ್ತು ಅದರ ಆಹ್ವಾನದ ಮೂಲಭೂತ ವಿಶ್ವಾಸಗಳ ಅಳವಡಿಸುವುದು ಅರ್ಥಹೀನವೆನಿಸುತ್ತದೆ. ಆದುದರಿಂದ ಕುರ್‌ಆನನ್ನು ನಂಬಿ, ಅ ಮೂಲಭೂತ ವಿಶ್ವಾಸಗಳನ್ನು ಅಳವಡಿಸಿ 'ಮೂಮಿನ್' ಎನಿಸಿಕೊಂಡವನ ಬಗ್ಗೆ ಸಹಜವ ಮತ್ತು ಸ್ಪಷ್ಟವಾಗಿ ಆತನು ಕುರ್‌ಆನ್ ಮತ್ತು ಇಸ್ಲಾಮ್ ಎಂಬ ಸಮಗ್ರ ಮಾರ್ಗದರ್ಶನವ ತನ್ನ ಪ್ರಾಯೋಗಿಕ ಜೀವನದ ಮಾರ್ಗದರ್ಶನವಾಗಿ ಮಾರ್ಪಡಿಸುವನೆಂದೇ ಭಾವಿಸಬೇಕಾಗುತ್ತ ಈ ಕಾರಣದಿಂದಲೇ ಒಬ್ಬನು ಕುರ್‌ಆನನ್ನು ನಂಬಿ ಕೇವಲ 'ಮೂಮಿನ್' ಆಗುವುದಿ 'ಮುಸ್ಲಿಮ್' ಕೂಡಾ ಆಗುತ್ತಾನೆ.

'ಮುಸ್ಲಿಮ್' ಎಂಬ ಹೆಸರು ಕೇವಲ ಒಂದು ಗುಣನಾಮವಾಗಿರದೆ ಕುರ್‌ಆನ್ ಮ ಪ್ರವಾದಿ ಮುಹಮ್ಮದ್‌ರ(ಸ) ಮೇಲೆ ವಿಶ್ವಾಸವಿಡುವವರ ಸರ್ವನಾಮವೂ ಆಗಿದೆ. ಇದ ಕುರ್‌ಆನಿನಲ್ಲಿ ಹೀಗೆ ಸ್ಪಷ್ಟಪಡಿಸಲಾಗಿದೆ:

"ಅಲ್ಲಾಹನು ಮೊದಲೂ ನಿಮ್ಮ ಹೆಸರನ್ನು 'ಮುಸ್ಲಿಮ್' ಎಂದಿಟ್ಟಿದ್ದನು ಮ ಇದರಲ್ಲೂ (ಕುರ್‌ಆನಿನಲ್ಲೂ ನಿಮಗೆ ಇದೇ ಹೆಸರಿದೆ.)" (ಅಲ್ ಹಜ್ಜ್ :'

ಕುರ್‌ಆನ್ ಪ್ರತಿಪಾದಿಸುವ ಧರ್ಮವನ್ನು ಯಾವುದೇ ವ್ಯಕ್ತಿ ಅಥವಾ ಜನಾಂ ಹೆಸರಲ್ಲಿ ಕರೆಯದಂತೆಯೇ ಅದರ ಅನುಯಾಯಿಗಳನ್ನು ಕೂಡಾ ಯಾವುದೇ ವ್ಯಕ್ತಿ ಅಥ ಜನಾಂಗದ ಹೆಸರಲ್ಲಿ ಕರೆದಿಲ್ಲ. ಧರ್ಮದ ಹೆಸರು 'ಇಸ್ಲಾಮ್' ಆಗಿದ್ದರೆ ಅನುಯಾಯಿ ಹೆಸರು 'ಮುಸ್ಲಿಮ್' ಆಗಿದೆ. ಈ ರೀತಿ ಕೇವಲ ಗುಣ ಸೂಚಕವಾಗಿರುವ ಈ ಹೆ ಅದನ್ನಿರಿಸಿಕೊಂಡವರ ತಾತ್ವಿಕ ನೆಲೆಯ ಬಗ್ಗೆಯೂ ಪರಿಚಯಪಡಿಸುತ್ತದೆ. ಇತರರು ತ ಪರಂಪರಾಗತ ವಿಚಾರಧಾರೆ ಮತ್ತು ತಮ್ಮ ಆಚಾರ ಸಂಪ್ರದಾಯಗಳ ಪ್ರಭಾವದಿ 'ಮುಸ್ಲಿಮ್' ಮತ್ತು 'ಮುಹಮ್ಮದೀಯ' ಎಂಬುದರ ಅಂತರವನ್ನು ತಿಳಿಯದಿರುವ ಮತ್ತು ಅದರಿಂದಾಗಿ 'ಇಸ್ಲಾಮ್' ಧರ್ಮಾನುಯಾಯಿಗಳನ್ನು 'ಮುಸ್ಲಿಮ್' ಎಂದು ಕರೆಯ ಬದಲು 'ಮುಹಮ್ಮದೀಯ' ಎಂದು ಕರೆಯುವುದು ಬೇರೆಯೇ ವಿಷಯ.

## ಕುಫ್ರ್ ಮತ್ತು ಕಾಫಿರ್

'ಕುಫ್ರ್' ಎಂಬುದು ಈಮಾನ್‌ನ ವಿರೋಧ ಪದವಾಗಿದೆ. ಈ ಪದದ ಮು ಅರ್ಥ ನಿಘಂಟಿನ ಪ್ರಕಾರ 'ಅಡಗಿಸು' ಎಂದಾಗಿದೆ. ಇದೇ ರೀತಿ 'ಕಾಫಿರ್' ಎಂಬ ಪ 'ಕುಫ್ರ್' ಎಂಬುದರ ಕ್ರಿಯಾಪದವಾಗಿದೆ. ಇದರರ್ಥ 'ಅಡಗಿಸುವವನು' ಎಂದಾಗಿ ಕಾಫಿರ್ ಎಂಬ ಪದವು ಅರಬೀ ಭಾಷೆಯಲ್ಲಿ ಅಡಗಿಸುವ ಕೆಲಸ ಮಾಡುವ ಅ ವಸ್ತುಗಳಿಗೆ ಗುಣನಾಮವಾಗಿ ಬಳಸಲ್ಪಡುತ್ತದೆ. ಉದಾ: ರಾತ್ರಿ, ಸಮುದ್ರ, ರೈತ ಇತ್ಯಾ

ರಾತ್ರಿಯು ತನ್ನ ಕಪ್ಪು ಪರದೆಗಳಲ್ಲಿ ಇಡೀ ಜಗತ್ತನ್ನು ಅಡಗಿಸುತ್ತದೆ. ಸಮುದ್ರವು ತನ್ನಲ್ಲಿರುವ ಸೃಷ್ಟಿಗಳನ್ನು ಅಡಗಿಸುತ್ತದೆ. ರೈತನು ಕೃಷಿಯ ವೇಳೆ ಧಾನ್ಯಗಳನ್ನು ಭೂಮಿಯಲ್ಲಿ ಅಡಗಿಸುತ್ತಾನೆ. ಆದುದರಿಂದ ನಿಘಂಟಿನ ಅರ್ಥದಲ್ಲಿ ಅವುಗಳಲ್ಲಿ ಪ್ರತಿಯೊಂದೂ 'ಕಾಫಿರ್' ಆಗಿದೆ.

ಕುರ್‌ಆನಿನ ಭಾಷೆಯಲ್ಲಿ 'ಕುಫ್ರ್' ಎಂಬ ಪದವು ಎರಡು ಅರ್ಥಗಳಲ್ಲಿ ಬಳಸಲ್ಪಟ್ಟಿದೆ. ಒಂದನೆಯದು ಅಲ್ಲಾಹನ ಕೃತಘ್ನತೆಯ ಅರ್ಥದಲ್ಲಿ. ಇನ್ನೊಂದು ಧರ್ಮದ ಮೂಲ ವಿಶ್ವಾಸಗಳ ಪೈಕಿ ಯಾವುದನ್ನಾದರೂ ನಿರಾಕರಿಸುವ ಅರ್ಥದಲ್ಲಿ. ಬಾಹ್ಯ ನೋಟಕ್ಕೆ ಇವು 'ಕುಫ್ರ್'ನ ಎರಡು ವಿಭಿನ್ನ ಅರ್ಥಗಳಾಗಿವೆ. ಆದರೆ ವಾಸ್ತವದಲ್ಲಿ ಈ ಎರಡು ಅರ್ಥಗಳಲ್ಲಿ ಗಾಢ ಸಮನ್ವಯ ಮತ್ತು ಸಹಜ ಐಕ್ಯವಿದೆ. ಈ ಎರಡರಲ್ಲಿ ವ್ಯತ್ಯಾಸವೇನಾದರೂ ಇದ್ದರೆ ಅದು ಬೀಜ ಮತ್ತು ಅದರಿಂದಾಗುವ ಗಿಡ ಅಥವಾ ಸೂರ್ಯ ಮತ್ತು ಅದರಿಂದ ಹರಡುವ ಪ್ರಕಾಶಕ್ಕೆ ಇರುವ ವ್ಯತ್ಯಾಸವಾಗಿದೆ. ವಾಸ್ತವದಲ್ಲಿ ನಿರಾಕರಣೆ ಎಂಬ ಅರ್ಥದ 'ಕುಫ್ರ್' ಕೃತಘ್ನತೆ ಎಂಬರ್ಥದ 'ಕುಫ್ರ್'ನಿಂದಲೇ ಉದ್ಭವಿಸುತ್ತದೆ ಮತ್ತು ಅದರದೇ ಸಹಜ ಪರಿಣಾಮವಾಗಿದೆ.

'ಕುಫ್ರ್'ನ ನಿಘಂಟಿನ ಅರ್ಥ ಮತ್ತು ಪಾರಿಭಾಷಿಕದ ಅರ್ಥದಲ್ಲಿ ಇರುವ ಸಂಬಂಧವನ್ನು ತಿಳಿಯಲು ಒಂದು ದೀರ್ಘ ವಿವರಣೆ ಅಗತ್ಯವಿಲ್ಲ. ಯಥಾರ್ಥದಲ್ಲಿ ಕೃತಘ್ನ ಅಥವಾ ನಿರಾಕರಣೆ ಮಾಡುವವನು ಅಲ್ಲಾಹನ ಅನುಗ್ರಹಗಳನ್ನು ಅಡಗಿಸುತ್ತಾನೆ. ಅವನ ಪ್ರಭುತ್ವದ ಹಕ್ಕನ್ನು ಅಡಗಿಸುತ್ತಾನೆ. ತನ್ನ ದಾಸ್ಯದ ನೆಲೆಯನ್ನು ಅಡಗಿಸುತ್ತಾನೆ. ಸರ್ವಲೋಕ ಪರಿಪಾಲಕನಾದ ಅಲ್ಲಾಹನ ಕೃತಜ್ಞತೆ, ದಾಸ್ಯ ಮತ್ತು ವಿಧೇಯತೆಯ ಗುಣಗಳಿಂದ ಕೂಡಿದ ತನ್ನ ನೈಜ ಪ್ರಕೃತಿಯನ್ನು ಅಡಗಿಸುತ್ತಾನೆ. ಆದುದರಿಂದ ಅಲ್ಲಾಹನ ಕೃತಘ್ನತೆ ಅಥವಾ ಆತನ ಗುಣಗಳು ಮತ್ತು ಅವುಗಳ ಅನಿವಾರ್ಯ ಬೇಡಿಕೆಗಳ ನಿರಾಕರಣೆಯನ್ನು 'ಕುಫ್ರ್' ಎಂದು ಹೇಳಲಾಗಿದ್ದರೆ ಅದು ಒಂದು ಅತ್ಯಂತ ಸಮಗ್ರ ಮತ್ತು ಸಮಂಜಸ ಪಾರಿಭಾಷಿಕವಾಗಿರುವ ಕಾರಣಕ್ಕಾಗಿ ಮಾತ್ರ.

'ಕುಫ್ರ್' ಮತ್ತು 'ಕಾಫಿರ್' ಎಂಬ ಪದಗಳು ಕುರ್‌ಆನ್‌ನಲ್ಲಿ ಬಳಸಲಾಗಿರುವುದು ಸಾಮಾನ್ಯವಾಗಿ ಈ ಎರಡನೆಯ ಅರ್ಥದಲ್ಲಿ. 'ಕಾಫಿರ್' ಎಂದರೆ ಅಲ್ಲಾಹನ ಗುಣಗಳ ಪೈಕಿ ಯಾವುದಾದರೊಂದು ಗುಣವನ್ನು ನಿರಾಕರಿಸುವವನು ಅಥವಾ ಅದರ ನೈಜ ಬೇಡಿಕೆಗಳನ್ನು ನಿರಾಕರಿಸುವವನು, ನಿರ್ಣಾಯಕ ದಿನವನ್ನು ನಿರಾಕರಿಸುವವನು, 'ವಹೀ' ಮತ್ತು ಪ್ರವಾದಿತ್ವದ ಸಿದ್ಧಾಂತವನ್ನು ನಿರಾಕರಿಸುವವನು, ದೇವಚರರ ಅಸ್ತಿತ್ವ ಮತ್ತು ಅವರ ಗುಣಗಳನ್ನು ನಿರಾಕರಿಸುವವನು, ಓರ್ವ ಪ್ರವಾದಿಯನ್ನು ಪ್ರವಾದಿಯೆಂದು ನಂಬಲು ನಿರಾಕರಿಸುವವನು ಅಥವಾ ಯಾವುದೇ ದೇವಗ್ರಂಥವನ್ನು ನಿರಾಕರಿಸುವವನು.

ಈಮಾನ್‌ನ ವಿಭಿನ್ನ ಹಂತಗಳಿರುವಂತೆ ನಿರಾಕರಣೆಯ ಅರ್ಥದ 'ಕುಫ್ರ್'ಗೂ ವಿಭಿನ್ನ ಹಂತಗಳಿವೆ. ಉದಾ: ಸತ್ಯವು ಸ್ಪಷ್ಟವಾಗಿ ಮನವರಿಕೆಯಾದ ಬಳಿಕವೂ ಅಸ್ತಿತ್ವದಲ್ಲಿರುವ 'ಕುಫ್ರ್' ಒಂದಾದರೆ ಇನ್ನೊಂದು ಅಜ್ಞಾನದ ಬುನಾದಿಯ ಮೇಲಿರುವ 'ಕುಫ್ರ್' ಆಗಿದೆ. ಈ ಎರಡೂ 'ಕುಫ್ರ್'ಗಳ ನೆಲೆಯು ಒಂದೇ ಆಗಿರಲು ಸಾಧ್ಯವಿಲ್ಲವೆಂಬುದು ವ್ಯಕ್ತ. ಆದುದರಿಂದ ನ್ಯಾಯ ಪ್ರಕಾರ ಅವುಗಳ ನೆಲೆಯೂ ಒಂದಾಗಿರಲು ಸಾಧ್ಯವಿಲ್ಲ. 'ಕುಫ್ರ್'ನ ಕೆಲವು ವಿಧಗಳು 'ಕುಫ್ರ್' ಆಗಿರುತ್ತಲೇ ಅಲ್ಲಾಹನ ಬಳಿ ಕ್ಷಮಾರ್ಹವಾಗಲು ಸಾಧ್ಯವಿದೆ. ಇದು ಸಂಭವನೀಯವೆಂದು ಮಾತ್ರವಲ್ಲ ಇದು ವಾಸ್ತವ ಎಂಬುದಕ್ಕೆ ಕುರ್‌ಆನಿನಲ್ಲಿ ಕೆಲವು ಸೂಚನೆಗಳೂ ಸಿಗುತ್ತವೆ. ಉದಾ: ಒಬ್ಬ ವ್ಯಕ್ತಿಗೆ ಪ್ರವಾದಿಯ ಸಂದೇಶ ತಲುಪದಿದ್ದರೆ, ಒಂದು ವೇಳೆ ತಲುಪಿದರೂ ಸರಿಯಾದ ರೀತಿಯಲ್ಲಿ ತಲುಪದಿದ್ದರೆ ಆ ಕಾರಣಕ್ಕಾಗಿ ಆತ ಅವರ ಮೇಲೆ ವಿಶ್ವಾಸವಿಡದೆ ಅವರ ನಿರಾಕರಣೆ ಮತ್ತು 'ಕುಫ್ರ್' ಮಾಡುತ್ತಲಿದ್ದರೆ ಅವನನ್ನು ಈ ವಿಷಯದಲ್ಲಿ ಅಪರಾಧಿ ಎಂದು ಪರಿಗಣಿಸಲಾಗದು. ಆದರೆ ತೌಹೀದ್ ಅಥವಾ ಏಕದೇವ ವಿಶ್ವಾಸವು ಇದಕ್ಕೆ ವ್ಯತಿರಿಕ್ತವಾಗಿದೆ. ಅದನ್ನು ನಿರಾಕರಿಸುವವನನ್ನು ಯಾವ ಸ್ಥಿತಿಯಲ್ಲೂ ಕ್ಷಮಿಸಲಾಗದು. ಏಕೆಂದರೆ ಏಕದೇವನ ಕಲ್ಪನೆಯು ಮನುಷ್ಯ ಪ್ರಕೃತಿಯಲ್ಲಿಯೇ ಲೀನವಾಗಿದೆ. ಅದರ ಸ್ಪಷ್ಟ ಸಂಕೇತಗಳು ಎಲ್ಲೆಡೆ ಎಲ್ಲರಿಗೂ ಗೋಚರಿಸುತ್ತದೆ. ಆದುದರಿಂದ ಈ ಸ್ಪಷ್ಟ ವಾಸ್ತವಿಕತೆಯನ್ನು ನಿರಾಕರಿಸಲು ಯಾವುದೇ ನೆಪ ಉಳಿಯುವುದಿಲ್ಲ. ಇದೇ ರೀತಿ 'ಕುಫ್ರ್'ನ ಕೆಲವು ರೂಪಗಳು ಅತ್ಯಂತ ಕಠಿಣ ಶಿಕ್ಷೆಗೆ ಅರ್ಹವಾಗಿದೆ. ಪರಲೋಕದಲ್ಲಿ ಮಾತ್ರವಲ್ಲ ಕೇವಲ ಕರ್ಮದ ಲೋಕವಾದ ಇಹಲೋಕದಲ್ಲಿಯೂ ಅದು ಮನುಷ್ಯನನ್ನು ತೀವ್ರ ದುರಂತಕ್ಕೆ ಗುರಿ ಮಾಡಬಲ್ಲುದು. ಕುರ್‌ಆನ್ ಅದನ್ನೂ ಒಂದು ವಾಸ್ತವಿಕತೆ ಎಂದು ಹೇಳುತ್ತದೆ. ಅನೇಕ ಸಲ ಲೋಕವು ಇದರ ಪುರಾವೆಯನ್ನು ಕಣ್ಣಾರೆ ಕಂಡಿದೆ. ಇಂತಹ 'ಕುಫ್ರ್'ಗೆ ಪ್ರವಾದಿಗಳ ಮೂಲಕ ನೇರವಾಗಿ ಸತ್ಯವಿಶ್ವಾಸದ ಆಹ್ವಾನ ದೊರೆತ ಜನಾಂಗಗಳು ಉದಾಹರಣೆಯಾಗಿವೆ. ಅವರ ಮುಂದೆ ಸತ್ಯವು ಸ್ಪಷ್ಟವಾಗಿ ಬಂದಿತ್ತು. ಸತ್ಯಸಾಕ್ಷ್ಯದ ಹೊಣೆಯು ಅವರ ಮಟ್ಟಿಗೆ ಪೂರ್ತಿಯಾಗಿತ್ತು. ಅದರಲ್ಲಿ ಯಾವುದೇ ಕೊರತೆಯು ಉಳಿದಿರಲಿಲ್ಲ. ಅಂಥವರಿಗೆ ಪರಲೋಕದಲ್ಲಿ ಸಿಗುವ ಶಿಕ್ಷೆಯಂತೂ ಸಿಕ್ಕಿಯೇ ಸಿಗುವುದು. ಇಹಲೋಕದಲ್ಲಿಯೂ ಅವರ ಸಂತತಿಯೇ ಅಳಿದು ಹೋಗುವಷ್ಟರ ಮಟ್ಟಿಗೆ ಅವರು ದೇವ ಯಾತನೆಗೆ ಪಾತ್ರ ರಾದರು. ಭೂಕಂಪ, ಚಂಡಮಾರುತ, ಅಗ್ನಿಕಾಂಡ ಮತ್ತು ಕಲ್ಲಿನ ಮಳೆಗಳ ಮೂಲಕ ಅವರನ್ನು ಕ್ಷಣಾರ್ಧದಲ್ಲಿ ನುಚ್ಚುನೂರುಗೊಳಿಸಲಾಯಿತು ಅಥವಾ ಸತ್ಯವಿಶ್ವಾಸಿಗಳ ಖಡ್ಗಗಳ ಮೂಲಕ ಅವರನ್ನು ಮೂಲೋತ್ಪಾಟನೆ ಮಾಡಲಾಯಿತು. ಅವರಿಗೆ ದಾಸರಾಗಿ ಬದುಕುವ ಅವಕಾಶವೂ ದೊರೆಯಲಿಲ್ಲ. ಆದರೆ ಇತರ ಸತ್ಯನಿಷೇಧಿಗಳಿಗೆ ಇಸ್ಲಾಮೀ ರಾಷ್ಟ್ರದ ಆಶ್ರಯದಲ್ಲಿ 'ದಿಮ್ಮಿ' (ಸುರಕ್ಷಿತರು) ಆಗಿ ಬದುಕುವ ಅವಕಾಶವನ್ನು ಶಾಶ್ವತವಾಗಿ ಇರಿಸಲಾಗಿದೆ.

## ಶಿರ್ಕ್ ಮತ್ತು ಮುಶ್ರಿಕ್

'ಶಿರ್ಕ್'ನ ಶಬ್ದಾರ್ಥ 'ಸಹಭಾಗಿತ್ವ' ಎಂದಾಗಿದೆ. ಶರೀಅತ್‌ನ ಪಾರಿಭಾಷಿಕದಲ್ಲಿ ಅಲ್ಲಾಹನ ಹೊರತು ಇತರರನ್ನು ಅಲ್ಲಾಹನ ಅಸ್ತಿತ್ವ, ಅವನ ಗುಣಗಳು ಅಥವಾ ಅವುಗಳ ಅನಿವಾರ್ಯ ಬೇಡಿಕೆಗಳಲ್ಲಿ ಸಹಭಾಗಿಗಳಾಗಿ ಮಾಡುವುದಾಗಿದೆ.

ದೇವನ ಅಸ್ತಿತ್ವದಲ್ಲಿ ಸಹಭಾಗಿಗಳಾಗಿ ಮಾಡುವ ಕೆಲವು ರೂಪಗಳಿವು.

1) ಅವನ ಅಸ್ತಿತ್ವವನ್ನು ಇತರರ ಅಸ್ತಿತ್ವದಿಂದ ಅಥವಾ ಇತರರ ಅಸ್ತಿತ್ವವು ಅವನ ಅಸ್ತಿತ್ವದಿಂದ ಎಂದು ನಂಬುವುದು. ಅರ್ಥಾತ್ ಅವನ ಬಗ್ಗೆ ಐಕ್ಯ ಅಥವಾ ಅವತಾರದ ವಿಶ್ವಾಸವಿರಿಸುವುದು.

2) ಯಾರನ್ನಾದರೂ ಆತನ ಬಂಧು ಬಳಗವೆಂದು ಭಾವಿಸುವುದು.

3) ಯಾರನ್ನಾದರೂ ಆತನ ತಂದೆ ಅಥವಾ ಪುತ್ರನೆಂದು ಪರಿಗಣಿಸುವುದು.

ಅಲ್ಲಾಹನ ಗುಣಗಳಲ್ಲಿ ಸಹಭಾಗಿಯಾಗಿ ಮಾಡುವುದೆಂದರೆ ಅವನ ಗುಣಗಳ ಪೈಕಿ ಯಾವುದಾದರೂ ಗುಣವನ್ನು ಬೇರೆ ಯಾರಲ್ಲಾದರೂ ಇದೆಯೆಂದು ನಂಬುವುದು. ದೇವ ಗುಣವನ್ನು ಅದೇ ವಿಶಿಷ್ಟ ಅರ್ಥದಲ್ಲಿ ಇತರರಲ್ಲಿದೆಯೆಂದು ನಂಬುವುದು.

ಗುಣಗಳ ಅನಿವಾರ್ಯ ಬೇಡಿಕೆಗಳಲ್ಲಿ ಸಹಭಾಗಿಗಳಾಗಿ ಮಾಡುವುದೆಂದರೆ ದೇವ ಗುಣಗಳ ಸಹಜ ಪರಿಣಾಮವೆಂಬ ನೆಲೆಯಲ್ಲಿ ಯಾವ ಅಧಿಕಾರ ಮತ್ತು ಹಕ್ಕುಗಳು ಅಲ್ಲಾಹನಿಗೆ ಮೀಸಲೆಂದು ಸಿದ್ಧವಾಗುತ್ತವೆಯೋ ಆ ಅಧಿಕಾರ ಮತ್ತು ಹಕ್ಕು ಇತರರಿಗೂ ಇದೆ ಎಂದು ಪರಿಗಣಿಸುವುದು. ಉದಾ: ಆಜ್ಞಾಪಿಸುವ ಮತ್ತು ತೀರ್ಪು ನೀಡುವ ಸಕಲ ಅಧಿಕಾರವೂ ಅಲ್ಲಾಹನಿಗೆ ಮೀಸಲು ಎಂಬುದು ಅಲ್ಲಾಹನ ಒಂದು ಗುಣವಾಗಿದೆ. ಅದೃಷ್ಟ-ದುರದೃಷ್ಟಗಳನ್ನು ರೂಪಿಸುವ ಅಧಿಕಾರವು ಅವನ ವಶದಲ್ಲೇ ಇದೆ ಎಂಬುದು ಆ ಗುಣದ ಒಂದು ಅನಿವಾರ್ಯ ಬೇಡಿಕೆಯಾಗಿದೆ. ಎರಡನೆಯದಾಗಿ ಬೇಡಿಕೆ, ಫಿರ್ಯಾದಿ ಮತ್ತು ಪ್ರಾರ್ಥನೆಗಳು ಆತನ ಮುಂದೆಯೇ ಸಮರ್ಪಿಸಲ್ಪಡಬೇಕು. ಯಾವನಾದರೂ ಸಂಕಷ್ಟಗಳಲ್ಲಿ ಸಿಲುಕಿದಾಗ ಆತನ ಹೊರತು ಇನ್ನಾರನ್ನಾದರೂ ಕರೆದು ಪ್ರಾರ್ಥಿಸಿದರೆ ಅಥವಾ ತನ್ನ ಅಭೀಷ್ಟಗಳ ಪೂರೈಕೆಗಾಗಿ ಬೇಡಿಕೆಗಳನ್ನು ಇತರರ ಮುಂದಿಟ್ಟರೆ ಅದು ಅಲ್ಲಾಹನ ವಿಶಿಷ್ಟ ಗುಣದ ಅನಿವಾರ್ಯ ಬೇಡಿಕೆಗಳಲ್ಲಿ ಇತರರನ್ನು ಸಹಭಾಗಿಗೊಳಿಸಿ ದಂತಾಗುವುದು.

ಈ ರೀತಿಯ ವಿಶ್ವಾಸ ಶ್ರದ್ಧೆಗಳನ್ನಿರಿಸುವವನು ಅರ್ಥಾತ್ ಅಲ್ಲಾಹನ ಅಸ್ತಿತ್ವ, ಅವನ ಗುಣಗಳು ಅಥವಾ ಅವುಗಳ ಅನಿವಾರ್ಯ ಬೇಡಿಕೆಗಳಲ್ಲಿ ದೇವೇತರರನ್ನು ಸಹಭಾಗಿ ಮತ್ತು ಪಾಲುದಾರನಾಗಿ ಮಾಡುವವನು ಕುರ್‌ಆನಿನ ಭಾಷೆಯಲ್ಲಿ 'ಮುಶ್ರಿಕ್' ಆಗಿರುವನು.

'ಶಿರ್ಕ'ನ್ನು ಕುರ್‌ಆನಿನಲ್ಲಿ 'ಅತಿ ದೊಡ್ಡ ಅಕ್ರಮ'ವೆನ್ನಲಾಗಿದೆ. ಅರ್ಥಾತ್ ಅದು ಅಲ್ಲಾಹನ ಅತಿ ದೊಡ್ಡ ಹಕ್ಕುಚ್ಯುತಿಯಾಗಿದೆ. ಆದುದರಿಂದ ಅದನ್ನು ಖಂಡಿತ ಕ್ಷಮಿಸಲಾಗದು ಎನ್ನಲಾಗಿದೆ.

## ಅಹ್ಲುಲ್ ಕಿತಾಬ್

'ಅಹ್ಲುಲ್ ಕಿತಾಬ್' ಎಂದರೆ ಗ್ರಂಥದವರು. ಆದರೆ ಕುರ್‌ಆನಿನ ಪಾರಿಭಾಷಿಕದಲ್ಲಿ 'ಕಿತಾಬ್' ಎಂಬ ಪದಕ್ಕೆ ಒಂದು ಸೀಮಿತ ಮತ್ತು ನಿರ್ದಿಷ್ಟ ಅರ್ಥವಿದೆ. ಕೇವಲ ದೇವಗ್ರಂಥಕ್ಕೆ ಅದು ಆ ಪದವನ್ನು ಬಳಸುತ್ತದೆ. ಅಂತೆಯೇ 'ಅಹ್ಲುಲ್ ಕಿತಾಬ್' ಎಂಬುದಕ್ಕೆ ಕೂಡಾ ಒಂದು ಪ್ರತ್ಯೇಕ ಮತ್ತು ನಿರ್ದಿಷ್ಟ ಅರ್ಥವಿದೆ. ಕೇವಲ ಯಹೂದಿಗಳು ಮತ್ತು ಕ್ರೈಸ್ತರಿಗೆ ಕುರ್‌ಆನ್ ಆ ಪದವನ್ನು ಬಳಸಿದೆ. ದೈವಿಕ ಗ್ರಂಥಗಳನ್ನು ನಂಬುವ ಎಲ್ಲ ಜನಾಂಗಗಳಿಗೆ ಅದನ್ನು ಬಳಸಲಾಗಿಲ್ಲ. 'ಕಿತಾಬ್' ಎಂದರೆ ದೇವಗ್ರಂಥವೆಂದಾದರೆ 'ಅಹ್ಲುಲ್ ಕಿತಾಬ್' ಎಂದರೆ ದೇವಗ್ರಂಥಗಳನ್ನು ನಂಬುವವರು ಎಂದಾಗುತ್ತದೆ. ಅದು ಕೇವಲ ಕೆಲವು ವಿಶಿಷ್ಟ ಗ್ರಂಥಗಳನ್ನು ನಂಬುವವರಿಗೆ ಮಾತ್ರ ಸೀಮಿತವಾಗಿರದೆ ಎಲ್ಲ ದೈವಿಕ ಗ್ರಂಥಗಳನ್ನು ನಂಬುವವರಿಗೆ ಸಾಮಾನ್ಯವಾಗಿ ಅನ್ವಯವಾಗಬೇಕು. ಆದರೆ ಈ ಮಾತು ಸರಿಯಾಗಿದ್ದಾಗ್ಯೂ ಒಂದು ವಿಷಯ ಸರ್ವಸಮ್ಮತ ವಾಸ್ತವಿಕತೆಯಾಗಿದೆ. ಇಂದು ಲೋಕದಲ್ಲಿರುವ ಧಾರ್ಮಿಕ ಗ್ರಂಥಗಳ ಪೈಕಿ ಕೇವಲ ಮೂರು ಗ್ರಂಥಗಳ ಬಗ್ಗೆ ಅವು ದೇವಗ್ರಂಥಗಳಾಗಿವೆ ಎಂಬುದನ್ನು ಕುರ್‌ಆನ್ ದೃಢೀಕರಿಸಿದೆ. ಅವುಗಳು ತೌರಾತ್, ಇಂಜೀಲ್ ಮತ್ತು ಝುಬೂರ್ ಆಗಿವೆ. ಆದುದರಿಂದ ಅದು 'ಅಹ್ಲುಲ್ ಕಿತಾಬ್' ಎನ್ನುವಾಗ ಸಹಜವಾಗಿಯೇ ಅದು ಈ ಮೂರು ಗ್ರಂಥಗಳ ಅನುಯಾಯಿ ಜನಾಂಗಗಳಿಗೆ ಸೀಮಿತವಾಗಿದೆ ಎಂದು ಭಾವಿಸಬೇಕಾಗುತ್ತದೆ.

ತೌರಾತ್‌ನ ಹೆಸರಲ್ಲಿ ಅಸ್ತಿತ್ವಕ್ಕೆ ಬಂದ ಸಮುದಾಯದ ಹೆಸರು ಯಹೂದಿ ಆಗಿದೆ. ಇಂಜೀಲ್‌ನ ಮೂಲಕ ಅಸ್ತಿತ್ವಕ್ಕೆ ಬಂದ ಸಮುದಾಯ ಕ್ರೈಸ್ತ ಸಮುದಾಯವಾಗಿದೆ. ಝುಬೂರ್‌ನ ಬುನಾದಿಯಲ್ಲಿ ಯಾವುದೇ ಪ್ರತ್ಯೇಕ ಸಮುದಾಯ ಅಸ್ತಿತ್ವಕ್ಕೆ ಬಂದಿಲ್ಲ. ಏಕೆಂದರೆ ಅದೊಂದು ಪ್ರತ್ಯೇಕ ಗ್ರಂಥವಾಗಿರದೆ ಅದು ಕೇವಲ ತೌರಾತ್‌ನ ಒಂದು ಅನುಬಂಧ ಮಾತ್ರ. ಅದು ಪ್ರಖ್ಯಾತ ಇಸ್ರಾಈಲಿಯರ ಪ್ರವಾದಿ ಹ. ದಾವೂದ್‌ರವರ(ಅ) ಮೇಲೆ ಅವತೀರ್ಣಗೊಂಡಿತ್ತು. ಅದನ್ನು ಯಹೂದಿಗಳೂ ಕ್ರೈಸ್ತರೂ ನಂಬುತ್ತಾರೆ.

ಈ ಮೂರು ಗ್ರಂಥಗಳ ಹೊರತು ಉಳಿದ ಗ್ರಂಥಗಳ ಪೈಕಿ ಯಾವುದನ್ನು ದೈವಿಕ ಗ್ರಂಥಗಳೆಂದು ನಂಬಲಾಗುತ್ತಿದೆಯೋ ಅವುಗಳ ಬಗ್ಗೆ ಕುರ್‌ಆನ್ ಮೌನವಾಗಿದೆ. ಆದುದರಿಂದ ಅದರ ಸನದಿನ ಮೇರೆಗೆ ಆ ಪೈಕಿ ಯಾವುದೇ ಗ್ರಂಥವನ್ನು ದೈವಿಕ ಗ್ರಂಥವೆಂದೂ ಅವುಗಳ ಅನುಯಾಯಿಗಳನ್ನು 'ಅಹ್ಲುಲ್ ಕಿತಾಬ್' ಎಂದೂ ಹೇಳುವ

ಕಾಶವಿಲ್ಲ. ಆದರೆ ಗುಮಾನಿಯ ಮೇರೆಗೆ ಹೇಳಬಹುದು. ಗುಮಾನಿ ಸರಿಯೂ ತಪ್ಪೂ ಲು ಸಾಧ್ಯವಿದೆ. ಆದುದರಿಂದ ಅದನ್ನು ಕುರ್‌ಆನಿನ ಮಾನ್ಯತೆಗೆ ಸಮಾನವೆಂದು ಗಣಿಸಲಾಗದು. ಇಲ್ಲಿ ನಾವು ಚರ್ಚಿಸುವುದು ಕುರ್‌ಆನಿನ ಪಾರಿಭಾಷಿಕಗಳ ವಿಷಯ ತ್ರ. ಬೇರೆ ಮಾತುಗಳಲ್ಲಿ ಹೇಳುವುದಾದರೆ ಕುರ್‌ಆನ್ ಮಾನ್ಯ ಮಾಡಿ ದೃಢೀಕರಿಸಿದ ಥಗಳ ವಿಷಯ ಮಾತ್ರ.

ಒಟ್ಟಿನಲ್ಲಿ 'ಅಹ್ಲುಲ್ ಕಿತಾಬ್' ಎಂಬ ಪಾರಿಭಾಷಿಕವು ಯಹೂದಿಗಳು ಮತ್ತು ್ತರಿಗೆ ಸರ್ವನಾಮದ ರೂಪದಲ್ಲಿ ಬಳಸಲಾಗಿದೆ. ಯಾವುದೇ ಮೂರನೇ ವಿಭಾಗ ಈ ಪಿನಲ್ಲಿ ಸೇರಿದೆ ಎಂದು ಪರಿಗಣಿಸಬಾರದು.

◆◆◆